ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೨ ಸಂಚಿಕೆ : ೧ ಮತ್ತು ೨

ಪ್ರಧಾನ ಸಂಪಾದಕರು

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು

ಡಾ. ಕೆ. ಜಿ. ಶಾಸ್ತ್ರಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೨ ಸಂಚಿಕೆ : ೧ ಮತ್ತು ೨

ಅಗಸ್ಟ–ನವಂಬರ, ೧೯೭೯

ಸ್ವಾತಂತ್ರ್ಯೋತ್ಸವ - ರಾಜ್ಯೋತ್ಸವ ಸಂಯುಕ್ತ ಸಂಚಿಕೆ

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಜಿ. ಬಿ. ಮೆನ್ನಾಚಾರ,

ಸಹಾಯಕ ನಿರ್ದೇಶಕರು,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ

ಪರಿವಿಡಿ

ಜನಪದ, ತ್ರಿಪದಿ-ಸಾಹಿತ್ಯದಲ್ಲಿ 'ಮಕ್ಕಳು'

ದೇವೇಂದ್ರ ಕುಮಾರ ಹಕಾರಿ

ದಟ್ಟವಾದ ಕಾಡು, ಧೋಧೋ ಸುರಿಯುವ ಮಳೆ ಹಿಮ, ಕೊಚ್ಚಿಹಾಕುವ ಪ್ರವಾಹ, ಜ್ವಾಲಾಮುಖಿ, ಕ್ರೂರಪ್ರಾಣಿ, ವಿಷಜಂತು ಹೀಗೆ ತನ್ನನ್ನು ಕಬಳಿಸಲು 'ಆ' ಎಂದು ಬಾಯ್ದೆರೆದ ರುದ್ರಭೀಕರ ನಿಸರ್ಗವನ್ನು ಎದುರಿಸಿ ಬಾಳುರೂಪಿಸಿ ಕೊಳ್ಳಲು, ಕಾಲುಗಟ್ಟಿಯಾಗಿ ಊರಲು ನೆತ್ತಿಯ ಮೇಲೆ ನೆರಳು ಮಾಡಿಕೊಳ್ಳಲು, ತನ್ನನ್ನು ತನ್ನ ಮಕ್ಕಳು ಮರಿಗಳನ್ನು ಉಳಿಸಿಕೊಳ್ಳಲು ದನಕರುಗಳನ್ನು ಕಾಪಾಡಿ ಕೊಳ್ಳುತ್ತ ಭದ್ರತೆ ಒದಗಿಸಿಕೊಳ್ಳಲು, ಶಿಲಾಪೂರ್ವಯುಗಕ್ಕಿಂತ ಮೊದಲಿಂದಲೂ ಆದಿಮಾನವ ಗುಂಪುಗಳು ತಮ್ಮ ಸುತ್ತಿನ ಭೌಗೋಲಿಕ ಪರಿಸ್ಥಿತಿ ಮತ್ತು ಪರಿಸರ-ಗಳೊಡನೆ ನೇರವಾಗಿ ಸಂಘರ್ಷಕ್ಕೆ ಇಳಿಯಬೇಕಾಯಿತು. ನಿಸರ್ಗದ ರುದ್ರಭೀಕರ ಶಕ್ತಿಗಳ ಅನಿಯಂತ್ರಿತ ಪ್ರಭಾವ ಮತ್ತು ಪರಿಣಾಮಗಳಿಂದ ಭಯಭೀತವಾದ ಈ ಗುಂಪುಗಳಿಗೆ, ಮೊದಮೊದಲು ಅಂಥ ವಿಶೇಷ ಅನಿಸಿಕೆಗಳು ಅನುಭವಕ್ಕೆ ಬಾರದೆ ಹೋದರೂ ತಮ್ಮ ವೃಂದ, ಗುಂಪು, 'ಕುಲ'ಗಳ ರಕ್ಷಣೆ ಒಂದು ದೊಡ್ಡ ಸಮಸ್ಯೆಯೇ ಆಗಿರಬೇಕು. ಪ್ರಾಣಿ ಪಶುಗಳ ಮಾದರಿಯ ಸ್ವಚ್ಛಂದ ಜೀವನರೀತಿಯಿಂದ ಭಿನ್ನ ವಾದ ಜೀವನಕ್ರಮವನ್ನು ರೂಪಿಸಿಕೊಂಡ ಈ ಜನಪದ ವೃಂದಗಳಿಗೆ ತಮ್ಮ ವಂಶ ವನ್ನು ಬೆಳೆಸುವ, ಪೀಳಿಗೆಯನ್ನು ರಕ್ಷಿಸುವ ಕುಲವನ್ನು ಸ್ಥಿರಗೊಳಿಸುವ ಹಂತದಲ್ಲಿ 'ಮಗು' ಒಂದು ವಿಶಿಷ್ಟ ಸಂಪತ್ತಾಯಿತು. ಮಗುವನ್ನು ಹೆತ್ತಹೆಣ್ಣಿಗೆ ಈ ವೃಂದ ಗಳಲ್ಲಿ ಅಷ್ಟೊಂದು ವಿಶೇಷವಲ್ಲದಿದ್ದರೂ ಮಗುವನ್ನು ಹೆರಲಾರದ ಹೆಣ್ಣಿಗಿಂತ ಹೆಚ್ಚಿನ ಗೌರವ ಸ್ಥಾನ ಪ್ರಾಪ್ತವಾಗಿರಬೇಕು. ಅಲ್ಲದೆ 'ತಾಯ್ತನ' ಸ್ತ್ರೀತ್ವದ ಪೂರ್ಣತೆಗೆ, ಸಫಲಜೀವನಕ್ಕೆ, ಕುರುಹಾಗಿ ಬೆಳೆದು ಮಕ್ಕಳನ್ನು ಪಡೆಯದ ಹೆಣ್ಣು 'ಬಂಜೆ' ಎನ್ನುವ ಅವಹೇಳನೆಗೂ ವೃಂದದ ದೂಷಣೆಗೂ ಗುರಿಯಾದಳು.

ಜನಪದ ವೃಂದಗಳ ಪ್ರಾಥಮಿಕ ಅವಸ್ಥೆ ಕಳೆದು ಕೌಟುಂಬಿಕ ಜೀವನ ವ್ಯವಸ್ಥೆಗೆ ಈ ವೃಂದಗಳು ಹೊಂದಿಕೊಂಡಾಗ, ಸಂತಾನಾಭಿವೃದ್ಧಿ ಸಂತಾನಪ್ರಾಪ್ತಿಗಳ ಬಗೆಗೆ ಕೆಲವು ದೃಢವಾದ ಭಾವನೆಗಳು ಈ ಕುಲಗುಂಪುಗಳಲ್ಲಿ ಮೂಡಿ ಅವರ ಜನಾಂಗಿಕ ಜೀವನವನ್ನು ರೂಪಿಸಿದುವು. ಮಕ್ಕಳಿಲ್ಲದಿದ್ದರೆ ಇನ್ನುಳಿದದ್ದು ಏನಿದ್ದರೂ ವ್ಯರ್ಥ ಎನ್ನುವುದು ಜನಪದರ ಅನಿಸಿಕೆಯಾಯಿತು.

ದೇವೀರಮ್ಮ *ಎನ್ನುನ ದೇವತೆಯ ಉತ್ಸವ, ಒಬ್ಬ ಶ್ರೀಮಂತರ ಮನೆಯ ಮುಂದೆ ಹಾಯ್ದುಹೋಗುತ್ತದೆ. ಆದರೆ ಅವರಿಗೆ ಮಕ್ಕಳಿಲ್ಲ :

'ಮಕ್ಕಳಿಲ್ದ ಮನಿಗೆ ಹೊರಟಾಳು ದೇವೀರಮ್ಮ
ಮಕ್ಕಳಿಲ್ಲವೇನೆ ದೊರೆಮಗನೆ ನಿನ್ನಲ್ಲಿ
ಲಕ್ಷಹಣವಿದ್ದು ಫಲವೇನು ?'

ಮಕ್ಕಳಿದ್ದರೇನೇ ಜೀವನ ಸಫಲ, ಇಲ್ಲದಿದ್ದರೆ ಬಾಳು ದುರ್ಭರ:

'ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡೀಗಿ ಎತ್ತುದುಡಿದಂಗ, ಬಾಳೆಲಿಯು
ಹಾಸ್ಯುಂಡು ಬೀಸಿ ಒಗದಂಗ'

ತಾಯ್ತನದ ಭಾಗ್ಯವನ್ನು ಹೊಂದದ ಹೆಣ್ಣಿನ ಬದುಕು ಬಾಡಿಗೆ ಎತ್ತಿನ ದುಡಿತದಂತೆ, ಉಂಡು ಬೀಸಿ ಒಗೆದ ಬಾಳೆ ಎಲೆಯಂತೆ. ತೋಟ ಎಂದಮೇಲೆ ಬಾಳೆ ಇರಬೇಕು, ಬಾಳೆಯೆಂದಮೇಲೆ ಅದು ಫಲಕೊಡಬೇಕು. ಫಲ ಕೊಡುವ ಬಾಳೆಯಿಲ್ಲದ ತೋಟದಲ್ಲಿ ಗಂಧ ಕಸ್ತೂರಿ ಪರಿಮಳಿಸಿದರೇನು ? ಮಕ್ಕಳಿಲ್ಲದ ಬದುಕೂ ಒಂದೇ-ಬಾಳೆಯಿಲ್ಲದ ತೋಟವೂ ಒಂದೇ.

ಬಾಲರಿಲ್ಲದ ಬಾಳ್ವೆ ಬಾಳೆಯಿಲ್ಲದ ತೋಟ
ಗಂಧಕಸ್ತೂರಿ ಪರಿಮಳ ಒಳಗಿದ್ದು
ರಂಭೆ ನೀ ಬಾಳೆ ಫಲವಿಲ್ಲ.

ಆದ್ದರಿಂದ ನಾನಾ ದೇವತೆಗಳಿಗೆ ಹರಕೆ; ದೇವರ ಗುಡಿಗೆ ತುಪ್ಪದ ಬಿಂದಿಗೆ ಹರಕೆ; ಗುಡಿಯ ಬಾಗಿಲ ಕಸಗುಡಿಸುವ ಹರಕೆ :

'ತುಪ್ಪದ ಬಿಂದಿಗೆ ಕೊಡೆ ಕೊಪ್ಪಿನ ಭಾಗ್ಯವ ಕೊಡೆ'

ಈ ಎಲ್ಲ ಸಮೃದ್ಧಿಯನ್ನು ಕೊಡು ಆದರೆ

---

* ಹಾಸನ ಜಿಲ್ಲೆಯ ತಂದರಿ ಗ್ರಾಮದ ದೇವತೆ ದೇವೀರಮ್ಮ

'ನೀ ಪುತ್ರರ ಕೊಡೆ ಮನೆತುಂಬ ದೇವೀರಮ್ಮ
ನಿನ ಗುಡಿಯೊಳಗಲ ರಜವ ಹೊಡೆದೇನು'

ಬಂಜೆಯಾದವಳನ್ನು ಜನಪದರು ಹೀನಾಯವಾಗಿ ಕಾಣುವುದು, ಅಥವಾ ಕೀಳಾಗಿ ದೂಷಿಸುವುದು ಅಂದಿನ ಪರಿಸರಕ್ಕೆ ಸಹಜವಾಗಿತ್ತು. ಮಕ್ಕಳಿಲ್ಲದ ಹೆಣ್ಣಾಗಿರುವುದಕ್ಕಿಂತ ಮಣ್ಣಾಗಿರುವುದೇ ಮೇಲು.

'ಹೆಣ್ಣು ಆಗುದಕಿಂತ ಮಣ್ಣು ಆಗುದು ಲೇಸು
ಮಣ್ಣೀನ ಮ್ಯಾಲ ಮರವಾಗಿ ಇದ್ದರ
ಬಂದವರಿಗೆಲ್ಲ ನೆರಳವ್ವ'

ಮಣ್ಣಲ್ಲಿ ಹುಟ್ಟಿದ ಮರ ಬರಹೋಗುವ ನಾಲ್ಕು ಜನರಿಗೆ ಆಶ್ರಯವಾಗುತ್ತದೆ. ಮಕ್ಕಳಿಲ್ಲದ ಹೆಣ್ಣು ಅದಕ್ಕಿಂತ ಕಡೆ ಎನ್ನುವುದು ಬಂಜೆಯಾದವಳ ಅನಿಸಿಕೆ. ಅಲ್ಲದೆ ಬಂಜೆಯಾದವಳನ್ನು ಕುಟುಂಬದ ಇತರರು, ವೃಂದದ ಜನರು ಕಂಡಕಂಡಲ್ಲಿ ಹೀಗಳೆದು, ಚುಚ್ಚು ಮಾತಾಡಿ ಅಪಹಾಸ್ಯಗೈಯ್ಯುತ್ತಿದ್ದರು. ಜನಪದ ಸಮಾಜದ ಅಂಥ ಪರಿಸರದ ಕಳವಳಕಾರಿ ಅನಿಸಿಕೆಗಳು ಈ ಕೆಳಗಿನ ಪ್ರತಿಮೆಯೊಂದರಲ್ಲಿ ತೀವ್ರತರವಾಗಿ ಸ್ಪಂದಿಸುತ್ತವೆ:

ಬಂಜಿ ಬಾಗಿಲ ಮುಂದ ಅಂಜೂರಿ ಗಿಡ ಹುಟ್ಟಿ
ಟೊಂಗಿ ಟೊಂಗೆಲ್ಲ ಗಿಣಿ ಕೂತು ಹೇಳ್ಯಾವ
ಬಂಜಿನಿನ ಬದುಕ ಹೆರವರಿಗಿ

ಜೀವಂತ ವ್ಯಕ್ತಿಗಳ ದೂಷಣೆ ಒತ್ತಟ್ಟಿಗಿರಲಿ; ಬಂಜೆಯ ಬಾಗಿಲದಲ್ಲಿ ಹುಟ್ಟಿದ ಅಂಜೂರಿ, ಅಂಜೂರಿ ಮರದ ಟೊಂಗೆ, ಟೊಂಗೆಯಲ್ಲಿ ಕುಂತಿರುವ ಗಿಳಿ, ಅವು ಕೂಡ 'ನಿನ ಬದುಕು ಸಾರ್ಥಕವಲ್ಲ' ಎಂದು ಕುಟುಕುತ್ತವೆ.

ಆದ್ದರಿಂದ ಮಕ್ಕಳಿಲ್ಲದಿರುವುದು ಒಂದು ಬಂಧನ. ಉಸಿರುಗಟ್ಟಿ ಸಾಯುವ ಈ ಬಂಧನದಿಂದ ಬಿಡುಗಡೆ ಬೇಕು. ಹಂಗಿನ ಬಾನ ಉಂಡು ಕಂಡ ಕಂಡವರ ಕಣ್ಣಲ್ಲಿ ಕಸವಾಗಿ ಬಾಳುವುದು ಬೇಡ. ಬಂಜೆ ಅನ್ನುವ ಶಬ್ದ ಹೊರುವುದು ಅಗದು.

ಕಂದನ ಕೊಡು ಶಿವನೆ ಬಂಧನ ಬಿಡಲಾರೆ
ಹಂಗೀನ ಬಾನ ಉಣಲಾರೆ ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ

ಜನಪದ ವೃಂದಗಳಲ್ಲಿ ಮಕ್ಕಳನ್ನು ಕುರಿತ ಈ ಬಗೆಯ ತೀವ್ರ ಆಸೆ, ಅಂದಿನ ವಿಭಿನ್ನ ಭೌಗೋಲಿಕ ಪ್ರದೇಶಗಳ ನೈಸರ್ಗಿಕ ಅನಿಶ್ಚಿತ ಪರಿಸರದ ಒತ್ತಾಸೆಯಾಗಿರು

ವುದು ಸಹಜವೇ. ಹೀಗಾಗಿ ಮಕ್ಕಳನ್ನು ಕುರಿತ ಜನಪದ ತ್ರಿಪದಿಗಳು ವಾತ್ಸಲ್ಯ ಭಾವದ ವಿವಿಧ ಸವಿ ಸುಖಗಳನ್ನು ಸೊಗಸು ಸೊಗಡುಗಳನ್ನು ಬಿಂಬಿಸುತ್ತವೆ. ಮಗು ಇದ್ದರೆ ಆಯಿತು. ಯಾರ ಗೊಡವೆ ನಮಗೇನು? ಅನ್ನುವ ಸಂತೃಪ್ತಭಾವ ತಾಯಿಗೆ. ಒಬ್ಬನಲ್ಲ ಹತ್ತು – ಹತ್ತಲ್ಲ ಇನ್ನೂ ಹೆಚ್ಚಿಗೇ ಮಕ್ಕಳನ್ನು ಬೇಡುವ ಕಾತರ ಹೆಣ್ಣಿಗೆ; 'ಹತ್ತು ಮಕ್ಕಳ ಹೆತ್ತು ಮುತ್ತೈದಿ ಸ್ಯಾವಂತ್ರ್ಯಾಗಿ ಬಾಳು' ಎಂದು ಹರಸುವ ತವಕ ಹಿರಿಯರಿಗೆ. ಹುಟ್ಟಿದ ಮಕ್ಕಳು ಆರೋಗ್ಯವಂತರಾಗಿ ಬೆಳೆಯ ಬೇಕು. ಒಂದಕ್ಕೆ ಹತ್ತು–ಹತ್ತಕ್ಕೆ ನೂರು.

'ಒಬ್ಬ ನನ ಮಗ ಕೆಚಾಟ್ಗಿ ಬೆಳಿಯಲಿ
ಒಬ್ಬನ ಹೊಟ್ಟೀಲಿ ಐನೂರ ಹುಟ್ಟಿದರ
ಹಬ್ಬೀತ ಹಡದವ್ವ ನನ ಬಳಗ'

ಹೀಗೆ ಬಳಗ –ಬಳುವಳಿ–ಬೆಳೆಯುತ್ತಲೇ ಹೋಗಬೇಕು ಎನ್ನುವ ಆಕಾಂಕ್ಷೆ: ಏಕೆಂದರೆ ಮಗು, ಗುರುವಿನ ಅಂತಃಕರಣದಿಂದಾಗಿ ಶಿವನ ದಯೆಯಿಂದಾಗಿ ಬಂದುದು. ಎಲ್ಲಿ ಮಕ್ಕಳೋ ಅಲ್ಲಿ ಕೈಲಾಸ.

'ಹಟ್ಯಾಗೆ ನಮಗುರುವು ಬೆಟ್ಟು ಹೂರಿದ ತಾವ
ಬಟ್ಟಮಲ್ಲೀಗಿ ಬನಹುಟ್ಟಿ ಮುತ್ತೈದಿ
ಪುತ್ರಯ್ಯ ಇದ್ದಲ್ಲಿ ಕೈಲಾಸ'

ಜನಪದ ತ್ರಿಪದಿಗಳಲ್ಲಿ ಬರುವ ಮಕ್ಕಳ ವರ್ಣನೆಗೆ ತನ್ನದೇ ಆದ ವಿಶಿಷ್ಟ ಸೊಗಸಿದೆ. ಆಡುನುಡಿಯ ಬೆಡಗು, ಸ್ವಭಾವೋಕ್ತಿಯ ಸೊಗಡು, ಸಂದರ್ಭ ಸಹಜತೆಯ ನವುರು, ಚೆಲ್ಲಾಟ ಸರಸಗಳ ಬೆರಗು: ಹೀಗೆ ವಾತ್ಸಲ್ಯದ ನರುಗಂಪು ಬಿಚ್ಚಿಕೊಳ್ಳುತ್ತ ಸುಳಿದಿರುಗುತ್ತದೆ.

ಕಂದನ ಚೆಲುವು: ಮಗುವನ್ನು ಹೆತ್ತಾಗ ಬಸವಳಿದ ತಾಯ ಮುಖ, ಆ ಮಗ ಚೆಂಡಾಡಿ ಬರುವಾಗ ಕುಂದಣದ ಹೊಳಪಿನಿಂದ ಕಳಕಳಿಸುತ್ತದೆ. ತೊಟ್ಟಿಲಲ್ಲಿ ಮಲಗಿದ ಮಗ ತಾಯಿಯ ಕಣ್ಣಿಗೆ ತೊಳೆದ ಮುತ್ತು; ತನ್ನದೇ 'ದೃಷ್ಟಿ' ತಾಕೀತು ಎಂದು ದೃಷ್ಟಿ ತೆಗೆಯುವ ನಾಜೂಕು. ತೊಟ್ಟಿಲ ಮೇಲಿನ ಚಟ್ಟಿಗೆ ಅಳವಡಿಸಿದ ನವಿಲಗರಿ, ಗಿಳಿ, ಗುಬ್ಬಿಗಳ ದಿಟ್ಟಿ ಆದೀತೆಂದು ಕರಿ ಬೇವಿನ ದೃಷ್ಟಿ ತೆಗೆಯುವ ಕ್ರಮ. ಚಿನ್ನದ ವೈಬಣ್ಣ, ನೆತ್ತಿ ತುಂಬೆಲ್ಲ ಮುಂಗುರಳ ಸರಮಾಲೆ – ಜಾವ್ಞಳು. ಆಡಿದ ಮಗು ಬೆವೆತಾಗ ಹನಿ ಹನಿ ಮುತ್ತಿನ ಹೊಳಪು; ಆದಕ್ಕೇ ಮುತ್ತಿನ ದೃಷ್ಟಿ ತೆಗೆಯುವ ತುಡಿತ.

ಮಗು ಮಾಣೀಕ, ಇದು ಅಳಕೂಡದು; ಅತ್ತರೆ ಮುತ್ತೇ ಉದುರುತ್ತವೆ. ಎನ್ನುವ ರೂಪಕದೃಷ್ಟಿ. ಮಗ ಕಸ್ತೂರಿ ಅವನು ಕಸದಲ್ಲಿ ಆಡಿದರೆ ತಾಯಿಗೆ ಕಸಿವಿಸಿ. ಬಣ್ಣದ ತೊಟ್ಟಿಲಕ್ಕೆ ಜೋತುಬಿದ್ದ ರೇಸಿಮೆಗೊಂಡೆ; ಮುತ್ತಿನ ಜಾಲರಿ. ಎಷ್ಟೊ ತೂಗಿದರೂ ನಿದ್ದೆ ಮಾಡದ ಮಗ. ಅಳುವ ಕಂದವ್ವನನ್ನು ಎತ್ತಿ ಅಂಗಳಕ್ಕೆ ತಂದು ಚಂದಪ್ಪನನ್ನು ತೋರಿಸಿದ ತಾಯಿ, ಚಂದ್ರನಲ್ಲಿರುವ ಚಿಗರಿಯನ್ನು ತಂದು ಕೊಡುತ್ತೇನೆ ಅನ್ನುತ್ತಾಳೆ. ಚಂದ್ರ ತನ್ನ ತವರುಮನೆಯ ಪಲ್ಲಕ್ಕಿ; ಅದರಲ್ಲಿ ಕೂತು ಆಡು ಎಂದು ರಮಿಸುತ್ತಾಳೆ.

ತಾನು ಕಂಡ ಕನಸು, ಉಂಡ ಸವಿ ಎಲ್ಲ ಈ ಮಗುವಿನಲ್ಲಿ ಮೂಡಿದೆ. ಆದ್ದರಿಂದ ಕಾಡಬೇಡೆಂದು ಬೇಡುತ್ತಾಳೆ. ತೊಟ್ಟಿಲಿಗೆ ರೇಸಿಮೆಯ ಹಚ್ಚಡ ಹವಳದ ಹಾಸಿಗೆ ಹಾಕಿ ಮಲಗಿಸಿ, ತೊಟ್ಟಿಲನ್ನು ಕುಲುಕುತ್ತ, ತೂಗುತ್ತ 'ಜೋಗೂಳ ಹಾಡಿ ಹಿಗ್ಗ್ಯಾಳ' 'ಲಾಲಿಯು ಹಾಡಿದರ ಲಾಲೀಸಿ ಕೇಳ್ಯಾನ' ಇತರ ಎಲ್ಲ ಹಂಬಲಗಳನ್ನು ಮರೆಯುತ್ತಾನೆ. ತನ್ನಷ್ಟಕ್ಕೆ ತಾನೇ ಆಡುತ್ತಾನೆ. ತನ್ನ ಪುಟ್ಟ ಮೃದು ರಟ್ಟೆಗಳನ್ನು ಅತ್ತ ಇತ್ತ ಬೀಸುತ್ತಾನೆ.

"ತೊಟ್ಟಿಲೊಳಗಿನ ಕಂದ ತೋಳು ಬೀಸುವ ಚಂದ
ರಟ್ಟೆನೊಂದಾವು ಎಲೆ ಕಂದ"

ಎಂದು ಒಳಗೊಳಗೇ ಮರುಗುತ್ತಾಳೆ. ಮತ್ತೆ ಮಗು ಅಳುತ್ತದೆ. ಹಟಮಾಡಿ ಅಳುವ ಕಂದನನ್ನು ಪರಿಪರಿಯಿಂದ ರಮಿಸಿದರೂ ಅವನು ಸುಮ್ಮನಾಗುವುದಿಲ್ಲ. ಅವನು ಅಳುವಾಗ ಸುರಿದದ್ದು ತಾಯಿಯ ಕಣ್ಣಿಗೆ ಹವಳದ ಜೊಲ್ಲು.

"ಅಳಬ್ಯಾಡ ಅಂದರ ಹಟಮಾಡಿ ಅಳತಾನ
ಹವಳದ ಜೊಲ್ಲ ಸುರಿಸ್ಯಾನ ಕಂದಯ್ಯ
ತಾಯೀಯು ಮಾತ ತಿಳಿಯಾನ"

ಅಂತೂ ಕಡೆಗೆ ಅತ್ತು ಕಾಡಿ

'......ಮತ್ತೇನ ಬೇಡ್ಯಾನ
ಚಿತ್ರದ ಗೊಂಬಿ ನೋಡ್ಯಾನ ಕಂದಯ್ಯ
ಗಪ್ಪು ಚಿಪ್ಪಾಗಿ ಮಲಗ್ಯಾನ'

ಹೀಗೆ ತಾಯಿಯ ಬಗಲಿಗೆ ಬಂಗಾರದ ಭಾರವಾಗಿರುವ ಮಗ, ದಿನಕ್ಕೊಂದು ಚಂದದಂತೆ ಬೆಳೆಯುತ್ತಾನೆ. ಪರಿಪರಿಯ ಬಣ್ಣದ ಬಟ್ಟೆಗಳನ್ನು ತೊಡಿಸಿ, ಅಲಂಕರಿಸಿ ಮಗುವಿನ ಚೆಲುವನ್ನು ನೋಡುವ ತಾಯಿಯ ಕಣ್ಣಿಗೆ ಮಗನ ಒಂದೊಂದು ವೇಷವೂ ಒಂದೊಂದು ಹೊಸ ಲೋಕವನ್ನು ತೆರೆಯುತ್ತದೆ.

ಹಸುರು ಅಂಗಿ ತೊಡಿಸಿ, ಹಾಲ್ಗಡಗ ಇಡಿಸಿದ ಮಗ, ಹಳ್ಳಕ್ಕೆ ಹೊರಟ ತನ್ನ ಕೂಡ ಬರಕೂಡದು – ಅವನೇನಾದರೂ ಬಂದರೆ ಅಲ್ಲಿರುವ ಬೆಳ್ಳಕ್ಕಿ ಹಿಂಡೇ ಬೆದರುತ್ತವೆ. ಹಣ್ಣುಳ್ಳ ಗಿಡಕ್ಕೆ ಗಿಳಿ ಮುದ್ದಾದಂತೆ ಹೊಂದಾವರೆ ಬಣ್ಣದ ತನ್ನ ಮಗ ಬಳಗಕ್ಕೆ ಮುದ್ದು. ಈಗಾಗಲೇ ಪುಟ್ಟ ಪುಟ್ಟ ಹೆಜ್ಜೆಯಿಟ್ಟು ದಟ್ಟಂಡಿ ದಾರಂಡಿ* ನಡೆದಾಡುತ್ತಾನೆ. ನಡೆದಾಡುವ ಕಂದನ ನಡಿಗೆಯ ಅಂದವೇ ಅಂದ. ಅದರ ಸಡಗರ ನೋಡಿದ ತಾಯಿಗೆ ಮಗುವಿನ ಆಯಿಮಾಡಿಸಿದ ಕಿರುಗೆಜ್ಜಿ ಹಾಕಿ ಅದರ ಸೊಗಸು ಹೆಚ್ಚಿಸುವ ಹುಕಿ. ಅದರಲ್ಲಿ ನವಿಲ ನಡಿಗೆ – ನವಿಲಿನ ಆಟದ ಅಂದ:

‘ನಡೆದು ಬಾ ಕಂದಯ್ಯ ನಡಗೀಯ ನೋಡೇನ
ಪದುಮದ ಪಾದ ಬಲಗಾಲ ಕಂದಯ್ಗ
ಕಿರಿಗೆಜ್ಜಿ ಇಡಿಸಿ ನೋಡೇನ’

ಇಷ್ಟಕ್ಕೆ ಸಾಕಾಗದು. ಅರಳೆಲೆ ಬೇಕು. ಬೆರಳಿಗೆ ಉಂಗುರ ಬೇಕು. ಕೊರಳಿಗೆ ‘ಅಸಲಿ’ ಬೇಕು ‘ಮೂರೆಸಳ ಕ್ಯಾದಿಗಿ’ ‘ಮುತ್ತಿನ ಮೂಗುತಿ’ ಇವೆಲ್ಲವುಗಳಿಂದ ಸಿಂಗರಗೊಂಡ ಮಗು, ಗುಲಗಂಜಿ ಚೆಂಡು ಎತ್ತಿ ಎತ್ತಿ ಒಗೆದು ಆಡುತ್ತಾನೆ. ಮುಗ್ಗರಿಸುತ್ತಾನೆ; ಬಿದ್ದು ಏಳುತ್ತಾನೆ. ಈಗ ಇವ ಕೈ ಬಿಟ್ಟು ಆಡುವ, ರೊಯ್ಯೆಂದು ಓಡುವ ಗಜಭೀಮ. ‘ಹವ್ವಲೆ’ ಅಂದು ಕರೆದು ಕೂಡಲೇ ಓಡುತ್ತಿದ್ದವನು ಗಕ್ಕನೆ ನಿಂತು ಹೊರಳಿ ನೋಡುತ್ತಾನೆ. ‘ಎಲ ನಿನ್ಯಾರು ಕರದಾರು? ನಾವು ನಮ್ಮ ಗಿಣಿರಾಮುನನ್ನು ಕರೆದೆವು’ ಎಂದು ತಾಯಿ ನಗಾಡಿದಾಗ ತಾನೂ ನಗುತ್ತ ಕುಣಿಯುತ್ತಾನೆ. ಈಗ ಇವ ಸಕ್ಕರಿಯ ಸವಿಗಾರ. ವೀಳ್ಯದ ರುಚಿಗಾರ. ಆದರೆ ಇವನ ಅವತಾರವೋ ವೀರಭದ್ರನದು. ಒಂದಲ್ಲ ಒಂದು ನೆಪದಿಂದ ಹಟ ಮಾಡುತ್ತಾನೆ. ಕಿಡಿಗೇಡಿತನವೆಂದರೆ ಬಲು ಮೆಚ್ಚು. ಇವನನ್ನು ಸಂಬಾಳಿಸುವುದೇ ಸಮಸ್ಯೆ. ಹಾಲು ಬೇಡಿ ಅಳುತ್ತಾನೆ. ಕೋಲು ಬೇಡಿ ಕುಣಿಯುತ್ತಾನೆ. ಮೊಸರು ಬೇಕು ಎಂದು ಕೆಸರು ತುಳಿದು ರಂಪ ಮಾಡುತ್ತಾನೆ. ಹಾಲು ಕುಡಿ ಅಂದರೆ ಒಂದೇ ಬಟ್ಟಲು ಬೇಡ; ಹನ್ನೆರಡು ಬಟ್ಟಲು ಬೇಕು: ಆಯ್ತು. ಆದರೆ ಅವನಿಗೆ ನೊರೆಹಾಲೇ ಬೇಕು. ಅದೂ ಮಧ್ಯಾಹ್ನ.

ಒಂದೊಂದು ದಿನದ ಕಿರಿಕಿರಿಯಂತೂ ಮೋಜಿಗಿಟ್ಟುಕೊಳ್ಳುತ್ತದೆ. ಹಾಲು ಬೇಡಿದಾಗ, ಬಿಂದಿಗಿಯಿಂದ ಬಟ್ಟಲಿಗೆ ಹಾಲು ಬಗ್ಗಿಸಿಕೊಟ್ಟರೆ ಸಾಲದು–ಇಡೀ ಬಿಂದಿಗೆ ಹಾಲನ್ನೇ ಆ ಬಟ್ಟಲಿಗೆ ಸುರುವಬೇಕೆಂದು ಹಟ. ಆಯಿತು ಹೇಗೋ ಹೇಗೋ ರಮಿಸಿ ಅಂಗಳಕ್ಕೆ ಕರೆತಂದು ಚಂದ್ರನನ್ನು ತೋರಿಸಿದರೆ, ಅವನನ್ನು ಮುಗಿಲಿಂದ ಅಂಗಳಕ್ಕೆ ತಂದು ನಿಲ್ಲಿಸು ಎಂದು ಹಟ.

ಕಂದನ ಕಿರಿಕಿರಿ ಇಂದೇನು ಹೇಳಲಿ
ಬಿಂದೀಗಿ ಹಾಲು ಸುರುವಂದ, ಛೆಂಜೀಯ
ಚೆಂದ್ರಮನ ತಂದು ನಿಲಿಸೆಂದ

ಓಣಿಯಲ್ಲಿ ಎಲ್ಲರೂ ಬಯ್ಯುವವರೇ. ಮನೆಯಲ್ಲಿ ರಿಪಿರಿಪಿ. ಆಡ ಹೋದಲ್ಲಿ ತುಂಟಾಟ, ಜಗಳ. ಅವನ ಕಾಲಕಡಗ ಎಲ್ಲೋ ಚೆಲ್ಲಿ ಹೋಗುತ್ತದೆ. ಮುಂದಲೆಗೆ ಕಟ್ಟಿದ ಜುಲಪಿ ಹೂವಿನ ಮುತ್ತು ಉದುರಾಡುತ್ತವೆ. ಕೈಬಿಂದ-ಲಿಯೂ ಎಲ್ಲೋ ಬಿದ್ದು ಹೋಗಿದೆ. ತಾಯಿ, ಮಗುವಿನ ಕಿರಿಬೆರಳು ಹಿಡಿದು ನಡೆಸಿಕೊಂಡು ಹೋಗುತ್ತ ಓಣಿಯೆಲ್ಲ ಅವರಿವರನ್ನು ಕೇಳುತ್ತ ಅಲೆದಾಡುವ ಮೋಜಿನ ಚಿತ್ರ :

ಕಂದೆಲ್ಲಿ ಆಡ್ಯಾನ ಕಡಗೆಲ್ಲಿ ಛೆಲ್ಯಾವ
ದುಂಡ ಮುತ್ತೆಲ್ಲಿ-ಉದರ್ಯಾವ । ಕಂದನ
ಬಿಂದೂಲಿ ಕಂಡವರು ಕೊಡಿರೆವ್ವ

ಹೂವು ಹಿಡಿದು ವಾಸನೆ ನೋಡುವ, ಬೆಳುದಿಂಗಳು ಅಂಗಳಕ್ಕೆ ಇಳಿದಾಗ ಸೊಗಸಿಗೆ ಕುಣಿದಾಡುವ ರಸಿಕ ಬಾಲಕ. ಅವನು ಕೈಲಿರುವ ಚಂಡಿನಿಂದ ಗುರಿಯಿಟ್ಟು ಬೀಸುವುದು ಅಲ್ಲಿಲ್ಲಿ ಅಲ್ಲ; ಮೇಲೆ, ದೂರ ಮುಗಿಲಲ್ಲಿ ಮಿರುಗುವ ಚಿಕ್ಕೆಗಳಿಗೆ !

'ಬೆಳದಿಂಗಳಳಿದಾವ ಅಂಗಳಕ ಕರದಾವ
ರಂಗಯ್ಯಬಾರೊ ಆಡಾಕ । ಚಿಕ್ಕೀಗಿ
ಚಂಡಗುರಿಯಿಟ್ಟು ಹೊಡಿಯಾಕ !

ಹೀಗೆ ಜನಪದ ತ್ರಿಪದಿಗಳಲ್ಲಿ ಕಂಡುಬರುವ 'ಮಗು' ಹೊನ್ನತಾವರಿ ಮುದ್ದು, ಬಳಗಕ್ಕೆಲ್ಲ ಮುದ್ದು.

ಜನಪದ ಸಮಾಜದ ವಿವಿಧ ವೃಂದ ವರ್ಗಗಳ, ವಂಶವಾಹಿನಿಯ ಬತ್ತದ ಊಟೆಯಾಗಿರುವ 'ಮಗು' ಜನಪದರ ಅಂತಃಕರಣವನ್ನು ತಟ್ಟಿ, ನೂರುಬಗೆಯ ಭಾವನೆಗಳಿಗೆ ಇಂಬುಗೊಟ್ಟಿರುವುದು ಸಹಜವಾಗಿದೆ.

ಗ್ರಂಥಋಣ

೧. ಗರತಿಯ ಹಾಡು — ಸಂ. ಚನ್ನಮಲ್ಲಪ್ಪ ಹಲಸಂಗಿ, ಲಿಂಗಪ್ಪ, ರೇವಪ್ಪ

೨. ಜೇಂಗೊಡ — ಡಾ. ಎನ್. ಆರ್. ನಾಯಕ

೩. ಜನಪದ ತ್ರಿಪದಿಗಳು ಸೌ. ಶಾಂತಕುಮಾರಿ ಪಾಟೀಲ

೪. ನವಲು ಕುಣಿದಾವ — ಮುದೇನೂರ ಸಂಗಣ್ಣ

ಪ್ರಾಚೀನ ಕಾವ್ಯಗಳಲ್ಲಿ ಶೈಶವದ ವರ್ಣನೆ

ಗುರುಲಿಂಗ ಕಾಪಸೆ

ಶಿಶುಸಾಹಿತ್ಯ ಬೇರೆ, ಶಿಶುಗಳನ್ನು ಕುರಿತು ಬರೆವ ಸಾಹಿತ್ಯ ಬೇರೆ. ನಮ್ಮ ಕವಿಗಳು, ಕತೆಗಾರರು, ಕಾದಂಬರಿಕಾರರು ತಮ್ಮ ತಮ್ಮ ಕೃತಿಗಳಲ್ಲಿ ಆ ಆ ಸಂದರ್ಭಕ್ಕನುಗುಣವಾಗಿ ಶೈಶವದ ವರ್ಣನೆಯನ್ನು ಮಾಡಿರುವರು. ಈ ವರ್ಣನೆಯನ್ನು ಶಿಶುಸಾಹಿತ್ಯವೆನ್ನುವಂತಿಲ್ಲ. ಇದು ಆಯಾ ಸಾಹಿತಿ ಕಂಡರಿಸಿದ ಶೈಶವಾವಸ್ಥೆ, ಅಷ್ಟೆ. ಈ ಶೈಶವಾವಸ್ಥೆಯ ವರ್ಣನೆ ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಹೇಗೆ ಬಂದಿದೆ ಎಂಬುದನ್ನು ನೋಡುವುದು ಈ ಲೇಖನದ ಉದ್ದೇಶ.

ಪ್ರಾಚೀನ ಕವಿಗಳಿಗೆ ಇಂದಿನ ಕವಿಗಳಂತೆ ಶೈಶವನ್ನೇ ಕುರಿತು ಬರೆಯುವ, ವ್ಯಕ್ತಿನಿಷ್ಠ ಅನುಭವವನ್ನು ಅಭಿವ್ಯಕ್ತಗೊಳಿಸುವ ಅವಕಾಶವಿರಲಿಲ್ಲ. ಅವರು ವಸ್ತುನಿಷ್ಠವಾಗಿಯೇ ವರ್ಣನೆ ಮಾಡಬೇಕಾದ ಪ್ರಮೇಯವಿದ್ದಿತು. ಅವರು ತಮ್ಮ ಕಾವ್ಯಕ್ಕೆ ಒಂದು ವಸ್ತುವನ್ನು ಆಯ್ದುಕೊಂಡು, ಅದರ ಕಥೆಯನ್ನು ಬಿಡಿಸುತ್ತ ಹೋಗಬೇಕಾಗುತ್ತಿತ್ತು. ಹಾಗೆ ಕಥೆಯನ್ನು ಬಿಡಿಸುವಾಗ ಪಾತ್ರಗಳು ರೂಪುಗೊಳ್ಳುತ್ತಿದ್ದವು. ಈ ಪಾತ್ರಗಳ ಚಿತ್ರಣದಲ್ಲಿಯೇ ಮಗುವಿನ ಅವಸ್ಥೆಯು ಬಂದು ಹೋಗುತ್ತಿತ್ತು. ಹಾಗೆಯೇ ಮಾನವ ಮನೋಧರ್ಮದ ಚಿತ್ರಣವೂ ಸಾಗುತ್ತಿತ್ತು.

ಮಾನವ ಮನೋಧರ್ಮವನ್ನು ಚಿತ್ರಿಸುವ ಪ್ರಾಚೀನ ಕವಿಗಳಿಗೆ ಕಾವ್ಯದಲ್ಲಿ ಅಲಂಕಾರ, ರಸ, ಧ್ವನಿ ಮುಂತಾದವುಗಳಿರಬೇಕೆಂಬ ಧೋರಣೆಯೂ ಇದ್ದಿತು. ಕಾವ್ಯಮೀಮಾಂಸೆಯ ದೃಷ್ಟಿಯಿಂದ ಅವೆಲ್ಲ ಅವಶ್ಯವಾಗಿದ್ದವು. ವ್ಯಕ್ತಿಯ ಭಾವ-ವಿಭಾವ-ಅನುಭಾವಗಳ ಚಿತ್ರಣದಲ್ಲಿ ಶೃಂಗಾರ, ವೀರ, ಕರುಣ ಮೊದಲಾದ ರಸಗಳನ್ನು ನಿಷ್ಪತ್ತಿಗೊಳಿಸುವ ಅವರ ಉದ್ದೇಶ ಒಂದು ನಿರ್ದಿಷ್ಟ ದಾರಿಯನ್ನು ತುಳಿಯುತ್ತಿತ್ತು. ಹಾಗಿದ್ದರೂ ಸನ್ನಿವೇಶ, ಸಂದರ್ಭಗಳಿಗನುಗುಣವಾಗಿ ಜೀವನದ ವಿವಿಧ ವ್ಯಾಪಾರಗಳನ್ನು ಚಿತ್ರಿಸುವಲ್ಲಿ ಅವರು ಹಿಂದೆಬೀಳಲಿಲ್ಲ. ತಮ್ಮ ಕಥಾವಸ್ತುವಿಗೆ ಪೂರಕ

ವಾಗುವ, ಪೋಷಣೆ ನೀಡುವ ಬದುಕಿನ ಹಲವು ಮುಖಗಳನ್ನು ಅವರು ಚೆನ್ನಾಗಿಯೇ ಗಮನಿಸುತ್ತಿದ್ದರು. ಅದರಿಂದಾಗಿ ವಿಸ್ತಾರವಾದ ಬದುಕಿನ ಹಲವು ಸನ್ನಿವೇಶಗಳು ಅವರ ಕಾವ್ಯಗಳಲ್ಲಿ ಅಭಿವ್ಯಕ್ತಿಯನ್ನು ಪಡೆದವು.

ಶೃಂಗಾರವು ಪ್ರಾಚೀನ ಕವಿಗಳಿಗೆ ಅತ್ಯಂತ ಪ್ರಿಯವಾದ ರಸವೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಸಾಮಾನ್ಯವಾಗಿ ಶೃಂಗಾರವು ದಾಂಪತ್ಯದಲ್ಲಿ ತನ್ನ ಸಾರ್ಥಕತೆಯನ್ನು ಪಡೆಯುತ್ತಿತ್ತು. ದಾಂಪತ್ಯದ ಸವಿ-ಸೊಗಸುಗಳನ್ನು ಬಲ್ಲ ಅಂದಿನ ಕವಿಗಳು ಅದರ ಚಿತ್ರಣವನ್ನು ಕೊಡುವಲ್ಲಿಯೂ ಹಿಂದೆ ಬೀಳಲಿಲ್ಲ. ಇದರೊಂದಿಗೆ ಪುತ್ರದೋಹನ, ಪುತ್ರ ಜನನ, ಪುತ್ರೋತ್ಸವ ಸಂಗತಿಗಳೂ ಕಾವ್ಯಗಳಲ್ಲಿ ಕಾಣಿಸಿಕೊಂಡವು. ಮಕ್ಕಳ ಬಯಕೆಯಿಂದ ಪರಿತಪಿಸುವ, ಅದಕ್ಕಾಗಿ ವ್ರತನಿಯಮಗಳನ್ನು ಮಾಡುವ ಸತಿಯರು ನಮ್ಮ ಕಾವ್ಯಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿಯೇ ಸಿಕ್ಕುತ್ತಾರೆ. ಕಾವ್ಯದ ನಾಯಕ ಇಲ್ಲವೆ ನಾಯಿಕೆಯ ಜನನಕ್ಕೆ ತಾಯಿ–ತಂದೆಗಳ ವ್ರತ–ನಿಯಮಗಳು ಕಾರಣವಾಗಿರುವ ಸಂಗತಿಗಳನ್ನು ಅನೇಕ ಕಾವ್ಯಗಳಲ್ಲಿ ಕಾಣಬಹುದು. ವ್ರತ-ನಿಯಮಗಳ ಅಥವಾ ತಪಸ್ಸಿನ ಕಾರಣದಿಂದಾಗಿ ಜನಿಸುವ ಮಕ್ಕಳಲ್ಲಿಯೂ ಅವರದೇ ಆದ ವಿಶೇಷತೆಗಳಿರುವುದನ್ನು ಕಾಣಬಹುದು. ಅದರಲ್ಲೂ ಮಹಾನುಭಾವರು ಕಥಾನಾಯಕರಿದ್ದಾಗ ಅವರ ಜನನ ಹಾಗೂ ಶೈಶವಗಳು ಇನ್ನಷ್ಟು ವಿಶೇಷತೆಗಳನ್ನು ಪಡೆಯುತ್ತವೆ. ಈ ವಿಶೇಷತೆಗಳು ಅವರ ಭವಿತವ್ಯದ, ಅವರ ವ್ಯಕ್ತಿತ್ವದ ಸಂಕೇತಗಳಾಗಿಯೂ ಕಾಣಿಸಿಕೊಳ್ಳುತ್ತವೆ. ಹಾಗಿದ್ದರೂ ಅವರ ಶೈಶವಾವಸ್ಥೆಯ ವರ್ಣನೆ ರಮ್ಯವಾದ ಚಿತ್ರಣವಾಗಿರುವುದುಂಟು.

ಶೈಶವವು ಒಂದು ವಿಲಕ್ಷಣವಾದ ಅವಸ್ಥೆ. ಯಾವ ಮಾನಸಿಕ ವೈಪರೀತ್ಯಗಳನ್ನು ಪಡೆಯದ, ಮುಗ್ಧ, ನಿಷ್ಕಲ್ಮಷವಾದ ಈ ಅವಸ್ಥೆಯಲ್ಲಿಯ ಕ್ರಿಯೆ, ಪ್ರತಿಕ್ರಿಯೆಗಳೆಲ್ಲ ಆಪ್ಯಾಯಮಾನವಾದವು. ನೋಟ, ನಗು, ಮಿಸುಕಾಟ, ದನಿ: ಹರಿದಾಡಲು, ಓಡಾಡಲು ಪ್ರಾರಂಭವಾಗುತ್ತಿದ್ದಂತೆಯೇ ಬೆಳೆಯುವ ಚಟುವಟಿಕೆ, ಆಟಪಾಟ, ಸೆಡವು, ಅಳುವು, ಛಲ ಮುಂತಾದವುಗಳೆಲ್ಲ ಒಂದಕ್ಕಿಂತ ಒಂದು ಆಕರ್ಷಕವಾಗಿಯೇ ಕಾಣುವವು. ನಮ್ಮ ಪ್ರಾಚೀನ ಕವಿಗಳು ಇವುಗಳನ್ನೆಲ್ಲ ಕಾಣದೆ ಇಲ್ಲ. ಅಷ್ಟಲ್ಲದೆ ಅವರು ತಾವು ನಿರ್ಮಿಸಲಿರುವ ಪಾತ್ರದ ಸಂಕ್ಷಿಪ್ತ ರೂಪಗಳಂತೆ ಮಕ್ಕಳ ಶಕ್ತಿ, ಸಾಮರ್ಥ್ಯ, ವೇಷ–ಆಡಂಬರಗಳನ್ನು ಮನೋಜ್ಞವಾಗಿ ವರ್ಣಿಸಿರುವರು.

ಪ್ರಸ್ತುತದಲ್ಲಿ ನಮ್ಮ ಪ್ರಾಚೀನ ಕವಿಗಳು ಚಿತ್ರಿಸಿದ ಕೆಲವು ಶಿಶುಲೀಲೆಗಳನ್ನು ಗಮನಿಸಲಾಗುವುದು. ಕನ್ನಡದ ಆದಿಕವಿ ಪಂಪನಿಂದಲೇ ಇಂಥ ವರ್ಣನೆ ಪ್ರಾರಂಭವಾಗುತ್ತಿರುವವುದು ಒಂದು ವಿಶೇಷ. [ಹಾಗೆ ನೋಡಿದರೆ ನಮ್ಮ ಪ್ರಾಚೀನ ಶಾಸನಗಳಲ್ಲಿಯೂ ಶೈಶವದ ವರ್ಣನೆಗಳಿಲ್ಲವಿಲ್ಲ. ಅದು ಬೇರೆ ವಿಷಯ.]

ಮಹಾಕವಿ ಪಂಪನು ಧರ್ಮ, ಭೀಮರ ಶೈಶವವನ್ನು ಒಂದೆರಡು ಕಂದಪದ್ಯಗಳಲ್ಲಿ ಹಿಡಿದಿಟ್ಟಿರುವುದನ್ನೂ ತನ್ನ ದೊರೆಯಾದ ಅರಿಕೇಸರಿಯು, ಪರ್ಯಾಯವಾಗಿ ಅರ್ಜುನನ ಬಾಲ್ಯವನು ಕೆಲವು ಕಂದಗಳಲ್ಲಿ ಚಿತ್ರಿಸಿರುವುದನ್ನೂ ಇಲ್ಲಿ ಗಮನಿಸಬೇಕು:

ತೊಡರ್ದಮರ್ದ ಬಾಳವಣ್ಣದ
ತುಡುಗೆ ಪಳಂಚಲೆವ ಪಂಚ ಜಡೆ ನೊಸಲೊಳೊಡಂ
ಬಡುವರಳೆಲೆಯಿದಱಿಂ ಚೆ
ಲ್ವಿಡಿದಿರ್ದುದು ಬಾಳಕೇಳಿ ಧರ್ಮಾತ್ಮಜನಾ

ನಡೆದ ತಳರ್ನಡೆಯೊಳ್ ಪುಡಿ
ವುಡಿಯಾದುವು ಶಿಲೆಗಳೊಡೆದು ಕರಿಗಳ್ ಭೀಮಂ
ಪಿಡಿದಡರ್ದೊಡೆ ಬಾಯ್ವಿಟ್ಟ
ಲ್ವಡಗಾದುವು ಮುದ್ದದಂತು ಸೊಗಯಿಸಬೇಡಾ

ಮುನಿವನಮನೆ ಬಿಸುಟುವು ಮುಂ
ಮುಸಿಯರ ಸೋಂಕಿನೊಳೆ ಬಳೆದ ಸಿಂಗಂಗಳ್
ಮುದ್ದಿನೊಳಡರ್ವ ಪಿಡಿವ ಗುರ್ದುವ
ಮನೆಗೆಟ್ಟಿವಸಿತರ್ಕಮಲಸಿ ಮರುದಾತ್ಮಜನಾ[೧]

ಇಲ್ಲಿಯ ಮೊದಲನೆಯ ಕಂದದಲ್ಲಿ ಧರ್ಮಜನ ಸೊಗಸಾದ ಬಾಲ್ಯದ ಚಿತ್ರವಿದ್ದರೆ, ಉಳಿದೆರಡು ಕಂಡಗಳಲ್ಲಿ ಭೀಮನ ಸಾಮರ್ಥ್ಯದ ವಿಶಿಷ್ಟ ಚಿತ್ರಣವಿದೆ.

ಅರ್ಜುನನ ವ್ಯಕ್ತಿತ್ವವನ್ನು ಅರಿಕೇಸರಿಯಲ್ಲಿ ಸಮನ್ವಯಗೊಳಿಸಿದ ಪಂಪನು ಅರಿಕೇಸರಿಯನ್ನೇ ವರ್ಣಿಸಹೊರಟಿರುವುದನ್ನು ಕಾಣಬಹುದು:

ಬೇಡದುದಂ ಬೇಡುವ ಪುಡಿ
ಯಾಡುವ ತೊದಳೊದವೆ ನುಡಿವ ನಗಿಸುವ ಬಾಲ
ಕ್ರೀಡೆ ಮುರಾರಿಯ ಬಾಲ
ಕ್ರೀಡೆಯುನನುಕರಿಪುದಾದುದರಿಕೇಸರಿಯಾ

ಪರೆದಡರ್ದ ಧೂಳಿ ಕಿಱುನಗೆ
ವೆರಸಿದ ತೊದಳೊದವೆ ನುಡಿವ ನುಡಿ ನಗೆಮೊಗದೊಳ್
ಪರಕಲಿಸಿದ ಕಾಡಿಗೆವೆರ
ಸರಿಕೇಸರಿ ತಾಯ ಮನವಸಿಱ್ಗೊಳಿಗೊಂಡಂ

೧ ಪಂಪಭಾರತ—ಆ. ೨, ಪದ್ಯ ೪,೫,೬

.. ..
ಕರಿಕಳಭಂಗಳ ಶಿಶು ಕೇ
ಸರಿಗಳ ಬಱಿಯಂ ತಗುಳ್ದು ಬಡವುಗಳನವಂ
ತಿರಿಪಿ ಪಿಡಿಯುತ್ತುಮರಿಗಂ
ಪರಿದಾಡುವ ಸಮವಯಸ್ಕರೊಳ್ ಸೊಗಯಿಸಿದಂ[೨]

'ಬೇಡದುದಂ ಬೇಡುವ, ಪುಡಿಯಾಡುವ . . . . . ಪರೆದಡರ್ದ ಧೂಳಿ, ಕಿಱುನಗೆ' ಈ ಎಲ್ಲ ವರ್ಣನೆಯು ಮಕ್ಕಳ ಸಹಜ ಸ್ವಭಾವನ್ನು ನಮ್ಮ ಕಣ್ಣುಮುಂದೆ ತಂದು ನಿಲ್ಲಿಸುತ್ತದೆ. 'ಕರಿಕಳಭಂಗಳ, ಶಿಶುಕೇಸರಿಗಳ ಬಱಿಯ ತುಗುಳ್ದು' ಆಡುವ ಆಟವು ರಾಜಕುಮಾರರಿಗೆ, ವೀರಕುಮಾರರಿಗೆ ಸಲ್ಲತಕ್ಕ ವರ್ಣನೆಯಾಗಿದೆ.

ರುದ್ರಭಟ್ಟನು ತನ್ನ 'ಜಗನ್ನಾಥ ವಿಜಯ'ವಲ್ಲಿ ಶ್ರೀಕೃಷ್ಣನ ಶೈಶವವನ್ನು ವರ್ಣಿಸಿದುದು ಒಂದು ಗಮನಾರ್ಹವಾದ ಸಂಗತಿಯಾಗಿದೆ:

ಅನಿಮಿತ್ತದರಸ್ಮಿತದಿಂ
ದನಕ್ಷರಾಳಾಪದಿಂದ ಸಂಕೇತವಿಳೋ
ಕನದಿಂದಕಾರಣಾನಂ
ದಿನದಿಂದುತ್ತಾನಶಯನದಿಂ ಹರಿಯೆಸೆದಂ[೩]

ಅನಿಮಿತ್ತವಾದ ಮುಗುಳ್ನಗೆಯಿಂದ, ಅಕ್ಷರವಿಲ್ಲದ ಮಾತಿನಿಂದ, ಏನನ್ನೂ ಸೂಚಿಸದ ನೋಟದಿಂದ, ಅಕಾರಣಾನಂದದಿಂದ ಮೇಲ್ಮುಖವಾಗಿ ಮಲಗಿದ ಶ್ರೀ ಕೃಷ್ಣನ ಈ ಚಿತ್ರ ತೇಜಸ್ವಿಯಾದ ಯಾವ ಮಗುವಿನ ಚಿತ್ರವೂ ಆಗಬಹುದು. ಸರ್ವಸಾಮಾನ್ಯವಾಗಿ ಎಲ್ಲ ಶಿಶುಗಳಲ್ಲಿಯೂ ಈ ಬಗೆಯ ಭಾವವನ್ನು ನಾವು ಕಾಣುವೆವು. ರುದ್ರಭಟ್ಟನ ಕಾವ್ಯ ಮುಂದುವರಿದಂತೆ ಶ್ರೀ ಕೃಷ್ಣನ ಬಾಲಕೇಳಿಯ ವೈಶಿಷ್ಟ್ಯಗಳು ಕಾಣತೊಡಗುತ್ತವೆ. ಉದಾಹರಣೆಗಾಗಿ, ಈ ಕೆಲವು ಪದ್ಯಗಳನ್ನು ನೋಡಬಹುದು :

ವಿವಿಧ ಸಟಾವಳಿ ಕಿರುಜಡೆ
ನವಕೇಸರಕಾಂತಿ ಕೊರಲರಕ್ಕೆಯ ರತ್ನ
ಚ್ಛವಿಯಾಗಲಂಬೆಗಾಲಿ
ಕ್ಕುವ ಪದದೊಳ್ ಸಿಂಹಶಿಶುವೊಲೆಸೆದಂ ಕೃಷ್ಣಂ

ತನ್ನ ವಟಿಂದೆ ಮಾಣದೆ ಗೃಹಾಂಗಣಮಂ ಪೊಱಮಟ್ಟು ಪೋಪನಂ
ಬೆನ್ನನೆ ಪೋಗಿಪೋಗಿ ಪಿಡಿತಂದೆನಸುಂ ಜಡಿದೊರ್ವೆ ಗೋಪಿ ದಾ

೨ ಪಂಪಭಾರತ-ಆ ೨ ಪ. ೭,೮ ಮತ್ತು ೯
೩ ಜಗನ್ನಾಥ ವಿಜಯ-ಆ-೩-ಪ-೨೯

ವಿನ್ನಡುವಂ ತೊಡರ್ಚಿ ದೃಢವಾಗಲಲೂಖಲದಲ್ಲಿ ಕಟ್ಟಿ ಪೋ
ಗಿನ್ನೆಲೆಪೋಗಲಾರ್ಪೊಡೆಲೆ ಚಂಚಲಚೇಷ್ಟಿತ ನೋಳ್ಪೆನೆಂಬುದಂ[೩]

ಸಿಂಹಶಿಶುವೊಲ್ ಶೋಭಿಸುವ ಕೃಷ್ಣನು ಮನೆಯಿಂದ ಮತ್ತೆ ಮತ್ತೆ ಅಂಬೆಗಾಲಿಡುತ್ತ ಹೊರಗೋಡುವುದನ್ನು ತಡೆಯಲು ಗೋಪಿಯು ಅವನ ನಡುವಿಗೆ ಹಗ್ಗ ಬಿಗಿದು ಒಂದು ಒರಳಿಗೆ ಕಟ್ಟಿಹಾಕಿ "ಚಂಚಲಚೇಷ್ಟೆಯವನೆ ಇನ್ನು ಹೋಗುವುದಕ್ಕೆ ಶಕ್ತಿಯಿದ್ದರೆ ಹೋಗು ನೋಡೋಣ" ಎಂದು ಆಹ್ವಾನಿಸಿದಾಗ ಅವನು ಒರಳನ್ನೇ ಎಳೆದುಕೊಂಡು ಹೋದನಂತೆ. ಅವನ ಅಸಾಧಾರಣ ಸಾಮರ್ಥ್ಯವನ್ನು ಕಂಡು ಬೆರಗಾಗಿ, ಹಿಗ್ಗಿ ಯಶೋದೆ :

ಪರಮಸುಖಾರ್ದ್ರಲೋಚನದಿನೀಕ್ಷಿಸಿ ನಂದನನಂ ಸರೋರುಹೋ
ದರನನಿದಾರ ಮಾಣಿಕನಿದಾರ ನಿಧಾನವಿದಾರ ಮುದ್ದಿದಾ
ರರಸನಿದಾರ ಬಲ್ಲಹನಿದಾರ ಕರೀಂದ್ರನಿದಾರ ಸಿಂಹವೆಂ
ದಿರದಮರ್ದಪ್ಪಿದಳ್ ಪದೆಪಿನಂ ಮೊಲೆವಾಲ್ ತೊಳಿದೆಚ್ಚುಪಾಯ್ವಿನಂ[೪]

ಮಗನ ಲೀಲೆಯನ್ನು ಕಂಡು ಸಂಭ್ರಮಿಸುವ ತಾಯಿಯ ವಾತ್ಸಲ್ಯ ಇಲ್ಲಿ ಸಾರ್ಥಕವಾಗಿ ಶಬ್ದರೂಪ ಧರಿಸಿದುದನ್ನು ಕಾಣಬಹುದು. ರುದ್ರಭಟ್ಟನು ಕೃಷ್ಣನ ಬಾಲ್ಯದ ವರ್ಣನೆಯನ್ನು ಹಾಗೆಯೇ ಮುಂದುವರಿಸಿರುವನು. ಅವನು ಉಡಿಗೆ-ತೊಡಿಗೆ, ಆಟದ ರೀತಿ ಮುಂತಾದವುಗಳನ್ನೆಲ್ಲ ಸೊಗಸಾಗಿಯೇ ಚಿತ್ರಿಸಿರುವನು.

ಶಿವಕವಿಯಾದ ಹರಿಹರನು ತನ್ನ 'ಗಿರಿಜಾಕಲ್ಯಾಣ'ದಲ್ಲಿ ಹೈಮವತಿಯ ಶೈಶವದ ವರ್ಣನೆಗೆಂದೇ ಒಂದು ಅಧ್ಯಾಯ ಮೀಸಲಿರಿಸಿರುವನು. ಗಿರಿಜೆಯ ಪ್ರತಿಯೊಂದು ಹಾವ-ಭಾವದಲ್ಲಿಯೂ ಹರಿಹರನು ಆಕೆಯ ವೈಶಿಷ್ಟ್ಯವನ್ನು ಎತ್ತಿ ತೋರಿಸಲು ಯತ್ನಿಸಿರುವನು. ಆಕೆಯ ಶೈಶವದ ಒಂದೊಂದು ಕ್ರಿಯೆ ಶಿವನ ಸನ್ನಿಧಿಯನ್ನು ಸೂಚಿಸುತ್ತ ನಡೆದಿರುವುದನ್ನು ಅವನು ಗುರುತಿಸಿರುವನು. ಆಕೆಯ ನಗು ಮೊದಲ್ಗೊಂಡು ಕುಳಿತುಕೊಳ್ಳಲು, ಅಂಬೆಗಾಲಿಕ್ಕಲು, ನಿಲ್ಲಲು, ಮೆಲ್ಲಡಿಯಿಡಲು, ತೊಡಲ್ನುಡಿಯಾಡಲು ಕಲಿತುಕೊಳ್ಳುವ ಕ್ರಿಯೆಗಳೆಲ್ಲ ತಾತ್ತ್ವಿಕ ಚಿಂತನೆಯ ಅಸ್ತಿವಾರದ ಮೇಲೆಯೇ ನಿಂತಿವೆ. ಆದರೆ ಇಲ್ಲಿ ಕವಿಗೆ ಹೇಳಬೇಕಾಗಿದ್ದುದು ಶೈಶವದ ಲೀಲೆಯೇ ಹೊರತು ತತ್ತ್ವವಲ್ಲ. ಅದು ಕವಿಯ ದೃಷ್ಟಿ-ದರ್ಶನಗಳ ಪ್ರತೀಕವೆಂಬಂತೆ ಬೆರೆತುಕೊಂಡು ಬಂದಿದೆ. ಹರಿಹರನು ಚಿತ್ರಿಸಿರುವ ಹೈಮವತಿ ಶೈಶವದ ಮನೋಜ್ಞವಾದ ವರ್ಣನೆ ಇಂತಿದೆ :

---

೩ ಜಗನ್ನಾಥ ವಿಜಯ – ಆ-೩.ಪ.೩೬, ೩೭

೪ ಅದೆ ,, ಪ.೪೦.

ಘನರಜತ ಗಿರಿಯ ಸಿಂಹಾ
ಸನದೊಳ್ ನಲಿದಿರ್ಪ ಪರಿಯನಭವನ ತೊಡೆಯೊಳ್
ಮನದೊಳವಿಂ ಕುಳ್ಳಿರ್ಪುದ
ನನುಕರಿಸುವ ತೆಱದೊಳಗಜೆ ಕುಳ್ಳಿರೆ ಕಲ್ಮೇಲ್

ತ್ರ್ಯಂಬಕನಂ ಬಲವರಲೆರ
ಡೆಂಬೀ ಪದವೆಯ್ದುವೆಂದು ನಾಲ್ಕುಂ ಕಾಲಿಂ
ದಂ ಬಲವಂದಪಳೆಂಬಂ
ತಂಬಿಕೆಯಂಬಳಿಕೆಯಾಡುವಳ್ ಶೈಶವದೊಳ್

ಬೇರ್ಪಡದೆ ಕೂಡೆ ತಾನೆಯು
ಡರ್ಪ ಖಿಳಕ್ಕೆಂಬ ನೈಜವಂ ಮೆಱೆಯಿಸುತಂ
ದಾರ್ಪಿಂ ಭಿತ್ತಿಗಳಂ ನೆ
ಮ್ಮಿರ್ಪಳ್ ನಿಂದಗಜೆ ಬಾಲ್ಯವಂ ನಟಿಯಿಸುತುಂ

ಅಡಿಗಳ ಕೋಮಲತೆಗೆ ಧರೆ
ಬಿಡಲಾಱದೆ ಪೊಡಮಡುತ್ತೆ ಬಿಡದಿರೆ ನಯದಿಂ
ಬಿಡಿಸಿಕೊಳುತ್ತುಂ ಮೆಲ್ಲನೆ
ನಡೆದಪಳೆನೆ ಮೆಱೆದುವಗಜೆಯೊಳ್ ದಟ್ಟಡಿಗಳ್

ರಸನೆಯ ಸುಧೆಯಂ ಮಿಗೆ ಸವಿ
ದು ಸವಿದು ಮಗ್ನತೆಯನೆಯ್ದಿ ಮಧುರಾಕ್ಷರಮು
ಬ್ಬಸದಿಂ ಪೊರಳುತ್ತುರುಳು
ತ್ತೊಸರ್ದಪುದೆನೆ ಗಿರಿಜೆಯೊಳ್ ತೊದಳ್ನುಡಿಯಸೆಗುಂ[೫]

ಹೀಗಿರುವ ಶಿಶು ಗಿರಿಜೆ

ನಲಿವಳ್ ನಗುವಳ್ ರಾಗಿಪ
ಳುಲಿವಳ್ ಮುದ್ದಿಸುವಳಳುವಳಪ್ಪುವಳಂತಿಂ
ತೊಲೆವಳ್ ನಿಲ್ವಳ್ ಮೇನೆಯೆ
ಮೊಲೆಯಂ ಮಱೆದಭವನಾಟದೊಳ್ ಸಂದಿರ್ಪಳ್[೬]

ಅಂತೂ ಗಿರಿಜೆಯ ಲೀಲೆಯೆಲ್ಲ ಅಭವನ ಆಟವಾಗಿ ಒಂದು ವಿಶಿಷ್ಟ ರುಚಿಯನ್ನು ಕೊಡುತ್ತದೆ. ಆಕೆಯ ಬಾಲ್ಯವೆಲ್ಲ ಶಿವಪೂಜೆ, ಶಿವಧ್ಯಾನದಲ್ಲಿಯೇ ಕಳೆಯುತ್ತಿರುವು

೫. ಗಿರಿಜಾ ಕಲ್ಯಾಣ ಆ–೩, ಪ : ೭೧, ೭೨, ೭೩. ೭೪ ಮತ್ತು ೭೬

೬. ಅದೇ ,, ,, ಪ–೯೧

ದನ್ನೂ ಹರಿಹರನು ಚಿತ್ರಿಸಿರುವನು. ಅದರೊಂದಿಗೆ ಆಕೆಯ ಭಕ್ತಿಭಾವದ ವ್ಯಕ್ತಿತ್ವ ವನ್ನು ಬೆಳೆಸಿಕೊಂಡು ಹೋಗಿರುವನು.

ರಾಘವಾಂಕನ 'ಸಿದ್ಧರಾಮ ಚರಿತ್ರೆ'ಯಲ್ಲಿ ಸಿದ್ಧರಾಮನ ಬಾಲ್ಯದ ಚಿತ್ರವೂ ಭಕ್ತಿಪೂರ್ಣವಾಗಿ ಬಂದಿದ್ದರೂ ಮಗುವಿನ ಚಟುವಟಿಕೆಗಳನ್ನು ಪಡೆದುಕೊಂಡಿಲ್ಲ. ಅದು ಮುಗ್ಧ, ಮೂಕ ಸಂವೇದನೆ. 'ಬಾಲ್ಯದ ಮಱೆಯ ಪರಬೊಮ್ಮ'ವನ್ನು ಪ್ರತಿಬಿಂಬಿಸುವ ಒಂದು ರೂಪ. ಮಲ್ಲಯ್ಯನನ್ನು ಹುಡುಕುವಾಗ ಮಲ್ಲಯ್ಯನ ರುದ್ರರಮಣೀಯ ಸ್ವರೂಪವನ್ನು ಕಾಣುವಾಗಲೊದಲಿನ ಮುಗ್ಧತೆ, ಭಕ್ತಿಗಳು ಇನ್ನಷ್ಟು ವಿಕಾಸವನ್ನು ಪಡೆದುಕೊಂಡು ಕಾಣುತ್ತವೆ.

ಹರಿಹರನು ಗಿರಿಜೆಯ ಶೈಶವವನ್ನು ವರ್ಣಿಸಿದ ಬಕ್ತಿ ಸಂಪನ್ನತೆಯ ದಾರಿಯಲ್ಲಿಯೇ ಭೀಮಕವಿಯು ತನ್ನ ಕಥಾನಾಯಕ ಬಸವಣ್ಣನ ಶೈಶವವನ್ನು ಇನ್ನೊಂದು ವಿಧದಿಂದ ಬಣ್ಣಿಸಿರುವುದನ್ನು ಕಾಣಬಹುದು. ಬಸವಣ್ಣ ಮಗುವಾಗಿ ಕೈಗಳನ್ನು ಚೀಪುವುದನ್ನು, ಕೈಬಿಚ್ಚಿ ಆಡುವುದನ್ನು, ತನ್ನಷ್ಟಕ್ಕೆ ತಾನೆ ಹೆದರುವುದನ್ನು. ತಲೆಯೆತ್ತುವುದನ್ನು ಅತ್ಯಂತ ಸಾಂಕೇತಿಕವಾದವುಗಳೆನ್ನುವಂತೆ ಅಲಂಕಾರಿಕವಾಗಿ ವರ್ಣಿಸಿರುವುದು ಭೀಮಕವಿಯ ಕಲ್ಪನಾಚಾತುರ್ಯಕ್ಕೆ ನಿದರ್ಶನಗಳಾಗಿವೆ. ಇಲ್ಲಿಯ ಕಲ್ಪನಾಚಾತುರ್ಯದ ಹಿಂದಿರುವ ಉಪಮೆ, ಉತ್ಪ್ರೇಕ್ಷೆಗಳಲ್ಲಿ ತಾತ್ವಿಕ ನಿರೂಪಣೆ ಒಂದಿಷ್ಟು ಹೆಚ್ಚಾಯಿತೆನಿಸಿದರೂ ಅರ್ಥವಂತಿಕೆಯಿಂದ ಕೂಡಿರುವುದು ಗಮನಿಸತಕ್ಕ ಅಂಶವಾಗಿದೆ:

ಅತುಳ ಶಿವಸುಖಸುಧೆಯನಾತ್ಮ
ಸ್ಥಿತಿಗೆ ಕೈ ಕೈಯಿಂದ ಹಿಡಿಕೈ
ಸುತವೆ ಸವಿಯಂ ನೋಳ್ಪವೊಲು ಹಸ್ತಂಗಳಂ ಪೀರ್ವ
... .

ಒತ್ತರಿಪ ಸಂಸಾರವಂ ಬೆಂ
ಬತ್ತಿ ಸಾಱಿ ತೆಗುಳ್ದು ನಲಿದಾ
ಡುತ್ತಲಿಪ್ಪವೊಲೆರಡು ಕಯ್ಯಂ ಬಿಚ್ಚಿಯಾಡುವನು
... ...

ಇಳೆಗೆ ತಾನೆಂದಾತು ಬಂದಿಹ
ಕೆಲಸವದು ತಳುವಾಯಿತೆಂದು
ಮ್ಮಳಿಸಿ ಹೆದಱುವ ಮಾಳ್ಕೆಯಿಂದೊನ್ನೊಮ್ಮೆ ಹೆದಱುವನು[೮]

೮ ಬಸವಪುರಾಣ–ಸಂಧಿ–೩ ಪದ್ಯ–೨೫, ೩೬, ೩೭

ಈ ಎಲ್ಲ ಪದ್ಯಗಳಲ್ಲಿ ಶೈಶವದ ಒಂದು ಅವಸ್ಥೆ ವಿಶಿಷ್ಟವಾದ ಅಭಿವ್ಯಕ್ತಿಯನ್ನು ಪಡೆದಿದ್ದುದು ಸ್ಪಷ್ಟವಾಗಿ ಕಂಡುಬರುತ್ತದೆ.

'ಪ್ರಭುಲಿಂಗ ಲೀಲೆ'ಯಲ್ಲಿ ಚಾಮರಸನು 'ಮಾಯೆ'ಯ ಬಾಲಲೀಲೆಯನ್ನು ವರ್ಣಿಸಿದ್ದು ಒಂದು ವಿಶೇಷವಾಗಿದೆ. 'ಮಾಯೆ' ತನ್ನ ಹೆಸರಿಗೆ, ಸ್ವಭಾವಕ್ಕೆ ತಕ್ಕಂತೆ ಶೈಶವದಲ್ಲಿಯೇ ಪ್ರಭಾವ ಬೀರುವಂಥವಳಾಗಿದ್ದಳು. ಆಕೆಯ ಸಹಜ ಶೈಶವದ ಇರುವು ತುಂಬ ಸೊಬಗಿನದು. ಆಕೆ ಮಾಣಿಕದೊಟ್ಟಿಲಲ್ಲಿರುವಾಗಿನ ಈ ದೃಶ್ಯವನ್ನು ನೋಡಬೇಕು :

ಹಲಗೆ ಮಾಣಿಕದೊಟ್ಟಿಲಲಿ ಮ
ಗ್ಗುಲಿಸಿ ಮಲಗಿ ನಿರೀಕ್ಷಿಸುತೆ ಮಾ
ರ್ಪೊಳೆವ ತನ್ನನೆ ಕಂಡು ನಲಿವುತ ನಗುತ ಕೈದುಡುಕಿ
ಸೆಳೆದು ತೆಗೆದರೆ ಬಾರದಿರಲಾ
ನೆಳಲನೊದೆವುತ ಕಾಲ ಗೆಜ್ಜೆಗ
ಳುಲುಹನಾಲಿಪ ಮಾಯೆ ಮೆಱೆದಳು ಬಾಲಲೀಲೆಯಲಿ[೮]

ಇದು ಯಾವ ಮಗುವಿನ ಸ್ವಭಾವಕ್ಕೂ ಅನ್ವಯಿಸುವಂತಹದು. ಹಾಗೆಯೇ ಆಕೆಯು ಚಿಕ್ಕಂದಿನಲ್ಲಿ ಗೆಳತಿಯರೊಂದಿಗೆ ಆಡುವ ಆಟವೂ ಮಕ್ಕಳ ಮನೋಧರ್ಮಕ್ಕೆ ಸಹಜವಾದುದು. ಆಕೆಯ ಬಾಲ್ಯದ ವೈಶಿಷ್ಟ್ಯವನ್ನು ಚಾಮರಸನು ವರ್ಣಿಸುವ ಹಲವಾರು ಪದ್ಯಗಳು ನಮ್ಮನ್ನು ಮತ್ತೆ ಮತ್ತೆ ಓದಲು ಹಚ್ಚುತ್ತದೆ. ಅವುಗಳ ಆಕರ್ಷಣೆಯೇ ಅಂತಹದು. ಉದಾಹರಣೆಗಾಗಿ ಈ ಒಂದು ಪದ್ಯವನ್ನು ನೋಡಬಹುದು :

ಹಿಡಿ ಹಿಡಿದು ಕೊಂಡರ್ತಿಯಲಿ ಬೆಂ
ಬಿಡದೆ ಶಿಕ್ಷಾಚಾರ್ಯತನದಲಿ
ಜಡಿದು ಜಂಕಿಸಿ ಮುದ್ದುತನ ಮಿಗೆ ಮಾಯೆ ತನ್ನಂತೆ
ನಡೆಯ ಕಲ್ಲಿಸಿದಳಂಚೆವಿಂಡಿಗೆ
ನುಡಿಯ ಕಲಿಸಿದಳರಗಿಳಿಗೆ ಸರ
ವಿಡಲು ಕಲಿಸಿದಳಾಕೆ ತನ್ನರಮನೆಯ ಕೋಗಿಲೆಗೆ[೯]

ಇಲ್ಲಿ ಮಾಯೆಯ ಮಹತಿಯೂ ಇದೆ. ಅಲಂಕಾರದ ಬೆಡಗೂ ಇದೆ.

೮ ಪ್ರಭುಲಿಂಗಲೀಲೆ–ಗತಿ-೪ ಪದ್ಯ–೨೬
೯ ಪ್ರಭುಲಿಂಗಲೀಲೆ ಗತಿ ೪, ಪದ್ಯ-೩೨

ಕುಮಾರವ್ಯಾಸ ಭಾರತದಲ್ಲಿ ಶೈಶವನ ವರ್ಣನೆ ಕಡಿಮೆ ಆದರೆ ಕೌರವ-ಪಾಂಡವರ ಬಾಲಕೇಳಿ ರಂಜನೀಯವಾಗಿದೆ. ಭೀಮನೊಬ್ಬ ತುಂಟ ಹುಡುಗನಾಗಿ ಇಲ್ಲಿ ಕಾಣಿಸಿಕೊಳ್ಳುತ್ತಾನೆ. ಕೌರವ-ಪಾಂಡವರು ಪುರವ ಹೊರವಳಯದಲ್ಲಿ ಆಳಿಸೇರಿಕೆ, ಹಿಡಿಗವಡೆ, ಚೆಂಡು – ಮುಂತಾದ ಆಟಗಳನ್ನು ಆಡುತ್ತಿರುತ್ತಾರೆ. ಪಾಂಡವರೈವರು ಒತ್ತಟ್ಟಿಗೆ, ನೂರ್ವರು ಕೌರವರು ಒತ್ತಟ್ಟಿಗೆ ಇಂಥ ಸಂದರ್ಭದಲ್ಲಿ ಭೀಮನೇ ನಡೆದುಕೊಳ್ಳುವ ರೀತಿಯನ್ನು ಕುಮಾರವ್ಯಾಸನು ಬಣ್ಣಿಸುತ್ತಾನೆ.

ಆದರೊಳೊಬ್ಬನೆ ಭೀಮನನಿಬರ
ಸದೆವ ತಾ ಸೋತರೆ ವಿಭಾಡಿಸಿ
ಕೆದರುವನು ಗೆದ್ದೋಡಿವರ ಬೆಂಬತ್ತಿ ಹಿಡಿದೆಳೆದು
ಸವೆದು ಬಡಿವನು ಮುನ್ನ ಭೀಷ್ಮ
ಗೊದರಿ ದೂರುವನನಿಬರನು ಲು
ಆದಲಿ ಮಗುಳೊಂದಾಗಿ ಸಂಗಡವವರು ಸೂರುಳಿದು.[೧೦]

ಹೀಗೆ ಅವರ ಆಟ, ಜಗಳ ಮತ್ತೆ ಕೂಡುವಿಕೆಗಳು ನಡೆದೇ ಇದ್ದವು. ಈ ಸನ್ನಿವೇಶವನ್ನು ಕುಮಾರವ್ಯಾಸನು ಅವರ ಮುಂದಿನ ಜೀವನದ ಸೆಣಸಾಟಕ್ಕೆ ಪೀಠಿಕೆ ಎಂಬಂತೆ ಬಳಸಿಕೊಂಡಿರುವುದನ್ನು ಕಾಣಬಹುದು.

ಲಕ್ಷ್ಮೀಶನಲ್ಲಿ ಬಭ್ರುವಾಹನ, ಲವ-ಕುಶರು ವೀರಕುಮಾರರು ಅವರ ಶೌರ್ಯ-ಸಾಮರ್ಥಗಳು ಕಿರುಪ್ರಾಯದಲ್ಲಿಯೇ ಪ್ರದರ್ಶಿತವಾಗುವವು. ಶೈಶವದ ಸೊಗಸಾದ ವರ್ಣನೆಯನ್ನೂ ಲಕ್ಷ್ಮೀಶನು ನೀಡಿರುವನು. ಕುಶ-ಲವ ಹಾಗೂ ಚಂದ್ರಹಾಸನನ್ನು ಕುರಿತು ಮಾಡಿದ ಆತನ ವರ್ಣನೆಗಳು ಮನೋಜ್ಞವಾಗಿರುವವು. ಇಲ್ಲಿ ಕವಿಯ ತನ್ಮಯತೆ, ಸೂಕ್ಷ್ಮಾವಲೋಕನ, ಮುಂತಾದವುಗಳನ್ನು ಗುರುತಿಸಬಹುದು. ಕುಶ-ಲವರ ಶೈಶವವನ್ನು ವರ್ಣಿಸುತ್ತ :

ಚೆಲ್ವೆರಡು ರೂಪಾಯ್ತೊ ವಿಮಲತೆ ಕವಲ್ತುದೋ
ಗೆಲ್ವದೆಸೆ ಗೆಳೆಗೊಂಡಡರ್ದಪುದೊ ಕೀರ್ತಿಯ ಮು
ಡಲ್ವ ಸುಧೆಯೊಳ್ ದ್ವಿಧಾಕೃತಿಯಾಯ್ತೊ ಸಂತಸದ
ಬೆಳಸಿನ ಬೆಳೆದ ಪಸುಗೆಯೊ!
ಸಲ್ವ ಕುಲದೇಳ್ಗೆಯ ಸಸಿಯ ಕೋಡೊ ಮೋಹನದ
ಬಲ್ಸೊನಲ ಸವಡಿಯೋ ಸೊಗಸಿನವಳಿಯ ಫಲವೊ
ಸೊಲ್ಪೊಡಿದು ಪೊಸತೆನಲ್ ಕುಶಲವರ್ ಕುಶಲದಿಂ
ಕಣ್ಗೆಸೆದರಾಶ್ರಮದೊಳು[೧೧]

೧೧. ಜೈಮಿನಿ ಭಾರತ – ಸಂಧಿ–೧೯, ಪದ್ಯ ೪೯

ಇಲ್ಲಿಯ ಅಲಂಕಾರದ ಸೊಗಸಿನಲ್ಲಿ ಅವಳ ಮಕ್ಕಳ ಸೊಗಸು ಸಮ್ಮಿಳಿತಗೊಂಡು ವಿಶೇಷ ರುಚಿಯನ್ನು ಕೊಡುತ್ತದೆ. ಇದರ ಮುಂದಿನ ಪದ್ಯ ಅಲಂಕಾರದ ಬೆಡಗನ್ನು ಕಳಚಿಕೊಂಡು, ಸ್ವಭಾವೋಕ್ತಿಯಾಗಿ ಮಕ್ಕಳ ಸಹಜ ಕ್ರಿಯೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದನ್ನು ಕಾಣಬಹುದು :

ತೊಟ್ಟಿಲೊಳ್ ನಲಿವ ನೆವವಿಲ್ಲದೆ ನಗುವ ಬಾಯ್ಗೆ
ಬೆಟ್ಟಿಕ್ಕಿ ಪೀರ್ವ ಪಸಿದೊಡೆ ಚೀರ್ವ ಮೊಲೆಯುಂಬ
ಪಟ್ಟಿರಿಸೆ ಪೊರಳ್ದುಂಬೆಗಾಲಿಡುವ ಮೊಳೆವಲ್ಲ ಜೊಲ್ಲುಗೆ ತೊದಳಿಸಿ ನುಡಿವ।
ದಟ್ಟಡಿಯಿಡುವ ನಿಲ್ವ ತೊಡರ್ವ ಬೇಡುವ ಪರಿವ
ಬಟ್ಟೆಯೊಳೊರಗುವ ಕಾಡುವ ಕುಣಿವ ಲೀಲೆಯಂ
ನೆಟ್ಟನೆ ಕುಮಾರಕರ್ ತೋರಿದರ್ ಜಾನಕಿಗೆ ವಾಲ್ಮೀಕಿ ಮುನಿವರಂಗೆ[೧೨]

ಹೀಗೆ ಸಹಜ ಹಾಗೂ ನೇರವಾದ ನಿರೂಪಣೆಯನ್ನು ಕೊಡುವ ಲಕ್ಷ್ಮೀಶನು, ಈ ಬಗೆಯ ವರ್ಣನೆಯನ್ನು ಚಂದ್ರಹಾಸನ ಶೈಶವದ ಚಿತ್ರಣಕ್ಕೂ ಬಳಸಿಕೊಂಡಿರುವುದುಂಟು. ಆದರೆ ಅದು ಆದರ್ಶ ಶಿಶುವೊಂದರ ಚಿತ್ರವಾಗಿ ಕಾಣುತ್ತದೆ:

ಮೊಳೆವಲ್ಲುಗುವ ಜೊಲ್ಲು ವಟ್ಟಡಿ ತೊದಲ್ನುಡಿ
ತೊಳತೊಳಗುತಿಹ ಸೊಗಸು ಮೆರೆವ ನಗೆಮೊಗದ ಬಗೆ
ಪೊಳೆವ ಕರ್ಣಮಿಸುಪ ನುಣ್ಗದಪಿಗೆಣೆ ಚೆಲ್ವಪಣೆ ಕುರುಳ
ಜೋಲ್ವಂಬೆಗಾಲು ।
ಸುಳಿನಾಭಿ ಮಿಗೆ ಶೋಭಿಪಧರದೆಡೆ ಬಟ್ಟಮೊಡೆ
ನಳಿತೋಳಿಡಿದ ಧೂಳಿ ಸೊಗಯಿಸುವ ವರಶಿಶುವ
....[೧೩]

ಈ ಬಗೆಯಾಗಿ ಸೊಗಯಿಸುವ ವರಶಿಶು ಪಟ್ಟಣದೊಳೆಲ್ಲರ್ಗೆ ಕಾರುಣ್ಯಕ್ಕೀಡಾದುದರಲ್ಲಿ ಸೋಜಿಗವಿಲ್ಲ.

ಹೀಗೆ ಕನ್ನಡ ಪ್ರಾಚೀನ ಕವಿಗಳು ಶೈಶವವನ್ನು ಭಾವಪೂರ್ಣವಾಗಿ, ಅಲಂಕಾರಿಕವಾಗಿ, ವಾಸ್ತವಚಿತ್ರಣವಾಗಿ ಕೊಟ್ಟಿದ್ದುದು ಅನೇಕ ಕಾವ್ಯಗಳಲ್ಲಿ ಕಂಡುಬರುತ್ತದೆ. ವಾತ್ಸಲ್ಯಕ್ಕೆ ದ್ಯೋತಕವಾಗಿರುವ ಇಂಥ ಚಿತ್ರಣಗಳನ್ನು ಓದುವುದು ಒಂದು ಸಂತಸದ ವಿಷಯವೇ.

---

೧೨. ಜೈಮಿನಿಭಾರತ ಸಂಧಿ ೧೯, ಪದ್ಯ ೫೦.
೧೩. ಜೈಮಿನಿ ಭಾರತ ಸಂಧಿ-೨೮, ಪದ್ಯ ೧೮

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಒಂದು ಸಮೀಕ್ಷೆ

—ಜಿ. ಎಂ. ಹೆಗಡೆ

"ಮಕ್ಕಳ ಮನಸ್ಸಿನ ಹಸಿವನ್ನು ಹೆಚ್ಚಿಸುವ ಈ ದೊಡ್ಡ ಸಾಹಸವು ಇಂದು ಬೆಳಕನ್ನು ಕಾಣುವಂತಾಗಿದೆ. ಯಾವ ಜನಾಂಗವು ಮುಂದುವರಿಯಬೇಕಾದರೂ ಅದರ ಮಕ್ಕಳಲ್ಲಿ ನಿಜವಾದ ಜ್ಞಾನದ ತೃಷೆಯು ಉಂಟಾಗದಿದ್ದರೆ ಅದು ಸಾಧ್ಯವೇ ಇಲ್ಲ."—ಶಿವರಾಮ ಕಾರಂತ.

ಹೊಸಗನ್ನಡ ಸಾಹಿತ್ಯದ ವಿವಿಧರೂಪಗಳಂತೆ ಮಕ್ಕಳಸಾಹಿತ್ಯವೂ ವೈವಿಧ್ಯ ಮಯವಾಗಿ, ಜನಪದ ಸಾಹಿತ್ಯದಂತೆ ಜನಪ್ರಿಯ ಸಾಹಿತ್ಯರೂಪವಾಗಿ ಬೆಳೆಯುತ್ತಿದೆ. ಹೀಗೆ ವಿಕಾಸಶೀಲವಾದ ಈ ಸಾಹಿತ್ಯ ಬೆಳೆದು ಬಂದಬಗೆ ಅತ್ಯಂತ ಕುತೂಹಲಕರವೂ ಸಹಜವೂ ಆದುದು. ಜನಜೀವನದ ಉನ್ನತ ಮೌಲ್ಯಗಳನ್ನು ಸದಾ ಪ್ರಕಟಿಸುತ್ತ ಬಂದ ಕನ್ನಡದ ಮಕ್ಕಳಸಾಹಿತ್ಯ ಬೆಳೆದುಬಂದ ಬಗೆ, ಅದರ ಪ್ರೇರಣೆಗಳು, ಸಾಹಿತ್ಯ ವಿಕಾಸದ ವಿವಿಧ ಘಟ್ಟಗಳು, ಪ್ರಮುಖ ಕೃತಿಕಾರರ ಶ್ರಮಸಾಧನೆಗಳನ್ನು ಸ್ಥೂಲ ವಾಗಿ ಪರಿಶೀಲಿಸುವದು ಮತ್ತು ಈ ಸಾಹಿತ್ಯಪರಂಪರೆಯ ಪ್ರಮುಖ ಧೋರಣೆ ಗಳನ್ನು ಗುರುತಿಸುವದು ಇಂದಿನ ಸಂದರ್ಭದಲ್ಲಿ ಅತ್ಯಗತ್ಯವಾಗಿದೆ.

ಮಕ್ಕಳ ಸಾಹಿತ್ಯದ ಸ್ವರೂಪ:

ನಾಡಿನ ಪ್ರಬುದ್ಧ ಚೇತನಗಳಾಗಿ ಬೆಳೆಯುವ ಮಕ್ಕಳ ಸರ್ವಾಂಗೀಣ ವಿಕಾಸ ದಲ್ಲಿ ಸಾಹಿತ್ಯಕ್ಕೂ ಮಹತ್ವದ ಸ್ಥಾನವಿದೆ. ಮಕ್ಕಳಿಗಾಗಿ ರಚಿತವಾದ ಸಾಹಿತ್ಯ ಉಳಿದ ಸಾಹಿತ್ಯಕ್ಕಿಂತ ಆಶಯ ಮತ್ತು ಅಭಿವ್ಯಕ್ತಿಯಲ್ಲಿ ಭಿನ್ನವಾದದ್ದು. ಬಾಲ್ಯ ದಲ್ಲಿ ಮಕ್ಕಳು ಕಲಿತ ವಿದ್ಯೆ ಅವರ ಬಾಳಿನಲ್ಲಿ ಸದಾ ಅನುಭವಕ್ಕೆ ಬಂದು ವ್ಯಕ್ತಿತ್ವ ವಿಕಾಸಕ್ಕೆ ಪೋಷಕವಾಗುತ್ತದೆ. ಅವರ ಜೀವನದುದ್ದಕ್ಕೂ ಹೊಸಹೊಸ ಅನುಭವ

ಗಳು ಒದಗಿಬರುತ್ತವಾದರೂ. ಚಿಕ್ಕಂದಿನಲ್ಲಿ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಮಾಡುವ ಶಿಕ್ಷಣ ಮತ್ತು ಸಾಹಿತ್ಯ ವ್ಯಕ್ತಿಯ ಬಾಳಿನಲ್ಲಿ, ಮಹತ್ವಪೂರ್ಣವಾಗಿರುವದು. ಇಂದಿನ ಮಕ್ಕಳೇ ನಾಳಿನ ನಾಗರಿಕರು. ದೇಶದ ಭಾವಿ ಪ್ರಜ್ಞಾವಂತ ಪ್ರಜೆಗಳು ಎಂದಾಗಲಂತೂ ಮಕ್ಕಳ ಸಾಹಿತ್ಯಕ್ಕೆ ವಿಶೇಷತೆ ಪ್ರಾಪ್ತವಾಗುವದು ಸಹಜ. ಮಕ್ಕಳಿಗೆ ಉತ್ತಮ ಪರಿಸರವನ್ನು, ಒಳ್ಳೆಯ ವಿಚಾರವನ್ನು ಒದಗಿಸುವ ಗುರುತರವಾದ ಕಾರ್ಯ ಹಿರಿಯರ ಪಾಲಿಗಿದೆ. ದೊಡ್ಡವರು ಹೇಳಿದ ಕಥೆಗಳು, ಹಾಡುಗಳು, ಅವರ ನಡೆನುಡಿಗಳನ್ನು ಮಕ್ಕಳು ಬಹುಬೇಗನೆ ಅನುಕರಿಸುತ್ತಾರೆ. ಹೀಗಾಗಿ ಬದುಕಿನ ಉಚ್ಚ ಮೌಲ್ಯಗಳನ್ನು ಬಾಲ್ಯದಲ್ಲೇ ಮಕ್ಕಳಿಗೆ ಒದಗಿಸುವ ಧ್ಯೇಯ ಸಾಧುವಾದದ್ದು. ಅದನ್ನು ಸಾಹಿತ್ಯ ನಿರ್ವಹಿಸುವದು ಯೋಗ್ಯವೂ ಉಪಾದೇಯವೂ ಆಗುತ್ತದೆ.

ಮಕ್ಕಳ ಸಾಹಿತ್ಯಕ್ಕೆ ಸಾಕಷ್ಟು ಮಿತಿ-ಪರಿಮಿತಿಗಳಿವೆ. ಮಕ್ಕಳ ಮನಸ್ಸಿಗೆ ಹೊಸ ಪ್ರೇರಣೆಯನ್ನು, ಚೈತನ್ಯವನ್ನು ಒದಗಿಸುವ ಕಾರ್ಯವನ್ನು ಪರಿಣತರಾದ ಹಿರಿಯರೇ ಮಾಡಬೇಕಾಗುತ್ತದೆ. ಮಕ್ಕಳಿಗಾಗಿ ಬರೆಯುವಾಗ ಸರಳವೂ ಸಹಜವೂ ಆದ ಭಾಷೆಯನ್ನು ಪ್ರಯೋಗಿಸಬೇಕಾಗುತ್ತದೆ. ನಿರೂಪಣೆ ವರ್ಣನಾತ್ಮಕವೂ ಕಥನಾತ್ಮಕವೂ ಆಗಿರಬೇಕು. ನೀತಿಬೋಧನೆಯೊಂದೇ ಪ್ರಮುಖ ಗುರಿಯಾಗಿರದೆ ಮಕ್ಕಳ ಮನಸ್ಸನ್ನು ಅರಳಿಸುವ, ಜ್ಞಾನದ ತೃಷೆಯನ್ನುಂಟುಮಾಡುವ, ಕಲ್ಪನಾ ಶಕ್ತಿಯನ್ನು ಪ್ರವರ್ಧಮಾನವಾಗಿಸುವ, ಚಿಂತನಶಕ್ತಿಯನ್ನು ಬೆಳೆಯಿಸುವಂತಿದ್ದರೆ ಅದಕ್ಕೆ ಹೆಚ್ಚಿನ ಬೆಲೆ ಪ್ರಾಪ್ತವಾಗುತ್ತದೆ ಎಳೆಯ ಮಕ್ಕಳನ್ನು ರಂಜಿಸುವ ಸಚಿತ್ರಗಳಿಂದ ಕೂಡಿರುವ ಸಾಹಿತ್ಯ ಅವರಿಗೆ ಪ್ರಿಯವಾಗುವದರಲ್ಲಿ ಸಂದೇಹವಿಲ್ಲ. ಗಂಭೀರವಾದ ವಿಚಾರ, ವಿದ್ವತ್ಪೂರ್ಣವಾದ ಚರ್ಚೆಗಳು ಮಕ್ಕಳ ಮನಸ್ಸಿಗೆ ಭಾರವಾಗುವದು ಸಹಜ. ತಿಳಿಯಾದ ಪ್ರಸನ್ನವಾದ ಭಾಷೆ ಅವರ ಸಾಹಿತ್ಯಕ್ಕೆ ಅತ್ಯಗತ್ಯವಾಗುತ್ತದೆ. ಕವಿತೆಗಳಲ್ಲಿ ಪ್ರಾಸಗಳು, ಹಾಸ್ಯಗಳಿದ್ದರೆ ಮಕ್ಕಳಿಗೆ ಹೆಚ್ಚು ಪ್ರಿಯವಾಗುತ್ತವೆ. ಅಂತಹ ಪ್ರಯೋಗಗಳು ಕನ್ನಡದಲ್ಲಿ ನಡೆದಿವೆ. ಪುಟ್ಟ ಪುಟ್ಟ ವಾಕ್ಯಗಳಲ್ಲಿ ಮಕ್ಕಳಿಗೆ ಅರ್ಥವಾಗುವ ಭಾಷಾಶೈಲಿ ಮಕ್ಕಳ ಸಾಹಿತ್ಯಕ್ಕೆ ಮೆರಗು ತರುತ್ತದೆ. ಕೆಲವೊಮ್ಮೆ ಚಿತ್ರಗಳ ಮೂಲಕ ಕಥೆ ಹೇಳುವಿಕೆ ಮಕ್ಕಳ ಮನಸ್ಸಿಗೆ ನೇರವಾದ ಪರಿಣಾಮ ಬೀರುವಲ್ಲಿ ಯಶಸ್ವಿಯಾಗುತ್ತದೆ. ವಯಸ್ಕರಾಗುತ್ತಿರುವ ಮಕ್ಕಳ ವಯೋಮಿತಿಗನುಗುಣವಾಗಿ ಅವರ ಮನೋಭೂಮಿಕೆಯ ವಿಕಾಸದ ದೃಷ್ಟಿಯಿಂದ ಮಕ್ಕಳ ಸಾಹಿತ್ಯವೂ ವಿಭಿನ್ನವಾಗಿರಬೇಕಾದುದು ಸಹಜ. ೧೩ ವರ್ಷದ ವರೆಗಿನ ಮಕ್ಕಳ ಮನಸ್ಸು ಕಲ್ಪನಾರಮ್ಯತೆಯ ಸಾಹಿತ್ಯಕ್ಕೆ ಹೆಚ್ಚು ಆಕರ್ಷಿತವಾದರೆ, ಆ ಮುಂದಿನ ಮನಸ್ಸು ವಿಚಾರ ಮತ್ತು ವೈಜ್ಞಾನಿಕ ವಿಷಯಗಳನ್ನು ಮನನ ಮಾಡುವಲ್ಲಿ ಪ್ರವೃತ್ತವಾಗಬಹುದು. ಹೀಗೆ ವಸ್ತು, ಭಾವ, ಭಾಷೆ,

ಅಭಿವ್ಯಕ್ತಿಯಿಂದ ಮಕ್ಕಳ ಸಾಹಿತ್ಯ ಉಳಿದ ಸಾಹಿತ್ಯಕ್ಕಿಂತ ವಿಶಿಷ್ಟ ಸಾಹಿತ್ಯ ಪ್ರಕಾರವಾಗುತ್ತದೆ.

ಮಕ್ಕಳ ಸಾಹಿತ್ಯದ ಪ್ರೇರಣೆಗಳು

ಭಾರತೀಯ ಸಾಹಿತ್ಯಪರಂಪರೆಯಲ್ಲಿ ಬಹುಹಿಂದಿನಿಂದಲೂ ಮಕ್ಕಳ ಸಾಹಿತ್ಯ ಇದೆ. ವಿಷ್ಣುಶರ್ಮನ "ಪಂಚತಂತ್ರ" ನಾರಾಯಣನ "ಹಿತೋಪದೇಶ" ದಂಡಿಯ 'ದಶಕುಮಾರಚರಿತ' ಕಥಾಸಾಹಿತ್ಯ ಪಶುಪಕ್ಷಿಗಳ ಮೂಲಕ, ವೀರಕುಮಾರರ ಸಾಹಸದ ವರ್ಣನೆಯಿಂದ. ಲೋಕಾನುಭವವನ್ನೂ ಜೀವನ ನೀತಿಯನ್ನೂ ನಿರೂಪಿಸುವ ಧ್ಯೇಯದಿಂದ ಮೂಡಿಬಂದು ಬಹುಕಾಲದಿಂದಲೂ ಜನಪ್ರಿಯವಾಗಿವೆ. ಸಂಸ್ಕೃತ ಸಾಹಿತ್ಯದ ಈ ಕೃತಿಗಳು ಪ್ರಪಂಚದ ಬೇರೆ ಬೇರೆ ಭಾಷೆಗಳ ಮೂಲಕ ಇಂದಿಗೂ ಲೋಕಪರ್ಯಟನ ಮಾಡುತ್ತಿವೆ. ದುರ್ಗಸಿಂಹನ 'ಪಂಚತಂತ್ರ' ಸಾವಿರ ವರ್ಷಗಳಿಂದ ಕನ್ನಡದಲ್ಲಿ ಪ್ರಚಾರದಲ್ಲಿದೆ. ಕನ್ನಡದ ಮಕ್ಕಳ ಮನವನ್ನು ಅರಳಿಸುವಲ್ಲಿ ಪಂಚತಂತ್ರ ಹೊಸಹೆಜ್ಜೆಯಿಟ್ಟಿದೆ. ಹೀಗೆ ಸಂಸ್ಕೃತ ಸಾಹಿತ್ಯದ ಪ್ರೇರಣೆಯೊಂದೆಡೆಗಿದ್ದರೆ ಕನ್ನಡದ ಜಾನಪದ ಸಮೃದ್ಧವಾಗಿದ್ದು ಅಲ್ಲಿಯ ಮಕ್ಕಳ ಸಾಹಿತ್ಯ ಬಹುಹಿಂದಿನಿಂದಲೂ ಜೀವಂತವಾಗಿದೆ. ಲಾಲಿಪದಗಳು, ಆಟಪಾಟವನ್ನೊಳಗೊಂಡ ಪ್ರಾಸಬದ್ಧವಾದ ಪದಗಳು, ಮಕ್ಕಳ ಕೋಲಾಟದ ಹಾಡುಗಳಲ್ಲಿ ವೈವಿಧ್ಯವಿದೆ. ಪ್ರಾಚೀನಕಾಲದಿಂದ ಬೆಳೆದು ಬಂದ ಜನಪದ ಸಾಹಿತ್ಯವೂ ಮಕ್ಕಳ ಮನಸ್ಸನ್ನು ಆಕರ್ಷಿಸಿ ರೂಪಿಸಿದೆ.

೧೯ ನೇ ಶತಮಾನದ ಕೊನೆಯಭಾಗ ಮತ್ತು ಈ ಶತಮಾನದ ಉದಯಕಾಲ ಭಾರತೀಯ ಜೀವನದಲ್ಲೇ ಸಂಕ್ರಾಂತಿಕಾಲ. ಪಾಶ್ಚಾತ್ಯ ಪಂಡಿತರ ಪ್ರಯತ್ನದಿಂದ ಭಾರತೀಯ ಸಾಹಿತ್ಯ ಸಂಸ್ಕೃತಿಗಳಿಗೆ ಹೊಸ ತಿರುವು ಪ್ರಾಪ್ತವಾದಕಾಲ. ಮ್ಯಾಕ್ಸ್ ಮುಲ್ಲರ್ ಮೊದಲಾದ ಪಂಡಿತರು ಭಾರತೀಯ ಸಾಹಿತ್ಯದ ಮಹತ್ವವನ್ನು ವಿಶ್ವಕ್ಕೆ ಪರಿಚಯಿಸಿ ಬೇರೆ ಬೇರೆ ಅನುವಾದಗಳನ್ನು ಕೈಕೊಂಡರೆ ಆಂಗ್ಲ ಸಾಹಿತ್ಯದ ಕವಿ ನಾಟಕಕಾರರು ಭಾರತೀಯ ಸಾಹಿತಿಗಳಿಗೆ ಹೊಸ ಪ್ರೇರಣೆ ನೀಡಿದರು. ಇಂಗ್ಲೀಷ್ ಸಾಹಿತ್ಯದ ಅಭ್ಯಾಸದಿಂದ ಅಲ್ಲಿಯ ಸಾಹಿತ್ಯ ಸಂಪ್ರದಾಯಗಳು—ಭಾರತೀಯ ಸಹಜವಾಗಿ ಕನ್ನಡದ ಕವಿ ಲೇಖಕರ ಸಾಹಿತ್ಯನಿರ್ಮಿತಿಗೆ ಹೊಸ ಅರಿವನ್ನೂ ಚಿಂತನೆಯನ್ನೂ ಒದಗಿಸಿಕೊಟ್ಟವು. ಪ್ರಕೃತಿಪ್ರೇಮ, ವೈಯಕ್ತಿಕ ಅನುಭವಗಳಿಗೆ ಮಹತ್ವಬಂದು ಸಾಹಿತ್ಯವಿಕಾಸಕ್ಕೆ ಹೊಸತನ ಪ್ರಾಪ್ತವಾಯಿತು.

ಇಂಗ್ಲೀಷಿನಲ್ಲಿ ಮಕ್ಕಳ ಸಾಹಿತ್ಯ ವಿಪುಲವಾಗಿದೆ. ಗ್ರೀಕ್‌ನಿಂದ ಇಂಗ್ಲಿಷಿಗೆ ಬಂದ 'ಇಸೋಪನ ನೀತಿ ಕಥೆಗಳು' ಸ್ವಿಫ್ಟನ "ಗಲಿವರನ ಪ್ರವಾಸಗಳು" ೧೯ ನೇ

ಶತಮಾನದ ಅಮೇರಿಕಾದ ಬರಹಗಾರ ಮಾರ್ಕ್‌ಟ್ವೇನನ 'ಟಾಮುಸೆಯರನ ಸಾಹಸಗಳು' ಹಕಲ ಬರಿಫಿನ್ನನ ಸಾಹಸಗಳು ಜನಪ್ರಿಯವಾಗಿವೆ. ಮಕ್ಕಳ ಸಾಹಿತ್ಯದಲ್ಲೇ ಬಹು ದೊಡ್ಡ ಹೆಸರು ಹೆಂಡ್ರಸನ್‌ನದು. ಇವನ Aiccin wonderland (ಪಾತಾಳದಲ್ಲಿ ಪಾಪಚ್ಚಿ) ಜಗತ್ತಿನಾದ್ಯಂತ ಕೀರ್ತಿ ಪಡೆದಿದೆ. ಮಕ್ಕಳ ಕಥಾ ಸಾಹಿತ್ಯಕ್ಕೆ ಹೊಸ ತಿರುವು ಕೊಟ್ಟ ಪ್ರಮುಖ ಲೇಖಕನಿವನು. ಫ್ರಾನ್ಸಿನಲ್ಲಿ ಹುಟ್ಟಿಕೊಂಡ 'ಸಿದ್ರಾಸುಂದರಿ' "ಸಿಂಡ್ರೆಲಾ" ಕಥೆಗಳು ಕಲ್ಪನಾರಮ್ಯತೆಯಿಂದ ಪ್ರಸಿದ್ಧವಾಗಿವೆ. ಅಲ್ಲಿಯ ಹಾಸ್ಯಬರಹಗಳೂ, ಸೊಗಸಾದ ಕವಿತೆಗಳೂ ಕನ್ನಡದ ಲೇಖಕರ ಮನಸ್ಸನ್ನು ಸೆರೆಹಿಡಿದವು. ಅವು ಮೊದಮೊದಲು ಅನುವಾದ ರೂಪದಲ್ಲಿ ಬರತೊಡಗಿದವು.

ಹೊಸಗನ್ನಡದ ಉದಯ ಕಾಲದಲ್ಲಿ ಕನ್ನಡದ ಲೇಖಕರು ಇಂಗ್ಲೀಷ ಸಾಹಿತ್ಯದಿಂದ ಪ್ರಭಾವಿತರಾದರೂ ಅವರು ಭಾರತೀಯ ಸ್ವಾತಂತ್ರ್ಯದ ಹೋರಾಟ, ದೇಶಪ್ರೇಮದ ಭಾವನೆ, ನಾಡು ನುಡಿ ಸಂಸ್ಕೃತಿಗಳ ಬಗೆಗೆ ಅಭಿಮಾನವನ್ನು ಮಕ್ಕಳಲ್ಲಿ ಮೂಡಿಸುವ ಉದ್ದೇಶದಿಂದ ಸಾಹಿತ್ಯವನ್ನು ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಚ. ವಾಸುದೇವಯ್ಯ, ಪಂಜೆ ಮಂಗೇಶರಾಯರು, ಎಸ್. ಜಿ. ನರಸಿಂಹಾಚಾರ್ಯರು ರಚಿಸಿರುವ ಮಕ್ಕಳ ಸಾಹಿತ್ಯ ಈ ದೃಷ್ಟಿಯಿಂದ ಗಮನಾರ್ಹವಾದದ್ದು. ಒಟ್ಟಿನಲ್ಲಿ ಕನ್ನಡದ ಮಕ್ಕಳ ಸಾಹಿತ್ಯಕ್ಕೆ ಹಲವು ದಿಶೆಯಿಂದ ಹೊಸ ಪ್ರೇರಣೆ ದೊರಕಿತು. ಕನ್ನಡದ ಮಕ್ಕಳ ಮತ್ತು ಭಾಷೆಯ ಸಾಹಿತ್ಯದ ಬೆಳವಣಿಗೆಗೆ ಪೋಷಕವಾಯಿತು.

ಮಕ್ಕಳ ಸಾಹಿತ್ಯ ರಚನೆಯ ವಿವಿಧ ಘಟ್ಟಗಳು :

ಹೊಸಗನ್ನಡದಲ್ಲಿ ಮಕ್ಕಳ ಸಾಹಿತ್ಯ ಈ ಶತಮಾನದಲ್ಲೇ ವಿಪುಲವಾಗಿದ್ದರೂ ಕಳೆದ ಶತಮಾನದ ಕೊನೆಯ ಭಾಗದಲ್ಲೇ ಅನುವಾದಿತ ಮತ್ತು ಸ್ವತಂತ್ರ ಸಾಹಿತ್ಯ ರೂಪು ಪಡೆದಿತ್ತು. ಆದುದರಿಂದ ಮಕ್ಕಳ ಸಾಹಿತ್ಯಕ್ಕೆ ಹೊಸಗನ್ನಡದ ಉದಯ ಕಾಲವೇ (ಸು. ೧೮೭೦ ರಿಂದ ೧೯೨೦ರ ವರೆಗೆ) ಮೊದಲ ಘಟ್ಟವೆಂದು ಹೇಳಬಹುದು. ಈ ಮುಂದಿನ ಕಾಲ ಅಂದರೆ ಸ್ವಾತಂತ್ರ್ಯೋದಯದ ವರೆಗೆ ಮಕ್ಕಳ ಸಾಹಿತ್ಯದ ಎರಡನೇ ಘಟ್ಟ. ಈ ಕಾಲದಲ್ಲಿ ದೇಶಾಭಿಮಾನ, ನಾಡುನುಡಿಗಳ ಬಗೆಗೆ ಆದರವನ್ನು ಮಕ್ಕಳಲ್ಲಿ ಬೆಳೆಯಿಸುವುದು ಸಾಧ್ಯವಾಯಿತು. ಸ್ವಾತಂತ್ರ್ಯದ ಕನಸು, ಆದರ್ಶ, ಮೌಲ್ಯಗಳ ವಿಷಯದಲ್ಲಿ ನವೋದಯ ಸಾಹಿತಿಗಳು ಮಕ್ಕಳಿಗೆ ಸಾಹಿತ್ಯದ ಮೂಲಕ ಪ್ರಚೋದನೆ ನೀಡಿದರು.

ಸ್ವಾತಂತ್ರ್ಯೋತ್ತರದ ಈ ಮೂರು ದಶಕಗಳು ಮಕ್ಕಳ ಸಾಹಿತ್ಯದ ಮೂರನೆಯ ಘಟ್ಟವಾಗಿದೆ. ಈ ಕಾಲದಲ್ಲಿ ಮಕ್ಕಳ ಸಾಹಿತ್ಯ ರಚನೆಯ ಸಾಂಸ್ಥಿಕ

ಮತ್ತು ವೈಯಕ್ತಿಕ ಸಾಧನೆ ವಿಪುಲವಾಗಿ ನಡೆದಿದೆ. ವಿವಿಧ ವಯೋಮಿತಿಯ ಮಕ್ಕಳ ಮನೋವಿಕಾಸಕ್ಕನುಗುಣವಾಗಿ ವಿಶಿಷ್ಟವಾದ ಸಾಹಿತ್ಯ ರಚಿತವಾಗಿದೆ. ಕವಿತೆ ಮತ್ತು ಕಥೆಗಳಷ್ಟೇ ಅಲ್ಲದೆ ನಾಟಕ, ಜೀವನ ಚರಿತ್ರೆ, ಇತಿಹಾಸ, ಸಂಸ್ಕೃತಿ, ಆಧ್ಯಾತ್ಮ ಚೇತನಗಳ ಪರಿಚಯ, ಮಾನವಿಕ, ವೈಜ್ಞಾನಿಕ ಸಾಹಿತ್ಯವೂ ಬೆಳೆದು ವೈವಿಧ್ಯಮಯವಾಗಿದೆ. ಈ ಮೂರೂ ಘಟ್ಟಗಳಲ್ಲಿ ಕವಿಗಳು ಮಾಡಿದ ನಾನಾ ಪ್ರಯೋಗಗಳಿಂದಾ ಭಾಷೆಯ ಅಭಿವ್ಯಕ್ತಿಯ ಸಾಧನೆ ನಿರಂತರವಾಗಿ ಉನ್ನತ ಜೀವನಮೌಲ್ಯಗಳ ಪ್ರತಿಪಾದನೆಯಾದುದು ಗಮನಾರ್ಹ ಸಂಗತಿಯಾಗಿದೆ.

ಕನ್ನಡ ನಾಡಿನಲ್ಲಿ ಮಕ್ಕಳಸಾಹಿತ್ಯ ಪ್ರಾದೇಶಿಕವಾಗಿಯೂ ಬೆಳೆದು ಬಂದುದು ವಿಚಾರಣೀಯ ಅಂಶವಾಗಿದೆ. ಇದರಿಂದ ಪ್ರಾದೇಶಿಕ ಸಂಸ್ಕೃತಿ. ಜನಜೀವನದ ವೈವಿಧ್ಯತೆ ಸಾಹಿತ್ಯದಲ್ಲೂ ಪ್ರಾಪ್ತವಾಗಿದೆ. ಮಂಗಳೂರಿನಲ್ಲಿ ಪಂಜೆ ಮಂಗೇಶ ರಾಯರು. ಎಂ. ಎನ್. ಕಾಮತರು, ಗೋವಿಂದ ಪೈ, ಶಿವರಾಮ ಕಾರಂತ ಉತ್ತರ ಕನ್ನಡದಲ್ಲಿ ದಿವಕರ ದೇಸಾಯಿ, ಮೈಸೂರು ಪ್ರದೇಶದಲ್ಲಿ ಎಸ್. ಜಿ. ನರಸಿಂಹಾಚಾರ್ಯರು, ದೇವಡು, ಹೊಯ್ಸಳ, ಜಿ. ಪಿ. ರಾಜರತ್ನಂ. ಕುವೆಂಪು, ವೀ. ಸೀ., ಕೊಡಗಿನಲ್ಲಿ ಭಾರತೀಸುತ. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಆನಂದ-ಕಂದರು, ಜೆ. ಎ. ಕವಲಿ ಮೊದಲಾದವರು ಮಕ್ಕಳ ಸಾಹಿತ್ಯ ರಚನೆಯ ನಿರ್ಮಿತಿ ಯಲ್ಲಿ ವಿಶಿಷ್ಟ ಸಾಧನೆ ಮಾಡಿದರು.

ಮಕ್ಕಳ ಸಾಹಿತ್ಯದ ಕೆಲವು ಪ್ರಮುಖ ಲೇಖಕರು:

೧೯ ನೇ ಶತಮಾನದ ಕೊನೆಯಲ್ಲಿ ಮುದ್ರಣ ಕಲೆ ಬೆಳೆದೊಡನೆಯೇ ಶಾಲಾ ಮಕ್ಕಳಿಗಾಗಿ ಹೊಸಗನ್ನಡದಲ್ಲಿ ಮಕ್ಕಳ ಸಾಹಿತ್ಯ ರೂಪು ಪಡೆಯಿತು. ಚೆನ್ನಪಟ್ಟಣದ ವಾಸುದೇವಯ್ಯನವರ 'ಬಾಲಬೋಧೆ' ಈ ದೃಷ್ಟಿಯಿಂದ ಉಪಲಬ್ಧವಾದ ಮಹತ್ವದ ಮೊದಲ ಗ್ರಂಥ. ಇದರಲ್ಲಿ ಅನುವಾದಿತ ಮತ್ತು ಜಾನಪದ ಲಯವನ್ನೊಳಗೊಂಡ ಅನೇಕ ಹಾಡುಗಳು ಸೇರಿವೆ. ಇದು ಕೇವಲ ಪಠ್ಯ ಪುಸ್ತಕವಾಗಿರದೆ ಮಕ್ಕಳಿಗೆ ಸೊಗಸಾದ ಸಾಹಿತ್ಯವನ್ನು ಒದಗಿಸುವಲ್ಲಿ ಹೊಸ ಹೆಜ್ಜೆ ಇಟ್ಟಿದೆ. ಇದರಲ್ಲಿ ಎಸ್. ಜಿ. ನರಸಿಂಹಾಚಾರ್ಯರ ಪದ್ಯಗಳೂ ಸೇರಿವೆ ಇದೇ ಕಾಲದಲ್ಲಿ ಎಂ. ಎಸ್. ಪುಟ್ಟಣ್ಣನವರು ವಂಗ ಸಾಹಿತ್ಯ ಮೂಲದ ಮತ್ತು ಸ್ವತಂತ್ರವಾದ ಕಥಾ ಸಾಹಿತ್ಯವನ್ನು ಮಕ್ಕಳಿಗೆ ಒದಗಿಸಿ ಮಕ್ಕಳ ಕಥಾ ಸಾಹಿತ್ಯಕ್ಕೆ ನೀರೆರೆದಿದ್ದಾರೆ. ಇವರ 'ನೀತಿ ಚಿಂತಾಮಣಿ" ಮಕ್ಕಳ ಜನಪ್ರಿಯ ಪುಸ್ತಕ.

ಎಸ್. ಜಿ. ನರಸಿಂಹಾಚಾರ್ಯರು ಪ್ರಮುಖವಾಗಿ ಕವಿಗಳು. ಎಲ್ಲರಿಗೂ ಅರ್ಥವಾಗುವಂತೆ ಕಾವ್ಯ ಜನಸಾಮಾನ್ಯರ ಭಾಷೆಯನ್ನು ಒಳಗೊಂಡಿರಬೇಕೆಂಬು

ದನ್ನು ಪ್ರತಿಪಾದಿಸಿ ಎಸ್. ಜಿ ನ. ಕವಿತೆಗಳನ್ನು ರಚಿಸಿದರು ಇಂಗ್ಲೀಷಿನ ಅನೇಕ ಕವಿತೆಗಳನ್ನು ಕನ್ನಡಕ್ಕೆ ತಂದು ಛಂದಸ್ಸು, ಭಾಷೆಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದರು. ಇಂಗ್ಲೀಷಿನಲ್ಲಿ ಜನಪ್ರಿಯವಾದ Twinkle Twinkle little star" ಕವಿತೆಯನ್ನು ಅವರು ಕನ್ನಡಕ್ಕೆ ತಂದ ಬಗೆ ಹೀಗೆ:

ಮಿರು ಮಿರುಗುವೆ, ಹಾ, ಕಿರುತಾರಗೆಯೆ
ಅರಿಯೆನು ನಾನೆಲೆ ನೀನಾರೋ
ಧರೆಗಿಳಿಯದೆ ನೀನಿರುತಿಹೆ ದೂರದಿ
ನೆರೆ ಹೊಳೆಯುವ ವಜ್ರದ ತೆರದಿ

ಶರಪಟ್ಪದಿಯಲ್ಲಿರುವ ಈ ಕವಿತೆ ಮೂಲದ ಭಾವವನ್ನು ನೇರವಾಗಿ ವ್ಯಕ್ತಪಡಿಸುವಲ್ಲಿ ಯಶಸ್ವಿಯಾಗಿದ್ದು ಸ್ವತಂತ್ರ ಕವಿತೆಯೆಂಬಂತೆ ಭಾಸವಾಗುತ್ತದೆ. ಇದರಂತೆ ವರ್ಡ್ಸ್‌ವರ್ತ್ ಕವಿಯ To the cuckoo ಕವಿತೆಯ ಅನುವಾದ ಸೊಗಸಾಗಿದೆ. ಎಸ್. ಜಿ. ನರಸಿಂಹಾಚಾರ್ಯರ ಅವರ 'ಗೋವಿನ ಬಾಳು' 'ನೇಗಿಲು', 'ಮಳೆಗಾಲ', 'ಮಕ್ಕಳು ಮಲಗುವಹೊತ್ತು', 'ಚಂದ್ರ' 'ಹೊಗೆಯಗಾಡಿ' ಸ್ವತಂತ್ರ ಕವಿತೆಗಳು ಕನ್ನಡ ಮಕ್ಕಳ ಸಾಹಿತ್ಯಕ್ಕೆ ವಿಶಿಷ್ಟ ಮೆರಗು ನೀಡಿದವು.

ಜಯರಾಯಾಚಾರ್ಯರು ಇದೇ ಕಾಲದಲ್ಲಿ ಮಕ್ಕಳ ಕವಿತೆಗಳನ್ನು ಬರೆದರು. ಅವರ 'ರೈಲುಗಾಡಿ" ಪದ್ಯ ಕಲ್ಪನಾರಮ್ಯತೆಯಿಂದ, ನಿರೂಪಣೆಯ ರೀತಿಯಿಂದ ಮಕ್ಕಳಿಗೆ ಹೊಸ ಹಾಡಾಯಿತು. ಇವರ 'ಅನುಕರಣ ಗೀತಗಳು" ಮಕ್ಕಳಿಗಾಗಿ ವಿದ್ಯಾ ಇಲಾಖೆಯಿಂದ ನಿಯಮಿತವಾದ ಕವಿತಾ ಸಂಗ್ರಹ. ಇದರಲ್ಲಿಯ "ಮಾತಾ ಪಿತೃ ಭಕ್ತಿ" ಮಕ್ಕಳ ಹೃದಯವನ್ನಾಕರ್ಷಿಸುವ ಕವಿತೆ 'ತಾರಕ್ಕ ಬಿಂದಿಗೆ ನೀರಿಗೆ ಹೋಗೋಣ" ವೆಂಬ ನೀರಿಗೆ ಹೋಗುವ ಹಾಡು, 'ಪಟ' ಆಡಿಸುವದು" ಬೆಕ್ಕಿಗೆ ಹೇಳುವ ಹಾಡು ಜನಪ್ರಿಯವಾದುದು.

"ಎಲೆ ಬೆಕ್ಕೆ ರೂಪಿನಿಂದಲಿ। ಹುಲಿಯ ಜಾತಿಗೆ ಸೇರ್ದೆನೆಂದು ಗರ್ವಿಸಬೇಡ॥ ಬಲುಮೆಯು ನಿನ್ನಲ್ಲಿಹುದೇಂ। ಇಲಿಗಳ ಹಿಡಿವುದರೊಳಾಯ್ತು ನಿನ್ನಯ ಶೌರ್ಯಂ॥" ಬೆಕ್ಕನ್ನು ಕುರಿತ ಸಹಜವಾದ ವಿಡಂಬನೆ ಈ ಕಂದಪದ್ಯದಲ್ಲಿದೆ. ಇದೇ ರೀತಿ ಮಕ್ಕಳ ಆಟದ ಅನೇಕ ಹಾಡುಗಳನ್ನು ಇವರು ರಚಿಸಿದ್ದಾರೆ. ಧಾರವಾಡದಲ್ಲಿ ಶಾಂತ ಕವಿಗಳು ಬರೆದ ಮಕ್ಕಳ ಕವಿತೆಗಳು ಆ ಕಾಲದಲ್ಲಿ ಸಾಕಷ್ಟು ಹೆಸರು ಗಳಿಸಿದವು.

ಮಕ್ಕಳಲ್ಲಿ ದೈವಭಕ್ತಿಯನ್ನು ಹೆಚ್ಚಿಸುವದು ಅಂದಿನ ಕವಿಗಳ ಉದ್ದೇಶವಾಗಿತ್ತು. ಇದನ್ನು ಸಫಲಗೊಳಿಸುವಲ್ಲಿ ಸೋಸಲೆ ಅಯ್ಯಾಶಾಸ್ತ್ರಿಗಳು ಬರೆದ "ಸ್ವಾಮಿ ದೇವನೆ

ಲೋಕಪಾಲನೆ! ತೇನಮೋಸ್ತು ನಮೋಸ್ತು ತೇ" ಕವಿತೆಯೂ ಮಹತ್ವಪೂರ್ಣವಾದುದು. ಇದರಂತೆ ಇದರ 'ಶಾಲೆಗಾಂ ಪ್ರೋಪೆಂ'. "ಗಿಣಿಯ ವರ್ಣಿಸುವಹಾಡು" ಹೆಸರಾಗಿದೆ.

ಪಂಜೆ ಮಂಗೇಶರಾಯರು ಕನ್ನಡ ಮಕ್ಕಳ ಸಾಹಿತ್ಯದ ಪಿತಾಮಹರು. ಇವರು ಮಾಡಿದ ಸಾಧನೆ, ಪ್ರಯೋಗಗಳು ಹೊಸಗನ್ನಡ ಕಾವ್ಯದ ಬೆಳವಣಿಗೆಯ ದೃಷ್ಟಿಯಿಂದ ವಿನೂತನವಾದುದೆಂದು ಗೋವಿಂದ ಪೈ ಹೇಳಿದ್ದಾರೆ. ಪಂಜೆಯವರು ಸ್ವತಃ ಶಿಕ್ಷಕರೂ, ಪಂಡಿತರೂ ಆದುದರಿಂದ ಮಕ್ಕಳ ಮನಸ್ಸನ್ನು ಚೆನ್ನಾಗಿ ತಿಳಿದು ಅವರ ಮನವನ್ನು ಸೆರೆಹಿಡಿಯುವ ಕವಿತೆಗಳನ್ನು ರಚಿಸಿದರು. ಮಂಗಳೂರಿನಲ್ಲಿ 'ಬಾಲ ಸಾಹಿತ್ಯ ಮಂಡಲ'ವನ್ನು ಆರಂಭಿಸಿದ ಕೀರ್ತಿ ಪಂಜೆಯವರದು. 'ಸತ್ಯದೀಪಿಕೆ', 'ಸುವಾಸಿನಿ' 'ಸ್ವದೇಶಾಭಿಮಾನಿ' ಮೊದಲಾದ ಪತ್ರಿಕೆಗಳಲ್ಲಿ ಪಂಜೆಯವರ ಶಿಶು ಕವಿತೆಗಳು ಪ್ರಕಟವಾದವು. ಪಂಜೆಯವರ "ತೂಕಡಿಕೆಯನು ಕಳೆಯದೇಕೆ ಕುಳಿತಿಹೆ ಗೆಳೆಯ?" "ಹಾವಿನ ಹಾಡು" "ಜೋಗುಳ" "ಮರಿಹಂಸ." "ಮಲ್ಲಿಗೆಯ ಮೊಗ್ಗು" "ಎಸಳ ಹೂಗಳಲಿ" "ನಕ್ಷತ್ರ" ಎಲ್ಲರ ಮನಸೆಳೆದ ಕವಿತೆಗಳು. "ನಾಗರಹಾವೆ, ಹಾವೊಳು ಹೂವೆ" ಹಾಡು ಬಹು ರಮ್ಯವಾಗಿದ್ದು ಇದನ್ನು ಹಾಡದ ಚಿಕ್ಕ ಮಕ್ಕಳಿಲ್ಲ. ಪಂಜೆಯವರು ವಸ್ತು, ಭಾವ, ಅಭಿವ್ಯಕ್ತಿಯಲ್ಲಿ ಮಕ್ಕಳ ಸಾಹಿತ್ಯಕ್ಕೆ ಹೊಸ ತಿರುವು ತಂದುಕೊಟ್ಟ ಮಹನೀಯರು.

ಕನ್ನಡಕ್ಕೆ ಮಹಾಕಾವ್ಯವನ್ನು ಕೊಟ್ಟ ಕವಿ ಕುವೆಂಪು ವಿಪುಲವಾದ ಶಿಶು ಸಾಹಿತ್ಯವನ್ನೂ ನೀಡಿದ್ದಾರೆ. 'ಅಮಲನ ಕಥೆ' 'ಹಾಳೂರು.' 'ಬೊಮ್ಮನ ಹಳ್ಳಿಯ ಕಿಂದರಿ ಜೋಗಿ.' 'ನನ್ನ ಮನೆ' 'ಮರಿವಿಜ್ಞಾನಿ' ಮತ್ತು 'ಮೇಘಪುರ' ಹೀಗೆ ಆರು ಮಕ್ಕಳಕವಿತೆಯ ಸಂಕಲನಗಳನ್ನೂ, 'ಮೋಡಮ್ಮನ ತಮ್ಮ' ಮತ್ತು 'ನನ್ನ ಗೋಪಾಲ' ಎಂಬ ಮೂರು ನಾಟಕಗಳನ್ನೂ ಬರೆದಿರುವ ಕವಿ ಕುವೆಂಪು ಮಕ್ಕಳ ಮನಸ್ಸಿನ ಭಾವನೆಗಳನ್ನು ಅರಳಿಸಿದ್ದಾರೆ. ವಿಶೇಷವಾಗಿ ಕಥನಶೈಲಿಯನ್ನವಲಂಬಿಸಿ ಮಕ್ಕಳ ಅಭಿರುಚಿಯನ್ನು, ಹೃದಯ ಸಂಸ್ಕಾರವನ್ನು ರೂಪಿಸುವದು ಕುವೆಂಪು ಶಿಶುಸಾಹಿತ್ಯದ ವೈಶಿಷ್ಟ್ಯ. 'ಬೊಮ್ಮನ ಹಳ್ಳಿಯ ಕಿಂದರಜೋಗಿ' ಬ್ರೌನಿಂಗ್ ಕವಿಯ "The Pied Piper of Hamelin ಕಥನ ಗೀತೆಯ ಕನ್ನಡ ಅನುವಾದವಾಗಿದ್ದರೂ ಸ್ವತಂತ್ರ ಕವಿತೆಯಂತೆ ಭಾಸವಾಗುವದು. ೪೨೨ಸಾಲುಗಳಲ್ಲಿ, ಸ್ವಚ್ಛಂದ ಛಂದಸ್ಸಿನಲ್ಲಿ ಬರೆಯಲ್ಪಟ್ಟಿದೆ. 'ಕಿಂದರಜೋಗಿ' ಸಾಕಷ್ಟು ಪ್ರಸಿದ್ಧಿ ಗಳಿಸಿದೆ. ಇದರಂತೆ ಕುವೆಂಪು ನಿಸರ್ಗದ ಚೆಲುವನ್ನು ತಮ್ಮ 'ಶಿಶುಗೀತಾಂಜಲಿ'ಯ ಕವಿತೆಗಳಲ್ಲಿ ಮಕ್ಕಳಿಗೆ ತೋರಿಸಿದ್ದಾರೆ. 'ನನ್ನ ಗೋಪಾಲ' ಕೂಡ ಜನಪ್ರಿಯ ಮಕ್ಕಳ ನಾಟಕವಾಗಿದೆ. ಸರಳವಾದ, ಪ್ರಸನ್ನ ಭಾಷೆಯಲ್ಲಿ ಕುವೆಂಪು ನಿಸರ್ಗಪ್ರೇಮ, ನಿರ್ಮಲಭಕ್ತಿ, ಕನ್ನಡಪ್ರೇಮ, ರಾಷ್ಟ್ರೀಯ

ಭಾವನೆ ಮೊದಲಾದವುಗಳನ್ನು ಮಕ್ಕಳಿಗೆ ತಮ್ಮ ಶಿಶುಸಾಹಿತ್ಯದಲ್ಲಿ ಪರಿಣಾಮಕಾರಿಯಾಗಿ ಒದಗಿಸಿದ್ದಾರೆ.

'ಬಾಲಪ್ರಪಂಚ' (ಮೂರು ಸಂಪುಟ) 'ಅದ್ಭುತ ಜಗತ್ತು' (ಎರಡು ಸಂಪುಟ) 'ವಿಜ್ಞಾನ ಪ್ರಪಂಚ' (ನಾಲ್ಕು ಭಾಗಗಳು) ವನ್ನು ಕನ್ನಡಕ್ಕೆ ಕೊಟ್ಟ ಶಿವರಾಮ ಕಾರಂತರ ಸಾಧನೆ ಭಾರತೀಯ ಸಾಹಿತ್ಯ ಪ್ರಪಂಚದಲ್ಲೇ ಅಪೂರ್ವವಾದುದು. ಪುತ್ತೂರಿನಲ್ಲಿ "ಬಾಲವನ"ವನ್ನು ನಿರ್ಮಿಸಿ ಮಕ್ಕಳ ಮನೋಭೂಮಿಕೆಗನುಗುಣವಾಗಿ ಜ್ಞಾನ ಪ್ರಯೋಗಶಾಲೆಯನ್ನು ನಡೆಸಿದ ಕಾರಂತರು ಮಕ್ಕಳಿಗಾಗಿ ಬರೆದಿರುವ ಸಾಹಿತ್ಯವೂ ವಿಪುಲವಾಗಿದೆ. ವಿಜ್ಞಾನದ ವಿವಿಧಮುಖಗಳ ಪ್ರಪಂಚದ ಪರಿಜ್ಞಾನ ಮತ್ತು ಜ್ಞಾನದ ವಿವಿಧ ಶಾಖೆಗಳ ಪ್ರಾಥಮಿಕ ನೆಲೆಯಿಂದ ಹಂತ ಹಂತವಾಗಿ ಮಕ್ಕಳ ಜ್ಞಾನವನ್ನು ಅಭಿವೃದ್ಧಿಪಡಿಸುವ ಧ್ಯೇಯದಿಂದ ಇವು ಮೂಡಿ ಬಂದಿವೆ. ಮೇಲೆ ಹೆಸರಿಸಿದ ಗ್ರಂಥಗಳು ಕನ್ನಡದಲ್ಲಿ ಮಕ್ಕಳಿಗಾಗಿ ಒಂದು ವಿಶ್ವಕೋಶವಾಗಿ ಪರಿಣಮಿಸಿದೆ. ಕನ್ನಡ ಮಕ್ಕಳ ಪುಣ್ಯವೆಂಬಂತೆ ಒಬ್ಬನೇ ವ್ಯಕ್ತಿ ಇಷ್ಟೆಲ್ಲ ವಿಷಯಗಳನ್ನು ತಿಳಿಯಾಗಿ, ಸಚಿತ್ರವಾಗಿ, ಎಲ್ಲ ವಿಷಯಗಳಲ್ಲಿ ವಾಚನಾಭಿರುಚಿ ಬೆಳೆಯುವಂತೆ, ಬರೆದು ಪೂರೈಸಿದುದು ದೇಶದ ಚರಿತ್ರೆಯಲ್ಲೇ ಅನುಪಮವಾದುದಾಗಿದೆ. ಕಾರಂತರ "ಢಂ ಢಂ ಡೋಲು", 'ಮೀಸೆಯ ಬೆರಳು' ಮತ್ತು ಹೊಸಗನ್ನಡ ಪಾಠಮಾಲೆಯಲ್ಲಿ ಬರುವ 'ಕಪ್ಪೆಭಟ್ಟರು', 'ಮರದಲ್ಲಿ ಹೊರಗೆ' ಮೊದಲಾದ ಕವಿತೆಗಳು ಕನ್ನಡದ ಮಕ್ಕಳಿಗೆ ಪ್ರಿಯವಾದವುಗಳು. ಕಾರಂತರು ಮಕ್ಕಳಿಗಾಗಿ ಮೂರು ಛಾಯಾನಾಟಕಗಳನ್ನು ಯಶಸ್ವಿಯಾಗಿ ರಚಿಸಿದ್ದಾರೆ.

ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಮರೆಯಲಾಗದ ಹೆಸರು ಹೊಯಿಸಳರದು. ಮಕ್ಕಳಿಗಾಗಿ ಕತೆ, ಕವಿತೆ, ನಾಟಕಗಳನ್ನು ಅಸಂಖ್ಯಾತವಾಗಿ ಬರೆದಿರುವ ಹೊಯಿಸಳರು 'ಮಕ್ಕಳ ಪುಸ್ತಕ'ವೆಂಬ ಮಕ್ಕಳ ಮಾಸಪತ್ರಿಕೆಯನ್ನು ೧೯೨೬ ರಷ್ಟು ಹಿಂದೆಗೆ ಮೊಟ್ಟಮೊದಲು ಆರಂಭಿಸಿದ ಮಹನೀಯರು. 'ಕೋಗಿಲೆ', 'ಚಂದಮಾಮ', 'ಕೋಲುಕುದುರೆ', 'ಅಂಜೂರ', ಮೊದಲಾದ ಶಿಶುಕವನ ಸಂಗ್ರಹಗಳನ್ನು ಕೊಟ್ಟಿರುವ ಹೊಯಿಸಳರು ಬರೆದಿರುವ ಕಥೆಗಳಂತೂ ವಿಪುಲವಾದವು. 'ವೀರಕುಮಾರ', 'ರಾಜನ ಬುದ್ಧಿವಂತಿಕೆ' 'ಗಂಟೆ ಗೋಪುರ', 'ಬದುಕುವ ಮಂತ್ರ', 'ಸೈಟ ಸಹೋದರರು', 'ಆನೆ ಇರುವೆ', ಇವೇ ಮೊದಲಾದವು ಇವರ ಕಥಾಸಂಗ್ರಹಗಳು. ಹೊಯಿಸಳರ ನಾಟಕಗಳಲ್ಲಿ 'ವಾತಾಪಿ', 'ಚಂದ್ರಹಾಸ', 'ಕಳ್ಳಮಳ್ಳ ಸುಳ್ಳ', 'ಪ್ರಸಾದ', 'ಮಗು' ಇವುಗಳು ಪ್ರಸಿದ್ಧವಾಗಿವೆ. ಆಕಾಶವಾಣಿ ಪತ್ರಿಕೆಗಳಲ್ಲಿ ಎಳೆಯರಿಗೆ ಹೊಯಿಸಳರು ಚಿರಪರಿಚಿತರಾಗಿದ್ದರು.

ಹೊಯಿಸಳರಂತೆ ಮಕ್ಕಳ ಸಾಹಿತ್ಯದಿಂದಲೇ ಖ್ಯಾತರಾದವರು ಜಿ. ಪಿ. ರಾಜರತ್ನಂ. ಬೌದ್ಧಸಾಹಿತ್ಯವನ್ನು ಕನ್ನಡಕ್ಕೆ ಕೊಟ್ಟ ರಾಜರತ್ನಂ ಮಕ್ಕಳಿಗಾಗಿ

ಜಾತಕಕಥೆಗಳನ್ನೂ, ಸ್ವತಂತ್ರವಾದ ಅನೇಕ ಕಥೆಗಳನ್ನೂ ಕವಿತೆಗಳನ್ನೂ ರಚಿಸಿ 'ಮಕ್ಕಳಕವಿ' ಯೆಂದು ನಾಡಿನಾದ್ಯಂತ ಜನಪ್ರಿಯರಾಗಿದ್ದಾರೆ. ಇವರ 'ರೊಟ್ಟಿ ಯಂಗಡಿ ಕಿಟ್ಟಪ್ಪ', 'ಚುಟುಕ', 'ಕಡಲೆಪುರಿ' ಕಳ್ಳಮಳ್ಳ 'ಕೆನೆಹಾಲು', 'ತುತೂರಿ' ಕನ್ನಡದ ಮಕ್ಕಳ ಮನಸ್ಸನ್ನು ಸೆರೆಹಿಡಿದಿರುವ ಕವಿತೆಗಳಾಗಿವೆ. ರಾಜರತ್ನಂರ 'ತುತೂರಿ'ಯಲ್ಲಿ ಬರುವ 'ತೋಳನತೀರ್ಪು' ಕವಿತೆ ಸುಂದರ ಕಥನಗೀತೆಯಾಗಿದೆ. ರಾಜರತ್ನಂರ ಕವಿತೆಗಳಲ್ಲಿ ತಿಳಿಯಾದ ಹಾಸ್ಯ, ಚಿತ್ತಾಕರ್ಷಕ ಭಾವ, ನಿಜಜೀವನದ ಭಾಷೆ ಬಹು ಸೊಗಸಾಗಿ ಮೂಡಿ ಬಂದು ಮಕ್ಕಳ ಸಾಹಿತ್ಯಕ್ಕೆ ಹೊಸತಿರುವು ತಂದು ಕೊಟ್ಟಿದೆ. ತಮ್ಮ ಅನುಪಮ ವಿಚಾರದಿಂದ, ಜಗತ್ತಿನ ಬೇರೆ ಬೇರೆ ಸಾಹಿತ್ಯದ ಅಭ್ಯಾಸದಿಂದ ರಾಜರತ್ನಂ ಕನ್ನಡದ ಮಕ್ಕಳಿಗೆ ಪ್ರಪಂಚದ ಸಾಹಿತ್ಯವನ್ನೂ ಪರಿಚಯಿಸಿಕೊಟ್ಟಿದ್ದಾರೆ.

ಕನ್ನಡದಲ್ಲಿ ಮಕ್ಕಳ ಕಥಾ ಸಾಹಿತ್ಯವನ್ನು ಅಭಿವೃದ್ಧಿಪಡಿಸಿದ ಹಿರಿಯ ಸಾಹಿತಿಗಳಲ್ಲಿ ದೇವಡು ಚಿರಸ್ಮರಣೀಯರಾಗಿದ್ದಾರೆ. ಕೋಮಲವಾದ ಮಕ್ಕಳ ಮನಸ್ಸನ್ನು ಇವರ ಕಥೆಗಳು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿವೆ. ದೇವಡು ಅವರ ಕಥಾಸಂಕಲನಗಳು ಇವು: 'ಗಣೇಶನ ಕಥೆ', 'ದೇಶಾಂತರ ಕಥೆಗಳು', 'ತಂತ್ರಗಾರ ನರಿ ಮತ್ತು ಇತರ ಕಥೆಗಳು', 'ಬರಿಯ ಆಸೆ ಮತ್ತು ಇತರ ಕಥೆಗಳು', 'ಚಾಮುಂಡೇಶ್ವರಿ ಮತ್ತು ಇತರ ಕಥೆಗಳು', 'ಸ್ನೇಹಿತರು ಮತ್ತು ಇತರ ಕಥೆಗಳು', 'ಅವಸರ ಮತ್ತು ಇತರ ಕಥೆಗಳು', 'ಅಲ್ಲಿ ಇಲ್ಲಿಯ ಕಥೆಗಳು', 'ಕಂದನ ಕಥೆಗಳು', 'ಯವನಪುರಾಣ ಭಾಗ–೧ ಮತ್ತು–೨. ಇವುಗಳಲ್ಲದೆ, 'ಹೊಸಗನ್ನಡ ಪಂಚತಂತ್ರ', ಮತ್ತು 'ಕಥಾ ಸರಿತ್ಸಾಗರ ಸಂಗ್ರಹ"ಗಳ ಮೂಲಕ ಪ್ರಾಚೀನ ಸಾಹಿತ್ಯದ ಅನುವಾದರೂಪದ ಕಥೆಗಳನ್ನು ಮಕ್ಕಳಿಗೆ ದೇವಡು ನೀಡಿದ್ದಾರೆ.

ಕನ್ನಡದಲ್ಲಿ 'ಚುಟುಕು ಕವಿ'ಯೆಂದು ವಿಖ್ಯಾತರಾಗಿರುವ 'ದಿನಕರ ದೇಸಾಯಿ' ರಚಿಸಿರುವ ಶಿಶುಸಾಹಿತ್ಯ ಗಾತ್ರದಿಂದಲೂ ಸತ್ವದಿಂದಲೂ ಶ್ರೀಮಂತ ವಾಗಿದೆ. ದಿನಕರರು ಬರೆದಿರುವ ಕವನಗಳಲ್ಲಿ ಶಿಶುಕವಿತೆಗಳೇ ಬಹಳ. ಇವರ 'ಮಕ್ಕಳ ಗೀತಗಳು', "ಮಕ್ಕಳ ಪದ್ಯಗಳು" ಸೊಗಸಾದ ಕವಿತೆಯ ಸಂಕಲನಗಳು. ಇವರ "ಚಿಕ್ಕ, ಚಿಕ್ಕ, ಮುದ್ದಿನ ಸೊಕ್ಕೇ! ಎಲ್ಲಿಗೆ ಹೋಗಿದ್ದ ?" ಕವಿತೆ ಮಕ್ಕಳ ನಾಲಿಗೆ ಯಲ್ಲಿ ಕುಣಿದಾಡಿದರೆ, 'ಗಡಿಯಾರ', 'ಅಡಿಗೆಭಟ್ಟ', 'ಮಂಗನ ಮದುವೆ,' 'ಅಕ್ಕನ ಬಂಡಿ', 'ತಿಪ್ಪಾಭಟ್ಟರ ಜನಿವಾರ', 'ನಮ್ಮ ಹಳ್ಳಿ', 'ಅಕ್ಕನ ಲಗ್ನ', 'ಇಲಿ ಸಮ್ಮೇಳನ', 'ಕರಡಿ' ಮೊದಲಾದವು ಯಶಸ್ವಿಯಾದ ಶಿಶುಗೀತಗಳು. ಇಲ್ಲಿ ಬರುವ ಹಾಸ್ಯ, ಪರಿಹಾಸಗಳು ಮತ್ತು ಆತ್ಮೀಯವಾದ ಭಾವಾಭಿವ್ಯಕ್ತಿ ಕನ್ನಡ ಶಿಶು ಕವಿತೆ ಗಳಲ್ಲಿಯೇ ವಿರಳವಾದದ್ದು. ಇವರ ಚುಟುಕುಗಳಂತೂ ವಸ್ತು ವೈವಿಧ್ಯದಿಂದ ಮೊನಚಾದ ವಿಚಾರದಿಂದ ಮಕ್ಕಳ, ಯುವಕರ ಮನಸ್ಸನ್ನು ಸೂರೆಗೊಂಡಿವೆ.

ಕವಿ, ವಿಮರ್ಶಕ, ಪ್ರಬಂಧಕಾರರಾಗಿರುವ 'ವೀಸೀ'ಯವರು ಬರೆದಿರುವ "ಮೃಗಶಾಲೆಯ ಸಿಂಹಗಳು" ಅಪರೂಪವಾದ ಮಕ್ಕಳ ಕವಿತೆಗಳಿಂದ ಕೂಡಿದೆ. ಇದರಂತೆ ಭಾರತೀಸುತರು ಮಕ್ಕಳಿಗಾಗಿ ಬರೆದಿರುವ ಕಥಾಸಾಹಿತ್ಯ ನಾಡಿನಾದ್ಯಂತ ಜನಪ್ರಿಯವಾಗಿದೆ ಕೇವಲ ನೀತಿಬೋಧನೆಗಾಗಿ ಮಾತ್ರ ಕಥೆಯಿರದೆ ಭಾರತೀಸುತರು ಮಕ್ಕಳಿಗೆ ಪ್ರಕೃತಿಯ ಚೆಲುವಿನ, ಜೀವನದ ವಿವಿಧಮುಖಗಳನ್ನೂ ಪರಿಚಯಿಸುವ ಕಾರ್ಯವನ್ನು ವಿಶಿಷ್ಟವಾದ ರೀತಿಯಲ್ಲಿ ನೆರವೇರಿಸಿದ್ದಾರೆ. ಪಂಡಿತ ಚೆ. ಎ. ಕವಲಿಯವರು ಮಕ್ಕಳಿಗಾಗಿ 'ಪುಟ್ಟಣ್ಣನ ಪಂಚತಂತ್ರ' 'ಕೋಳೂರು ಕೊಡಗೂಸು' ಮೊದಲಾದ ಕೃತಿಗಳನ್ನು ಬರೆದಂತೆ ಸಂಸ್ಕೃತ ಸಾಹಿತ್ಯದ ಕೆಲವು ಸುಂದರ ಶ್ಲೋಕಗಳನ್ನೂ, ಕಥೆಗಳನ್ನೂ ಕನ್ನಡಕ್ಕೆ ಅನುವಾದಿಸಿದರು. ಮಕ್ಕಳಿಗಾಗಿ ಕನ್ನಡ ವ್ಯಾಕರಣವನ್ನು ಸುಲಭವಾದ ರೀತಿಯಲ್ಲಿ ರಚಿಸಿದರು. ಇದೇ ರೀತಿಯಲ್ಲಿ ಮಕ್ಕಳಿಗಾಗಿ ಕವಿತೆ ನಾಟಕ, ಕಥೆ ಬರೆದಿರುವ ಆನಂದಕಂದರದು ದೊಡ್ಡ ಹೆಸರು. 'ಮುದ್ದುಸಮಾತು' ಎಂಬ ಇವರ ಕವಿತೆಗಳು ರವೀಂದ್ರರ 'ಕ್ರೆಸೆಂಟ್ ಮೂನ್'ನಂತೆ ಸುಂದರವಾದ ಕವಿತೆಗಳೆಂದು ಅದಕ್ಕೆ ಮುನ್ನುಡಿ ಬರೆದಿರುವ ಮಾಸ್ತಿಯವರು ಹೇಳಿದ್ದಾರೆ. ಆನಂದಕಂದರು ಜಾನಪದ ಸತ್ವವನ್ನು ತಮ್ಮ ಶಿಶುಸಾಹಿತ್ಯದಲ್ಲಿ ವಿಶಿಷ್ಟವಾದ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಇವರ, ವಸ್ತು ನುಡಿಗಟ್ಟುಗಳು ಜನಸಾಮಾನ್ಯರ ಜೀವನದಿಂದ ಒಡಮೂಡಿದವುಗಳು. ಹಾಗೆಯೇ ಉತ್ತರ ಕರ್ನಾಟಕದ ಇನ್ನೊಬ್ಬ ಲೇಖಕ ಮೋವುಂಡಿ ಮಲ್ಲಾರಿ ಮಕ್ಕಳಿಗಾಗಿ ಕಥೆಗಳನ್ನೂ, ಕವಿತೆಗಳನ್ನೂ ರಚಿಸಿ ಗಮನಾರ್ಹವಾದ ಸ್ಥಾನವನ್ನು ಗಳಿಸಿಕೊಂಡವರು. ಎ. ಆರ್. ಕೃಷ್ಣಶಾಸ್ತ್ರಿಗಳ 'ನಿರ್ಮಲಭಾರತಿ' ಮಕ್ಕಳ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆಯಾಗಿದೆ. ಅನುಪಮಾ ನಿರಂಜನರ 'ದಿನಕ್ಕೊಂದು ಕಥೆ' ಮಕ್ಕಳಿಗಾಗಿ ಬರೆದ ೩೬೦ ಕಥೆಗಳ ಸಂಕಲನವಾಗಿದೆ. ಬಿ. ಎಸ್. ರುಕ್ಮಮ್ಮನವರು ಪ್ರಕಟಿಸಿದ "ಪಾಪು ಅಮ್ಮನಿಗೆ ಹೇಳಿದ ಕಥೆಗಳು" ಮಕ್ಕಳೇ ಮಕ್ಕಳಿಗಾಗಿ ರಚಿಸಿರುವ ಶಿಶುಕಥೆಗಳ ವಿಶಿಷ್ಟವಾದ ಕಥಾಸಂಪುಟ. ಇದೇರೀತಿಯಲ್ಲಿ ಶ್ರೀಲತಾ ರಾಜರತ್ನಂ ಅವರ 'ಮುದ್ದು ರಾಯಿಕ.' 'ಅಜಿತಕುಮಾರಿ' ಮಕ್ಕಳಿಂದಲೇ ರಚಿತವಾದ ಸಾಹಿತ್ಯ ಸಂಪುಟ.

ಕನ್ನಡದಲ್ಲಿ ಶಿಶುಸಾಹಿತ್ಯ ರಚಕರಲ್ಲಿ ನಾ. ಕಸ್ತೂರಿ. ಬಿ. ಎಂ. ಶರ್ಮಾ. ಸಿಸುಸಂಗಮೇಶ. ಜಿ. ಶಂಕರಭಟ್ಟ, ಪಿ. ಎಸ್. ಪಾಂಡುರಂಗರಾವ್, ದ. ಕೃ. ಭಾರದ್ವಾಜ, ಕೈಯಾರಕಿಞ್ಞಣ್ಣ ರೈ, ಜಿ. ಎ. ಸನದಿ ಕೆ. ಎಸ್. ನಿಸಾರ ಅಹಮದ್. ಮೊದಲಾದ ನೂರಾರು ಹೆಸರುಗಳನ್ನು ಹೇಳಬಹುದು.

ಈ ಸಂದರ್ಭದಲ್ಲಿ ಮಕ್ಕಳಿಗಾಗಿಯೇ ಇರುವ ಸಾಹಿತ್ಯಿಕ ಪತ್ರಿಕೆಗಳನ್ನು ಹೆಸರಿಸಬಹುದು. 'ಮಕ್ಕಳ ಪುಸ್ತಕ' ಮಕ್ಕಳಿಗಾಗಿ ದ. ಕೃ. ಭಾರದ್ವಾಜ, ಅವರ ಸಂಪಾದಕತ್ವದಲ್ಲಿ ಹೊರಬಂದ ಮಕ್ಕಳ ಸಚಿತ್ರ ಪತ್ರಿಕೆ. ಇದರಂತೆ ಬಾಲಮಿತ್ರ,

ಚಂದಮಾಮ ಬಹುಕಾಲದಿಂದ ಮಕ್ಕಳಿಗೆ ಕಥಾಸಾಹಿತ್ಯವನ್ನು ಒದಗಿಸುತ್ತಿವೆ. ಲೋಕನೀತಿಯನ್ನೂ, ಮನರಂಜನೆಯನ್ನೂ ಒದಗಿಸುವದು ಇವುಗಳ ಉದ್ದೇಶವಾಗಿದೆ.

ಮಕ್ಕಳ ಸಾಹಿತ್ಯವನ್ನು ತಜ್ಞ ಲೇಖಕರಿಂದ ಸೃಷ್ಟಿಸುವಂತೆ ಮಾಡಿ ಪ್ರಕಟಿಸಿ ನಾಡಿನಾದ್ಯಂತ ಜನಪ್ರಿಯಗೊಳಿಸುವಲ್ಲಿ ಟೊಂಕ ಕಟ್ಟಿನಿಂತ ಪ್ರಮುಖ ಸಾಂಸ್ಥಿಕ ಪ್ರಯತ್ನಗಳನ್ನು ಈ ಸಂದರ್ಭದಲ್ಲಿ ಸ್ಮರಿಸುವದು ಅತ್ಯಗತ್ಯವಾಗುತ್ತದೆ. ಪಂಜೆ ಮಂಗೇಶರಾಯರು ಮಂಗಳೂರಿನಲ್ಲಿ ಪ್ರಾರಂಭಿಸಿದ 'ಬಾಲ ಸಾಹಿತ್ಯ ಮಂಡಲ' ಈ ದಿಶೆಯಲ್ಲಿ ಮೊದಲ ಸಾಂಸ್ಥಿಕ ಹೆಜ್ಜೆಯಾಗಿ ಸುಮಾರು ೨೦೦ ಕ್ಕೂ ಹೆಚ್ಚು ಮಕ್ಕಳ ಸಾಹಿತ್ಯವನ್ನು ಪ್ರಕಟಿಸಿತು. ಸ್ವಾತಂತ್ರ್ಯ ಪೂರ್ವದಲ್ಲೇ ನಡೆದ ಈ ಕಾರ್ಯ ಪ್ರಶಂಸನೀಯವಾಗಿದೆ. ಸ್ವಾತಂತ್ರ್ಯೋತ್ತರದಲ್ಲಿ ಕರ್ನಾಟಕ ಸಹಕಾರಿ ಪ್ರಕಾಶನದವರು ನಿರಂಜನರ ಸಂಪಾದಕತ್ವದಲ್ಲಿ ಪ್ರಕಟಿಸಿರುವ 'ಜ್ಞಾನ ಗಂಗೋತ್ರಿಯ' ಏಳು ಸಂಪುಟಗಳು ವಿಷಯ ವೈವಿಧ್ಯದಿಂದ ಜ್ಞಾನವನ್ನು ಮಕ್ಕಳಲ್ಲಿ ಅಭಿವೃದ್ಧಿ ಪಡಿಸುವಲ್ಲಿ ಮಾಡಿದ ಅಪೂರ್ವ ಸಾಧನೆಯಾಗಿದೆ.

ಕಳೆದ ದಶಕದಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನವರ 'ಭಾರತ ಭಾರತಿ' ಪುಸ್ತಕ ಸಂಪದ ಯೋಜನೆ ಮತ್ತು ಐ. ಬಿ. ಎಚ್. ಪುಸ್ತಕ ಪ್ರಕಾಶನದವರು ಕೈಕೊಂಡ ಮಕ್ಕಳ ಸಾಹಿತ್ಯ ಪ್ರಕಟಣೆಯ ಯೋಜನೆ, ಧಾರವಾಡದ ಸಮಾಜ ಪುಸ್ತಕಾಲಯದ ಮಕ್ಕಳ ಸಾಹಿತ್ಯ ಪ್ರಕಟಣೆಯ ಕಾರ್ಯ ಅನುಪಮವಾದದ್ದು. ಭಾರತೀಯ ಸಂಸ್ಕೃತಿಯ ಪರಿಚಯವನ್ನು ಮಕ್ಕಳಿಗೆ ಒದಗಿಸಿ ಅವರಲ್ಲಿ ಆದರ್ಶ ಭಾವನೆ ಬೆಳೆಯುವಂತೆ ಮಾಡುವದೇ ಈ ಎಲ್ಲ ಪುಸ್ತಕಗಳ ಪ್ರಕಾಶಕರ ಉದ್ದೇಶವಾಗಿದೆ. ಮಕ್ಕಳ ಪ್ರವೃತ್ತಿಯನ್ನು ಕಂಡು ಹಿಡಿದು ಅವರ ಸ್ವಭಾವದಲ್ಲಿ, ಶೀಲ, ಚಾರಿತ್ರ್ಯಗಳಲ್ಲಿ ಶ್ರೇಷ್ಠ ಮಟ್ಟದ ಮೌಲ್ಯಗಳನ್ನು ಜಾಗೃತಗೊಳಿಸಿ ಆದರ್ಶ ಪ್ರಜೆಗಳನ್ನಾಗಿ ಮಾಡುವ ಧ್ಯೇಯದಿಂದಲೇ ಈ ಸಂಸ್ಥೆಗಳು ಕಾರ್ಯನಿರತವಾಗಿವೆ. "ಭಾರತಭಾರತಿ' ಪುಸ್ತಕ ಯೋಜನೆಯ ಸಂಪಾದಕರು ಹೀಗೆ ಹೇಳುತ್ತಾರೆ: "ಹೆಜ್ಜೆ ಹೆಜ್ಜೆಗೆ ಬೆಳಕು ಚೆಲ್ಲುವ ಉಜ್ವಲ ದೀಪಗಳಂತೆ, ಸಾವಿರಾರು ವರ್ಷಗಳ ಇತಿಹಾಸದಲ್ಲಿ ಬೆಳಗುವ ಪುಣ್ಯ ಚೇತನರು, ಜ್ಞಾನಸಿದ್ಧಿಗಳು, ಶೌರ್ಯದ ಮೂರ್ತಿಗಳು, ಹುತಾತ್ಮರು ಎಲ್ಲ ಭಾರತೀಯರ ಭಾಗ್ಯವನ್ನು ತಿಳಿಸಿಕೊಡುವ ಪುಸ್ತಕಮಾಲೆ' ಈ ಯೋಜನೆಯ ಉದ್ದೇಶ ಅನೇಕ ದೃಷ್ಟಿಯಿಂದ ಪರಿಶೀಲನಾರ್ಹವಾದದ್ದು. ಮಕ್ಕಳಿಗೆ ಸದಭಿರುಚಿ ಬೆಳೆಯುವಂತೆ ಭಾರತೀಯ ಪರಂಪರೆಯ ಪರಿಚಯ ಅವರಿಗೆ ಮಾಡಿಕೊಡುವಲ್ಲಿ ಈ ಪುಸ್ತಕಗಳು ಸಹಾಯಕವಾಗುತ್ತವೆ. ವಿಶ್ವ ಮಕ್ಕಳ ವರ್ಷದಲ್ಲಿ ಈ ಮೇಲಿನ ಸಂಸ್ಥೆಗಳ ಧ್ಯೇಯೋದ್ದೇಶಗಳಿಗೆ ಭಿನ್ನವಾದ ಉದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಮಕ್ಕಳಿಗಾಗಿ ೨೦೦ ಪುಸ್ತಕಗಳನ್ನು ಪ್ರಕಟಿಸುತ್ತಿದೆ. ಈ ಎಲ್ಲ ಸಂಸ್ಥೆಗಳೂ ಕನ್ನಡ

ನಾಡಿನ ಎಲ್ಲ ಭಾಗಗಳ ಲೇಖಕರ ನೆರವನ್ನು ಪಡೆದು ಮಕ್ಕಳ ಸಾಹಿತ್ಯವನ್ನು ವಿವಿಧ ದೃಷ್ಟಿ, ಧ್ಯೇಯಗಳಿಂದ ವೈವಿಧ್ಯಮಯವಾಗಿ ಹೊರತರುತ್ತಿರುವದು ಶ್ಲಾಘನೀಯ ವಿಚಾರವಾಗಿದೆ.

ಕಥೆ ಮತ್ತು ಕವಿತೆಗಳೆ ಈ ಶಿಶು ಸಾಹಿತ್ಯದಲ್ಲಿ ವಿಪುಲವಾಗಿವೆ. ನಾಟಕ. ಜೀವನ ಚರಿತ್ರೆ, ಬಂದಿವೆಯಾದರೂ ಕಡಿಮೆ ಪ್ರಮಾಣದಲ್ಲಿ ಮಾತ್ರ. ಒಂದು ದೃಷ್ಟಿಯಿಂದ ಕಥೆ ಕವಿತೆಗಳು ಮಕ್ಕಳ ಮನಸ್ಸನ್ನು ಬಹು ಬೇಗನೆ ಸೆರೆಹಿಡಿಯುತ್ತವೆ. ಇದು ಸಹಜವೇ. ವೈಜ್ಞಾನಿಕ ಮತ್ತು ಮಾನಸಿಕ ಸಾಹಿತ್ಯವೂ ಮಕ್ಕಳಿಗಾಗಿ ಹೆಚ್ಚು ಹೆಚ್ಚು ರಚಿತವಾಗುವದು ಅವಶ್ಯ. ಕನ್ನಡದ ಮಕ್ಕಳ ಸಾಹಿತ್ಯ ಶ್ರೇಷ್ಠವಾದ ಜೀವನ ಮೌಲ್ಯಗಳನ್ನು, ಚಿಂತನಶಕ್ತಿಯನ್ನೂ ವಿಚಾರಶಕ್ತಿಯನ್ನೂ, ಪ್ರಚೋದಿಸುವಲ್ಲಿ ಪ್ರಕಟಿಸುವಲ್ಲಿ ಸದಾ ಹೊಸ ಹೆಜ್ಜೆಯಿಟ್ಟಿದೆ.

● ●

ಕನ್ನಡದಲ್ಲಿ ಮಕ್ಕಳ ಕಥೆಗಳು : ಒಂದು ಸಮೀಕ್ಷೆ

—ಹನುಮಾಕ್ಷಿ ಗೋಗಿ

ಕತ್ತಲಾದ ನಂತರ ಅಥವಾ ರಾತ್ರಿಯ ಊಟವಾದ ಮೇಲೆ ಮಕ್ಕಳು ಮನೆಯಲ್ಲಿರುವ ಅಜ್ಜ ಅಥವಾ ಅಜ್ಜಿಯರ ಕಡೆಗೆ, ಅಜ್ಜ-ಅಜ್ಜಿಯರಿಲ್ಲದಿದ್ದರೆ ತಂದೆ-ತಾಯಿಯರ ಕಡೆಗೆ ಓಡುತ್ತವೆ. ಅವರಿಗೆ ಕಥೆ ಹೇಳೆಂದು ಕಾಡುತ್ತವೆ. ಇನ್ನೂ ಮಾತು ಬಾರದಿರುವ ಮಗುವಿಗೆ ಲಾಲಿ ಪ್ರಿಯವಾಗುವಂತೆ ಮಾತಾಡಲು ಬರುವ ವಯಸ್ಸಿನ ಮಕ್ಕಳಿಗೆ ಕಥೆ ಬಲು ಇಷ್ಟ. ಊಟ-ನಿದ್ದೆ ಎಲ್ಲವನ್ನೂ ಮರೆತು ಅವರು ಕಥೆ ಕೇಳಲು ಇಷ್ಟಪಡುತ್ತಾರೆ. ನಾವು ಕೇಳುವ ಅಡುಗೂಲಜ್ಜಿಯ ಕಥೆಗಳು ಕೇವಲ ಮಕ್ಕಳ ಕಥೆಗಳಾಗಿ ಉಳಿಯುವುದಿಲ್ಲ. ಮನೆ ಮಂದಿಯೆಲ್ಲರ ಕಥೆಯಾಗಿ ನಿಲ್ಲುತ್ತವೆ. ಇವು ಒಂದು ರೀತಿಯ ಸಾಂಸ್ಕೃತಿಕ ಅವಶ್ಯಕತೆ ಹಾಗೂ ವ್ಯಾವಹಾರಿಕ ಜೀವನದ ಅನಿವಾರ್ಯತೆಗಳೂ ಆಗಿವೆ.

'ಚಂದಮಾಮ'ದ ಕಥೆಗಳನ್ನು ಓದದ, ಕೇಳದ ಮಗುವೇ ಇಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಇತ್ತೀಚೆಗೆ ಬಾಲಮಿತ್ರ, ಬೊಂಬೆಮನೆ, ಪುಟಾಣಿ ಎಂಬ ಮಕ್ಕಳ ಮಾಸಪತ್ರಿಕೆಗಳೂ ಬರುತ್ತಿವೆ. ಸುಧಾ, ಕರ್ಮವೀರ, ಮಯೂರ ಇತ್ಯಾದಿ ಪತ್ರಿಕೆ-ಪುಸ್ತಕಗಳನ್ನು ತಂದರೂ ಮಕ್ಕಳು ಅವುಗಳಲ್ಲಿಯ 'ಬಾಲಪ್ರಪಂಚ'ವನ್ನು ತಿರುವಿಹಾಕುತ್ತವೆ. ಮನೆಯಲ್ಲಿ ನಾಲ್ಕೈದು ಚಿಕ್ಕಮಕ್ಕಳಿದ್ದು ಈ ಪತ್ರಿಕೆಗಳು ಬಂದತಕ್ಷಣ ಏಳುವ ಗದ್ದಲ, ಕಿರುಚಾಟ, ಗೊಂದಲಗಳನ್ನು ಗಮನಿಸಬೇಕು. 'ನಾ ಮೊದಲು ಓದ್ತೀನಿ ನಾ ಮೊದಲು ಓದ್ತೀನಿ' ಅಂತ ಜಗಳ, ಕಿತ್ತಾಟ ಶುರುವಾಗುತ್ತದೆ. ಅವುಗಳೊಳಗಿನ ಫ್ಯಾಂಟಮ್, ವಿಕ್ರಮ್, ಆಝಾದ್, ಫ್ಲ್ಯಾಶ್ ಗಾರ್ಡನ್, ಡಾಬೂ, ಮಾಜನೂ—ಇವರ ಸಾಹಸಕಥೆಗಳ ಸೆಳೆತವೇ ಅಂತಹುದು.

ಮಕ್ಕಳು ದೊಡ್ಡವರನ್ನು ಕಥೆ ಹೇಳೆಂದು ಕೇಳುವುದು, ಅವರು ಹೇಳುವುದು ನಂತರ ಮಕ್ಕಳಿಂದ ತಿರುಗಿ ಅವೇ ಕಥೆಗಳನ್ನು ಹೇಳಿಸುವುದು—ಈ ರೀತಿ ಚಕ್ರಾಕಾರವಾಗಿ ಹೇಳುವ ಕೇಳುವ ಕ್ರಿಯೆಗಳಲ್ಲಿಯೇ ಕಥಾ ಸಾಹಿತ್ಯಪ್ರಕಾರ ಬೆಳೆದುಬಂದಿದೆ.

Oh, thou the philosopher of the pigmy size
Imitation is thy art'

ಎಂದು ಮಗುವನ್ನು ವರ್ಡ್ಸ್‌ವರ್ತ್ ವರ್ಣಿಸಿದ್ದಾನೆ. ಪ್ರತಿಮಗು ಅನುಕರಣೆ ಮಾಡುವ ರೀತಿ ಹಾಗೂ ಸ್ವಂತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ರೀತಿ ಆಶ್ಚರ್ಯ ಹುಟ್ಟಿಸುತ್ತದೆ.

ಮಕ್ಕಳು ಕಥೆ ಕೇಳುವ ಮೂಲ ಉದ್ದೇಶ, ಮನೋರಂಜನೆ. ಆದರೆ ತನ್ಮೂಲಕ ಉಂಟಾಗುವ ಪರಿಣಾಮ ಅನಂತ. ಮಗುವಿನ ವ್ಯಕ್ತಿತ್ವವನ್ನು ರೂಪಿಸುವ ನೂರಾರು ಸಂಗತಿಗಳಲ್ಲಿ ಈ ಬೌದ್ಧಿಕ-ಭಾವಸಿಕ ತೃಪ್ತಿಯೂ ಒಂದು ಮುಖ್ಯಾಂಶವಾಗಿ ಗಣಿತವಾಗುತ್ತದೆ. ಮಕ್ಕಳಲ್ಲಿ ಕಲ್ಪನಾಶಕ್ತಿ ಮೂಡುವಂತಹ, ಚಿಕಿತ್ಸಕ ಬುದ್ಧಿ—ವೈಚಾರಿಕ ಪ್ರಜ್ಞೆ ತೀಕ್ಷ್ಣವಾಗುವಂತಹ, ಕುತೂಹಲ—ಸಾಹಸ ಪ್ರವೃತ್ತಿಗಳನ್ನು ಹುಟ್ಟಿಸುವಂತಹ, ಶೌರ್ಯ—ಧೈರ್ಯಗಳನ್ನು ಹೆಚ್ಚಿಸುವಂತಹ, ನೀತಿಮಟ್ಟ ಎತ್ತರಗೊಳ್ಳುವಂತಹ ವಸ್ತುಗಳನ್ನು ಆಯ್ದುಕೊಂಡೇ ಹಿರಿಯರು ಕಥೆಗಳನ್ನು ಕಟ್ಟುತ್ತಾರೆ; ಮಕ್ಕಳಿಗೆ ಅಂತಹ ಕಥೆಗಳನ್ನೇ ಹೆಚ್ಚಾಗಿ ಹೇಳುತ್ತಾರೆ. ಈ ರೀತಿಯ ಆಕರ್ಷಕ ಕಥೆಗಳು ಬೆಳೆಯುವ ಮಕ್ಕಳು ಕ್ರಿಯಾಶೀಲರಾಗುವಂತೆ ಪ್ರಚೋದಿಸುತ್ತವೆ. ಮಕ್ಕಳಲ್ಲಿ ತಮಗೆ ತಿಳಿಯುವಂತೆಯೇ ಕಥೆಗಳ ನಾಯಕ—ನಾಯಕಿಯರಂತೆ, ರಾಜಕುಮಾರ—ರಾಜಕುಮಾರಿಯರಂತೆ ತಾವೂ ಆಗಬೇಕು; ಕಳವು ಮಾಡಬಾರದು: ಸುಳ್ಳು ಹೇಳಬಾರದು: ಮೋಸ ಮಾಡಬಾರದು: ಪ್ರಾಣಿಗಳಿಗೆ ಹಿಂಸೆ ಕೊಡಬಾರದು: ದಯೆ ಹಾಗೂ ಕ್ಷಮಾಗುಣಗಳನ್ನು ಬೆಳೆಸಿಕೊಳ್ಳಬೇಕು— ಎನ್ನುವ ಭಾವನೆಗಳು ಮೊಳೆಯುತ್ತವೆ. ಈ ಎಲ್ಲ ಕಾರಣಗಳಿಂದಾಗಿ ದೇಹದ ಬೆಳವಣಿಗೆಗೆ ಸಮತೂಕದ ಆಹಾರ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಮಕ್ಕಳ ಮೆದುಳಿಗೂ ಉತ್ತಮ ಪೌಷ್ಟಿಕ ಆಹಾರ ಎಂಬುದು ಸುಸ್ಪಷ್ಟ. ಕನ್ನಡ ಸಾಹಿತ್ಯದಲ್ಲಿಯೂ ಮಕ್ಕಳಸಾಹಿತ್ಯ ಸಾಂಸ್ಕೃತಿಕ ಆವಶ್ಯಕತೆಯಾಗಿ ಅನೂಚಾನವಾಗಿ ನಡೆದುಬಂದಿದೆ; ವೈವಿಧ್ಯಪೂರ್ಣವಾಗಿಯೂ ಬೆಳೆದಿದೆ.

ಮಕ್ಕಳಸಾಹಿತ್ಯವನ್ನು ಗ್ರಹಣಶಕ್ತಿ ಹಾಗೂ ಅಭಿರುಚಿಗಳಿಗನುಗುಣವಾಗಿ ಎರಡು ಭಾಗಗಳಲ್ಲಿ ವಿಂಗಡಿಸಬಹುದು.

i) **ಶಿಶುಕಥಾಸಾಹಿತ್ಯ** :—೪ ರಿಂದ ೮ ವಯಸ್ಸಿನವರೆಗಿನ ಮಕ್ಕಳ ಕಥೆಗಳನ್ನು ಶಿಶುಕಥಾಸಾಹಿತ್ಯದಲ್ಲಿ ಸೇರಿಸಬಹುದು. ಇವರಲ್ಲಿ ಸರಳ-ಶುದ್ಧ ವಾಕ್ಯ

ಗಳಿರಬೇಕು, ಚಿಕ್ಕ ಚಿಕ್ಕ ವಾಕ್ಯಗಳಿದ್ದು ಕಠಿಣ ಶಬ್ದಗಳಿಂದ ಕೂಡಿರಬಾರದು. ದಪ್ಪ ದಪ್ಪ ಅಕ್ಷರಗಳಲ್ಲಿ ಮುದ್ರಣಗೊಂಡಿರಬೇಕು. ಮುದ್ದು ಮುದ್ದಾದ ಬಣ್ಣ ಬಣ್ಣದ ಚಿತ್ರಗಳಿಂದ ಕೂಡಿರಬೇಕು. ಈ ವಯುಸ್ಸಿನ ಮಕ್ಕಳಿಗೆ ಪ್ರಾಣಿ ಪಶು ಪಕ್ಷಿಪ್ರಪಂಚದ ಬಗೆಗಿರುವ ಕಥೆಗಳೇ ಬಹಳ ಇಷ್ಟ. ಮಕ್ಕಳ ಭಾವನಾಪ್ರಪಂಚಕ್ಕೆ ಮನಸ್ಸಿಗೆ ಸಮಿಪವಾದವು ಅವು. ಕಲ್ಪನಾಶೀಲರಾದ ಮಕ್ಕಳು ಹಗಲು-ಇರುಳಿನ ಕಲ್ಪನಾ ಪ್ರಪಂಚ-ಕನಸಿನ ಪ್ರಪಂಚದಲ್ಲಿಯೇ ಬಾಳ್ವೆ ನಡೆಸುವವರು. ಬೌದ್ಧಿಕ ವಿವೇಚನೆ ತರ್ಕಗಳಿಂದ ದೂರವಾದ ಅದ್ಭುತರಮ್ಯ ಕಥೆಗಳು ಹೊಳೆ, ಸಮುದ್ರ, ರಾಜಕುಮಾರ ರಾಜಕುಮಾರಿ, ರಾಕ್ಷಸ-ರಾಕ್ಷಸಿಯರು, ಮಾಟಗಾತಿ-ಮಾಂತ್ರಿಕರು, ಕಿನ್ನರರು-ಗಂಧರ್ವರು, ತಕ್ಕಮಟ್ಟಿಗೆ ದೆವ್ವ-ಭೂತಗಳ ಕಥೆಗಳು ಇವರಿಗೆ ಹಿಡಿಸುತ್ತವೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಕನ್ನಡದ ಪ್ರತಿಯೊಬ್ಬ ತಾಯಿ-ತಂದೆಯರು ತಮ್ಮ ಮಕ್ಕಳಿಗೆ ಹೇಳುವ ಮೊಟ್ಟಮೊದಲ ಕಥೆ ಕಾಗಮ್ಮ-ಗುಬ್ಬಮ್ಮನ ಕಥೆ. ಅಮರಚಿತ್ರಕಥೆಗಳು ಈ ಮಾಲಿಕೆಯವು.

ii) **ಬಾಲಕಥಾ ಸಾಹಿತ್ಯ** : ೯ ರಿಂದ ೧೨ ವಯಸ್ಸಿನವರೆಗಿನ ಮಕ್ಕಳ ಕಥೆಗಳನ್ನು ಈ ವಿಭಾಗದಲ್ಲಿ ಸೇರಿಸಬಹುದು. ಈ ಮಕ್ಕಳಿಗೆ ಅಲ್ಪಸ್ವಲ್ಪ ತಿಳುವಳಿಕೆ ತಾರ್ಕಿಕ ಜ್ಞಾನಗಳು ಬಂದಿರುತ್ತದೆ. ಮನುಷ್ಯವರ್ಗಕ್ಕೆ ಸೇರಲಾರದ ಇತರ ಪ್ರಾಣಿಗಳು - ಪಕ್ಷಿಗಳು ಮಾತಾಡುವುದಿಲ್ಲ. ರಾಕ್ಷಸ - ರಾಕ್ಷಸಿಯರು, ಕಿನ್ನರ - ಕಿಂಪುರುಷ ಗಂಧರ್ವಾದಿ ಅದ್ಭುತ ಲೋಕದ ಜನರು ನಿಜಕ್ಕೂ ಇಲ್ಲ ಎಂಬ ಭಾವನೆ ಬೆಳೆದಿರುತ್ತದೆ. ಈ ವಯಸ್ಸಿನ ಮಕ್ಕಳು ಕಲ್ಪನಾ ಪ್ರಪಂಚಕ್ಕಿಂತ ವಾಸ್ತವಿಕ ಪ್ರಪಂಚಕ್ಕೆ ಹತ್ತಿರವಾಗುತ್ತ ಬರುತ್ತಾರೆ. ಆದ್ದರಿಂದ ಈ ವಯೋಮಾನದ ಮಕ್ಕಳು ಅದ್ಭುತರಮ್ಯ ಕಥೆಗಳಿಗಿಂತ ಹೆಚ್ಚಾಗಿ ಸಾಹಸ - ಐತಿಹಾಸಿಕ ಕಥೆಗಳ ಕಡೆಗೆ ಹೆಚ್ಚು ಒಲಿಯುತ್ತಾರೆ, ಸತ್ಯ ಕಥೆಗಳೆಂದು ನಂಬುತ್ತಾರೆ.

ಶಿಶುಕಥಾ ಸಾಹಿತ್ಯ ಹಾಗೂ ಬಾಲಕಥಾ ಸಾಹಿತ್ಯಗಳನ್ನು ರಚನಾ ದೃಷ್ಟಿಯಿಂದ ಪದ್ಯಕಥೆಗಳು, ಗದ್ಯಕಥೆಗಳು ಎಂತಲೂ ವಿಂಗಡಿಸಬಹುದು. ರೂಢಿಯಲ್ಲಿ ಇವುಗಳನ್ನು ಗದ್ಯದಲ್ಲಿದ್ದರೆ ಕಥೆಗಳೆಂದು ಪದ್ಯದಲ್ಲಿದ್ದರೆ ಕಥನ ಕವನಗಳೆಂದೂ ಕರೆದಿದ್ದಾರೆ. ಕಥೆಗಳಲ್ಲಿರುವ ಗುಣಲಕ್ಷಣಗಳಿಂದ ಗದ್ಯ ಪದ್ಯ ಕಥಾಸಾಹಿತ್ಯಗಳೆರಡನ್ನೂ i) ಅದ್ಭುತರಮ್ಯ ಕಥೆಗಳು ii) ಸಾಹಸಕಥೆಗಳು iii) ವಿನೋದ ಕಥೆಗಳು vi) ನೀತಿಕಥೆಗಳು v) ಐತಿಹಾಸಿಕ ಕಥೆಗಳು vi) ವೈಜ್ಞಾನಿಕ ಕಥೆಗಳು ಎಂದು ವರ್ಗೀಕರಿಸಬಹುದು. ಈ ಲಕ್ಷಣಗಳು ಕೆಲವೊಂದು ಕಥೆಗಳಲ್ಲಿ ಒಂದರೊಳಗೊಂದು ಸೇರುವ ಸಾಧ್ಯತೆಗಳು ಇರುವುದರಿಂದ ಈ ವಿಭಾಗ ಸೌಕರ್ಯ ಸ್ಥೂಲವಾದುದು ಎಂಬುದನ್ನು ಲಕ್ಷಿಸಬೇಕು.

i) **ಅದ್ಭುತರಮ್ಯ ಕಥೆಗಳು** : ಮಕ್ಕಳ ಮನಸ್ಸಿನಲ್ಲಿ ಬೆರಗನ್ನು ಹುಟ್ಟಿಸುವಂತಹ ಕಣ್ಣರಳಿಸಿ ಹೌದಾ ಎಂದು ಪ್ರಶ್ನಿಸಿ ಸಂಪೂರ್ಣ ಸಂಚಿ ಬಿಡುವಂತಹ ಚಿತ್ರ-ವಿಚಿತ್ರ ಪ್ರಪಂಚವನ್ನು ತೆರೆದು ತೋರಿಸುವಂತಹ ಕಥೆಗಳನ್ನು ಈ ವಿಭಾಗದಲ್ಲಿ ಸೇರಿಸಬಹುದು. ನಮ್ಮ ಅಜ್ಜಿಯರ ಕಥೆಗಳೆಲ್ಲ ಸುಮಾರಾಗಿ ಈ ಮಾದರಿಯವು. ಅನುಪಮಾ ನಿರಂಜನರ "ದಿನಕ್ಕೊಂದು ಕಥೆ'ಯ ಮೊದಲ ಕಥೆ 'ಅರಸುಕುಮಾರಿ'ಯೂ ಈ ಮಾಲಿಕೆಗೆ ಸೇರಿದ್ದು. 'ಸಿಂಡ್ರೆಲಾ' ಕಥೆಯ ಆಧಾರ ಈ ಕಥೆಗಿದೆ. ಸಾರಾಂಶ ಹೀಗಿದೆ: ಒಬ್ಬ ರಾಜ-ಮೂರು ಜನ ಹೆಣ್ಣುಮಕ್ಕಳು - ಎಷ್ಟು ಪ್ರೀತಿಸುತ್ತೀರೆಂದು ಕೇಳಿದ - ನನ್ನ ಜೀವಕ್ಕಿಂತ ಹೆಚ್ಚಾಗಿ ಮೊದಲನೆಯವಳು - ಜಗತ್ತಿನ ಎಲ್ಲ ವಸ್ತುಗಳಿಗಿಂತ ಹೆಚ್ಚಾಗಿ ಎರಡನೆಯವಳು - ಉಪ್ಪಿನಷ್ಟು ಮೂರನೆಯವಳು-ಅರಸನ ಕೋಪ-ಮೂರನೆಯವಳನ್ನು ಹೊರ ಹಾಕಿದ್ದು-ಅವಳು ಅಳುತ್ತಾ ಕಾಡುಮೇಡು ಅಲೆದದ್ದು - ಹುಲ್ಲನ್ನು ಧರಿಸಿದ್ದು-ಅರಮನೆಯ ಪಾತ್ರೆ ತೊಳೆಯುವವಳಾಗೋದು - ಅರಮನೆಯ ನೃತ್ಯಕೂಟ - ಎಲ್ಲರೂ ಹೋಗಿ ಇವಳೊಬ್ಬಳೇ ಅಳುವುದು - ಕಿನ್ನರಿ ಪ್ರತ್ಯಕ್ಷಳಾಗುವುದು - ಬೆಳ್ಳಿ ನಕ್ಷತ್ರದ ರೇಷ್ಮೆ ಸೀರೆ ಉಡಿಸುವುದು - ರಾಜಕುಮಾರನೊಡನೆ ರಾಜಕುಮಾರಿಯ ನೃತ್ಯ - ಅಡುಗೆಯವರ ನೃತ್ಯದ ವರ್ಣನೆ - ೨ನೆಯ ದಿನ ಕಿನ್ನರಿ ಚಿನ್ನದ ನಕ್ಷತ್ರವುಳ್ಳ ರೇಷ್ಮೆ ಸೀರೆ ಉಡಿಸುವುದು-೩ನೆಯ ದಿನ ಗರಿಗಳಿಂದ ನೇಯ್ದ ಸೀರೆ ಉಡಿಸುವುದು-ರಾಜಕುಮಾರ ಅವಳನ್ನು ಯಾವ ದೇಶದ ರಾಜಕುಮಾರಿಯೆಂದು ಕೇಳಿ ಉಂಗುರ ತೊಡಿಸುವುದು- ರಾಜಕುಮಾರನ ಕಾಯಿಲೆ - ಗಂಜಿಯಲ್ಲಿ ರಾಜಕುಮಾರಿ ಉಂಗುರ ಸೇರಿಸುವುದು- ರಾಜಕುಮಾರಿಯ ಪತ್ತೆ - ಮದುವೆಗಾಗಿ ಸಿದ್ಧತೆ - ರಾಜಕುಮಾರಿಯ ತಂದೆ ಬರುವುದು-ಅಡುಗೆಯಲ್ಲಿ ಉಪ್ಪಿಲ್ಲದ್ದು - ತಂದೆಯ ದುಃಖ — ಸಮಾಗಮ-ಇಲ್ಲಿ ಕಿನ್ನರಿ ಪ್ರತ್ಯಕ್ಷಳಾಗುವುದು. ವಿವಿಧ ಸೀರೆಗಳನ್ನು ಉಡಿಸುವುದು ಇವೆಲ್ಲ ಮಕ್ಕಳ ಮನಸ್ಸಿಗೆ ಬೆರಗನ್ನು ಹುಟ್ಟಿಸುತ್ತವೆ. ರಾಜಕುಮಾರಿ ಹತ್ತಿರದವಳಾಗಿ ಅವಳ ಕಷ್ಟ ಸುಖಗಳಲ್ಲಿ ಭಾಗಿಗಳಾಗಿ ತಂದೆ- ಮಕ್ಕಳ ಸಮಾಗಮವಾದಾಗ ಸಂತೋಷ ಪಡುತ್ತಾರೆ.

ii) **ಸಾಹಸ ಕಥೆಗಳು:** ಕಥೆ ಕೇಳುವಾಗ ಮಕ್ಕಳ ಎದೆಬಡಿತ ಹೆಚ್ಚಿ ಮೈ ನವಿರೇಳುವಂತಹ, ಶಕ್ತಿ - ಯುಕ್ತಿ ಪ್ರದರ್ಶನಗಳಿಗೆ ಅನುಕೂಲವಾಗುವಂತಹ, ಧೈರ್ಯ-ಸ್ಥೈರ್ಯಗಳಿಗೆ ಸವಾಲನ್ನೊಡ್ಡುವಂತಹ ಪರಾಕ್ರಮ-ಹೋರಾಟದ ಕಥೆಗಳನ್ನು ಸಾಹಸದ ಕಥೆಗಳೆನ್ನಬಹುದು. ರಾಮಾಯಣ - ಮಹಾಭಾರತಗಳ ಲವ - ಕುಶ, ಬಬ್ರುವಾಹನ, ಅಭಿಮನ್ಯು ಇವರ ಕೆಚ್ಚೆದೆಯನ್ನು ತೋರಿಸುವಂತಹ ಕಥೆಗಳು ಇದಕ್ಕೆ ಉದಾಹರಣೆ. ಸುಮಾರಾಗಿ ಐತಿಹಾಸಿಕ ಕಥೆಗಳೆಲ್ಲ ಸಾಹಸದ ಕಥೆಗಳಾಗಿರುತ್ತವೆ. ಚಿತ್ರದುರ್ಗದ ಒನಕೆ ಓಬವ್ವ, ಕಿತ್ತೂರಿನ ವೀರರಾಣಿ ಚೆನ್ನಮ್ಮ

ಇವರುಗಳಲ್ಲದೆ ಕುವೆಂಪು ಅವರ 'ತಾನಾಜಿ' 'ಪ್ರತಾಪಸಿಂಹ' ಕಥನಕವನಗಳನ್ನು ಇಲ್ಲಿ ಹೆಸರಿಸಬಹುದು. ಈ ಪ್ರಕಾರಕ್ಕೆ ಅಮರ ಚಿತ್ರಕಥಾ ಮಾಲಿಕೆಯ 'ರಾಜು ಮತ್ತು ಅವರೇಗಿಡ' ಕಥೆಯನ್ನು ಉದಾಹರಿಸಬಹುದು. ಸಾರಾಂಶ ಹೀಗಿದೆ: ಒಂದೂರಲ್ಲಿ ಒಬ್ಬ ತಾಯಿ – ಒಬ್ಬನೇ ಮಗ ರಾಜು – ಸುಖವಾಗಿ ಬೆಳೆದ-ಹಣ ಮುಗೀತು – ಆಕಳು ಮಾರಲು ರಾಜು ಹೋದ-ಒಬ್ಬ ಮನುಷ್ಯ ಒಂದು ಹಿಡಿ ಅವರೇಕಾಳಿಗೆ ಕೊಂಡ-ತಾಯಿ ಬೈದು ಚೆಲ್ಲಿಬಿಟ್ಟಳು ಮರುದಿವಸ ಅವರೇಗಿಡ ಹುಟ್ಟಿ ಆಕಾಶದೆತ್ತರವಾಗಿತ್ತು - ರಾಜೂ ಗಿಡ ಹತ್ತಿ ಮೇಲೆ ಹೋದ – ಕಿನ್ನರಿ ರಾಣಿ ಹಾಗೂ ಮಗನ ಕಥೆ ಹೇಳಿದಳು-ಚಿನ್ನದ ಕೋಳಿ, ಹಣದ ಚೀಲ, ಮಾತಾಡುವ ವೀಣೆ ಬಗ್ಗೆ ತಿಳಿಸಿದಳು-ರಾಕ್ಷಸ ರಾಕ್ಷಸಿಯರ ವಿಚಾರ-ರಾಜೂ ಕಹಳೆ ಊದಿ ರಾಕ್ಷಸಿಯ ಸೇವಕನಾದ-ರಾಕ್ಷಸ ಬಂದಾಗ ಕಪಾಟಿನಲ್ಲಿ ಬಚ್ಚಿಟ್ಟಳು-ಚಿನ್ನದ ಕೋಳಿ ಜೊತೆ ಓಡಿ ಬಂದ ರಾಜೂ-೨ನೇಯ ದಿನ ಮುದುಕನ ವೇಷ ಹಾಕಿಕೊಂಡು ಹೋದ-ಮಿಠಾಯಿ ಡಬ್ಬಿಯಲ್ಲಿ ರಾಕ್ಷಸಿ ಬಚ್ಚಿಟ್ಟಳು-ಹಣದ ಚೀಲದೊಂದಿಗೆ ರಾಜೂ ಓಡಿ ಬಂದ-೩ನೆಯ ದಿನ ಹುಡುಗಿ ವೇಷ ಹಾಕಿಕೊಂಡು ಹೋದ-ರಾಕ್ಷಸಿ ಮಂಚದಡಿ ಬಚ್ಚಿಟ್ಟಳು – ಮಾತಾಡುವ ವೀಣೆಯೊಂದಿಗೆ ಓಡಹತ್ತಿದ-ವೀಣೆ ಮಾತಾಡಿದ್ದರಿಂದ ರಾಕ್ಷಸ ರಾಕ್ಷಸಿ ಬೆನ್ನಟ್ಟಿದರು-ಬೇಗ ಬೇಗ ಇಳಿದು ಅವರೇಗಿಡ ಕಡಿದು ಹಾಕಿದ. ರಾಣಿ ಹಾಗೂ ಮಗನಿಗೆ ಅವರ ಸಾಮಾನು ಒಪ್ಪಿಸಿ ಸುಖದಿಂದಿದ್ದನು-ಈ ಕಥೆಯಲ್ಲಿ ರಾಜೂವಿನ ಧೈರ್ಯ ಸಾಹಸ, ಬುದ್ಧಿವಂತಿಕೆಗಳ ವರ್ಣನೆಯೊಂದಿಗೆ ಅದ್ಭುತದ ಕೆಲ ಅಂಶಗಳೂ ಕೂಡಿವೆ.

iii) **ವಿನೋದ ಕಥೆಗಳು:—** ಮಕ್ಕಳ ಮನಸ್ಸಿನ ಬೇಸರವನ್ನು ಕಳೆದು, ಅವರು ಬಾಯ್ತುಂಬಾ ನಗುವಂತೆ ಮಾಡುವುದೇ ಈ ಕಥೆಗಳ ಉದ್ದೇಶ. ಮುಗ್ಧ ಮಕ್ಕಳಂತೂ ಇಂತಹ ಕಥೆಗಳನ್ನು ಕೇಳಿ ಹೊಟ್ಟೆ ಹಿಡಿದುಕೊಂಡು, ಬಿದ್ದು ಬಿದ್ದು ನಗುತ್ತಾರೆ, ಕುಣಿದಾಡುತ್ತಾರೆ, ಸಿಳ್ಳಿಯಾಡುತ್ತಾರೆ. ದಿನವಿಡೀ ನೆನೆಸಿಕೊಂಡು ಮುಸಿ ಮುಸಿ ನಗುತ್ತಲೇ ಇರುತ್ತಾರೆ. ಮನೋರಂಜನೆ-ಮನೋಹ್ಲಾದಗಳು ಈ ಕಥೆಗಳ ಜೀವಜೀವಾಳ. ರಾಜರತ್ನಂ ಅವರ 'ಬಾಳೆಯ ತೋಟದ ಪಕ್ಕದ ಕಾಡೊಳು ವಾಸಿಸುತ್ತಿದ್ದುವು ಮಂಗಗಳು' ಎಂದು ಪ್ರಾರಂಭವಾಗುವ 'ಮಂಗಗಳ ಉಪವಾಸ' ಕಥನಕವನ ಉತ್ತಮ ವಿನೋದ ಕಥೆ. ನೇಪುಂಡಿ ಮಲ್ಲಾರಿಯವರ 'ಬುಯುಬುಯಿ' ಕಥೆಯನ್ನಿಲ್ಲಿ ಉದಾಹರಿಸಬಹುದು: ಒಬ್ಬ ಬ್ರಾಹ್ಮಣಗೃಹಸ್ಥ-ತೊದಲುವ ಮೂರು ಜನ ಹೆಣ್ಣುಮಕ್ಕಳು-ಪ್ರಾಪ್ತವಯಸ್ಕರಾದರು-ಕನ್ಯಾಪರೀಕ್ಷೆಗೆ ಜನ ಬರುವುದು-ತೊದಲು ಮಾತಾಡುವುದರಿಂದ ಒಪ್ಪದೇ ಹೋದವರು-ಬೀಗರು ಬರುವುದಕ್ಕೆ ಮುಂಚೆ ಮಾತಾಡಬಾರದೆಂದು ತಂದೆ ಎಚ್ಚರಿಸಿದ್ದು-ಬೀಗರು ಊಟಕ್ಕೆ ಕೂಡುವುದು-ಬುರಬುರಿಯ ಬಗೆ ಅವರ ಮೆಚ್ಚುಗೆ-ಮೂರು ಜನ ಹೆಣ್ಣುಮಕ್ಕಳೂ ಬಾಯಿ ಬಿಡುವುದು-ಬುಯುಬುಯಿ ನಾನೇ ಮಾಡಿದ್ದೆ-ಬುಯುಬುಯಿಗೆ ನಾನೇ ಹಿಟ್ಟು

ಕಲಸಿದ್ದೆ–ಬುಯುಬುಯಿ ನಾನೇ ಕರದಿದ್ದೆ–ಗುಟ್ಟು ಬಯಲಾಗುವುದು–ಇತ್ಯಾದಿ. ಇಲ್ಲಿಯ ಅವರ ತೊದಲುನುಡಿಯ ಉಚ್ಚಾರಣೆಯಲ್ಲಿ ಬುರಬುರಿ 'ಬುಯುಬುಯಿ' ಆಗೋದು ಮಕ್ಕಳಿಗೆ ತಮಾಷೆಯೆನ್ನಿಸಿ ನಗು ತರಿಸುತ್ತದೆ

iv) **ನೀತಿಕಥೆಗಳು** :—ಕಥೆಯ ಪಾತ್ರಗಳ ಮೂಲಕ ಮಕ್ಕಳಿಗೆ ಯಾವುದಾದರೊಂದು ನೀತಿಯನ್ನು ಹೇಳಿಸುವುದು ಇಲ್ಲವೆ ಕೊನೆಯಲ್ಲಿ ಕಥೆಗಾರನೇ ಹೇಳುವುದು ಈ ಕಥೆಗಳ ರೀತಿ. ಬಹುತೇಕ ಎಲ್ಲ ಕಥೆಗಳಲ್ಲಿ ಆನುಷಂಗಿಕವಾಗಿ ನೀತಿಯಿದ್ದೇ ಇರುತ್ತದೆ ಎನ್ನುವುದನ್ನೂ ನಾವು ಮರೆಯಲಾಗದು, ಕಥಾಸಾಹಿತ್ಯದ ಪ್ರಮುಖ ಉದ್ದೇಶವೇ ಅದು ಎಂದರೆ ತಪ್ಪಾಗಲಿಕ್ಕಿಲ್ಲ. ರಾಜರತ್ನಂ ಮಕ್ಕಳಿಗಾಗಿ ರಚಿಸಿರುವ ಬಹುಮಟ್ಟಿನ ಕಥೆಗಳೆಲ್ಲವೂ ಈ ಪ್ರಕಾರಕ್ಕೆ ಸೇರಿದವುಗಳು. ಅವರ ಕಥಾಕೋಶ, ಬುದ್ಧನ ಜಾತಕ ಕಥೆಗಳು, ಪೋಲಿಕಿಟ್ಟಿಯ ಕಥೆಗಳು ಇತ್ಯಾದಿಗಳನ್ನು ಇಲ್ಲಿ ನೆನೆಯಬಹುದು. 'ಕನ್ನಡ ಬಾವುಟ'ದಲ್ಲಿಯ ಕಥನ ಕವನ 'ಗೋವಿನಕಥೆ'ಯನ್ನು ಕೇಳದ ಕನ್ನಡಿಗರೇ ಇಲ್ಲ. ಅಬಾಲವೃದ್ಧರಾದಿಯಾಗಿ ಎಲ್ಲರಿಗೂ ರುಚಿಸುವಂತಹ ಪುಣ್ಯಕೋಟಿ ಎಂಬ ಹಸುವಿನ ಕಥೆಯಿದು. ಇಲ್ಲಿ ಪಶುವೊಂದು :

'ಸತ್ಯವೇ ನಮ್ಮ ತಾಯಿತಂದೆ
ಸತ್ಯವೇ ನಮ್ಮ ಬಂಧುಬಳಗ
ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು'

ಎಂದು ನೀತಿಪಾಠವನ್ನು ಹೇಳುತ್ತಿರುವುದು ನಿಜಕ್ಕೂ ಮನ ತಟ್ಟುವಂತಿದೆ. ಈ ಕಥೆಯನ್ನು ಕೇಳಿ ಅದರ ಸತ್ಯನಿಷ್ಠೆಗಾಗಿ ಕಣ್ಣೀರನ್ನು ಸುರಿಸುವ ಮಕ್ಕಳು ತಮಗರಿವಿಲ್ಲದಂತೆ ಆ ಆದರ್ಶದ ಬೆನ್ನಟ್ಟುತ್ತಾರೆ.

ಐತಿಹಾಸಿಕ ಕಥೆಗಳು :—ಹಿಂದೆ ಆಗಿ ಹೋದಂತಹ ವೀರಪುರುಷರ ರಮಣಿಯರ, ಅರಸರ ಧೈರ್ಯ–ಶೌರ್ಯ–ಸಾಹಸಗಳ ವರ್ಣನೆಯನ್ನೇ ಕಥಾರೂಪದಲ್ಲಿ ರಚಿಸಿ ಮನಸೆಳೆಯುವುದು ಈ ಪ್ರಕಾರ. ಕಾಲ್ಪನಿಕ ಪಾತ್ರಗಳಿಗೆ ಬದಲಾಗಿ ನಿಜ ಜೀವನದಲ್ಲಿ ಪರಾಕ್ರಮವನ್ನು ಮೆರೆದವರ ಸತ್ಯಕಥೆಗಳಿವು. ಉಳ್ಳಾಲದ ರಾಣಿ ಅಬ್ಬಕ್ಕದೇವಿ, ಕೆಳದಿಯ ಚೆನ್ನಮ್ಮ, ಎಚ್ಚಮನಾಯಕ ಇವರ ಕಥೆಗಳನ್ನು 'ಕನ್ನಡ ನಾಡಿನ ವೀರರಮಣಿಯ ಗಂಡುಭೂಮಿಯ ವೀರನಾರಿಯ ಚರಿತೆಯ ನಾನು ಹೇಳುವೆ' ಎನ್ನುವ ಚಿತ್ರದುರ್ಗದ ಸಾಮಾನ್ಯ ಕಾವಲುಗಾರನೊಬ್ಬನ ಹೆಂಡತಿ ಓಬವ್ವ ಇವರ ಬಗೆಗಿರುವ ಕಥನಕವನಗಳನ್ನು ಇಲ್ಲಿ ಉದಾಹರಿಸಬಹುದು. ಜೊತೆಗೆ ಶಿವಾಜಿ ಹಾಗೂ ಇತ್ತೀಚಿನ ಮಹಾತ್ಮಾಗಾಂಧಿ, ಲೋಕಮಾನ್ಯ ಟಿಳಕ, ಸುಭಾಷ ಚಂದ್ರಬೋಸ ಇತ್ಯಾದಿ ದೇಶಭಕ್ತರ ಕಥೆಗಳನ್ನೂ ಹೆಸರಿಸಬಹುದು.

vi) **ವೈಜ್ಞಾನಿಕ ಕಥೆಗಳು :** ಈ ಪ್ರಕಾರದ ಕಥೆಗಳ ಕೃಷಿ ಕನ್ನಡದಲ್ಲಿ ಹೆಚ್ಚಾಗಿ ನಡೆದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಇದು ವಿಜ್ಞಾನದ ಯುಗವಾದ್ದರಿಂದ ವಿಜ್ಞಾನದ ಆವಶ್ಯಕತೆ ದೈನಂದಿನ ಜೀವನದಲ್ಲಿ ಪ್ರಧಾನಪಾತ್ರವಹಿಸುತ್ತದೆ. ಇಂತಹ ವಿಜ್ಞಾನದ, ವಿಜ್ಞಾನಿಗಳ ಅವರ ಸಂಶೋಧನೆಗಳ ಇತಿಹಾಸವನ್ನು-ಸ್ವರೂಪವನ್ನು ಕಥೆಗಳಲ್ಲಿ ಹೆಣೆದು ಸಮರ್ಥವಾಗಿ ನಿರೂಪಿಸಬಹುದು. ಆದರೆ ನಮ್ಮ ಹೆಚ್ಚಿನ ಲೇಖಕರು ಇತ್ತ ಕಡೆ ತಮ್ಮ ಗಮನವನ್ನು ಹರಿಸಿಲ್ಲ. ಇದನ್ನೇ ಡಾ. ರಾಜಶೇಖರ ಭೂಸನೂರಮಠರು "ಚಂದಮಾಮ ಕಥೆಗಳಿಗೆ ಬದಲಾಗಿ ನಮ್ಮ ಮಕ್ಕಳಿಗೆ ವೈಜ್ಞಾನಿಕ ಕಥೆ, ಸಾಹಿತ್ಯ ಸಿಗುವಂತಾಗಬೇಕು. ವೈಜ್ಞಾನಿಕ ಕತೆಗಳಲ್ಲಿ ರಂಜನೆಯೂ ಇರುತ್ತದೆ, ಜ್ಞಾನವೂ ಇರುತ್ತದೆ" ಎಂದು ಹೇಳಿದ್ದಾರೆ. 'ನಾಳಿನ ಮಕ್ಕಳಿಗಾಗಿ ಕಥೆಗಳು', 'ಕುಂಟಕಾಕಾನ ಕಥೆಗಳು' ಎಂಬ ವೈಜ್ಞಾನಿಕ ಕಥೆಗಳನ್ನು ಪ್ರಕಟಿಸಿದ್ದಾರೆ. ಇವುಗಳನ್ನುಳಿದ ವೈಜ್ಞಾನಿಕ ಕಥೆಗಳು ಕನ್ನಡದಲ್ಲಿಲ್ಲ. ಶಿವರಾಮ ಕಾರಂತರು ಮಕ್ಕಳಿಗಾಗಿ 'ವಿಜ್ಞಾನಪ್ರಪಂಚ', ಇಂಡಿಯಾ ಬುಕ್ ಹೌಸದವರು 'ವಿಜ್ಞಾನ ನೋಡು ಕಲಿ ಮಾಡಿ ತಿಳಿ'ಗಳನ್ನು ಪ್ರಕಟಿಸುತ್ತಿರುವರಾದರೂ ಇವು ಕಥೆಗಳಲ್ಲ ಎನ್ನುವುದನ್ನು ಗಮನದಲ್ಲಿಡಬೇಕು.

ಮಕ್ಕಳ ಕಥಾಸಾಹಿತ್ಯ ಪ್ರಕಾರದ ಕೃಷಿಯನ್ನು ಕನ್ನಡಭಾಷೆಯಲ್ಲಿ ನಡೆಸಿದವರು, ಅದಕ್ಕೆ ತಮ್ಮ ಜೀವನನ್ನೂ-ನೀರನ್ನೂ ಹನಿಸಿದವರು ಹಲವಾರು ಜನ ಲೇಖಕರು, ಅವರಲ್ಲಿ ಪ್ರಮುಖರಾದವರ ಸಾಧನೆಗಳು ಇಂತಿವೆ :

೧ ಪಂಜೆ ಮಂಗೇಶರಾಯರು :

'ಸತ್ಯದೀಪಿಕೆ' ಪತ್ರಿಕೆಯಲ್ಲಿ ಪ್ರಕಟವಾದ ಇವರ ಕವನಗಳನ್ನು ಬಾಸೆಲ್ ಮಿಷನ್, ಮಂಗಳೂರು ಸಂಸ್ಥೆಯು 'ಕನ್ನಡ ಮೊದಲನೆಯ ಪುಸ್ತಕ' 'ಕನ್ನಡ ಎರಡನೆಯ ಪುಸ್ತಕ' ತಲೆಬರಹದಲ್ಲಿ ಪ್ರಕಟಿಸಿತು. ಪತ್ರಿಕೆಯಲ್ಲಿ ಕೆಲವು ಕಥೆಗಳು ಕೂಡ ಪ್ರಕಟವಾಗಿದ್ದವಂತೆ. ಇವು ಪ್ರಕಟವಾದ ಇಸ್ವಿ ಗೊತ್ತಿಲ್ಲ. ಪಂಜೆಯವರ ಮೊದಲ ಕಥಾಸಂಗ್ರಹ 'ಬಾಲಕಥಾವಳಿ' ೧೯೧೬ ರಲ್ಲಿ ಪ್ರಕಟವಾಯಿತು. ಇವರು ರಚಿಸಿದ ಮಕ್ಕಳ ಕಥೆಗಳಲ್ಲಿ ಪ್ರಾಣಿಗಳದೇ ಅಗ್ರಸ್ಥಾನ. ಆಡು, ಹಕ್ಕಿ, ಇಲಿ, ಕರಡಿ, ಗುಬ್ಬಿ ಇತ್ಯಾದಿ ಪ್ರಾಣಿ-ಪಕ್ಷಿ ಪ್ರಪಂಚದ ಹಲವು ವೈಶಿಷ್ಟ್ಯಗಳನ್ನು ಕಥೆಗಳ ಚೌಕಟ್ಟಿನಲ್ಲಿ ಹಿಡಿದಿಟ್ಟಿದ್ದಾರೆ. ಇವರ ಅಂಗಳದ ಮಗು, ಅರ್ಗಣೆಮುದ್ದೆ, ಅಜ್ಜಿ ಸಾಕಿದ ಮಗು, ಇಲಿಗಳ ಥಕ್ಕಥೈ, ಕೊ-ಕ್ಕೊ-ಕ್ಕೋ ಕೋಳಿ, ಗುಡುಗುಡುಗುಮ್ಮಟ ದೇವರು, ಗೋಣಿತಟ್ಟಿನ ಪಟ್ಟೆ ಹುಲಿ, ಮೂರು ಕರಡಿ ಇತ್ಯಾದಿ ಕಥೆಗಳನ್ನು ಇಲ್ಲಿ ಹೆಸರಿಸಬಹುದು. ಈ ಕಾರಣಗಳಿಂದಾಗಿ 'ಮಕ್ಕಳ ಸಾಹಿತ್ಯ ಪಿತಾಮಹ' ಎಂದು ಕರೆಸಿಕೊಂಡಿದ್ದಾರೆ.

೨ ಗದಿಗೆಯ್ಯ ಹುಚ್ಚಯ್ಯ ಹೊನ್ನಾಪುರಮಠ :

ಇವರ ಮೊದಲ ಕೃತಿ ನೀತಿಮಂಜರಿ ೧೯೧೮ ರಲ್ಲಿ ಪ್ರಕಟವಾಯಿತು. ಬಾಲಿಕೆಯರಿಗಾಗಿ ಬರೆದ ಈ ಪುಸ್ತಕದಲ್ಲಿ ಐತಿಹಾಸಿಕ ಶೂರಪುರುಷರು, ಸತ್ಪುರುಷರ ಚರಿತ್ರೆಗಳನ್ನು ಉದಾಹರಿಸುತ್ತಾ ಹೋಗುತ್ತಾರೆ ಎಂದಿದ್ದಾರೆ ರಾ. ಯ. ಧಾರವಾಡಕರರು. ನೀತಿಮಂಜರಿ ಪಂಜೆಯವರ ಬಾಲಕಥಾವಳಿಗಿಂತ ಮುಂಚೆ ಪ್ರಕಟವಾಗಿರುವುದರಿಂದ 'ಮಕ್ಕಳಸಾಹಿತ್ಯ ಪಿತಾಮಹ' ಎನ್ನುವುದು ಹೊನ್ನಾಪುರಮಠರಿಗೆ ಸಲ್ಲಬೇಕಾದ ಗೌರವವೇ ಎಂಬುದನ್ನು ವಿದ್ವಾಂಸರು ಮರುಪರಿಶೀಲನೆಗೊಳಪಡಿಸಬೇಕು.

ಅಲ್ಲಾವುದ್ದೀನ ಮತ್ತು ಅದ್ಭುತದೀಪ, ಅಲೀಬಾಬಾ ಮತ್ತು ನಲವತ್ತು ಕಳ್ಳರು, ಸಚಿತ್ರ ಬಾಲರಾಮಾಯಣ, ಸಚಿತ್ರಬಾಲಭಾಗವತ, ಪ್ರಹ್ಲಾದ ಚರಿತ್ರೆ, ರಾಮಕೃಷ್ಣ ಪರಮಹಂಸರ ಕಥೆಗಳು ಇತ್ಯಾದಿಗಳನ್ನು ಮಕ್ಕಳಿಗಾಗಿ ಬರೆದಿದ್ದಾರೆ.

೩) ಹೊಯ್ಸಳ (ಆರಗಂ ಲಕ್ಷ್ಮಣರಾವ್) : ಇವರ ಮೊದಲ ಪುಸ್ತಕ 'ತಿರುಗ ಮುರುಗ' ೧೯೨೩ ರಲ್ಲಿ ಪ್ರಕಟವಾಯಿತು. ಇದರಲ್ಲಿ ಮಕ್ಕಳಿಗಾಗಿ ಬರೆದ ಕವನಗಳ ಜೊತೆಯಲ್ಲಿ ಕಥೆಗಳೂ ಸೇರಿವೆ 'ಮಕ್ಕಳ ಗುಂಪಿನಲ್ಲಿ ಹಗಲು ದೀವಿಟಿಕೆಯನ್ನು ಹಿಡಿದು ಹುಡುಕಿದರೂ ಒಂದು ಜಗಳವಾಗಲಿ ಒಂದು ಹೊಲಸು ಮಾತಾಗಲಿ ಒಂದು ನಾಚಿಕೆಗೇಡಿನ ವಿಚಾರವಾಗಲಿ ಇರಕೂಡದು' ಎಂಬ ಉದ್ದೇಶ ಸಾಧನೆಗಾಗಿಯೆ ಕಥೆಗಳನ್ನು 'ಕಾಂತಾಸಮ್ಮಿತ'' ರೂಪದಲ್ಲಿ ಬರೆಯಹೊರಟವರು.

ಹೊಯ್ಸಳರ ಕಥೆಗಳ ವಿಶಿಷ್ಟ ಶೈಲಿ ಮಕ್ಕಳ ಮನಸ್ಸನ್ನು ಸೆರೆಹಿಡಿಯುವಂತಹುದು. ಪ್ರಶ್ನೋತ್ತರ ಶೈಲಿಯಿಂದಾಗಿ ಮಕ್ಕಳು ಕಥೆಯಲ್ಲಿ ತನ್ಮಯರಾಗಿ ತಾದಾತ್ಮ್ಯ ಹೊಂದುತ್ತಾರೆಂಬುವನ್ನು ಗಮನಿಸಬಹುದು. ಅವರ ಕಥೆಗಳಲ್ಲಿ ಪ್ರೀತಿ, ರಾಜನ ಬುದ್ಧಿವಂತಿಕೆ, ಖೈದಿಗಳ ಕಷ್ಟ, ಆನೆ ಇರುವೆ, ಅವಕ್ಕೇ ಆ ಹೆಸರು, ಶುಭಾಂಗ, ಹಿಂದಕುಮಾರ, ಬಮುಕುವ ಯಂತ್ರ, ಗಂಟೆಗೋಪುರ, ಪಟಾಕ್ಷಿ, ಪುಷ್ಪರಸ, ಹೂವಿನ ಹಾಸಿಗೆ, ದಿನಾರಿ, ದೇಶವೆ ಅವರ ತಾಯಿ ಇತ್ಯಾದಿಗಳನ್ನು ಹೆಸರಿಸಬಹುದು. ೧೯೨೪ ರಲ್ಲಿ ಪ್ರಪ್ರಥಮ ಮಕ್ಕಳವಾರಪತ್ರಿಕೆ 'ಮಕ್ಕಳ ಪುಸ್ತಕ' ಹೊರಡಿಸಿದರು.

೪) ದೇವುಡು ನರಸಿಂಹ ಶಾಸ್ತ್ರಿ : ಮೊದಲ ಮಕ್ಕಳ ಪುಸ್ತಕ 'ಬುದ್ಧಿಯ ಕಥೆಗಳು' ೧೯೨೬ ರಲ್ಲಿ ಪ್ರಕಟವಾಯಿತು. ೧೯೩೭ ರಿಂದ ೧೯೬೬ ರ ವರೆಗೆ ಸತತವಾಗಿ ಮಕ್ಕಳಿಗೆಂದೇ ಕಥೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಗಣೇಶನಕಥೆ, ದೇಶಾಂತರ ಕಥೆಗಳು ತಂತ್ರಗಾರ ನರಿ ಮತ್ತು ಇತರಕಥೆಗಳು, ಬಿಳಿಯ ಆನೆ ಮತ್ತು ಇತರ ಕಥೆ

ಗಳು, ಬಂಜೆಯ ಮಗ ಮತ್ತು ಇತರ ಕಥೆಗಳು, ಚಾಮುಂಡೇಶ್ವರಿ ಮತ್ತು ಇತರ ಕಥೆಗಳು, ಸ್ನೇಹಿತರು ಮತ್ತು ಇತರ ಕಥೆಗಳು, ಅವಸರ ಮತ್ತು ಇತರ ಕಥೆಗಳು ಅಲ್ಲಿ ಇಲ್ಲಿಯ ಕಥೆಗಳು, ಕಂದನ ಕಥೆಗಳು ಇತ್ಯಾದಿಗಳನ್ನು ನೆನೆಯಬಹುದು. ಮಕ್ಕಳ ಮನಸ್ಸು ಕೋಮಲವಾದುದು; ನಿಷ್ಕಲ್ಮಶವಾದುದು. ಆದ್ದರಿಂದ ಮಕ್ಕಳಿಗಾಗೆಂದು ರಚಿತಗೊಳ್ಳುವ ಸಾಹಿತ್ಯ ಅವರ ಮನಸ್ಸನ್ನು ಹಿತವಾಗಿ ಸ್ಪರ್ಶಿಸುವಂತಿರಬೇಕು; ಬುದ್ಧಿಯನ್ನು ಪ್ರಚೋದಿಸುವಂತಿರಬೇಕು' ಎಂಬ ದಿಸೆಯಲ್ಲಿ ಕಷ್ಟಪಟ್ಟು ಪ್ರಯತ್ನಿಸಿ ಸಿದ್ಧಿಯನ್ನು ಪಡೆದುದು ದೇವುಡು ಅವರ ನೀತಿಕಥೆಗಳ ವೈಶಿಷ್ಟ್ಯ.

೫) **ಮೇವುಂಡಿ ಮಲ್ಲಾರಿ:** 'ಕನ್ನಡ ಕಂದ' ಎಂಬ ಮಕ್ಕಳ ಮಾಸಪತ್ರಿಕೆ ಹೊರಡಲು ಕಾರಣರಾದವರು. ಇವರು ಕಳೆದ ಕಡಲೆಯನ್ನು ಹುಡುಕುತ್ತ ಹೋಗುವ ಗುಬ್ಬಿಯನ್ನು ಕುರಿತ ಕಥನಕವನವನ್ನು ರಚಿಸುವುದರ ಜೊತೆಗೆ ಚಿಕ್ಕ ಹುಡುಗಿ ಪುಟ್ಟಮ್ಮ, ಓತಿಕಾಟನ ತಂಗಿ, ಗುಬ್ಬಚ್ಚಿ ಗೂಡು, ಮಡ್ಡಮ್ಮನ ಸಂಸಾರ, ಜಾಣಗುಬ್ಬಿ, ಹೊಟ್ಟೆ ಡುಮ್ಮ, ರಕ್ಕೀ ನಕ್ರಪ್ಪ, ಮೂವರು ಕಳ್ಳರು, ಗಾಳಿಯ ಹಾವಳಿ, ಕತ್ತೆಯ ಮೇಳ, ಕೆಂಪು ಮೋತಿ ಹಂಪಣ್ಣ ಇತ್ಯಾದಿ ಕಥೆಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. ಪ್ರತಿಯೊಂದು ಕಥೆಯ ಕೊನೆಯಲ್ಲಿ ಉಪದೇಶ ಹೇಳುವುದು ಇವರ ಕಥೆಗಳ ಒಂದು ವಿಶೇಷತೆ. ಮಕ್ಕಳ ವಿನೋದ ಕಥೆಗಳನ್ನು ಇವರು ರಚಿಸಿದ್ದಾರೆ. ಅವಿವೇಕಿ ಅರಸು, ಪೆದ್ದನಪುರಿ, ಬುಯ್ಯುಬುಯಿ, ಕಿರಿಕೆಟ್ಟ ಆಟ ಇವು ಮಕ್ಕಳನ್ನು ತುಂಬ ರಂಜಿಸುತ್ತವೆ.

೬) **ಗುಂಡ್ಲುಪಂಡಿತ ರಾಜರತ್ನಂ:** 'ಮಕ್ಕಳ ಮನಸ್ಸನ್ನು ಹೊಕ್ಕು ಅವರಿಗಾಗಿ ಬರೆದು ಹಾಡಿ ಅವರನ್ನು ಕುಣಿಸಿ ನಲಿಸುವುದರ ಜೊತೆಗೆ ತಾವೂ ನಲಿದಾಡಿದವರು ಕನ್ನಡದ ರತ್ನ 'ನಾಯಿಮರಿ ರಾಜರತ್ನಂ' ಎಂಬ ಮಾತು ನಿಜಕ್ಕೂ ಸತ್ಯ. ಅವರು ರಚಿಸಿದ ಮೆರವಣಿಗೆ, ಚಿನ್ನದ ದೋಸೆ ಮತ್ತು ಇತರ ಕಥೆಗಳು, ವೈಣಿಕನ ವೀಣೆ, ಹಸಿಗಳು, ಕರಿಯ ಕಂಬಳಿ ಮತ್ತು ಇತರ ಕಥೆಗಳು, ಕಲ್ಲಿನ ಕಾಮಣ್ಣ, ಸರಬುರುಡೆ ಅಥವಾ ಮಕ್ಕಳ ಮಂತಾಸನ್, ರಾಮನ ಮೊದಲಾದ ಎಂಟು ಕಥೆಗಳು—ಇವುಗಳನ್ನು ಶಿಶುಸಾಹಿತ್ಯದಲ್ಲಿ ಸೇರಿಸಿದರೆ ಬುದ್ಧನ ಜಾತಕ ಕಥೆಗಳು, ಕಥಾಕೋಶ, ಪೋಲಿಕಿಟ್ಟಿಯ ಕಥೆಗಳು, ನೆನಪು ನಂಜುಂಡ, ತೆನಾಲಿ ರಾಮ, ಹತ್ತು ಮಕ್ಕಳ ತಾಯಿ, ರಾಬಿನ್‌ಹುಡ್ ಇತ್ಯಾದಿ ಕಥೆಗಳನ್ನು ಬಾಲಸಾಹಿತ್ಯದಲ್ಲಿ ಸೇರಿಸಬಹುದು. 'ರಾಜರತ್ನಂ ಅವರದು ಜೀವಂತ ಸಾಹಿತ್ಯ. ಪ್ರಮಾಣ ಹಾಗೂ ವೈವಿಧ್ಯತೆಯಲ್ಲಿ ಕನ್ನಡಸಾಹಿತ್ಯಕ್ಕೆ ಕುವೆಂಪು ಮತ್ತು ಕಾರಂತರನ್ನು ಬಿಟ್ಟರೆ ಅವರಷ್ಟು ಕೊಡುಗೆ ನೀಡಿದವರು ಇನ್ನೊಬ್ಬರಿಲ್ಲ' ಎಂದಿದ್ದಾರೆ ವಿ. ಸೀ ನಿಜ. ರಾಜರತ್ನಂ ಅವರೇ ಕಥಾಕೋಶದಲ್ಲಿ ವಾಲ್ಮೀಕಿ ರಾಮಾಯಣದ ಶ್ಲೋಕವೊಂದನ್ನು ಉದ್ಧರಿಸಿದ್ದಾರೆ.

ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ
ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ

ಇತ್ಯಾದಿಯಾಗಿ ರಾಮ – ರಾವಣರ ಯುದ್ಧ ವೈಖರಿಯನ್ನು ವರ್ಣಿಸುತ್ತದೆ ಈ ಶ್ಲೋಕ. ಆಕಾಶಕ್ಕೆ ಆಕಾಶವೇ ಹೋಲಿಕೆ. ಸಮುದ್ರಕ್ಕೆ ಸಮುದ್ರವೇ ಹೋಲಿಕೆ. ಅದರಂತೆ ರಾಮ – ರಾವಣರ ಯುದ್ಧಕ್ಕೆ ಅವರ ಯುದ್ಧವೇ ಹೋಲಿಕೆ ಎಂದು ಇದರರ್ಥ. ಹಾಗೆಯೇ ಮಕ್ಕಳಸಾಹಿತ್ಯ ಪ್ರಪಂಚದಲ್ಲಿ ರಾಜರತ್ನಂ ಅವರಿಗೆ ಅವರೇ ಹೋಲಿಕೆ, ಇನ್ನೊಬ್ಬರಿಲ್ಲ. ಇಂತಹ ಮಕ್ಕಳ ರಾಜರತ್ನಂ ಮಕ್ಕಳ ವರ್ಷವೇ ನಿಧನರಾದುದು ಬದುಕಿನ ಭೀಕರ ನಾಟಕೀಯತೆಗಳಲ್ಲೊಂದು.

೭) **ಶಿವರಾಮ ಕಾರಂತ:** ಕಾರಂತರು ಕೈಯಾಡಿಸಿದ ಸಾಹಿತ್ಯ ಪ್ರಕಾರಗಳೇ ಇಲ್ಲ ಎಂಬುದು ಇಂದು ಗಾದೆಯ ಮಾತಾಗಿದೆ. ಮಕ್ಕಳಿಗಾಗಿ ಅವರು ವಿಜ್ಞಾನಪ್ರಪಂಚ, ಬಾಲಪ್ರಪಂಚ ಎಂಬ ಬೃಹತ್ ಸಂಪುಟಗಳನ್ನೇ ಹೊರ ತಂದಿದ್ದಾರೆ. ಬಾಲಪ್ರಪಂಚದ ಮೂರು ಸಂಪುಟಗಳಲ್ಲಿ ಅಲ್ಲಲ್ಲಿ ಮಕ್ಕಳ ಕಥೆಗಳೂ ಸೇರಿವೆ. ಆದರೆ ಮಕ್ಕಳಿಗಾಗಿಯೇ ಅನುವಾದಿಸಿದ ಕಥೆಗಳು 'ಅಮರಚಿತ್ರ' ಕಥಾ ಮಾಲಿಕೆಯವು. ಸುಂದರ, ಮನಮೋಹಕ ಚಿತ್ತಾರಗಳು ಅಷ್ಟೇ ಚಿತ್ತಾಕರ್ಷಕ ಶೈಲಿ ಎಳೆಯರ ಮನಸ್ಸನ್ನು ಸೆಳೆಯುತ್ತವೆ.

೮) **ಕುವೆಂಪು** : ದೊಡ್ಡವರಿಗಾಗಿ 'ರಾಮಾಯಣ ದರ್ಶನಂ' ಎಂಬ ಮಹಾ ಛಂದಸ್ಸಿನ ಮಹಾಕಾವ್ಯವನ್ನು ಬರೆದ ಕುವೆಂಪು ತಮ್ಮ ಸಾಹಿತ್ಯಸೃಷ್ಟಿಯನ್ನು ಆರಂಭಿಸಿದುದೇ ಮಕ್ಕಳ ಸಾಹಿತ್ಯದಿಂದ. ಅವರ 'ಬೊಮ್ಮನಹಳ್ಳಿ ಕಿಂದರಿಜೋಗಿ' ಕಥನಕವನ ಸುಪ್ರಸಿದ್ಧ. ಇದರ ಹೊರತಾಗಿ 'ನರಿಗಳಿಗೇಕೆ ಕೋಡಿಲ್ಲ' ಇತರ ಕಥೆಗಳನ್ನೂ ಬರೆದಿದ್ದಾರೆ.

೯) **ಪಂಡಿತ ಚೆ. ಎ. ಕವಲಿ:** ಸಂಸ್ಕೃತದಿಂದ ಕಥೆಗಳನ್ನು ಆಯ್ದು ಮಕ್ಕಳಿಗಾಗಿ ಕನ್ನಡಕ್ಕೆ ಅನುವಾದಿಸಿದ ಸುಮಾರು ೧೨ ಕಥೆಗಳಿವೆ. ಅವನ್ನು ಬಿಟ್ಟರೆ ಪುಟ್ಟಣ್ಣನ ಪಂಚತಂತ್ರ, ಸುರಾರಾಕ್ಷಸಿ, ಮೂರು ಕರಡಿಗಳು ಇತ್ಯಾದಿಗಳನ್ನು ನೆನೆಯಬಹುದು.

೧೦) **ಅನುಪಮಾ ನಿರಂಜನ:** ಮಕ್ಕಳ ಸಾಹಿತ್ಯ ಸೃಷ್ಟಿಯಲ್ಲಿ ಕೈ ಹಾಕಿದ ಏಕೈಕ ಮಹಿಳೆ ಅನುಪಮಾ ನಿರಂಜನ ಎಂದರೆ ತಪ್ಪಾಗಲಿಕ್ಕಿಲ್ಲ. ಅವರ 'ದಿನಕ್ಕೊಂದು ಕಥೆ' ೩೬೫ ಕಥೆಗಳನ್ನೊಳಗೊಂಡ ಕಥಾ ಸಂಪುಟ. ಮನೆಯಲ್ಲಿ ಅಜ್ಜ – ಅಜ್ಜಿಯರು ಹೇಳುವ ಅದ್ಭುತರಮ್ಯ ಕಥೆಗಳೇ ಇಲ್ಲಿ ಹೆಚ್ಚಾಗಿದ್ದರೂ ಹೊರ ನಾಡಿನ ಕಥೆಗಳನ್ನೂ ಅನುವಾದಿಸಿ ಸೇರಿಸಿದ್ದಾರೆ. 'ಬೆಳೆಯುವ ಮನಸ್ಸಿಗೆ ಯೋಗ್ಯ

ಆಹಾರ ಒದಗಿಸುವುದು ತಂದೆ-ತಾಯಿಯರ ಕರ್ತವ್ಯ" ಎನ್ನುವ ಅನುಪಮಾ ತಮ್ಮ ದಿನಕ್ಕೊಂದು ಕಥೆ ಹೊತ್ತಗೆಯ ಕಥೆಗಳನ್ನು ಓದಿದ ಅಥವಾ ಓದಿಸಿಕೊಂಡು ಕೇಳಿದ ಮಕ್ಕಳಿಗೆ ಭರತಖಂಡದ ಪುರಾಣಗಳ ಬಗ್ಗೆ ತಿಳುವಳಿಕೆ ಮೂಡುವುದಲ್ಲದೆ ಅವುಗಳ ಬಗ್ಗೆ ಗೌರವ ಭಾವನೆಯೂ ಹುಟ್ಟುತ್ತದೆ. ಅಷ್ಟೇ ಅಲ್ಲ ಜಗತ್ತಿನ ಇತರ ದೇಶಗಳ ಕಥೆಗಳಿಂದ ತಮ್ಮ ಜ್ಞಾನಭಂಡಾರವನ್ನು ವಿಸ್ತರಿಸಿಕೊಂಡದ್ದರಿಂದ ಆ ಭಾಷೆ ಹಾಗೂ ಜನರ ಬಗೆಗೆ ಆದರ ಮೂಡುತ್ತದೆ; ಪ್ರಪಂಚವೇ ತನ್ನದು ಎಂಬ ವಿಶಾಲಭಾವ ಮೂಡುತ್ತದೆ ಎಂಬ ಅಭಿಪ್ರಾಯ ತಳೆದಿದ್ದಾರೆ. ಆ ಸದುದ್ದೇಶಕ್ಕಾಗಿಯೇ ಅವರು ದಿನಕ್ಕೊಂದರಂತೆ ವರ್ಷವಿಡೀ ಮಕ್ಕಳಿಗಾಗಿ ಕಥೆ ಹೇಳಿದ್ದಾರೆ.

೧೧) **ಮನೋಹರ:** ವಿವಿಧ ದೇಶದ ಜಾನಪದ ಕಥೆಗಳು, ಅಪ್ಪಾ ಕಥೆ ಹೇಳು, ಅಮ್ಮಾ ಕಥೆಹೇಳು, ಅಜ್ಜಾ ಕಥೆಹೇಳು, ಅಜ್ಜಿ ಕಥೆಹೇಳು, ಅಕ್ಕಾ ಕಥೆ ಹೇಳು ಇತ್ಯಾದಿ ಕಥೆಗಳಲ್ಲದೆ ಇನ್ನೂ ಹಲವಾರು ಕಥೆಗಳನ್ನು ಬರೆದಿದ್ದಾರೆ. ಇವೆಲ್ಲವೂ ಧಾರವಾಡದ ಸಮಾಜ ಪುಸ್ತಕಾಲಯದಿಂದ ಪ್ರಕಟಗೊಂಡಿವೆ.

ಇವರೆಲ್ಲರ ಜೊತೆಗೆ ಎಂ. ಎಸ್. ಪುಟ್ಟಣ್ಣ, ಶಂ. ಬಾ. ಜೋಶಿ, ಗಣಪತಿಭಟ್ಟ ಮೊಳೆಯೂರ, ಗೀತಾ ಕುಲಕರ್ಣಿ, ಶಿಶು ಸಂಗಮೇಶ, ಸಿ. ಎಫ್. ಕಟ್ಟಿಮನಿ, ಅಣ್ಣಾರಾಯ ಸಾಲಿಮನಿ, ಎಸ್. ಪ್ರಹ್ಲಾದರಾವ್, ಎಸ್. ಗುಂಡೂರಾವ್, ಗೋಪಾಲಕೃಷ್ಣ ಸಾಲೆಪ್ಪಾಡಿ, ಚಂದ್ರರಾಜಿಸೆಟ್ಟಿ, ಚೆಲುವರಾಯಸ್ವಾಮಿ, ಉಮಾಪತಿ, ಹುಲಿಕ್ಷನಮಠ, ಆರ್. ಕಲ್ಯಾಣಮ್ಮ, ಶ್ರೀ ಶ್ರೀ ಕುಲಕರ್ಣಿ, ಕುಂದಾಸಿಸತ್ಯನ್, ಎಸ್. ಅನಂತ ನಾರಾಯಣ, ಅನಂತರಾಂ, ಜಿ. ಕೆ. ಅಮೃತೇಶ್ವರ, ದಾಮೋದರ ಬಾಳಿಗೆ ಇತ್ಯಾದಿ ಜನರನ್ನು ಹೆಸರಿಸಬಹುದು. ಇದು ವರೆಗೆ 'ಕನ್ನಡನುಡಿ'ಯಲ್ಲಿ ಮಕ್ಕಳಸಾಹಿತ್ಯದ ಬಗೆಗೆ ಗಮನಸೆಳೆದಿವ ಲೇಖಕರಲ್ಲಿ ಸುಮಾರು ೩೦ ಜನ ಲೇಖಕರು ೯೩ ಕೃತಿಗಳನ್ನು ರಚಿಸುವುದಾಗಿ ಉಲ್ಲೇಖಿಸಿದ್ದಾರೆ. ಈ ಪಟ್ಟಿಯನ್ನು ಅಪೂರ್ಣ ಎನ್ನುವುದನ್ನು ಲಕ್ಷಿಸಬೇಕು. ಇಷ್ಟೆಲ್ಲ ಜನರು ಕಥೆ ಗಳನ್ನು ಮಕ್ಕಳಿಗಾಗಿ ಬರೆದಿದ್ದರೂ ಮಕ್ಕಳ ಕಥಾಸಾಹಿತ್ಯ ಕನ್ನಡದಲ್ಲಿ ಇನ್ನೂ ವೆನ್ನು ವಷ್ಟು ಕಡಿಮೆ ಎನ್ನುವವರನ್ನು ಕಂಡಾಗ ಈ ಲೇಖಕರ ಪುಸ್ತಕಗಳನ್ನು ಪ್ರಕಟಿಸಲು ಪ್ರಕಾಶಕರು ಮುಂದೆ ಬರುತ್ತಲಿಲ್ಲವೇ ಎಂಬ ಸಂಶಯ ಹುಟ್ಟುತ್ತದೆ. ಆದರೆ ಈ ಕ್ಷೇತ್ರದಲ್ಲಿಯೂ ನಮಗೆ ಆಶ್ಚರ್ಯ ಕಾದು ಕುಳಿತಿದೆ.

ಪುಲಿಕೇಶಿ ಪ್ರಕಾಶನ, ಬೆಂಗಳೂರು ಕೆ. ಆರ್. ಪ್ರಸನ್ನ ಪದ್ಮಜ ಅವರ ಹಲವಾರು ಕಥೆಗಳನ್ನು ಪ್ರಕಟಿಸಿದೆ. ಮನೋರಮಾ ಪ್ರಕಾಶನ, ಬೆಂಗಳೂರಿನ 'ಮಕ್ಕಳ ಮಾಣಿಕ್ಯಮಾಲೆಯಲ್ಲಿ' ಎಸ್. ಪ್ರಹ್ಲಾದರಾವ್ ಅವರ ಮಹಾಯಾನ, ಜಿ. ಟಿ. ನಾರಾಯಣರಾವ್ ಅವರ ಹನುಮಂತ ನೆಗೆತ ಬಂದಿವೆ. ಶ್ರೀ ಪುರುಷ

ಪ್ರಕಾಶನ, ಕೈವಾರ; ರವಿಕಲಾ ಪ್ರಕಾಶನ, ಬೆಂಗಳೂರು: ಕ. ವೆಂ. ಸ್ಮಾರಕ ಗ್ರಂಥಮಾಲೆ ಮೈಸೂರು; ಹಂಸಧ್ವನಿ ಪ್ರಕಾಶನ. ಬೆಂಗಳೂರಿನ ಶಿಶುಸಾಹಿತ್ಯಮಾಲೆ ನಭಶ್ರೀ ಪ್ರಕಾಶನ, ಮೈಸೂರಿನ ಮಕ್ಕಳ ಸಾಹಿತ್ಯಮಾಲೆ: ಗೀತಾಬುಕ್ ಹೌಸ್, ಮೈಸೂರಿನ ಎನ್ ಪ್ರಹ್ಲಾದರಾವ್ ಅವರ ಮಕ್ಕಳ ಪುಸ್ತಕಗಳು; ಹೇಮಾ ಪ್ರಕಾಶನ ಬೆಂಗಳೂರಿನ 'ಮಕ್ಕಳ ಪುಸ್ತಕಮಾಲೆ" ಕನ್ನಡ ಪ್ರಪಂಚ ಪ್ರಕಾಶನ, ಕದ್ರಿಯ ಮಕ್ಕಳ ಮಂಟಪ ಮಿತ್ತಬೈಲ್, ದ. ಕ. ದ ಶಿಶು ಸಾಹಿತ್ಯಮಾಲೆ; ಎನ್. ಆರ್. ಪ್ರಕಾಶನ. ಬೆಂಗಳೂರಿನ ಮಕ್ಕಳ ಸಾಹಿತ್ಯ; ನವಚೇತನ ಪ್ರಕಟಣಾಲಯದ ಕಥೆಗಳು; ಗೀತಾ ಪ್ರಕಾಶನ, ಕಾಸರಗೋಡುವಿನ 'ಶಿಶು ಸಾಹಿತ್ಯಮಾಲೆ" ಮಂಗಳೂರಿನ ಬಾಲ ಸಾಹಿತ್ಯ ಮಂಡಳಿ, ನ್ಯಾಶನಲ್ ಬುಕ್‌ಟ್ರಸ್ಟ್ ಆಫ್ ಇಂಡಿಯಾದ ಕಥಾಮಾಲಿಕೆ; ರಾಮಾಶ್ರಯ ಬುಕ್ ಡಿಪೊ, ಧಾರವಾಡದ ಮಕ್ಕಳ ಮುತ್ತುಗಳು ಇವುಗಳ ಜೊತೆ ಕೊನೆಯಲ್ಲಿ ಸಮಾಜ ಪುಸ್ತಕಾಲಯ, ಧಾರವಾಡದ 'ಮಕ್ಕಳ ಬುದ್ಧಿ ವಿಕಾಸಕ್ಕೆ ಮುದ್ದಾದ ಬಾಲ ಸಾಹಿತ್ಯ' ಸೃಷ್ಟಿಗಳನ್ನು ಹೆಸರಿಸುತ್ತ ಹೊರಟರೆ ಒಂದೇ ಎರಡೇ ? ಪ್ರಕಾಶನಕ್ಕೇನು ಕೊರತೆಯಿದೆಯೇ ಕನ್ನಡದಲ್ಲಿ ದಿಗ್ಭ್ರಮೆ ಹಿಡಿಸುವಷ್ಟು ಮಕ್ಕಳ ಕಥೆ ಪುಸ್ತಕಗಳಿವೆ. ಸಾಹಿತ್ಯಪರಿಷತ್ತು ಇತ್ತೀಚೆಗೆ ಬಿಡುಗಡೆ ಮಾಡಿದ 'ನಲಿಯುವ ಮಕ್ಕಳ ಕಲಿಯುವ ಪುಸ್ತಕ' ಮಾಲಿಕೆಯಲ್ಲಿ ೭ ಕಥೆಗಳಿವೆ. ರಾಷ್ಟ್ರೋತ್ಥಾನ ಸಾಹಿತ್ಯದವರು ಭಾರತ-ಭಾರತ ಮಾಲಿಕೆಯಲ್ಲಿ ನೂರಕ್ಕೂ ಮೇಲ್ಪಟ್ಟ ಪ್ರಸಿದ್ಧ ವ್ಯಕ್ತಿಗಳ ಕಥೆಗಳಿವೆ. ಈ ಸಮಯದಲ್ಲಿ ನೆನೆಸಿಕೊಳ್ಳಲೇ ಬೇಕಾದವುಗಳು ಇಂಡಿಯಾ ಬುಕ್‌ಹೌಸ್ ಬೆಂಗಳೂರಿನ ಹಲವಾರು ಪ್ರಕಟಣೆಗಳು ಶಿಶುಗಳಿಗಾಗಿ ಮುದ್ದುಮುದ್ದಾದ ಅಮರಚಿತ್ರ ಕಥೆಗಳಾದರೆ ಬಾಲರಿಗೆ ಕನ್ನಡನಾಡು ಮತ್ತು ಕನ್ನಡಿಗರ ಪರಂಪರೆ 'ಇಕೋ' ಪುಸ್ತಕಗಳ ಮಾಲಿಕೆಯಲ್ಲಿ ಹಲವಾರು ಉತ್ತಮ ಕಥೆಗಳನ್ನು ಕೊಟ್ಟಿದ್ದಾರೆ.

'ನೆನಪಿಗೊಂದು ಮೊಟುಗೋಲ'ನ್ನು ಹಾಕಿದಾಗ ಒಂದು ಮಾತು. ಜಿ. ಪಿ. ರಾಜರತ್ನಂ ಅವರಿಗೆ ತುಂಬ ಪ್ರಿಯವಾದ ಉಪಮೆ ಇದು ಸಾಯುವುದಕ್ಕೆ ಕೇವಲ ಎರಡು ದಿನಗಳ ಮುಂಚೆ ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದಲ್ಲಿಯೂ ಕೂಡ ಇದನ್ನವರು ಬಳಸಿದರು. "ಮನೆಯ" ಯಜಮಾನ ಔತಣಕ್ಕೆ ಬೇಕಾದ ಸಾಮಗ್ರಿಗಳನ್ನೆಲ್ಲ ತಂದು ಹಾಕಿದ್ದಾನೆ. ಸೊಗಸಾದ ಅಡಿಗೆಯೂ ಸಿದ್ಧವಾಗಿದೆ. ಹಸಿದವರು ಸಾಲಾಗಿ ಕಾದು ಕೂತಿದ್ದಾರೆ. ಆದರೆ ಬಡಿಸುವುದಕ್ಕೆ ಮಾತ್ರ ಸರಿಯಾದ ಜನ ಇಲ್ಲ. ಹೀಗಾಗಿ ಮಾಡಿದ ಸೊಗಸಾದ ಅಡಿಗೆಯಲ್ಲಾ ಹಾಗೇ ತಣ್ಣಗಾಗುತ್ತಿದೆ. ಇಂದು ಸಾಹಿತ್ಯ ಪರಿಚಾರಿಕೆಗೆ ಆವಶ್ಯವಾಗಿ ಜನ ಬೇಕು. ಹೌದು. ಕನ್ನಡ ಸಾಹಿತ್ಯದ ಮಟ್ಟಿಗಂತೂ ಇದು ತೀರ ಸಮಂಜಸವಾದ ಮಾತು. ಮೇಲೆ ಹೇಳಿದ ಅಷ್ಟೊಂದು ಜನ ಲೇಖಕರು ಮಕ್ಕಳಿಗಾಗಿ ವಿಪುಲವಾದ ಕಥಾ ಸಾಹಿತ್ಯವನ್ನು

ಸೃಷ್ಟಿಸಿದ್ದಾರೆ; ಲಾಭದಾಸೆಯನ್ನು ತೊರೆದು ಪ್ರಕಟಿಸಲು ಪ್ರಕಾಶಕರು ಮುಂದೆ ಬಂದಿದ್ದಾರೆ. ಆದರೆ ಎಲ್ಲರೂ ಎದುರಿಸುತ್ತಿರುವ ಅತ್ಯಂತ ಕ್ಲಿಷ್ಟವಾದ ಸಮಸ್ಯೆ ಎಂದರೆ ಪಠ್ಯಪುಸ್ತಕಗಳಿಂದ ಹೊರತಾದ ಓದು ಕೂಡ ಮಕ್ಕಳ ಮಾನಸಿಕ ಬೆಳವಣಿಗೆಗೆ ಗಮನಾರ್ಹ ಸಹಾಯಮಾಡುತ್ತದೆ ಎಂಬುದರ ಅರಿವು ನಮ್ಮ ಪಾಲಕರಲ್ಲಿ ಮೂಡದೇ ಇರುವುದು; ಇಂತಹ ಪುಸ್ತಕಗಳನ್ನು ಅವರು ಮಕ್ಕಳಿಗೆ ಕೊಡಿಸದೇ ಇರುವುದು. ಒಂದು ಉದಾಹರಣೆ ಧಾರವಾಡದ ಸುಭಾಷ ರಸ್ತೆಯಲ್ಲಿ ಸಮಾಜಪುಸ್ತಕಾಲಯ ಇದೆ. ಅವರು ಹೊರಗೆ ಗಾಜಿನ ಕಪಾಟಿನಲ್ಲಿ ಅಮರಚಿತ್ರಕಥೆ ಇತ್ಯಾದಿಗಳನ್ನು ಪ್ರದರ್ಶನಕ್ಕಾಗಿ ಇಟ್ಟಿದ್ದಾರೆ. ಈ ಪುಸ್ತಕದ ಅಂಗಡಿಯ ಅಟ್ಟದಮೇಲೆ ಹಾಗೂ ಪಕ್ಕಗಳಲ್ಲಿ ಸೀರೆಗಳ ಅಂಗಡಿಗಳಿವೆ. ತಾಯಂದಿರು ಸೀರೆ ಕೊಳ್ಳಲು ಬಂದಾಗ ಅವರೊಡನಿದ್ದ ಚಿಕ್ಕ ಮಕ್ಕಳು 'ಅವ್ವಾ ಅವ್ವಾ ನನಗೆ ಆ ಪುಸ್ತಕ ಕೊಡಸs ಛಂದ ಛಂದನ ಚಿತ್ರ ಕಥಿ ಇರ್ತಾವ' ಅಂದಾಗ "ಏನ ಕಿರಕಿರೀನೋ ನಿಂದು. ಆಮೇಲೆ ನೋಡೋಣ" ಎನ್ನುತ್ತಾರೆ. ಸೀರೆಯ ದೊಡ್ಡ ಪಾಕೀಟಿನೊಡನೆ ಹೊರಬಂದಾಗ ಮತ್ತೆ ಆ ಮಕ್ಕಳು "ಅವ್ವಾ ಆವಾಗ ಕೊಡಸ್ತೀನಿ ಅಂದಿದ್ಯಲ್ಲ. ಪುಸ್ತಕ ಕೊಡಸ ಅಂದ ತಕ್ಷಣ 'ಅಯ್ಯs ಅದೇನು ಉಳ್ಳಾಕ ಬರ್ತಾವ? ತಿಲ್ಲಾಕ ಬರ್ತಾವ. ಕಥಿ ಓದ್ತಾನಂತ ಕಥಿ. ಸಾಲೀಪುಸ್ತಕಾ ಓದುದ ಬಿಟ್ಟು' ಎಂದು ದರದರನೆ ಎಳೆದೊಯ್ಯುತ್ತಾರೆ. ಇದು ನಮ್ಮ ಪಾಲಕರ ರೀತಿ.

ಪ್ರತಿಯೊಬ್ಬ ತಮಿಳ ದಿನಕ್ಕೆ ಕನಿಷ್ಟಪಕ್ಷ ತಮಿಳು ಭಾಷೆಯ ಸರಾಸರಿ ಆರು ವರ್ತಮಾನ ಪತ್ರಿಕೆಗಳನ್ನು ಓದುತ್ತಾನಂತೆ. ಅದೇ ರೀತಿ ಕೇರಳೀಯರು ಪ್ರತಿದಿನ ೭೫ ಪೈಸೆಯನ್ನಾದರೂ ಸಾಹಿತ್ಯಕ್ಕಾಗಿ ಖರ್ಚು ಮಾಡುತ್ತಾರಂತೆ. ಹೀಗಿರುವಾಗ ಮಾನ ಹೆಚ್ಚಿಸುವ ಉಡುಗೆ-ತೊಡುಗೆಗಳ ಜೊತೆಗೆ ಬುದ್ಧಿ ಹೆಚ್ಚಿಸುವ ಪುಸ್ತಕಗಳ ಕೊಳ್ಳುವಿಕೆ, ಓದುವ ಚಟ ಕನ್ನಡಿಗರಲ್ಲಿಂದು ಬೆಳೆಗು ಬರಬೇಕಾಗಿದೆ. ಕೊಳ್ಳುವವರಿಲ್ಲದಾಗ ಮುದ್ರಣವಾಗುವ ಪ್ರತಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಜೊತೆಗೆ ಉತ್ಪಾದನಾ ವೆಚ್ಚ ಏರುತ್ತದೆ. ಹೀಗಾಗಿ ಸಹಜವಾಗಿಯೇ ಬಣ್ಣ ಬಣ್ಣದ ಚಿತ್ರಗಳಿಂದ ಕೂಡಿದ ಮಕ್ಕಳಪುಸ್ತಕಗಳ ಬೆಲೆ ಜನಸಾಮಾನ್ಯರ ಕೈಗೆ ಎಟುಕದಂತಾಗುತ್ತದೆ. ಉದಾಹರಣೆಗೆ ಚಂದಮಾಮಾ ಮಕ್ಕಳ ಮಾಸಪತ್ರಿಕೆಯನ್ನು ತೆಗೆದುಕೊಳ್ಳಬಹುದು. ನಾಗಿರೆಡ್ಡಿಯವರು ಮೊದಲು ಇದನ್ನು ತೆಲಗು ಭಾಷೆಯಲ್ಲಿ ಮುದ್ರಿಸುತ್ತಾರೆ. ನಂತರ ಚಿತ್ರಗಳ ಅವೇ ಬ್ಲಾಕುಗಳನ್ನು ಉಪಯೋಗಿಸಿ ಇತರ ಭಾಷೆಗಳಲ್ಲಿ ಚಂದಮಾಮಾವನ್ನು ಹೊರತರುತ್ತಾರೆ. ದೇಶದಾದ್ಯಂತ ಇವುಗಳ ಲಕ್ಷಗಟ್ಟಲೇ ಪ್ರತಿಗಳು ಮಾರಾಟವಾಗುವುದರಿಂದ ಉತ್ಪಾದನಾ ವೆಚ್ಚ ತಗ್ಗಿ, ಬೆಲೆ ಹಿಡಿತಕ್ಕೆ ಸಿಕ್ಕುತ್ತದೆ. ಈ ಮಾತುಗಳನ್ನು ಪಾಲಕರು-ಪ್ರಕಾಶಕರು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಮಾಡಿದ ಸೊಗಸಾದ ಅಡಿಗೆ ಹಾಳಾಗಬಾರದು. ಹಸಿದು ಕಂಗಾಲಾಗಿ ಕುಳಿತ ಮಕ್ಕಳಿಗೆ ಅವನ್ನು ಸಮರ್ಥವಾಗಿ ಉಣಬಡಿಸುವಂತಾಗಬೇಕು.

● ●

ಅಬ್ಬೆಯ ಮಗ್ಗುಲಲ್ಲಿ

—ಶ್ರೀಪಾದ ಹೆಗಡೆ ಕಣ್ಣಿ

ಅಬ್ಬೆಯ ಮಗ್ಗುಲಲ್ಲಿ ಹಿತವಾಗಿ ಒಪ್ಪಿಕೊಂಡ
ಕತ್ತಲಲ್ಲಿ ಕೋಟಿ ಕೋಟಿ ಚುಕ್ಕೆ ಮಿನುಗಿದ ಖುಷಿ
ಜಗುಲಿ ಮೂಲೆ ತುಂಬ ಹಾಗೇ ಇದೆ.
ಚುಕ್ಕೆಗಳ ಎಣಿಕೆ ಕಲಿತದ್ದು ಸೂರ್ಯ ಉರಿಯ ಬಂದಂತೆ
ಬಿಟ್ಟಾಗ, ಭಾಗಲಬ್ಧದ ಶೇಷ ಪ್ರಶ್ನೆ
ಅವಶೇಷ
ಅವುಗಳನ್ನು ಹಗಲಲ್ಲಿ ಎಣಿಸಬೇಕಾಗುತ್ತದೆಂದು
ಅನಿಸಿರಲಿಲ್ಲ ಖರೆಯೆಂದರೆ ಉದುರೇ ಹೋಗುವ ಅವು
ಎಣಿಕೆ ತಪ್ಪಿಸುತ್ತವೆಂದೂ ಗೊತ್ತಿರಲಿಲ್ಲ; ಒಂದೊಂದಾಗಿ
ಹೊಟ್ಟೆಯಲ್ಲೇ ಒಟ್ಟಿದಾಗಿನ ಭಯಂಕರ
ಅರಿವಿರಲಿಲ್ಲ ಕೇಳಿದ ಚಿಕ್ಕ ಬಾಲೆಗೆ ಅನ್ನುತ್ತೇನೆ
ನೋಡುಮರಿ ಚುಕ್ಕೆ ಕಣ್ಣಿನಂತೇ ಇದೆ.
ಒಂದೊಂದು ನೋಡುತ್ತ ನಿಂತಾಗ
ನನಗೆ ಅದರ ಎಳೆ ಕಣ್ಣುಗಳೂ ಭಯಂಕರ ಅನ್ನಿಸಿ
"ಮುಚ್ಚಿಕೋ ಮರಿ" ಅಂದೆ
‘ಹ್ಞ’ ಎಂದು ಬಾಯಿತೆರೆದಾಗ ಬಾವಿಯಾಳದಲ್ಲಿ
ಗಲಿಬಿಲಿ ಸಾವಿರ
"ಮುಚ್ಚಿಕೋ ಮರಿ" ಅಂದೆ

*ಮಕ್ಕಳ ಸಾಹಿತ್ಯಕ್ಕೆ ಎಂ. ಎಸ್. ಪುಟ್ಟಣ್ಣನವರ ಕೊಡುಗೆ

—ವರದರಾಜ ಹುಯಿಲಗೋಳ

೧೯ನೆಯ ಶತಮಾನದಲ್ಲಿಯೇ ಹೊಸಗನ್ನಡ ಸಾಹಿತ್ಯಕ್ಕೆ ನಾಂದಿ ಹೇಳಿದವರಲ್ಲಿ ಎಂ. ಎಸ್. ಪುಟ್ಟಣ್ಣ ಅಗ್ರಗಣ್ಯರು. ಈ ಶತಮಾನದ ಆದಿಭಾಗದಲ್ಲಿ ಅವರು ಬರೆದ 'ಮಾಡಿದ್ದುಣ್ಣೋ ಮಹರಾಯ' ಹಾಗೂ 'ಮುಸುಕು ತೆಗೆಯೋ ಮಾಯಾಂಗನೆ' ಎಂಬ ಸ್ವತಂತ್ರ ಸಾಮಾಜಿಕ ಕಾದಂಬರಿಗಳು ಎಂ. ಎಸ್. ಪುಟ್ಟಣ್ಣನವರ ಹೆಸರನ್ನು ಸಾಹಿತ್ಯ ಕ್ಷೇತ್ರದಲ್ಲಿ ಅಮರವಾಗಿಸಿವೆ. ಹಿರಿಯರಿಗಾಗಿ ಸಾಕಷ್ಟು ಸಾಹಿತ್ಯ ಕೃತಿಗಳನ್ನು ರಚಿಸಿದ ಪುಟ್ಟಣ್ಣನವರು, ಪುಟ್ಟ ಪುಟಾಣಿಗಳಿಗೂ ಅಚ್ಚು ಮೆಚ್ಚಿನವರು. ಮಕ್ಕಳಿಗಾಗಿ ಅವರು ಬರೆದು ಪ್ರಕಟಿಸಿದ ಕೃತಿಗಳು ಅಸಂಖ್ಯಾತವಾಗಿವೆ. ಇಷ್ಟೇ ಅಲ್ಲದೆ, ಹೊಸಗನ್ನಡದ ಮಕ್ಕಳ ಸಾಹಿತ್ಯಕ್ಕೆ ಇವರಷ್ಟು ಸೇವೆ ಸಲ್ಲಿಸಿದವರು ಇವರಿಗಿಂತ ಮೊದಲು ಯಾರೂ ಇಲ್ಲವೆಂದೂ, ಮಕ್ಕಳ ಸಾಹಿತ್ಯದ ನಿರ್ಮಿತಿಯಲ್ಲಿ ಇವರೇ ಪ್ರಪ್ರಥಮರೆಂದೂ ಹೇಳಬೇಕು.

ಎಂ. ಎಸ್. ಪುಟ್ಟಣ್ಣ ಎಂದರೆ ಮೈಸೂರಿನ ಸೂರ್ಯನಾರಾಯಣ ಶಾಸ್ತ್ರಿಗಳ ಮಗ ಪುಟ್ಟಣ್ಣ ! ಸೂರ್ಯನಾರಾಯಣ ಶಾಸ್ತ್ರಿಗಳು ಚೆನ್ನಪಟ್ಟಣದವರೇನೋ ನಿಜ. ಆದರೆ ಪುಟ್ಟಣ್ಣ ಹುಟ್ಟಿದ್ದು ಮೈಸೂರಲ್ಲಿ, ೧೮೫೪ರ ಬಲಿಪಾಡ್ಯಮಿಯ ದಿನ. ಹುಟ್ಟಿದ ಹತ್ತು ದಿನಗಳಲ್ಲಿಯೇ ತಾಯಿಯ ಮರಣ. ತಂದೆಗೆ ತಕ್ಕ ಅನುಕೂಲತೆಗಳು ಇರಲಿಲ್ಲವಾದ್ದರಿಂದ, ತಾಯಿಯ ಮನೆಯಲ್ಲಿಯೇ ಮಗು ಮೈಸೂರಲ್ಲಿ ಬೆಳೆಯಿತು. ಹೀಗೆ ಪುಟ್ಟಣ್ಣ; ಮೈಸೂರಿನ ಪುಟ್ಟಣ್ಣ ಆದರು.

ಪುಟ್ಟಣ್ಣನವರ ಪ್ರಾಥಮಿಕ ಶಿಕ್ಷಣವಾದದ್ದು ಮರಾಠಿಯಲ್ಲಿ ಎಂಬುದು ಅಚ್ಚರಿಯ ಸಂಗತಿ. ಮರಾಠಿ ಪಂತೋಜಿಗಳ ಮಠದಲ್ಲಿ ಅವರ ವಿದ್ಯಾಭ್ಯಾಸದ

* ಆಕಾಶವಾಣಿ, ಧಾರವಾಡ ಅವರ ಕೃಪೆಯಿಂದ

ಪ್ರಾರಂಭ. ಅವರ ಲೆಕ್ಕಗಳೆಲ್ಲ ಮುರಾರಿಯಲ್ಲಿಯೇ! ಹೇಗೋ ತಮ್ಮ ವಿದ್ಯಾಭ್ಯಾಸ ವನ್ನು ಮೈಸೂರಲ್ಲಿಯೇ ಮುಂದುವರೆಸಿ, ಅವರು ಬಿ. ಎ. ವರೆಗೂ ಬಂದರು. ಆದರೆ ಮೈಸೂರಲ್ಲಿಯ ಭೀಕರ ಕ್ಷಾಮದಿಂದ, ಅವರು ಕಲಿಯುವುದನ್ನು ಬಿಡಬೇಕಾಯಿತು.

೧೮೭೮ ರಲ್ಲಿ ಅವರು ಕೋಲಾರ ಹಾಯಸ್ಕೂಲದಲ್ಲಿ ಶಿಕ್ಷಕರಾಗಿ, ಅಲ್ಲಿಯೇ ಎಂಟು ವರ್ಷವಿದ್ದರು. ಇದೇ ಸಮಯದಲ್ಲಿ ಅವರು ಬಿ. ಎ. ಪಾಸು ಮಾಡಿ ಕೊಂಡರು. ಉಪಾಧ್ಯಾಯ ವೃತ್ತಿಯನ್ನು ಬಿಟ್ಟಮೇಲೆ ಸುಮಾರು ಒಂಬತ್ತು ವರ್ಷ ಮೈಸೂರು ಚೀಫ್ ಕೋರ್ಟಿನಲ್ಲಿ ಭಾಷಾಂತರಕಾರರಾಗಿ ಕೆಲಸಮಾಡಿದರು. ಅನಂತರ ಅಮಲ್ದಾರರಾದರು. ಚಿತ್ರದುರ್ಗ ಮೊದಲಾದ ಮೈಸೂರು ಸಂಸ್ಥಾನದ ಊರುಗಳಲ್ಲಿ ಸೇವೆ ಸಲ್ಲಿಸಿ, ೧೯೦೮ ರಲ್ಲಿ ನಿವೃತ್ತರಾಗಿ, ಕೆಲವು ಕಾಲ ವಕೀಲರಾಗಿ ಕೆಲಸ ಮಾಡಿದರು.

೧೮೮೧ ರಲ್ಲಿ ಮೈಸೂರು ಸಂಸ್ಥಾನದ ರಾಜ್ಯಭಾರವನ್ನು ವಹಿಸಿಕೊಂಡ ಚಾಮರಾಜ ಒಡೆಯರ ಅವರು ಕನ್ನಡ ಭಾಷೆ ಹಾಗೂ ಸಾಹಿತ್ಯಗಳ ಅಭಿವೃದ್ಧಿಗೆ ತುಂಬಾ ಉತ್ತೇಜನ ಕೊಟ್ಟರು. ಇಂಥ ವಾತಾವರಣದಲ್ಲಿ ಪ್ರಭಾವಿತರಾದವರಲ್ಲಿ ಪುಟ್ಟಣ್ಣನವರೂ ಒಬ್ಬರು. ದಿವಾಣರಾವ ರಂಗಾಚಾರ್ಲು ಹಾಗೂ ವಿದ್ಯಾಭ್ಯಾಸದ ನಿರ್ದೇಶಕರಾದ ರೈಸ್ ಅವರಿಂದ ಪ್ರೋತ್ಸಾಹಿತರಾಗಿ ಪುಟ್ಟಣ್ಣನವರು ಉಪಾಧ್ಯಾಯ ರಾಗಿದ್ದಾಗ ಕನ್ನಡ ಬರವಣಿಗೆಯನ್ನು ಪ್ರಾರಂಭಿಸಿದರು. ಪುಸ್ತಕಗಳ ರಚನೆಯೇ ಅವರ ಮೊದಲ ಬರವಣಿಗೆ. ಈ ಪಠ್ಯಪುಸ್ತಕಗಳು ಮಕ್ಕಳ ವಿದ್ಯಾಭ್ಯಾಸಕ್ಕೆ ಇದ್ದುದ ರಿಂದ, ಮಕ್ಕಳ ಅಭಿವೃದ್ಧಿಯ ದೃಷ್ಟಿಯಿಂದಲೇ ಪುಟ್ಟಣ್ಣನವರು ಅವುಗಳನ್ನು ರಚಿಸಿದರು.

ಎಂ. ಎಸ್. ಪುಟ್ಟಣ್ಣನವರ ಜೊತೆಗೆ ಎಂ. ಎಸ್. ಶ್ರೀನಿವಾಸ ಅಯ್ಯಂಗಾರ ಅವರ ಹೆಸರನ್ನು ಸ್ಮರಿಸಬೇಕು. ಇವರಿಬ್ಬರೂ ಕೂಡಿಕೊಂಡು ಕನ್ನಡದ ಸೇವೆಗೈದಿ ರುವರು; ಬೆಂಗಳೂರಲ್ಲಿ ಹೊಸಗನ್ನಡದ ಪ್ರಗತಿಗಾಗಿ ದುಡಿದಿರುವರು. ಎಂ. ಎಸ್. ಪುಟ್ಟಣ್ಣ ಹಾಗೂ ಎಂ. ಎಸ್. ಶ್ರೀನಿವಾಸ ಅಯ್ಯಂಗಾರ ಅವರು ಕೂಡಿ ಬರೆದ 'ಹಿಂದೂ ಚರಿತ್ರ ದರ್ಪಣ' ದ ನಿರೂಪಣೆಯು ಪಠ್ಯ ಪುಸ್ತಕಕ್ಕೆ ಅನುಗುಣವಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯವರಿಗಾಗಿ ಎಂ. ಎಸ್. ಪುಟ್ಟಣ್ಣನವರು ಬರೆದ 'ಕನ್ನಡ ಒಂದನೆಯ ಪುಸ್ತಕ' ವು ಒಂದು ಒಳ್ಳೇ ಕೃತಿಯಾಗಿದೆ. ಕನ್ನಡ ಪಠ್ಯ ಪುಸ್ತಕಗಳನ್ನು ಹೊಸದಾಗಿಯೇ ಪ್ರಕಟಿಸಿದ ಆ ಕಾಲದಲ್ಲಿ ಇದೊಂದು ಹೊಸ ಸಾಹಸದ ಪುಸ್ತಕ. ಹೂ ಹಣ್ಣುಗಳನ್ನು, ಗಿಡ ಮರಗಳನ್ನು, ಪಶುಪಕ್ಷಿಗಳನ್ನು, ಜನರ ರೀತಿನೀತಿಗಳನ್ನು ಬಹು ಸುಲಭವಾದ ಕನ್ನಡದಲ್ಲಿ ಪುಟ್ಟಣ್ಣನವರು ಬರೆದಿರು

ವರು. ಚಿಕ್ಕಮಕ್ಕಳಿಗೆ ಸಹಜವಾಗಿ ತಿಳಿಯುವಂತೆ ಆಕರ್ಷಕವಾದ ಸರಳ ಶೈಲಿಯಲ್ಲಿ ಎಲ್ಲ ವಿಷಯಗಳನ್ನು ವಿವರಿಸಿರುವರು. ಇದೇ ಪಠ್ಯದಲ್ಲಿ ಎಂ. ಎಸ್. ಪುಟ್ಟಣ್ಣನವರು ಸುಪ್ರಸಿದ್ಧ ಗೋವಿನ ಕಥೆಯನ್ನು ಸೇರಿಸಿರುವರು. ಗದ್ಯ ಹಾಗೂ ಪದ್ಯಗಳಿಂದ ಕೂಡಿಕೊಂಡ ಈ ಪುಸ್ತಕವು ಅತ್ಯಂತ ಜನಪ್ರಿಯವಾಗಿದ್ದು, ಸುಮಾರು ೩೦ ಮುದ್ರಣಗಳನ್ನು ಕಂಡಿದೆ.

ಎಂ. ಎಸ್. ಪುಟ್ಟಣ್ಣನವರಿಗೆ ಮಕ್ಕಳಿಗೆ ನೀತಿಯನ್ನು ಬೋಧಿಸುವುದು ಬಹುವಾಗಿ ಸೇರುತ್ತಿದ್ದಿತು. ೧೮೮೨ – ೧೮೮೩ ನೆಯ ವರ್ಷಾವಧಿಯಿಂದ ಬೆಂಗಳೂರಿಂದ ಪ್ರಕಟವಾಗುತ್ತಿದ್ದ 'ಹಿತಬೋಧಿನಿ' ಪತ್ರಿಕೆಯ ಪ್ರಾರಂಭದ ಸಂಪಾದಕರು ಪುಟ್ಟಣ್ಣ ಹಾಗೂ ಎಂ. ಎಸ್ ಶ್ರೀನಿವಾಸ ಅಯ್ಯಂಗಾರ ಅವರಿದ್ದರು. ಆಗ ತಮ್ಮ ಪತ್ರಿಕೆಯಲ್ಲಿ ಅವರು ಹೀಗೆ ಬರೆದಿರುವರು –"ಜನರಿಗೆ ತಿಳುವಳಿಕೆ ಹೆಚ್ಚಿದಷ್ಟು ಸೌಖ್ಯ ಹೆಚ್ಚುವುದು ಈ ಹಿತಬೋಧಿನಿಯ ಮೂಲಕ ಜನಗಳಿಗೆ ಕೈಲಾದ ಮಟ್ಟಿಗೆ ತಿಳುವಳಿಕೆಯನ್ನು ಹೆಚ್ಚಿಸಬೇಕೆಂದು ಯತ್ನಿಸಿದ್ದೇವೆ.............. ವಿನೋದಕರವಾಗಿಯೂ' ನೀತಿ ಪ್ರದರ್ಶಕವಾಗಿಯೂ ಇರುವ ಕೆಲವು ಕಥೆಗಳೂ ಇದರಲ್ಲಿ ಬರೆಯಲ್ಪಡುವವು."

ಪತ್ರಿಕೆಯಲ್ಲಿ ಬಂದಿರುವ ಈ ನುಡಿಗಳು ಎಂ. ಎಸ್. ಪುಟ್ಟಣ್ಣನವರ ಮನೋಭಾವವನ್ನು ಚಿತ್ರಿಸುತ್ತವೆ. ಪುಟ್ಟಣ್ಣನವರು ಭಾರತೀಯ ಸಂಸ್ಕೃತಿಯಲ್ಲಿ ಅಚಲ ನಿಷ್ಠೆಯುಳ್ಳವರು. ನಮ್ಮ ಮಕ್ಕಳಿಗೆ ಭಾರತೀಯ ಸಂಸ್ಕೃತಿಯ ತತ್ತ್ವಗಳನ್ನು ತಿಳಿ ಹೇಳಬೇಕೆಂಬ ಹಂಬಲವುಳ್ಳವರು. ನಮ್ಮ ಮಕ್ಕಳು ಒಳ್ಳೇ ನೀತಿಗಳನ್ನು ಮನನ ಮಾಡಿಕೊಂಡು, ಆದರ್ಶ ನಾಗರಿಕರಾಗಿ ಬೆಳೆಯಬೇಕೆಂಬ ಮನಸ್ಸುಳ್ಳವರು. ಈ ತಮ್ಮ ಉದ್ದೇಶವನ್ನು ಈಡೇರಿಸಲು, ಮಕ್ಕಳ ಕುತೂಹಲ ಕೆರಳಿಸುವ ಕಥಾ ಸಾಹಿತ್ಯ ರೂಪವನ್ನು ಅವರು ಕೈಗೆತ್ತಿಕೊಂಡರು.

ಈ ದೃಷ್ಟಿಯಿಂದ 'ನೀತಿ ಚಿಂತಾಮಣಿ' ಎಂ. ಎಸ್. ಪುಟ್ಟಣ್ಣನವರ ಗಮನಾರ್ಹವಾದ ಕೃತಿಯಾಗಿದೆ. ಇದರಲ್ಲಿ ೧೫೦ ಚಿಕ್ಕ ಚಿಕ್ಕ ಕತೆಗಳಿವೆ. ಪುರಾಣ, ಆ ಶಾಸ್ತ್ರ ಕಾವ್ಯ, ಇತಿಹಾಸ ಹೀಗೆ ಹಲವಾರು ಮೂಲಗಳಿಂದ ಈ ಕೃತಿಗಳನ್ನು ಆಯ್ದು ಸಂಗ್ರಹಿಸಿರುವರು. ಮೈಸೂರು ಮಹಾರಾಣಿಯರ ಬಾಲಿಕಾ ಪಾಠ ಶಾಲೆಯ ವಿದ್ಯಾರ್ಥಿನಿಯರಿಗಾಗಿ ೧೮೮೪ ರಲ್ಲಿ ಈ ಕೃತಿ ಮೊಟ್ಟ ಮೊದಲು ರಚಿತವಾಗಿದೆ. ಮುಂದೆ ಸುಮಾರು ಮೂವತ್ತು ಬಾರಿ ಹೊಸ ಮುದ್ರಣಗಳನ್ನು ಕಂಡಿದೆ.

'ನೀತಿ ಚಿಂತಾಮಣಿ'ಗಿಂತ ಮೊದಲು 'ಕಥಾಸಪ್ತತಿ' ಎಂಬ ಸಂಗ್ರಹವಿದ್ದಿತು; ಮಿಶನ್ನಿನ ಡಿ. ಸಾಂಡರ್ಸನ್ ಎಂಬವನು ವಿದೇಶಿ ಬಾಂಧವರ ಕನ್ನಡ ಅಭ್ಯಾಸಕ್ಕಾಗಿ

'ಕಥಾಸಂಗ್ರಹ'ದ ಎರಡು ಸಂಪುಟ ಪ್ರಕಟಿಸಿದ್ದನು. ಈ ಎಲ್ಲ ಕಥಾಸಂಗ್ರಹಗಳು ಜನಪ್ರಿಯವಾಗಿದ್ದವು. ಬಹುಶಃ ಈ ಕ್ಷೇತ್ರದಲ್ಲಿ ತಾವೂ ಸ್ಪರ್ಧಿಸಬೇಕೆಂದೋ ಏನೋ, ಎಂ. ಎಸ್. ಪುಟ್ಟಣ್ಣನವರು 'ನೀತಿ ಚಿಂತಾಮಣಿ'ಯ ಮೂರು ಸಂಪುಟಗಳನ್ನು ಸಿದ್ಧಗೊಳಿಸಿದರು.

'ನೀತಿ ಚಿಂತಾಮಣಿ'ಯಲ್ಲಿ ಬಾಲ್ಯ, ಯೌವನ ಹಾಗೂ ಅವರ ವಯಸ್ಸು ಎಂಬ ಮೂರು ಭಾಗಗಳಿವೆ. ವಿಷಯಗಳಲ್ಲಿ ಸಾಕಷ್ಟು ವಿವಿಧತೆ ಇದೆ. ಸತ್ಯ, ವಾಗ್ದಾನ, ಹೊಟ್ಟೆಕಿಚ್ಚು, ಚಾಡೀಮಾತು, ದೂಷಣೆ, ಪ್ರಾಣಿಹಿಂಸೆ, ಧರ್ಮಸೂಕ್ಷ್ಮ, ನ್ಯಾಯ ವಿಮರ್ಶೆ, ಸ್ವಾಮಿ ಕಾರ್ಯ ನಿರ್ವಾಹ, ರಾಜಭಕ್ತಿ, ದೇವರಲ್ಲಿ ಭಕ್ತಿ, ಮೈತ್ರಿ, ಕೃತಜ್ಞತೆ ಹೀಗೆ ಬೇರೆ ಬೇರೆ ವಿಷಯಗಳನ್ನು ಕುರಿತು ಕತೆಗಳಿವೆ.

ಈ ನೀತಿ ಕತೆಗಳನ್ನು ಹೇಳುವಾಗ ಎಂ. ಎಸ್. ಪುಟ್ಟಣ್ಣನವರು ತಮ್ಮದೊಂದು ವಿಶಿಷ್ಟವಾದ ರೀತಿಯನ್ನು ಅನುಸರಿಸಿದ್ದಾರೆ. ವಿಷಯವನ್ನು ಮೊದಲು ಬರೆದಿರುವರು; ಅದರ ಕೆಳಗೆ ಆ ವಿಷಯಕ್ಕೆ ಅನ್ವಯಿಸುವ ಒಂದು ಸಂಸ್ಕೃತ ಶ್ಲೋಕವನ್ನು ಕೊಟ್ಟಿರುವರು; ಸಂಸ್ಕೃತ ಶ್ಲೋಕವಿರದಿದ್ದರೆ, ಕನ್ನಡದ ನುಡಿಯಾದರೂ ಇದೆ. ಸಂಸ್ಕೃತ ಶ್ಲೋಕದ ಅರ್ಥವಾಗಬೇಕೆಂದು, ಅದರ ಅನುವಾದವನ್ನು ಕನ್ನಡದಲ್ಲಿ ಬರೆದಿರುವರು;

ಒಂದೊಂದು ವಿಷಯವನ್ನು ಕುರಿತು ಸರ್ವಸಾಮಾನ್ಯವಾಗಿ ಎರಡು ಕತೆಗಳು ಬಂದಿವೆ. ಕತೆಯ ಮುಕ್ತಾಯದಲ್ಲಿ ತಾವು ಹೇಳಬೇಕಾದ ನೀತಿಯ ಮಾತನ್ನು ಸ್ಪಷ್ಟವಾಗಿ ತಿಳಿಸಿರುವರು. ಅನಂತರ ಮಕ್ಕಳು ಇನ್ನೂ ಹೆಚ್ಚು ಮನನಮಾಡಿಕೊಳ್ಳಬೇಕೆಂದು, ನೀತಿಯ ಮಾತಿರುವ ೩ ೪ ವಾಕ್ಯಗಳನ್ನು ಕೊಟ್ಟಿರುವರು. ಇದು ನೀತಿ ಚಿಂತಾಮಣಿಯಲ್ಲಿ ರಚಿತವಾದ ಕತೆಗಳ ರೀತಿ.

ಪುರಾಣೇತಿಹಾಸಗಳಿಂದ ಕಥಾವಸ್ತುವನ್ನು ಆಯ್ಕೆ ಮಾಡಿದ್ದರೂ, ಕತೆ ಹೇಳುವ ರೀತಿ ಎಂ. ಎಸ್. ಪುಟ್ಟಣ್ಣನವರದೇ. ಕತೆಗಳಲ್ಲಿ ಚಿಕ್ಕ ಚಿಕ್ಕ ವಾಕ್ಯಗಳಿವೆ. ಅವು ಅತ್ಯಂತ ಸರಳವಾಗಿವೆ.

'ಸಗರ ಮತ್ತು ಅಸಮಂಜ' ಎಂಬ ಪುರಾಣ ಕತೆಯನ್ನೇ ನೋಡಿ. ಅದರ ಪ್ರಾರಂಭ ಹೀಗಿದೆ—"ಸಗರ ಚಕ್ರವರ್ತಿಗೆ ಅಸಮಂಜನೆಂಬ ಮಗನಿದ್ದನು. ಈ ಅಸಮಂಜನು ಬಾಲ್ಯದಿಂದಲೂ ತುಂಟನಾಗಿದ್ದನು. ಅನೇಕ ಕೆಟ್ಟ ಕೆಲಸಗಳನ್ನು ಮಾಡುತ್ತಿದ್ದನು....... .... ." ಇದೇ ರೀತಿ ಕತೆ ಸಾಗುತ್ತದೆ.

ರಾಮಾಯಣ, ಮಹಾಭಾರತ, ಹಿತೋಪದೇಶ, ಇತಿಹಾಸ ಮುಂತಾದವುಗಳಲ್ಲಿಯ ಕತೆಗಳೂ ಅಲ್ಲದೆ, ಹಲವು ಸ್ವಂತ ಕತೆಗಳೂ ಇವೆ. ಆದರೆ ಇವು ತೀರ ಕಡಿಮೆ. ಸಾಮಾಜಿಕ ಕತೆಗಳಲ್ಲಿ ಇಂಥ ಕೆಲವನ್ನು ನಾವು ಕಾಣಬಹುದು.

'ತುಂಟ ಹುಡುಗ' ಎಂಬ ಕತೆ ಈ ದೃಷ್ಟಿಯಿಂದ ಮಹತ್ವದ್ದು. ಬಹುಚೇಷ್ಟೆ ಮಾಡುತ್ತಿದ್ದ ತುಂಟ ಹುಡುಗನನ್ನು, ತಂದೆಯು ಮನೆಯಿಂದ ಸೋದರಮಾವ ಕರೆದುಕೊಂಡು ಹೋಗುವನು. ಆ ಹುಡುಗನ ಚೇಷ್ಟೆಯ ಸ್ವಭಾವವನ್ನು ತಿದ್ದ ಬೇಕೆಂಬುದೇ ಸೋದರಮಾವನ ಉದ್ದೇಶ ದಾರಿಯಲ್ಲಿ ನದಿ ದಾಟಬೇಕಾಗಿತ್ತು ಹರಿಗೋಲಿನಲ್ಲಿ. ಆ ಹರಿಗೋಲಿನಲ್ಲಿ ಕೋತಿಯನ್ನು ಕುಣಿಸುವವನು ಕೋತಿಯೊಡನೆ ಕುಳಿತಿದ್ದನು. ಅವನ ಮಗ್ಗುಲಲ್ಲಿ ಹಾವಿನ ಪೆಟ್ಟಿಗೆಯಿದ್ದಿತು. ತುಂಟ ಹುಡುಗ ಸುಮ್ಮನೇ ಕೂಡಲಿಲ್ಲ; ಒಂದು ಹಂಜೀ ಕಡ್ಡಿಯನ್ನು ಎಳೆದುಕೊಂಡು ಕೋತಿಯ ಹಿಂದುಗಡೆ ಚುಚ್ಚಿದ. ಆಗ ಆ ಕಪಿಯು ಹಾರಾಡುತ್ತ ಎಲ್ಲರ ಮೇಲೂಬಿತ್ತು. ಆ ಗದ್ದಲದಲ್ಲಿ ಹಾವಿನ ಪೆಟ್ಟಿಗೆಯ ಮುಚ್ಚಳ ತೆರೆಯಿತು. ಹಾವು ಭುಸುಗುಟ್ಟುತ್ತ ಮೇಲಕ್ಕೆ ಬಂದಿತು. ಹರಿಗೋಲದಲ್ಲಿದ್ದ ಜನರೆಲ್ಲ 'ಓಡಿ ಒಂದೇ ಕಡೆಗೆ ಕೂಡಿದರು. ಹರಿಗೋಲು ಮಗುಚಿಕೊಂಡಿತು. ಎಲ್ಲರೂ ಸತ್ತರು. ಆ ಹುಡುಗನ ಕೆಟ್ಟ ಚೇಷ್ಟೆಗೆ ಇದೇ ಫಲ.

'ತಿಂಡಿಪೋತನಾದ ಬ್ರಾಹ್ಮಣ'ನದೂ ಇದೇ ರೀತಿಯಾಗಿ ನಕ್ಕು ನಗಿಸುವ ಕತೆಯಾಗಿದೆ. ಹಲವಡೆ ಈ ಕತೆಗಳ ಶೈಲಿ ಗಡುಚಾಗಿ ಬರಬಹುದು. ಅಂಥ ಉದಾಹರಣೆಗಳೂ ಇವೆ. ಆದರೆ ಒಟ್ಟಾರೆ ನೋಡಿದರೆ, ಮಕ್ಕಳಿಗೆ ಹಿಡಿಸುವ ಕಥಾವಸ್ತು, ಹಾಗೂ ಶೈಲಿ ಎಂ. ಎಸ್. ಪುಟ್ಟಣ್ಣನವರಲ್ಲಿ ಎದ್ದು ಕಾಣುತ್ತದೆ. ವಿವಿಧ ಮೂಲಗಳಿಂದ ಕಥಾವಸ್ತುವನ್ನು ತೆಗೆದುಕೊಂಡಿದ್ದರೂ, ನಿರೂಪಣೆ ಸ್ವತಂತ್ರ ವಾಗಿದ್ದು, ಎಂ. ಎಸ್. ಪುಟ್ಟಣ್ಣನವರ ಸ್ವತಂತ್ರ ಕೃತಿಗಳಂತೆಯೇ ಇವೆ. ಒಂಬತ್ತು ದಶಕಗಳಿಗೂ ಮಿಕ್ಕಿ ಈ 'ನೀತಿ ಚಿಂತಾಮಣಿ" ಕತೆಗಳು ಮಕ್ಕಳ ಮನಸ್ಸನ್ನು ಮುದಗೊಳಿಸಿವೆ. ಅನೇಕ ಮುದ್ರಣಗಳನ್ನು ಕಂಡ ಈ 'ನೀತಿ ಚಿಂತಾಮಣಿ' ಕತೆಗಳು ಮಕ್ಕಳ ಮನಸ್ಸನ್ನು ಮುದಗೊಳಿಸಿವೆ. ಅನೇಕ ಮುದ್ರಣಗಳನ್ನು ಕಂಡ ಈ 'ನೀತಿಚಿಂತಾಮಣಿ' ಮಕ್ಕಳ ಸಾಹಿತ್ಯದಲ್ಲಿಯೇ ಒಂದು ದಾಖಲೆಯನ್ನು ಸ್ಥಾಪಿಸಿದೆ.

'ನೀತಿ ಚಿಂತಾಮಣಿ' ಯ ಎಲ್ಲ ಕತೆಗಳನ್ನೂ ಓದಿ ಮುಗಿಸಿದ ಮಕ್ಕಳು, ಅನಂತರ ಎಂ. ಎಸ್. ಪುಟ್ಟಣ್ಣನವರ 'ಸುಮತಿ ಮದನಕುಮಾರರ ಚರಿತ್ರೆ'ಯನ್ನು ಓದಬೇಕು. ಸುಮಾರು ೧೨ - ೧೩ ವರುಷದ ಮಕ್ಕಳಿಗೆ ಈ ಚರಿತ್ರೆಯು ಓದುವಿಕೆಯು ಉಚಿತವಾಗಿದೆ. ಈ ಗ್ರಂಥದಲ್ಲಿಯೂ ನೀತಿಯೇ ಪ್ರಾಮುಖ್ಯತೆ ಪಡೆದಿದೆ.

'ಸುಮತಿ ಮದನಕುಮಾರರ ಚರಿತ್ರೆ' ಎಂ. ಎಸ್. ಪುಟ್ಟಣ್ಣನವರ ಸ್ವತಂತ್ರ ವಾದ ಕೃತಿಯಲ್ಲ; ಥಾಮಸ್‌ಡೇ ಎಂಬವನು ಇಂಗ್ಲೀಷಿನಲ್ಲಿ ಬರೆದ 'ಸ್ಯಾಂಡಫರ್ಡ ಅಂಡ್ ಮರ್ಟನ್' ಎಂಬ ಗ್ರಂಥದ ಆಧಾರದಿಂದ ರಚಿತವಾಗಿದೆ. ಕಥೆಗಳ ಮೂಲಕ ಸದ್ಗುಣ

ಗಳನ್ನು ಬೋಧಿಸುವುದು ಥಾಮಸ್ ಡೇಯ ಉದ್ದೇಶವಾಗಿದ್ದಿತು. ಎಂ. ಎಸ್. ಪುಟ್ಟಣ್ಣನವರು ಈ ಉದ್ದೇಶವನ್ನು ಮೆಚ್ಚಿಕೊಂಡು, ಕನ್ನಡಕ್ಕೆ ಈ ಗ್ರಂಥವನ್ನು ರೂಪಾಂತರಿಸಿದ್ದಾರೆ. ಕರ್ನಾಟಕದ ವಾತಾವರಣದಲ್ಲಿ ಈ ಕಾದಂಬರಿಯ ಕತೆಯನ್ನು ಚಿತ್ರಿಸಿದ್ದಾರೆ.

ಪಂಚತಂತ್ರದ ಕಥಾಮುಖವಿದ್ದಂತೆಯೇ, ಈ ಕಾದಂಬರಿಯ ಕಥಾವಸ್ತುವಿದೆ. ಪಾಳೆಯಗಾರನಾದ ಅಂಗರಾಜನಿಗೆ ಮದನಕುಮಾರನೆಂಬ ಒಬ್ಬನೇ ಒಬ್ಬ ದಡ್ಡ ಮಗನಿರುತ್ತಾನೆ. ತಂದೆ-ತಾಯಿ ಅವನನ್ನು ಅತಿಯಾಗಿ ಮುದ್ದು ಮಾಡಿದ್ದರಿಂದ, ಅವನು ಕೆಟ್ಟಿರುತ್ತಾನೆ. ಮುಂದೆ ಬಿದಿರೆಯಲ್ಲಿ ಬಡವರ ಮಗನಾದ ಸುಮತಿಯೂ ಹಾಗೂ ಮದನಕುಮಾರನೂ ಕೂಡಿ ಸೂರ್ಯಭಟ್ಟರಲ್ಲಿ ಇರುವ ಪ್ರಸಂಗ ಬರುತ್ತದೆ. ಅಲ್ಲಿಯೇ ವಿವಿಧ ಕತೆಗಳನ್ನು ಕೇಳಿ ಮದನಕುಮಾರ ಬದಲಾಗುತ್ತಾನೆ. ಅವನ ಬುದ್ಧಿ ಹರಿತವಾಗುತ್ತದೆ; ಹೃದಯ ವಿಶಾಲವಾಗುತ್ತದೆ. ಪಂಚತಂತ್ರದಲ್ಲಿಯೂ ವಿಷ್ಣುಶರ್ಮನು ಇದೇ ಪ್ರಕಾರವಾಗಿ ಅರಸನ ಮೂವರು ದಡ್ಡ ರಾಜಕುಮಾರರನ್ನೇ ಸುಧಾರಿಸಿದ ಕತೆ ಜಗತ್ಪ್ರಸಿದ್ಧ.

ಈ ಕಾದಂಬರಿಯಲ್ಲಿ ವಿವಿಧ ನೀತಿ ಕತೆಗಳು ಕೂಡಿಕೊಂಡಿವೆ. ಹಲವಾರು ಕತೆಗಳಲ್ಲಿ ವಿವರಣೆ ಅತಿಶಯವಾಗಿರುವುದರಿಂದ ಬೇಜಾರು ಸಹ ಬರಬಹುದು. ಆದರೂ ಕತೆಗಳು ಬುದ್ಧಿಶಕ್ತಿಯ ವಿಕಾಸಕ್ಕೆ ಅನುಕೂಲವಾಗಿವೆ. ಮೂಲ ಕೃತಿಯ ಭಾರತೀಕರಣದಲ್ಲಿ ಅನುವಾದಕರು ಆಭಾಸಕ್ಕೆ ಅವಕಾಶ ಕೊಟ್ಟಿಲ್ಲವೆಂಬುದನ್ನು ಗಮನಿಸಬೇಕು.

ಆಗಿನ ಕಾಲದಲ್ಲಿ ಶೆಕ್ಸಪೀಯರನ ನಾಟಕಗಳನ್ನು, ಸಂಸ್ಕೃತ ನಾಟಕಗಳನ್ನು ರೂಪಾಂತರಿಸುವುದು ಕಂಡುಬರುತ್ತದೆ. ಎಂ. ಎಸ್. ಪುಟ್ಟಣ್ಣನವರೂ 'ಸಿಂಬೆಲಿನ್' ಹಾಗೂ 'ಕಿಂಗ್ ಲಿಯರ್' ಇವುಗಳನ್ನು ಕನ್ನಡಿಸಿದ್ದಾರೆ. ಆದರೆ ಕಾದಂಬರಿಯನ್ನು ರೂಪಾಂತರಿಸಿರುವುದು ತೀರ ವಿರಳ. ಈ ಕಾರಣದಿಂದ 'ಸುಮತಿ ಮದನಕುಮಾರರ ಚರಿತ್ರೆ' ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟವಾದುದು ಎಂದು ಹೇಳಬೇಕು.

ಮಕ್ಕಳಿಗೆ ವಾಕ್ಯ ರಚನೆ, ವ್ಯಾಕರಣ ಮುಂತಾದವುಗಳೂ ಗೊತ್ತಿರಬೇಕೆಂದು ಆಳವಾದ ಅನುಭವ ಪಡೆದ ಪುಟ್ಟಣ್ಣನವರು 'ಕನ್ನಡ ಲೇಖನ ಲಕ್ಷಣ' ವನ್ನು ಬರೆದು ಪ್ರಕಟಿಸಿರುವರು.

ಎಂ. ಎಸ್. ಪುಟ್ಟಣ್ಣನವರು ೧೯೩೦ ರಲ್ಲಿ ತಮ್ಮ ಎಪ್ಪತ್ತಾರನೆಯ ವಯಸ್ಸಿನಲ್ಲಿ ವಿಧಿವಶರಾದರು. ಅವರು ಜನಿಸಿದ್ದು ಮೈಸೂರಲ್ಲಿಯಾದರೂ, ಅವರ ಕಾರ್ಯ

ಕ್ಷೇತ್ರ ಬೆಂಗಳೂರು. ಬೆಂಗಳೂರು ಬಸವನಗುಡಿಯಲ್ಲಿ ಅವರು ವಾಸವಾಗಿದ್ದ ರಸ್ತೆಗೆ ಅವರ ಹೆಸರನ್ನು ಕೊಟ್ಟಿದ್ದಾರೆ!

ಎಂ. ಎಸ್. ಪುಟ್ಟಣ್ಣನವರು ಗಹನವಾದ ತತ್ತ್ವಗಳನ್ನು ಸರಳವಾಗಿ, ಸುರಮ್ಯವಾಗಿ, ನೀತಿಕತೆಗಳಲ್ಲಿ ತಿಳಿಸಿರುವರು. ಅದೇಕೆ ಮಕ್ಕಳಿಗಾಗಿ ಬರೆದ ಅವರ ಎಲ್ಲ ಕೃತಿಗಳಲ್ಲಿ ಇದೇ ಗುಣ ವಿಶಿಷ್ಟವಾದುದು. ಇದೇ ಕನ್ನಡ ಮಕ್ಕಳ ಸಾಹಿತ್ಯಕ್ಕೆ ಅವರ ವಿಶೇಷವಾದ ಕೊಡುಗೆಯಾಗಿರುವುದು.

● ●

*ಮಕ್ಕಳ ಸಾಹಿತ್ಯಕ್ಕೆ ಹೊಯಿಸಳರ ಕೊಡುಗೆ

—ವಾಮನ ಬೇಂದ್ರೆ

ಕನ್ನಡ ಸಾಹಿತ್ಯ ಇತಿಹಾಸವನ್ನು ಸೂಚಿಸುವ ಕೆಲವು ಸಂದರ್ಭ ಗ್ರಂಥಗಳಲ್ಲಿ ಹೊಯಿಸಳರ ಬಗ್ಗೆ ಸಾಕಷ್ಟು ವಿಷಯ ವಿವರಿಸಲಾಗಿಲ್ಲ. ಪಂಜೆ, ಶಿವರಾಮ ಕಾರಂತ, ಜಿ. ಪಿ. ರಾಜರತ್ನಂ, ದೇವುಡು, ಮಲ್ಲಾರಿ, ಬಿ. ಎಸ್. ಪಾಂಡುರಂಗರಾವ್, ಬಿ. ಶಂಕರಭಟ್ಟ, ದಾಮೋದರ ಚಾಳಿಗ ಮೊದಲಾದ ಮಕ್ಕಳ ಸಾಹಿತ್ಯ ರಚನೆಯಲ್ಲಿ ಗಣನೀಯವಾದ ಸೇವೆಯನ್ನು ಮಾಡಿದವರ ಪಟ್ಟಿಯಲ್ಲಿ ಹೊಯಿಸಳರದೂ ಒಂದು ಹೆಸರು. ಹೊಯಿಸಳರ ಮಕ್ಕಳ ನಾಟಕಗಳಾದ—'ಮಗು', 'ವಾತಾಪಿ,' 'ಕಳ್ಳ ಮಳ್ಳ ಸುಳ್ಳ,' ಶಿಶುಕವನಗಳಾದ-'ಮಗುವಿನ ಕೂಗು,' 'ಗಣಪತಿ,' 'ಕಂಕಣ,' ಸ್ನೌಟ ಹಾಡುಗಳಾದ—'ಹಾಡಿನ ಚಿಲುಮೆ' ಮತ್ತು ಕಥೆಗಳಾದ—'ಋಷಿಮಾವು,' 'ಪುಟ್ಟರಸು,' 'ಪಠಾಕ್ಷಿ,' 'ಹೂವಿನ ಹಾಸಿಗೆ' ಎವು ವಿದ್ವಾಂಸರಿಂದ ಮೆಚ್ಚಿಗೆ ಪಡೆದ ಉಲ್ಲೇಖಗಳು ಪ್ರಕಟವಾಗಿವೆ. "ಹೊಯಿಸಳರು ಕನ್ನಡ ಕಥಾಸಾಹಿತ್ಯ, ಶಿಶುಕವನ ಸಾಹಿತ್ಯ ಮತ್ತು ಮಕ್ಕಳ ನಾಟಕ ಸಾಹಿತ್ಯ ರಚನೆಯಲ್ಲಿ ಅಪೂರ್ವವಾದ ಸೇವೆಯನ್ನು ಸಲ್ಲಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ ತೀರ್ಥಹಳ್ಳಿ ತಾಲೂಕು. ಆ ತಾಲೂಕಿನಲ್ಲಿ ಆರಗ ಎಂಬುದು ಒಂದು ಗ್ರಾಮ. ಈ ಗ್ರಾಮದಲ್ಲಿ ೭–೫–೧೮೯೬ ರಂದು ಹುಟ್ಟಿದ ಲಕ್ಷ್ಮಣರಾವ್ ಅವರೇ ಆರಗಂ ಲಕ್ಷ್ಮಣರಾವ್. ಕನ್ನಡ ಸಾಹಿತ್ಯದಲ್ಲಿ ಮಾತ್ರ ಇವರು ಹೊಯಿಸಳ ಎಂದೇ ಪ್ರಖ್ಯಾತರು. ಇವರು ಹೊಯಿಸಳ ಕರ್ನಾಟಕ ಬ್ರಾಹ್ಮಣರಾಗಿದ್ದರಿಂದ ಹೊಯಿಸಳರೇ ಹೊರತು ಇವರಿಗೂ ಕರ್ನಾಟಕದ ಆಳರಸರಾಗಿ ಹೋದ ಹೊಯ್ಸಳ ವಂಶಕ್ಕೂ ಸಂಬಂಧವಿಲ್ಲ. ಇವರಿಗೆ ಮೂರು ಜನ

---

* ಆಕಾಶವಾಣಿ, ಧಾರವಾಡ ಅವರ ಕೃಪೆಯಿಂದ.

ಅಣ್ಣಂದಿರು. ಶೇಷಾಚಲಯ್ಯನವರ ಕವಿತ್ವ, ಸೀತಾರಾಮಯ್ಯನವರ ನಾಟಕರಚನಾ ಕೌಶಲ್ಯ ಮತ್ತು ಅನಂತರಾಮಯ್ಯನವರ ಆದರ್ಶ ಜೀವನ ಹೊಯಿಸಳರ ಮೇಲೆ ತುಂಬಾ ಪ್ರಭಾವ ಬೀರಿದ್ದವು. ಪ್ರಕೃತಿ ಪ್ರೀತಿ ಮತ್ತು ಚಿತ್ರಕಲೆ ಹೊಯಿಸಳರ ಹುಟ್ಟುಗುಣಗಳಾಗಿದ್ದವು. ಡಾ. ಅನಿಬೆಸೆಂಟರ ನೇತೃತ್ವದಲ್ಲಿ ನಡೆಯುತ್ತಿದ್ದ ಮದನಪಲ್ಲಿಯ ನ್ಯಾಷನಲ್ ಕಾಲೇಜಿನಿಂದ ಬಿ. ಎ. ಪದವಿ ಪಡೆದವರು ಇವರು.

ಗುರುದೇವ ರವೀಂದ್ರನಾಥ ಠಾಕೂರ ಅವರ ಶಾಂತಿನಿಕೇತನದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ಡಾ. ಜಿ. ಎಸ್. ಕಸಿನ್ಸ್ ಮತ್ತು ಸಿ. ಎಸ್. ಆಂಡ್ರೂಸ್ ಅವರ ಆದರ್ಶ ಜೀವನವನ್ನು ಮೆಚ್ಚಿಕೊಂಡವರು. ಚೆನ್ನಪಟ್ಟಣ ಪ್ರೌಢಶಾಲೆ ಮತ್ತು ಬೆಂಗಳೂರಿನ ಮಲ್ಲೇಶ್ವರಂ ದಲ್ಲಿಯ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದವರು. 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ 'ಬಾಲ ಭಾರತಿ' ವಿಭಾಗದ ಅಣ್ಣಾಜಿ ಮತ್ತು ಬೆಂಗಳೂರು ಆಕಾಶವಾಣಿಯ 'ಬಾಲಜಗತ್' ಕಾರ್ಯಕ್ರಮದ ತಾತಾ ಇವರೇ. ಹೀಗೆ ಹಲವು ಬಗೆಯಿಂದ ಕರ್ನಾಟಕದಲ್ಲಿ ಸಾಹಿತ್ಯ ಸೃಷ್ಟಿಕಾರ್ಯ ಮಾಡಿದ ಹೊಯಿಸಳರು ೨೮ ೧೦–೧೯೫೮ರಂದು ಈ ಲೋಕ ತ್ಯಜಿಸಿದರು.

"ಶ್ರೀ ಗುರುದೇವ ರವೀಂದ್ರನಾಥ ಠಾಕೂರ ಅವರ ಶಾಂತಿನಿಕೇತನದಂಥ ಆಶ್ರಮಗಳಿಂದ ಸಾಹಿತ್ಯವಾಹಿನಿಗಳು ಶಿಶುಗಳಿಗಾಗಿ ಹರಿದು ಬಂದಿವೆ........ಪ್ರೀತಿ, ಸಹನೆ, ಧೈರ್ಯ, ಸರಳನಗು, ಕಾರ್ಯದಕ್ಷತೆ ಮತ್ತು ಪ್ರಕೃತಿ ಪ್ರೇಮ ಮಕ್ಕಳಲ್ಲಿ ಜಾಗೃತವಿರುವಂತೆ ಸಾಹಿತ್ಯ ಸೃಷ್ಟಿಸಲು ಪ್ರಯತ್ನಿಸಿದ್ದೇನೆ... ...ಯುರೋಪ, ಅಮೇರಿಕದಲ್ಲಿಯ ಮಕ್ಕಳ ಪುಸ್ತಕಮಾಲೆ ಮತ್ತು ವಾಲ್ಟಡಿಸ್ನೆಯವರ 'ಬ್ಯಾಂಬಿ' ಮೊದಲಾದ ಮಕ್ಕಳ ಚಲನ ಚಿತ್ರಗಳಿಂದ ಮಕ್ಕಳ ಕಥೆಗಳಿಗೆ ಬೇಕಾದ ವಿಷಯ ಅರಿಸಿಕೊಂಡಿರುವೆ. ತಾಯಿ ಹೇಳಿದ ಗಾದೆಮಾತು ಮತ್ತು ಮಕ್ಕಳೊಡನಾಟವೂ ನನಗೆ ಹೊಸ ಹೊಸ ವಿಷಯಗಳನ್ನು ಕೊಟ್ಟಿದೆ" ಎಂದು ಮೊದಲಾಗಿ ಹೊಯಿಸಳರೇ ವಿವಿಧ ಸಂದರ್ಭಗಳಲ್ಲಿ ತಮ್ಮ ಮನೋಭಾವವನ್ನು ವ್ಯಕ್ತಪಡಿಸಿದ್ದಾರೆ. ಕನ್ನಡ ಸಾಹಿತ್ಯದ ನವೋದಯ ಕಾಲದ ಸಾಹಿತಿಗಳಾದ ಹೊಯಿಸಳರು ಆದರ್ಶಪ್ರಿಯ ರಾದದ್ದು ಕಾಲಮಹಿಮೆ.

ಪಾಶ್ಚಾತ್ಯದೇಶದ ಕಥೆ, ಭಾರತೀಯ ಭಾಷೆಗಳ ಕಥೆ, ಪಂಚತಂತ್ರ, ವೇದೋಪನಿಷತ್ತು, ರಾಮಾಯಣಾದಿ ಕಥೆ, ದಂತಕಥೆ, ಜಾನಪದ ಕಥೆಗಳನ್ನು ಹೊಯಿಸಳರು ಆಳವಾಗಿ ಅಭ್ಯಾಸಮಾಡಿ ಹೊಸಕಾಲಕ್ಕೆ ತಕ್ಕಂತೆ ಮಕ್ಕಳ ಮನಸ್ಸನ್ನರಿತು ಮಕ್ಕಳ ಸಾಹಿತ್ಯ ನಿರ್ಮಾಣಕ್ಕೆ ಉದ್ದೇಶ ಪೂರ್ಣವಾಗಿ ಕೈಹಾಕಿದವರು ಮತ್ತು ಸಫಲ ರಾದವರು ಎಂಬ ಮಾತು ಅವರ ಸಾಹಿತ್ಯಾಭ್ಯಾಸದಿಂದ ಕಂಡುಬರುತ್ತದೆ.

ಈಗ ಉಪಲಬ್ಧವಿರುವ ಹೊಯಿಸಳರ ಮಕ್ಕಳ ಕವನ ಸಂಗ್ರಹಗಳು ಎರಡೇ ಎರಡು. ಒಂದು–'ಚಂದುಮಾಮ' ಎರಡನೆಯದು—'ಕೋಲುಕುದುರೆ' 'ಚಂದುಮಾಮ'ದಲ್ಲಿ ಹೆಚ್ಚಾಗಿ ಚಿಕ್ಕಚಿಕ್ಕ ಕವನಗಳಿವೆ. 'ಹುಂಜ', 'ಕೋಗಿಲೆ', 'ಜಿಳ್ಳಕ್ಕಿ' 'ಕತ್ತೆ' ಮೊದಲಾದವುಗಳ ಬಗ್ಗೆ ಕವನಗಳಿವೆ. ಮಕ್ಕಳಿಗೆ ಪಶು-ಪಕ್ಷಿಗಳೆಂದರೆ ಅಚ್ಚು-ಮೆಚ್ಚು. ದೊಡ್ಡವನಾಗಲು ದೊಡ್ಡ ಗುಣಗಳೇ ಬೇಕು, ಒಂದೇ ಕೆಲಸ ಸರಿಯಾಗಿ ಮಾಡಿದರೆ ಫಲ ನಿಶ್ಚಿತ, ಇಂದು ಮಕ್ಕಳೆಲ್ಲ ಒಂದಾದರೆ ಮುಂದೆ ಶಾಂತಿ ಶಾಶ್ವತ ಮೊದಲಾದ ಆದರ್ಶಗಳನ್ನು ಮಕ್ಕಳಿಗೆ ಚಿಕ್ಕಚಿಕ್ಕ ಸಕ್ಕರೆ ಗುಳಿಗೆಯಂಥ ಕವನಗಳಿಂದ ರುಚಿಯಾಗಿ ಉಣಿಸಿದ್ದಾರೆ. 'ಮಕ್ಕಳ ಪೂಜೆಯೆ ಶಿವಪೂಜೆ' ಎಂಬುದು ಹೊಯಿಸಳರ ಮನೋಭಾವ, ಶ್ರದ್ಧೆ. 'ಬರಹ', 'ನೀರಹನಿ,' 'ಮಳೆಹನಿ' ಮೊದಲಾದ ಶ್ರೇಷ್ಠ ಮಟ್ಟದ ಕವನಗಳೂ ಇಲ್ಲಿವೆ.

'ಕೋಲು ಕುದುರೆ' ಕವನ ಸಂಗ್ರಹದಲ್ಲಿ ಪಶುಪ್ರಾಣಿಗಳನ್ನು ಕುರಿತು ಹೆಚ್ಚು ಕವನಗಳಿವೆ ಗೋರಿಲ್ಲಾ, ಪಟ್ಟೆಹುಲಿ. ಕೊಕ್ಕರೆ, ಚಿಟ್ಟೆ, ಕಾಗೆ, ನವಿಲು, ಜಿರಾಫೆ. ನಾಯಿ, ಕುದುರೆ—ಪ್ರಾಣಿಸಂಗ್ರಹಾಲಯದ ಪ್ರದರ್ಶನವೇ ಇದೆ ಎಂದೂ ಹೇಳಬಹುದು. ಈ ಕವನ ಸಂಗ್ರಹದಲ್ಲಿಯೂ 'ಗೊತ್ತು', 'ಹೇಗಿರಬೇಕು.' 'ನಂಗೊತ್ತಿಲ್ಲಪ್ಪ' ಮತ್ತು ಪುಸ್ತಕದ ಅಂಗಡಿ'ಯಂಥ ಉತ್ತಮ ಕವನಗಳಿವೆ. ಪುಸ್ತಕದ ಅಂಗಡಿಗೆ ಒಬ್ಬ ಬಾಲಕ ಹೋಗಿ ಅಲ್ಲಿಯ ಪುಸ್ತಕಗಳ ಆಕರ್ಷಣೆಯಿಂದ ಅವುಗಳಿಗೆ ಕೈ ಹಚ್ಚುತ್ತಾನೆ. ಅಂಗಡಿಯ ಯಜಮಾನ ಸಿಟ್ಟಿಗೆದ್ದು 'ಹೊಲಸು ಕೈಯಿಂದ ಪುಸ್ತಕ ಮುಟ್ಟಬೇಡ' ಎಂದು ಗದರಿಸಿ ಹೊರಗೆ ಹಾಕುತ್ತಾನೆ. 'ನನ್ನಪ್ಪ ನನ್ನಮ್ಮ ಓದು ಕಲಿಸಿದರು, ತಿಳುವಳಿಕೆ ಇಲ್ಲದವರು' ಎಂದು ಆ ಬಾಲಕ ತನ್ನ ವ್ಯಥೆಯನ್ನು ವ್ಯಕ್ತಪಡಿಸುತ್ತಾನೆ. ಇಂದಿಗೂ ಎಷ್ಟೋ ಪುಸ್ತಕದ ಅಂಗಡಿಗಳಲ್ಲಿ ಈ ದೃಶ್ಯವನ್ನು ನಾವು ಕಾಣಬಹುದು. ಪುಟ್ಟ ನೀರಹನಿ, ಪುಟ್ಟ ಮರಳುಕಣ, ಪುಟ್ಟ ಕ್ಷಣ ಒಂದನ್ನೊಂದು ಕೂಡಿ ಸಾಗರ, ಗುಡ್ಡ, ಯುಗ ಆಗುವಂತೆ ಪುಟ್ಟ ಪುಟ್ಟ ಕೆಲಸಗಳನ್ನೇ ಕರ್ತವ್ಯಪ್ರಜ್ಞೆಯಿಂದ ಮಾಡಿ ಮಹಾವ್ಯಕ್ತಿಯಾಗಲು ಸಾಧ್ಯ. ಪುಟ್ಟ ಕೆಲಸ, ನಲಿವು ನುಡಿ ಇರಲಿ: ಪುಟ್ಟ ಕೆಟ್ಟ ಕೆಲಸ, ಪದ ಬೇಡ ಎಂಬ ಯಶಸ್ವಿ ಬೋಧನಾಪರ ಪದ್ಯಗಳೂ ಈ ಸಂಕಲನದಲ್ಲಿವೆ.

ಹೊಯಿಸಳರು ರಚಿಸಿದ ೧೭ ಕಥಾಸಂಕಲನಗಳು ಈಗ ಉಪಲಬ್ಧ. ಅವುಗಳ ಹೆಸರು ಇಂತಿವೆ. —೧) 'ಅಪ್ಪು ಬಾಟ.' ೨) ಆದಕ್ಕೇ ಆ ಹೆಸರು. ೩) ಅಭ್ಯಂಕು ೪) ಆನೆ ಇರುವೆ, ೫) ಖೈದಿಗಳ ಕಷ್ಟ. ೬) ಗಂಟೆ ಗೋಪುರ. ೭) ನಿಶ್ಚಲದಾಸ. ೮) ಪತಾಕ್ಷಿ. ೯) ಪುಟ್ಟರಸು, ೧೦) ಪುಟ್ಟತಮ್ಮ ಯಾರು.? ೧೧) ಪೋರಿ. ೧೨) ಬದುಕುವ ಮಂತ್ರ. ೧೩) ಮಸೀದಿಯನ್ನು ಎಲ್ಲಿ ಕಟ್ಟಿದರು? ೧೪) ರಾಜನ

ಬುದ್ಧಿವಂತಿಕೆ. ೧೫) ವೀರಕುಮಾರ, ೧೬) ಹೂವಿನ ಹಾಸಿಗೆ ಮತ್ತು ೧೭) ಶುಭಾಂಗ ಈ ಕಥಾಸಂಗ್ರಹದಲ್ಲಿ ಒಟ್ಟು ತೊಂಬತ್ತೇಳು ಕಥೆಗಳಿವೆ. ಈ ಕಥೆಗಳನ್ನಾಧರಿಸಿ, ಮಕ್ಕಳ ಕಥಾಸಾಹಿತ್ಯಕ್ಕೆ ಹೊಯಿಸಳರ ಕೊಡುಗೆಯನ್ನು ವಿವರಿಸಲಿಚ್ಛಿಸುವೆ.

"ಶ್ರೀ ಹೊಯಿಸಳರಿಗೆ ಮಕ್ಕಳ ಲೋಕದಲ್ಲಿ ಸಹಜ ಪ್ರವೇಶವಿದೆ. ಅವರ ಜೀವನದೊಡನೆ ಅವರು ಒಂದಾಗಬಲ್ಲರು; ಮಕ್ಕಳೊಡನೆ ಆಟವಾಡಿ, ಅವರ ಆಟ ನೋಟಗಳನ್ನು ಬಹುಚೆನ್ನಾಗಿ ನಿರೀಕ್ಷಿಸಿದ್ದಾರೆ. ಹೀಗಾಗಿ ಅವರ ಬರವಣಿಗೆಯು ಮಕ್ಕಳ ಚಮತ್ಕೃತಿಪ್ರಿಯವಾದ ಕಲ್ಪನಾವಿಲಾಸವನ್ನು ತನ್ನಲ್ಲಿ ಅಳವಡಿಸಿಕೊಂಡಿದೆ. ಮಕ್ಕಳ ಚಂಚಲವೃತ್ತಿಯನ್ನು ತೊಡೆದು ಕಲೆಯ ಪರಿಪೂರ್ಣ ಸಂಯೋಜನೆಯನ್ನು ಸಾಧಿಸಿದೆ. ಇಂಥ ಬರವಣಿಗೆಯಿಂದ ಮಕ್ಕಳ ಸಹಜ ಪ್ರವೃತ್ತಿಗಳಿಗೆ ಸಮಾಧಾನವು ದೊರೆವುದಲ್ಲದೆ ಅವರ ಸಂಸ್ಕೃತಿ ಹೆಚ್ಚುತ್ತದೆ. ಮನಸ್ಸು ಮಾಗುತ್ತದೆ" ಎಂದು ಡಾ. ರಂ. ಶ್ರೀ. ಮುಗಳಿಯವರು ಹೊಯಿಸಳರ 'ಹೂವಿನ ಹಾಸಿಗೆ' ಕಥಾ ಸಂಕಲನದ ಮುನ್ನುಡಿಯಲ್ಲಿ ವಿವರಿಸಿದ್ದು ಗಮನಾರ್ಹವಾಗಿದೆ. ಐರಿಷ್ ಕವಿಗಳಾದ ಪ್ರೊ. ಕಸಿನ್ಸ್ ಮತ್ತು ಅವರ ಧರ್ಮಪತ್ನಿ ಸಂಗೀತಕಲಾವಿದೆ ಶ್ರೀಮತಿ ಮಾರ್ಗರೆಟ್ ಕಸಿನ್ಸ್ ಅವರು ಹೊಯಿಸಳರ ಲಕ್ಷ್ಯವನ್ನು ಕನ್ನಡ ಸಾಹಿತ್ಯ ನಿರ್ಮಿತಿಯತ್ತ ಹೊರಳಿಸಿದ್ದರಿಂದ ಹೊಯಿಸಳರು 'ಹೂವಿನ ಹಾಸಿಗೆ' ಕೃತಿಯನ್ನು ಕಸಿನ್ಸ್ ದಂಪತಿಗಳಿಗೆ ಅರ್ಪಿಸಿದ್ದಾರೆ. 'ಹೂವಿನ ಹಾಸಿಗೆ' 'ಪತಾಕ್ಷಿ' 'ಪುಟ್ಟರಸು' ಕಥಾಸಂಗ್ರಹಗಳು ಪಂಡಿತರಿಂದ ಮನ್ನಣೆ ಪಡೆದಿವೆ ೧೯೩೨ ರಲ್ಲಿ ಹೊಯಿಸಳರ ಚೊಚ್ಚಲ ಕೃತಿ-"ತಿರುಗ-ಮುರುಗ"—ಕಥನಕವನ, ವಿಚಾರ ಲಹರಿ ಸಂಕಲನ ವಿಮರ್ಶಕರ ಮೆಚ್ಚುಗೆ ಪಡೆದು ಹೊಯಿಸಳರ ಕೀರ್ತಿಪತಾಕೆ ಹಾರಾಡಿತು.

ಹೊಯಿಸಳರನ್ನು ಹತ್ತಿರದಿಂದ, ಆತ್ಮೀಯವಾಗಿ ಕಂಡ ಶ್ರೀ. ಬಿ. ಎಸ್. ಪಾಂಡುರಂಗರಾವ್ ಅವರು "ಹೂ ಮನಸ್ಸಿನ, ಕಂದನ ಎಳೆ ಹೃದಯದ, ಬಂಗಾರದಂಥ ಚೊಕ್ಕ ಮನುಷ್ಯ, ಶ್ರೀ ಹೊಯಿಸಳರು" ಎಂದು ವರ್ಣಿಸಿದ್ದು ಅತಿಶಯೋಕ್ತಿ ಇರಲಾರದು. ಹೊಯಿಸಳರ ಕಥಾಸಾಹಿತ್ಯವನ್ನು ಓದುವಾಗ ವ್ಯಕ್ತಿ ವಿಶಿಷ್ಟವಾದ ಗುಣಗಳ ನಿದರ್ಶನಗಳು ಮೇಲಿಂದ ಮೇಲೆ ವಿಪುಲವಾಗಿ ದೊರೆಯುತ್ತವೆ. ಹೊಯಿಸಳರ ಯಾವ ಕಥೆಯಲ್ಲಿಯೂ ಭಯ, ರೌದ್ರ, ಜಿಗುಪ್ಸೆ, ಬೀಭತ್ಸಗಳಿಗೆ ಎಳ್ಳಷ್ಟು ಸ್ಥಾನವಿಲ್ಲ. ವೀರ, ಸೌಂದರ್ಯಪ್ರೀತಿ, ಹಾಸ್ಯ ಸನ್ನಿವೇಶಗಳ ಚಿತ್ರಣದಿಂದ ಮಕ್ಕಳ ಮನಸ್ಸಿನ ಆರೋಗ್ಯವನ್ನು ಹೊಯಿಸಳರು ಕಾಪಾಡಿದ್ದಾರೆ.

ಮಕ್ಕಳ ಪ್ರಾಣಿ ಪ್ರಿಯತೆಯನ್ನು ಅನುಲಕ್ಷಿಸಿ ಮಂದ ಬುದ್ಧಿಯ ಎಮ್ಮೆ, ಚುರುಕು ಗಿಣಿ, ಬಂಗಾರದ ಬಾತು, ಆಸೆಬುರುಕ ಕೋತಿ, ಮದೋನ್ಮತ್ತ ಆನೆ, ಯುಕ್ತಿಶೀಲ ಇರುವೆ, ಸುಳ್ಳುಬುರುಕ ಆಡು, ಮೋಸಹೋದ ತೋಳ, ಪ್ರೀತಿಯ

ಹೆಬ್ಬಾವು, ಪತಿಪ್ರಿಯ ಹೆಬ್ಬಾವು, ಜಾಣಆಡು, ಹೊಗಳಿಕೆ ಪ್ರಿಯ ಒಂಟೆ, ಜಾಣ ಜೇಡ, ನ್ಯಾಯಪ್ರಿಯ ಕುದುರೆ ಮೊದಲಾದವುಗಳನ್ನು ಕಥಾಸನ್ನಿವೇಶಗಳಿಂದ ಜೀವಂತಗೊಳಿಸಿ ಮಕ್ಕಳ ಮನಹೊಕ್ಕುನಿಲ್ಲುವಂತೆ ಮಾಡಿದ್ದಾರೆ

ಹೊಯಿಸಳರ ಅನೇಕ ಕಥೆಗಳಲ್ಲಿ ರಾಜರಾಣಿ, ಯಕ್ಷ–ಯಕ್ಷಿ, ಮಂತ್ರ–ಯಂತ್ರ, ಶಾಪ–ವರ, ಪ್ರಮುಖವಾದ ಸ್ಥಾನವನ್ನು ಪಡೆದಿವೆ. ಸಾಹಸ ಪ್ರದರ್ಶನಕ್ಕೆ, ರಾಜಕುಮಾರಿಯೊಂದಿಗೆ ವಿವಾಹ ಮತ್ತು ಅರ್ಧರಾಜ್ಯಪ್ರಾಪ್ತಿ ಎಂಬ ಹಳೆಯ ಜಾಡಿನ ಕಥೆಗಳು ಕೆಲವಿವೆ. ಮಂತ್ರ, ಯಂತ್ರ, ಶಾಪ, ವರಗಳಿಂದ ಕಥೆಗಳಲ್ಲಿ ಚಮತ್ಕಾರ ಮತ್ತು ಅದ್ಭುತರಮ್ಯತೆಯನ್ನು ತರಲು ಸಾಧ್ಯ. ಚಮತ್ಕಾರ ಮತ್ತು ಅದ್ಭುತ ರಮ್ಯತೆ ಬಾಲಕರಿಗೆ ಅತ್ಯಂತ ಪ್ರಿಯ. ಹೀಗಾಗಿ ಹೊಯಿಸಳರ 'ಬಿಲ್ಲಾಗ್ರ ಬೀರಣ್ಣ' 'ತಿರುಗಾಲಿ' 'ಲವಲಿ' ಕಥೆಗಳು ಮಕ್ಕಳಿಗೆ ಪ್ರಿಯವಾಗುತ್ತವೆ.

'ಅಂಜೂರ' ಕಥೆಯಲ್ಲಿಯ ಹಟಮಾರಿ ಹುಡುಗ, 'ಗಂಗು' ಕಥೆಯಲ್ಲಿಯ ಹಳ್ಳಿಯ ಶಾಲೆಯ ಸಹಜ ವಾತಾವರಣ; 'ಗೌರಿಯ ಒಂಹ'ದ ತಪ್ಪು ತಪ್ಪು ಬರವಣಿಗೆ ಮಕ್ಕಳಿಗೆ ಅಲ್ಲಿಯ ವಾಸ್ತವ ಚಿತ್ರಣದ ಮೂಲಕ ಮೆಚ್ಚಿಗೆಯಾಗುತ್ತವೆ. ಮಕ್ಕಳಿಗೆ ಹೂವಿನ ಹೆಸರು, ಹಣ್ಣಿನ ಹೆಸರು, ಪಕ್ಷಿಗಳ ಹೆಸರು ಹೆಚ್ಚೆಚ್ಚು ಗೊತ್ತಾಗುವಂತೆ ಹೊಯಿಸಳರು ಕೆಲವು ಕಥೆಗಳನ್ನು ಸೃಷ್ಟಿಸಿದ್ದಾರೆ 'ರೊಟ್ಟಿ' ಕಥೆಯೊಳಗಿನ ಕಾವಲಿ, ಮೊಗಚುಕೈ; 'ಪಠಾಕ್ಷಿ'ಯೊಳಗಿನ—ಜೇಂಕಿಕಡ್ಡಿ, ಊದು ಕಡ್ಡಿ; 'ಖಸೀಮಾವು'ನಲ್ಲಿ ಖಸಿಮಾವು ಮತ್ತು ದೇಸಿಮಾವು ಪಾತ್ರಧಾರಿಗಳಾಗಿ ಮಾತನಾಡಲು ಪ್ರಾರಂಭಿಸುವುದು ಮಕ್ಕಳಿಗೆ ಕಲ್ಪನಾಲೋಕಕ್ಕೆ ಸೆಳೆದೊಯ್ಯುತ್ತದೆ.

ಮಕ್ಕಳಿಗೆ ನೇರವಾದ ಉಪದೇಶ ಎಂದೂ ಸೇರುವದಿಲ್ಲ ಎಂಬುದು ಹೊಯಿಸಳರಿಗೆ ಚೆನ್ನಾಗಿ ಗೊತ್ತು. ಆದುದರಿಂದ ಅವರು ಪ್ರತಿಯೊಂದು ಉಪದೇಶಕ್ಕೂ ಒಂದೊಂದು ಕಥೆಯನ್ನು ನಿರ್ಮಿಸಿ ಉಪದೇಶ ಚುಚ್ಚುಮದ್ದಿನಂತೆ ಮಕ್ಕಳ ಮನಸ್ಸಿನಲ್ಲಿ ಪ್ರವೇಶವಾಗುವಂತೆ ಮಾಡಿದ್ದಾರೆ. ಅದು ಹೀಗೆ—

೧) ಅನ್ನದ ಒಂದಗಳೂ ಚೆಲ್ಲಬಾರದು— 'ಅನ್ನದ ಅಗಳು'

೨) ಅನ್ನವನ್ನು ನಾವು ಕಾಪಾಡಿದರೆ ಅದು ನಮ್ಮನ್ನು ಕಾಪಾಡುತ್ತದೆ.— 'ಜೋಳದಕಾಳು'

೩) ಒಂದು ಕಾಳಿಗಾಗಿ ಅತಿ ಆಸೆಮಾಡಿ ಮುಷ್ಠಿಕಾಳು ಕಳಕೊಳ್ಳಬಾರದು —'ಆಸೆಬುರುಕ ಕೋತಿ'

೪) ಶಕ್ತಿಗಿಂತ ಯುಕ್ತಿ ಮೇಲು — 'ಆನೆ-ಇರುವೆ'

೫) ಆದರ್ಶಪತ್ನಿ ಸಂಸಾರದ ಸ್ವರ್ಗ —'ಪೂವಮ್ಮ'

೭) ಭೋಗಕ್ಕಿಂತ ತ್ಯಾಗ ಶ್ರೇಷ್ಠ—'ಶ್ರೇಷ್ಠ ಭಿಕ್ಷೆ'
೮) ನೋವು ಬಂದಾಗ ಸಹಿಸಬೇಕು— 'ನೋವು'
೮) ಹಸಿದವರಿಗೆ ಅನ್ನ ನೀಡುವುದು ಶ್ರೇಷ್ಠ—'ಸೋತಎತ್ತು'
೯) ಸುಖದಿಂದ ಉಬ್ಬಿ, ಸುಖವನ್ನು ದಯಪಾಲಿಸಿದ ದೇವರನ್ನು ಮರೆಯ ಬಾರದು—'ಮುಪ್ಪಿನ ಮುದುಕಿ'
೧೦) ಪ್ರಾಣಭಯ ಎಲ್ಲರಿಗೂ ಉಂಟು— 'ರೈತನ ಹೆಂಡತಿ'
೧೧) ಮಡಿತವೇ ಮಡ್ಡು —'ಅಪ್ಪನ ಐಶ್ವರ್ಯ'
೧೨) ಪರಸ್ಪರ ಪ್ರೀತಿಯೇ ಪುಣ್ಯಸ್ಥಳ —"ಮಸೀದಿಯನ್ನು ಎಲ್ಲಿ ಕಟ್ಟಿಸಿದರು ?"

ಸಾಗರ ಸಾಹಸಿ ಮಾರ್ಕೋಪೋಲೋ ಮತ್ತು ಸಸ್ಯವಿಜ್ಞಾನಿ ಲೂಥರ ಬರಬ್ಯಾಂಕ ಇವರ ಜೀವನ ಪರಿಚಯವನ್ನು ಹೊಯಿಸಳರು ಮಾಡಿಕೊಟ್ಟಿದ್ದಾರೆ.

ದೇವರು ಭಕ್ತರಿಗೆ ಸಹಾಯ ಮಾಡುತ್ತಾನೆ ಎಂಬುದು ಭಾರತೀಯ ಶ್ರದ್ಧೆ; 'ದೇವರು ದೋಣಿ ನಡೆಸಿದ' 'ಹಸಿಹಣ್ಣು-ಬಿಸಿಹಣ್ಣು' ಮತ್ತು 'ಶಿವಸುಂದರ' ಈ ಮೂರೂ ಕಥೆಗಳಲ್ಲಿ ಮುದುಕಿಯ ಪಾತ್ರವೇ ಪ್ರಧಾನ. 'ಮುದುಕಿ ಕಷ್ಟದಲ್ಲಿ ಸಿಕ್ಕಾಗ ಅನುಕ್ರಮವಾಗಿ ಪಂಢರಪುರದ ವಿಠ್ಠಲ, ಕುಮಾರಸ್ವಾಮಿ ಮತ್ತು ಮಧುರೆಯ ಶಿವಸುಂದರ ಮುದುಕಿಯನ್ನು ಸಂಕಟದಿಂದ ಪಾರಮಾಡುವನು ಎಂಬುದಾಗಿ ಚಿತ್ರಿಸ ಲಾಗಿದೆ. ಇದೇ ರೀತಿ ತುಳಸಿಯ ಪೂಜೆ, ಅರಳಿಕಟ್ಟೆಯ ಪೂಜೆ ಮತ್ತು ಭೂಮಿ ತಾಯಿಯ ಪೂಜೆ ಭಾರತೀಯರಿಗೆ ಫಲಪ್ರದ. ಬಲಮಗ್ಗಲಿಗೆ ಏಳುವುದು ಶುಭ ದಾಯಕ ಎಂಬುದನ್ನು 'ಬಲಮಗ್ಗಲು'; ಪ್ರಾತಃಕಾಲ ಮತ್ತು ರಾತ್ರಿ ಭೂಮಿ ತಾಯಿಗೆ ನಮಸ್ಕರಿಸುವ ರೂಢಿ–'ಆದೇಶವೇ ಅವರ ತಾಯಿ,' ತುಳಸೀ ಪೂಜೆಯ ಮಹಾತ್ಮ್ಯ—'ಏಲಕ್ಕಿಯ ಕಥೆ' ಮತ್ತು ಅರಳೀ ಕಟ್ಟೆಯ ಪೂಜೆಯ ಮಹಾತ್ಮ್ಯ— 'ಅರಳಿ' ಮತ್ತು ಭಾರತೀಯ ಅಭಿಮಾನ—'ಜೋಗಿ' ಕಥೆಗಳು ಸಮರ್ಥಿಸುತ್ತವೆ.

ಈಜಿಪ್ತಿನ ಅತಿಪುರಾತನ ಕಥೆ 'ಅನ್ನುಭಾಟು' ಆ ಕಥೆಯಿಂದ ಹಿಡಿದು ಹೊಯಿ ಸಳರು ರೇಶನ್ ಕಾಲದ ಕಥೆ, ಸ್ವಾತಂತ್ರ್ಯಪ್ರೀತಿಯ ಕಥೆ, ಜೇಬಿ ಪೋಪ್ರೈಜ ಕಥೆ ನಿರ್ಮಿಸಿ ಮಕ್ಕಳ ಕಥಾ ಸಾಹಿತ್ಯದಲ್ಲಿ ಹೊಸತನವನ್ನು ತಂದಿದ್ದಾರೆ. ಮಕ್ಕಳ ಸಾಹಿತ್ಯ ರಚನೆಯಲ್ಲಿ ಕನ್ನಡ ಸಾಹಿತ್ಯವು ಮುಂದಾಗಬೇಕು ಎಂಬ ಉದ್ದೇಶದಿಂದ ವಿವಿಧ ದೇಶಗಳ ಮಕ್ಕಳ ಸಾಹಿತ್ಯವನ್ನು ತುಲನಾತ್ಮಕವಾಗಿ ಹೊಯಿಸಳರು ಅಭ್ಯ ಸಿಸಿದ್ದರು. ಆದುದರಿಂದಲೇ ಅವರು ನಿರ್ಮಿಸಿದ ಸಾಹಿತ್ಯದಲ್ಲಿ ಕಸುವು ಮೌಲ್ಯ ಬೆಳೆಯುತ್ತ ಬಂದಿದೆ. ಹೊಯಿಸಳರು ನಿರ್ಮಿಸಿದ ತೊಂಬತ್ತೈದು ಕಥೆಗಳಲ್ಲಿ ಒಂದ ರಂತೆ ಒಂದಿಲ್ಲ. ಪ್ರತಿಯೊಂದು ಕಥೆ ಪ್ರತಿದಿವಸ ಅರಳುವ ಹೊಸ ಹೂವಿನಂತೆ ಆಕರ್ಷಕ ವಾಗಿವೆ. ಚಿಕ್ಕ ಚಿಕ್ಕ ವಾಕ್ಯ, ಸರಳವಾದ ಭಾಷೆ, ಪ್ರಾಸಬದ್ಧ ಶಬ್ದಗಳ ಜೋಡಣೆ,

ಅನುಕರಣಾವ್ಯಯಗಳ ಸುಳಿದಾಟ, ಪುನರುಕ್ತಿ, ಸಂವಾದಶೈಲಿ, ಕಥೆಯ ನಡುನಡುವೆ ಪ್ರಶ್ನೆ ಕೇಳುವ ವಿಧಾನ ಇವು ಹೊಯಿಸಳರು ಮಕ್ಕಳ ಮನಸ್ಸನ್ನು ಸಂಪೂರ್ಣವಾಗಿ ಬಲ್ಲವರಾಗಿದ್ದರು ಎಂಬುದನ್ನು ಸಮರ್ಥಿಸುತ್ತವೆ. ಆದುದರಿಂದಲೇ ಹೊಯಿಸಳರ ಕಥೆಗಳಿಗೆ ಮಕ್ಕಳ ಕಥಾ ಸಾಹಿತ್ಯದಲ್ಲಿ ಶಾಶ್ವತವಾದ ಸ್ಥಾನ ಉಂಟು.

● ●

“ಶಿಶುಸಾಹಿತ್ಯಕ್ಕೆ ಶ್ರೀ ಕುವೆಂಪು ಅವರ ಕೊಡುಗೆ”

—ಪ್ರಹ್ಲಾದಕುಮಾರ ಭಾಗೋಜಿ

ಭಾವಗೀತೆ, ಖಂಡಕಾವ್ಯ, ಮಹಾಕಾವ್ಯಗಳನ್ನೂ, ಸಣ್ಣಕಥೆ, ಲಲಿತಪ್ರಬಂಧ, ವಿಚಾರಪರಿಪ್ಲುತ ಲೇಖನ—ವಿಮರ್ಶೆ, ಕಾದಂಬರಿಗಳನ್ನೂ, ನಾಟಕಗಳನ್ನೂ ಬರೆದ ಶ್ರೀ ಕುವೆಂಪು ಅವರ ಲೆಕ್ಕಣಿಕೆ ಶಿಶುಸಾಹಿತ್ಯವನ್ನೂ ನಿರ್ಮಿಸಿದೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಧನೆ-ಕೃಷಿಮಾಡಿ, ಸಿದ್ಧಿ ಪಡೆಯುವ ಹಂಬಲ-ಸಾಹಸದಿಂದ ಪ್ರೇರಣೆಗೊಂಡ ರಸಕವಿಗೆ ಶಿಶುಸಾಹಿತ್ಯ ನಿರ್ಮಿಸುವ ಸಹಜ ಒಲವು ಮೂಡಿದಾಗ ಅಲ್ಲಿಯೂ ತಾವು ಕಂಡ ದರ್ಶನ-ಆದರ್ಶಗಳ ನಿಲವಿಗೇ ಅಂಟಿಕೊಂಡಿರುವುದು ಸ್ವಾಭಾವಿಕ. ೧೯೨೪ ರಿಂದ ೧೯೪೭ ರ ವರೆಗಿನ ಇಪ್ಪತ್ತುಮೂರು ವರ್ಷಗಳ ಕಾಲಾವ ಕಾಶದಲ್ಲಿ ಶಿಶುಸಾಹಿತ್ಯದನ್ನು ನಿರ್ಮಿಸಿದ್ದಾರೆ. ಅಮಲನ ಕಥೆ, ಹಾಳೂರು, ಬೊಮ್ಮನ ಹಳ್ಳಿಯ ಕಿಂದರಿಜೋಗಿ—ಮೂರು ಕಥನಕವನಗಳು. ನನ್ನ ಮನೆ, ಮೇಘಪುರ, ಮರಿವಿಜ್ಞಾನಿ-ಮೂರು ಶಿಶುಗೀತೆಗಳು. ನನ್ನಗೋಪಾಲ ಹಾಗೂ ಮೋಡಣ್ಣನ ತಮ್ಮ—ಎರಡು ನಾಟಕಗಳು

ಸಣ್ಣ ಮಕ್ಕಳಲ್ಲಿರುವ ಕುತೂಹಲಪ್ರವೃತ್ತಿ, ರಮ್ಯಕಲ್ಪನಾವಿಲಾಸಗಳನ್ನು ಗಮನದಲ್ಲಿಟ್ಟುಕೊಂಡು ಅವರ ವ್ಯಕ್ತಿತ್ವವನ್ನು ರೂಪಿಸಲು ಬೇಕಾದ ಆದರ್ಶಗಳನ್ನು ತುಂಬಿ, ಮನೋಹರವಾದ ಗೀತೆ,ಕಥೆ,ನಾಟಕಗಳನ್ನು ನಿರ್ಮಿಸಿದಾಗ ಶಿಶುಸಾಹಿತ್ಯವು ಸಫಲವಾಗುತ್ತದೆ. ಅಲ್ಲಿ ಬಳಕೆಯಾಗುವ ಭಾಷೆಯೂ ಮಕ್ಕಳ ಅಳವಿನಲ್ಲಿದ್ದು ಅವರ ಭಾವಲೋಕದ ವಿಕಾಸಕ್ಕೆ ಸಹಾಯವಾಗಬೇಕು.

ವಿಶ್ವವನ್ನು ನಡೆಸುವ ಶಕ್ತಿಗೆ ತನ್ನನ್ನೇ ಅರ್ಪಿಸಿಕೊಂಡು, ಆ ಶಕ್ತಿಯನ್ನು ಅರಿಯಲು ಭಕ್ತಿಯು ಸಹಾಯಕ. ಈ ಭಕ್ತಿಭಾವವನ್ನು ಮಕ್ಕಳಲ್ಲಿ ಮೂಡಿಸಿ ಅರ

‡ ಆಕಾಶವಾಣಿ, ಧಾರವಾಡ ಅವರ ಕೃಪೆಯಿಂದ

ಳಿಸುವ ಉದ್ದೇಶದಿಂದ ರಚಿತವಾದ ಕಥನಕವನವು 'ಅಮಲನ ಕಥೆ.' ಇದು 'ಗೋವಿನ ಹಾಡು' ಕಾವ್ಯದ ಧಾಟಿಯಲ್ಲಿಯ ೧೯೦ ಪದ್ಯಗಳಿಂದ ಕೂಡಿದೆ. ೧೯೨೪ ರಲ್ಲಿ ರಚಿತವಾದ ಕವನ.

ಅಚ್ಯುತನ ಭಕ್ತನಾದ ಅಮಲನು ಸೌದೆ ತರಲು ಕಾಡಿಗೆ ಹೋಗುತ್ತಾನೆ. ಅಲ್ಲಿ ಸ್ವಲ್ಪ ವೇಳೆ ಮರ ಕಡಿದು ವಿಶ್ರಾಂತಿ ಪಡೆಯುತ್ತಾನೆ. ಆಗ ಹರಿಣವೊಂದು ಭಯ ತುಂಬಿ ಓಡಿ ಬರುತ್ತದೆ. ತನ್ನನ್ನು ಕೊಲ್ಲಲು ಬರುವ ಬೇಡನಿಂದ ರಕ್ಷಿಸಬೇಕೆಂದು ಅಮಲನಲ್ಲಿ ಪ್ರಾರ್ಥಿಸುತ್ತದೆ. ಆತ ಜಿಂಕೆಗೆ ಅಭಯ ನೀಡಿ ಅದನ್ನು ಬಚ್ಚಿಡುತ್ತಾನೆ. ಆಗ ಹರಿಣವನ್ನು ಬೆನ್ನಟ್ಟಿದ ಬೇಡನೂ ಬರುತ್ತಾನೆ. ಭಕ್ತ ಹಾಗೂ ಬೇಡರಲ್ಲಿ ವಾದವಿವಾದವಾಗಿ ಯುದ್ಧವೇ ನಡೆಯುತ್ತದೆ. ಯುದ್ಧದಲ್ಲಿ ಅಮಲನು ಸೋಲುವ ಸಂದರ್ಭವು ಉಂಟಾಗಿ, ಆತನು ಭಗವಂತನ ಧ್ಯಾನ ಮಾಡುತ್ತಾನೆ. ಭಗವಂತ ಪ್ರತ್ಯಕ್ಷನಾಗುತ್ತಾನೆ; ಭಕ್ತ ಹಾಡಿ ಕುಣಿಯುತ್ತಾನೆ.

ಆ ದಿನ ಅಮಲನು ದಿನದ ವೇಳೆಗೆ ಮನೆಗೆ ಬಾರದಿರಲು, ಅವನ ಮಗ ಮಧುರ, ತಾಯಿಯ ಆಜ್ಞೆಯಂತೆ ತಂದೆಯನ್ನು ಹುಡುಕಿಕೊಂಡು ಬರುತ್ತಾನೆ. ದಾರಿಯಲ್ಲಿ ಒಮ್ಮೆಲೆ ಮಳೆ, ಗಾಳಿ, ಗಡುಗು–ಮಿಂಚು–ಸಿಡಿಲಿನ ಆರ್ಭಟವಾಗುತ್ತದೆ. ಇದರಿಂದ ಹೆದರಿದ ಮಧುರ ದೇವರನ್ನು ಭಜಿಸುತ್ತಾನೆ. ದೇವರು ಪ್ರತ್ಯಕ್ಷನಾಗಿ ಎಲ್ಲ ಕಷ್ಟವೂ ದೂರವಾಗುತ್ತದೆ. ಎಲ್ಲರೂ ಸುಖವಾಗಿ ಇರುತ್ತಾರೆ.

ಘಟನೆಗಳ ಸಂಯೋಜನೆಯಲ್ಲಿ ಕೌಶಲದ ಕೊರತೆಯಿದ್ದರೂ, ದೇವರ ಭಜನೆ–ದೇವರು ಪ್ರತ್ಯಕ್ಷವಾಗುವುದು ಅದ್ಭುತವಾಗಿ ಕಂಡು ಮಕ್ಕಳಿಗೆ ರಂಜನೆ ನೀಡುವ ಕಥನಕವನವಿದು.

ನಮಿಪೆ ಆದಿಯೆ ! ನಮಿಪೆ ಅಂತ್ಯವೆ !
ನಮಿಪೆ ವೇದಭೇದ ಛೇದನೆ !
ನಮಿಪೆ ಮೇಘವೆ ! ನಮಿಪೆ ವೇಗವೆ !
ನಮಿಪೆ ಜಗದಧಿ ಜ್ಞಾನಿಯೆ !

ನಮಾಮಿ ಪಾಪಪುಣ್ಯರಹಿತನೆ
ನಮಾಮಿ ಮೋದಚಿಂತರಹಿತನೆ !
ನಮಾಮಿ ಕಾಮಕ್ರೋಧರಹಿತನೆ
ನಮಾಮಿ ಚಿನ್ಮಯರೂಪನೆ !

ಇಂತಹ ಪ್ರಾರ್ಥನಾ ಪದ್ಯಗಳು ಮಕ್ಕಳ ಜ್ಞಾನಲೋಕ, ಭಾವಲೋಕ, ಭಾಷಾಪ್ರಪಂಚಪದಿಂದ ಬಹುದೂರ ನಿಲ್ಲುತ್ತವೆ. ಅರ್ಥ ತಿಳಿಯದಿದ್ದರೂ ಈ ಬಗೆಯ

ಸಂಸ್ಕಾರವು ಚಿಕ್ಕವಯಸ್ಸಿನಲ್ಲಿಯೇ ಆಗಬೇಕೆಂದು ಕವಿಗೆ ಹಂಬಲ. ಪ್ರಕೃತಿವರ್ಣನೆಯಲ್ಲಿಯೂ ಇದೇ ಬಗೆಯಲ್ಲಿ ಕವನವು ಮುಂದುವರಿದಾಗ ಕಾವ್ಯ ಫಲಪ್ರದವೆನಿಸದು :

ಎಲ್ಲಿ ನೋಡಿದರಲ್ಲಿ ಪೂಮಯ!
ಬಲ್ಲಿದರು ನೋಡಿದೊಡೆ ಚಿನುಮಯ!
ನಲ್ಲನಹ ನೋಟಕ್ಕೆ ಗತಿಮಯ!
ಎಲ್ಲಿಯುಂ ಮಯವೆಸೆದುದು!

ಅದೇ ಹುಲ್ಲಮೇಲಿನ ಹನಿಯನೊರಸುತ
ನಲ್ಲನಗಲುತ ಹೊರಟು ಮೇಯಲು
ಹುಲ್ಲೆ ತಾ ಸಡಗರದ ಮನದಿಂ
ಅಲ್ಲಿ ಚಿಮ್ಮಿ ಹರುಷದಿ

ಎಂಬ ವರ್ಣನೆಯಲ್ಲಿಯೂ

ಯಾರು ನನ್ನನು ಭಕ್ತಿಯಿಂದಲಿ
ಪಾರು ಮಾಡೈ ಎನುತ ಕರೆವರೋ
ದೂರದಿಂದಲಿ ಬರುತಲವರನು
ಪಾರುಮಾಡುವೆನೆಂದಿಗು

ಎಂಬ ಉಕ್ತಿಗಳಲ್ಲಿಯೂ ಭಾವ ಸುಲಭ ಭಾಷೆಯಲ್ಲಿ ಮೂಡಿ ಬರುತ್ತದೆ. ಭಗವದ್ಗೀತೆಯ ಮಾತುಗಳೂ ಸುಲಭವೆನಿಸುತ್ತವೆ.

ಹಾಡಿನ ದಾಟಿಯಿಂದ, ಅದರಲ್ಲಿಯ ಲಯದಿಂದ, ಅದ್ಭುತ ಘಟನೆಗಳಿಂದ ಮಕ್ಕಳಿಗೆ 'ಅಮಲನ ಕಥೆ' ಮೆಚ್ಚಿಗೆಯಾಗುತ್ತದೆ. ಪರಮಾತ್ಮ ತತ್ವ, ಭಕ್ತಿ, ಭಕ್ತಿಗೆ ಫಲ ಇವೆಲ್ಲವುಗಳಿಂದ ಭಾವುಕರಾದ ಹಿರಿಯರಿಗೂ ಮೆಚ್ಚಿನ ಕವನವಾಗುತ್ತದೆ.*

'ಹಾಳೂರು' ೧೯೨೬ರಲ್ಲಿ ಶಿಶುಸಾಹಿತ್ಯವೆಂದು ರಚಿತವಾದ ಇನ್ನೊಂದು ಕಥನಕವನ. ೫೩೮ ಸಾಲುಗಳಲ್ಲಿ ಮೂಡಿದ ಈ ಕವನದಲ್ಲಿ, ನಗರಜೀವನದ ಪ್ರಭಾವಕ್ಕೆ ಒಳಗಾಗಿ ಹಳ್ಳಿ ಹಾಳಾಗುತ್ತಿರುವುದು, ಹಳ್ಳಿ ತನ್ನ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಿರುವುದನ್ನು ಚಿತ್ರಿಸಲಾಗಿದೆ. ಹಿಂದಿನ ಕಾಲದ ಭಾರತದ ಹಳ್ಳಿಯ ಸಂಸ್ಕೃತಿಯ ವೈಭವದ ಚಿತ್ರ, ಇಂದಿನ ಹಾಳೂರಿನ ಚಿತ್ರ ಎರಡನ್ನೂ ವಿವರಿಸಿ

---

* 'ಗಂಗೋತ್ರಿ' ಗ್ರಂಥದಲ್ಲಿ ಕುವೆಂಪು ಸಾಹಿತ್ಯ ಪಟ್ಟಿಯಲ್ಲಿ 'ಅಮಲನ ಕಥೆ'ಯನ್ನು ಶಿಶುಸಾಹಿತ್ಯದಲ್ಲಿ ಸೇರಿಸಿಲ್ಲ (ನೋಡಿ ಪುಟ)

ಹಳ್ಳಿಗಳ ಮಾತಾಯಿ, ಭಾರತಿಯೆ, ಅಮ್ಮಾ,
ಹಳ್ಳಿಗಳು ಹಾಳಾಗದಂತೆ ಸಲಹಮ್ಮಾ

ಎಂಬ ಕಳಕಳಿ ಕವಿಯ ಅಂತರಂಗದಿಂದ ಹೊಮ್ಮಿದೆ. ಬಂಧದಲ್ಲಿ ಶೈಥಿಲ್ಯವಿದ್ದು ಉಪದೇಶಗೀತವಾಗಿ, ತೀರ ಸಾಮಾನ್ಯ ಕೃತಿ ಎನ್ನಿಸುತ್ತದೆ.

ಮಕ್ಕಳ ಮನವನ್ನು ಕುಣಿಸಿ, ಅವರ ಭಾವಲೋಕವನ್ನರಳಿಸಿ, ರಂಜನೆಯೊಡನೆ ನೀತಿಯನ್ನು ತುಂಬುವ 'ಬೊಮ್ಮನಹಳ್ಳಿಯ ಕಿಂದರಿ ಜೋಗಿ' ಯಶಸ್ಸಿನ ಶಿಖರದಲ್ಲಿ ನಿಲ್ಲುವ ಶಿಶುಗೀತೆ. ೪೨೦ ಸಾಲುಗಳಲ್ಲಿ ಬೆಳೆದು ನಿಂತ ಈ ಕಥನಕವನವು ಬ್ರೌನಿಂಗ ಕವಿಯ 'The Pied Piper of Hamelin' ದ ಭಾವಾನುವಾದವೆಂದು ಶ್ರೀ ಕುವೆಂಪು ಹೇಳಿದ್ದಾರೆ. ಮೂಲಕಥೆಯ ಅಸ್ಥಿಪಂಜರಕ್ಕೆ ಭಾರತೀಯ ಸಂಸ್ಕೃತಿಯ ರಕ್ತಮಾಂಸವನ್ನು ತುಂಬಿ, ಶಿಶುಗಳ ಮುಗ್ಧ ಮನಕ್ಕೆ ರುಚಿಯೆನಿಸುವ ಭಾವ, ಭಾಷೆ, ಛಂದಸ್ಸುಗಳ ಹೊದಿಕೆ ಹಾಕಿ ನಾದಮಾಧುರ್ಯದ ಜೀವ ತುಂಬಿದ ಸ್ವತಂತ್ರ ಕೃತಿ ಇದು.

ಇಂದು ಕಿಂದರಿಜೋಗಿಯ ಕಥೆಯನ್ನು ತಿಳಿಯದ ಕನ್ನಡ ಶಿಶುವಿಲ್ಲ; ಅದನ್ನು ಹಾಡಿಕುಣಿಯದ ಮಗುವಿಲ್ಲ.

ಇಲಿಗಳ ಹಾವಳಿಯಿಂದ ಅಸ್ತವ್ಯಸ್ತವಾದ ಬೊಮ್ಮನಹಳ್ಳಿ; ಅವುಗಳ ಕಾಟದಿಂದ ಮುಕ್ತರಾಗಲು ಜನರು ಮಾಡಿದ ಯೋಜನೆ; ಕಿಂದರಿಜೋಗಿಯ ಆಗಮನ, ಇಲಿಗಳ ನಾಶ; ಅವನಿಗೆ ಕೊಡಬೇಕಾದ ಹಣಕ್ಕೆ ಮೋಸ ಮಾಡಿದಾಗ ಉಂಟಾದ ದುರಂತ ಇಲ್ಲಿಯ ಕಥಾವಸ್ತು.

ಆರಂಭದಲ್ಲಿ ಬರುವ 'ಇಲಿಗಳ ಕಾಟ'ದ ವರ್ಣನೆಯೇ ಮಕ್ಕಳ ಮನಸ್ಸನ್ನು ಸೆರೆ ಹಿಡಿಯುತ್ತದೆ. ಇಲ್ಲಿಯ ಭಾಷೆ, ನಾದಮಯತೆ ಮಕ್ಕಳು ಕುಣಿಯುವಂತೆ ಮಾಡುತ್ತದೆ.

ಅಲ್ಲೇನಿಲಿಗಳ ಕಾಟವೆ ಕಾಟ !
ಅಲ್ಲಿಯ ಜನಗಳಿಗತಿಗೋಳಾಟ !

ಇಲಿಗಳು ಬಡಿದುವು ನಾಯಿಗಳ !
ಇಲಿಗಳು ಕಡಿದುವು ಬೆಕ್ಕುಗಳ !

ಕೆಲವನು ಕೊಂದುವು, ಕೆಲವನು ತಿಂದುವು,
ಕೆಲವನು ಬೆದರಿಸಿ ಹಿಂಬಾಲಿಸಿದುವು

ಅಲ್ಲಿಯ ಮೂಷಿಕನಿಕರವು ಸೊಕ್ಕಿ
ಎಲ್ಲರ ಮೇಲೆಯು ಕೈಬಾಯಿಕ್ಕಿ
ಹೆದರಿಕೆಯಿಲ್ಲದೆ ಬೆದರಿಕೆಯಿಲ್ಲದೆ
ಕುಣಿದುವು ಯಾರನು ಲೆಕ್ಕಿಸದೆ !

ಇಲಿಗಳು ಅಡುಗೆಯ ಭಟ್ಟನ ಕೈಯಲ್ಲಿಯ ಸಟ್ಟುಗವನ್ನು ನೆಕ್ಕುವುದು ಟೋಪಿಯ ಒಳಗಡೆ ಗೂಡು ಮಾಡಿ ಮರಿ ಇಡುವುದು, ಕೇಶಚ್ಛೇದ ಮಾಡುವುದು, ಗೌಡರ ಒಳಿ ಗಲಾಟೆ, ಗರತಿಯರ ಹರಟೆಗೆ ತೊಂದರೆ, ಶೇಷಕ್ಕನ ವೇಣಿ ಇಲಿಗಳಿಗೆ ಫೇಣಿಯಾಗುವುದು, ಸಿದ್ಧೋಜೈಗಳ ಜೇಬಿನಿಂದ ಹೆಳವಿಲಿ ನೆಗೆಯುವುದು, ಜಟ್ಟಕ್ಕ ಕೆರೆಗೆ ಹಾರುವುದು, ಜನಿವಾರ ಇಲಿಗಳಿಗೆ ಆಹಾರವಾಗುವುದು–ಒಂದೊಂದೂ ಕನ್ನಡ ಹಳ್ಳಿಯ, ಕನ್ನಡ ಜನತೆಯ ಚಿತ್ರಗಳನ್ನು ಕೊಡುವುದಲ್ಲದೆ ಕತೆಗೆ ನೈಜತೆಯನ್ನು ತರುತ್ತವೆ. ಇಲಿಗಳನ್ನು ಕೊಲ್ಲಲು ಜನರು ಮಾಡಿದ ಪ್ರಯತ್ನ, ಅದರ ಫಲ ಮಕ್ಕಳಲ್ಲಿ ನಗೆಯ ಹೊನಲನ್ನೆಬ್ಬಿಸುತ್ತದೆ.

ಕಡಿದರೆ ಮುರಿದವು ಕತ್ತಿಗಳೆಲ್ಲಾ,
ಹೊಡೆದರೆ ಮುರಿದುವು ಕೋಲುಗಳು
ಇಲಿಗಳ ಬೇಟೆಯನಾಡುತಲಿರಲು
ಮುರಿದುವು ತಿಮ್ಮನ ಕಾಲುಗಳು !

ಗೌಡನ ಬಳಿಗೆ ಜನರು ಗುಂಪಾಗಿ ಸೇರುವುದು, ಬೈಯುವುದಕ್ಕೆ ಆರಂಭಿಸುವುದು, ಗೌಡ ಚಾವಡಿಯಲ್ಲಿ ಸಭೆ ಸೇರಿಸುವುದು ತುಂಬ ಸುಂದರವಾಗಿ ಮೂಡಿವೆ. ಸಭೆಯಲ್ಲಿ—

ಹೊರಟವು ಯುಕ್ತಿಯ ಮಾತುಗಳು,
ಮಾತೊಳು ಮನೆಯನು ಕಟ್ಟಿದರು
ಅಂತೂ ಇಲಿಗಳ ಕೊಲ್ಲುವ ಬಗೆಯು
ಒಬ್ಬರಿಗಾದರು ಹೊಳೆಯಲೆ ಇಲ್ಲ.
ಗೌಡನು ತಲೆತಲೆ ಹೊಡಕೊಂಡ;
ಅಲ್ಲದೆ ಎದೆ ಎದೆ ಬಡಕೊಂಡ

ಕೊನೆಗೆ ಗೌಡ ಇಲಿಗಳ ಕೊಲ್ಲುವ ದಾರಿ ತೋರಿದವರಿಗೆ ಆರು ಸಾವಿರ ನಾಣ್ಯ ಕೊಡುವುದಾಗಿ ಸಾರಿದ. ಆಗ ಮಂಗೈಶೆಟ್ಟರು ಗೋಳಾಡಿದ ಬಗೆ ಇನ್ನೊಂದು ನಗೆಬುಗ್ಗೆ.

ಆ ವೇಳೆಗೆ ಕಿಂದರಿಯ ಜೋಗಿಯ ಆಗಮನವಾಗುತ್ತದೆ. ಜನರೆಲ್ಲ ಅವನನ್ನು ನೋಡಿ ಬೆರಗಾಗುತ್ತಾರೆ ಅವನ ಚಿತ್ರ ಅದ್ಭುತ. ಆತ:

ಕೆದರಿದ ಕೂದಲ ಗಡ್ಡದ ಜೋಗಿ!
ನಾನಾ ಬಣ್ಣದ ಬಟ್ಟೆಯ ಜೋಗಿ!
ಕೈಯಲಿ ಕಿಂದರಿ ಹಿಡಿದಾ ಜೋಗಿ!
ಕುದುರೆಯ ಗೊರಸಿನ ಅಡಿಗಳ ಜೋಗಿ
ಕಡವೆಯ ಕೊಂಬಿನ ತಲೆಯಾ ಜೋಗಿ
ಆನೆಯ ಕಿವಿಗಳ ಕಿಂದರಿ ಜೋಗಿ

ಈ ವಿಚಿತ್ರ ವರ್ಣನೆ ಮಕ್ಕಳು ನಗುವುದಕ್ಕೆ ಮಾತ್ರವಲ್ಲ. ಅದ್ಭುತ ಕಾರ್ಯ ಮಾಡುವ ಜೋಗಿಯ ಆಕಾರವೂ ಅದ್ಭುತ! ಗೌಡನು ಆತನಿಗೆ, ಇಲಿಗಳನ್ನು ಕೊಂದರೆ, 'ಆರೇಕಿನ್ನೆರಡಾದರೂ ಕೊಡುವೆನು' ಎಂದು ಮಾತು ಕೊಡುತ್ತಾನೆ.

ಕಿಂದರಿಜೋಗಿಯು ಶಿವ-ವಿಷ್ಣುವಿನಂತಹ ದೇವತೆಗಳಿಗೂ ಆಗದಿದ್ದ ಮೂಷಿಕ ಸಂಹಾರವನ್ನು ತಾನು ಮಾಡುವುದನ್ನು ತಿಳಿಸುತ್ತಾನೆ. ಮಕ್ಕಳ ಕಲ್ಪನಾಶಕ್ತಿಗೆ ಚಾಲನೆ ಕೊಡುವ ಈ ಭಾಗವು ಭಾರತದ ಪುರಾಣಗಳಿಗೆ ಹೊಂದಿಕೆಯಾಗುವಂತಹುದು. ಜೋಗಿ ಕಿಂದರಿ ನುಡಿಸತೊಡಗಿದರೆ, ಇಲಿಗಳು ಓಡೋಡಿ ಬರತೊಡಗಿದುವು.

ಇಲಿಗಳು! ಇಲಿಗಳು! ಇಲಿಗಳ ಹಿಂಡು!
ಬಳಬಳ ಬಂದುವು ಇಲಿಗಳ ದಂಡು!
.. ..
ಸಣ್ಣಿಲಿ, ದೊಡ್ಡಿಲಿ, ಮೂಗಿಲಿ, ಸುಂಡಿಲಿ,
ಅಣ್ಣಿಲಿ, ತಮ್ಮಿಲಿ, ಅವ್ವಿಲಿ, ಅಪ್ಪಿಲಿ,
ಮಾವಿಲಿ, ಭಾವಿಲಿ, ಅಕ್ಕಿಲಿ, ತಂಗಿಲಿ,
ಗಂಡಿಲಿ, ಹೆಣ್ಣಿಲಿ, ಮುದುಕಿಲಿ, ಹುಡುಗಿಲಿ,
ಎಲ್ಲಾ ಬಂದುವು ಓಡೋಡಿ!

ಈ ಸಾಲುಗಳನ್ನು ಓದುವಾಗ ಕಿಂದರಿಯ ನಾದ ಸುತ್ತೆಲ್ಲ ಹರಡಿದಂತಾಗುತ್ತದೆ: ಮಕ್ಕಳ ಮನಸ್ಸನ್ನು ತುಂಬುತ್ತದೆ.

ಇಲಿಗಳು ಜೋಗಿಯ ಹಿಂದೆ ಸಾಗಿ ಹೊಳೆಯ ನೀರಿನಲ್ಲಿ ಮುಳುಗುತ್ತವೆ. ರಾವಣನಂದದ ಮೂಷಿಕವ್ಯೂಹ ಉಳಿಯುತ್ತದೆ. ಕಿಂದರಿ ನಾದದಲ್ಲಿ ಬಗೆ ಬಗೆಯ

ತಿಂಡಿಗಳನ್ನು ಹೋಳಿಗೆ, ಹಲ್ವ, ಮಿಠಾಯಿ, ಜಿಣ್ಣೆ ಮುದ್ದೆಗಳನ್ನೆಲ್ಲ ಕಂಡುವಂತೆ ಇಲಿಗಳು!

ಗೌಡನ ಬಳಿಗೆ ತಿರುಗಿಬಂದ ಜೋಗಿ, ಕೊಟ್ಟ ಭಾಷೆಯಂತೆ ಆರು ಸಾವಿರ ನಾಣ್ಯಕೊಡಲು ಗೌಡನನ್ನು ಕೇಳುತ್ತಾನೆ. ಗೌಡ ಈಗ ಹೊಳೆದಾಟಿದ ವ್ಯಕ್ತಿ! ಆಡಿವಂತೆ ಹಣ ಕೊಡದೆ ಐದಾರು ಕಾಸು ಕೊಡಲು ಸಿದ್ಧನಾಗುತ್ತಾನೆ ಸಿಟ್ಟಾದ ಜೋಗಿ ಮತ್ತೆ ಕಿಂದರಿ ನುಡಿಸತೊಡಗಿದ. ಆ ಸಂಗೀತಕ್ಕೆ ಮರುಳಾದ ಊರ ಮಕ್ಕಳೆಲ್ಲ ಜೋಗಿಯ ಹಿಂದೆ ನಡೆಯುತ್ತಾರೆ. ಊರ ಬಳಿಯ ಗುಡ್ಡಕ್ಕೆ ಬಂದಾಗ ಅದು ಬಾಯಿ ತೆರೆಯುತ್ತದೆ ಒಳಗೆ ಸಾಗಿದ ಜೋಗಿಯ ಹಿಂದೆ ಮಕ್ಕಳೂ ಒಳಗೆ ಹೋಗುತ್ತಾರೆ. ಗುಡ್ಡ ಬಾಯಿ ಮುಚ್ಚಿಕೊಳ್ಳುತ್ತದೆ. ಕುಂಟನೊಬ್ಬ ಹಿಂದೆ ಉಳಿಯುತ್ತಾನೆ.

ಈ ಭಾಗದಲ್ಲಿ, ಮಕ್ಕಳು ಓಡಿ ಬರುವ ಚಿತ್ರವೂ ಅಷ್ಟೇ ಸುಂದರವಾಗಿದೆ.

ಟಿಂಗ್! ಟಿಂಗ್! ಟಿಂಗ್! ಟಿಂಗ್! ನಾದವ ಕೇಳಿ
ಚಂಗ್! ಚಂಗ್! ನೆಗೆದರು ಬಾಲಕರು

ಮಕ್ಕಳನ್ನು ಕಳೆದುಕೊಂಡ ಊರ ಜನರೆಲ್ಲ ಗೌಡನಿಗೆ ಛೀ ಹಾಕುತ್ತಾರೆ ಸಹಜವಾಗಿ ಈ ಸಂದರ್ಭದಲ್ಲಿ ನೀತಿ ಮೂಡಿ ಬರುತ್ತದೆ:

ಭಾಷೆಯ ಕೊಟ್ಟರೆ, ಮೂರ್ತೀ, ನಾವು
ಮೋಸವ ಮಾಡದೆ ಸಲ್ಲಿಸಬೇಕು
ಆದುದರಿಂದ, ಮೂರ್ತೀ, ಕೇಳು
ಸತ್ಯವನೆಂದೂ ತೆಜಿಸದೆ ಬಾಳು!

ಯಶಸ್ವಿಯಾದ ಕಥನತಂತ್ರ, ಶಬ್ದ-ಚಿತ್ರಗಳ ಸುಂದರ ಸಂಯೋಜನೆ, ಮಕ್ಕಳನ್ನು ಕುಣಿಸುವ ಭಾಷೆ-ಛಂದಸ್ಸುಗಳಿಂದ ಇದು ಕನ್ನಡ ಶಿಶು ಸಾಹಿತ್ಯದಲ್ಲಿ ಶಾಶ್ವತವಾಗಿ ನಿಲ್ಲುವ ಕಥನಕವನವಾಗಿದೆ.

ಶಿಶುಗೀತಾಂಜಲಿ ಎಂದು ಪ್ರಕಟವಾದ 'ನನ್ನ ಮನೆ'. 'ಮೇಘಪುರ', ಮರಿ ವಿಜ್ಞಾನಿ ಕವನಸಂಕಲನಗಳಲ್ಲಿ ಒಟ್ಟು ೪೯ ಗೀತೆಗಳಿವೆ. ನನ್ನಮನೆ ೧೯೩೭ ರಲ್ಲಿ ರಚಿತವಾಗಿ ೧೯೪೬ ರಲ್ಲಿ ಪುಸ್ತಕರೂಪದಲ್ಲಿ ಬಂದಿದೆ. ಉಳಿದ ಎರಡೂ ೧೯೪೭ ರಲ್ಲಿ ಪ್ರಕಟವಾಗಿವೆ.

ನನ್ನಮನೆ ಸಂಕಲನದ 'ಪ್ರೊಡೆಯ ಹಕ್ಕಿ, ಎಡೆಯ ಹಕ್ಕಿ'ಯಲ್ಲಿ ನಿಸರ್ಗದ ಕೂಗುವ ಹಕ್ಕಿಗೆ ಮರುದನಿಗೊಡುವ ಎಡೆಯ ಹಕ್ಕಿಯ-ಕವಿಮನೋಭಾವದ ಚಿತ್ರಣ

ವಿದೆ. ನಿಸರ್ಗದೊಡನೆ ಬೆರೆತು ಆನಂದಾನುಭೂತಿ ಪಡೆಯಲು ಕವಿ ಸೂಚಿಸುತ್ತಾರೆ- ಅದೂ ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ಭಾಷೆಯಲ್ಲಿ; ಅವರಿಗೆ ಮೆಚ್ಚಿಕೆ ಯಾಗುವ ನಾದಲಯದಲ್ಲಿ. 'ಬಣ್ಣದ ಚುಕ್ಕಿ' ಮಗುವಿನ ಆಸೆಯನ್ನು ಮೂಡಿಸುತ್ತದೆ. 'ಅರ್ಧಚಂದ್ರ'ದಲ್ಲಿ ಚಂದ್ರನು ಪೆಪ್ಪರಮೆಂಟಾಗಿ ಕಂಡು ಕಲ್ಪನೆ ಮಕ್ಕಳಿಗೆ ರುಚಿಸುತ್ತದೆ. ಆದರೆ,

ದೇವರ ಬಾಲಕನಾಗಲು ಒಲ್ಲೆ;
ಆತನ ಮೀರಿಹೆ ನೀನಮ್ಮಾ!
ತಾಯಿಯನಗಲಿಸಿ ದೇವರ ಹಿಡಿಸುವ
ಪೆಪ್ಪರಮೆಂಟೂ ಬೇಡಮ್ಮಾ!

ಎಂಬುದು ಮಕ್ಕಳ ಕಲ್ಪನಾಲೋಕವನ್ನು ಮೀರುತ್ತದೆ. 'ಮೂರ್ತಿಯ ಚಂದ್ರ' ದಲ್ಲಿಯ

ಎಲ್ಲಿಗೆ ನಾ ಹೋದರಲ್ಲಿಗೆ ಬರುವನು
ಅಮ್ಮ, ಚಂದಿರ ನನ್ನವನು!

ಎಂಬುದು ಮಗುವಿನ ಸಹಜ ಉದ್ಗಾರ ಮಗುವಿನ ಅನುಭವ. ಉದ್ಗಾರ ಎರಡೂ ಹೃದ್ಯವಾಗಿವೆ.

'ಸಂಜೆಯ ರವಿ' ಕವನದಲ್ಲಿ ಮಗು ಸೂರ್ಯನನ್ನು ತರಲು ಹೋಗುವೆ ನೆನ್ನುವುದು ಸಹಜಸುಂದರ ಕಲ್ಪನೆ. ಕೊನೆಯಲ್ಲಿ ತಾಯಿ ಮಗುವನ್ನು ಚುಂಬಿಸಿ

ಕಂದಾ! ಎನ್ನಯ ಸೂರ್ಯನು ನೀನಿರೆ
ಜಗದಾ ಸೂರ್ಯನು ಎನಗೇಕೆ?!

ಎನ್ನುವಾಗ ವಾತ್ಸಲ್ಯ ಅರಳಿ ನಿಲ್ಲುತ್ತದೆ.

'ಕಾಮನ ಬಿಲ್ಲು ಕಮಾನು ಕಟ್ಟಿದೆ'-ಇದರ ಕಲ್ಪನೆ ರಮ್ಯವಾಗಿದೆ; ಆದರೆ ಮಕ್ಕಳ ಭಾವಲೋಕಕ್ಕೆ ನಿಲುಕುವುದು ಕಷ್ಟ. 'ಹಣ' ಕವನವು ಉಪದೇಶ ತುಂಬಿ ಹೃದ್ಯತೆಯನ್ನು ಕಳೆದುಕೊಂಡಿದೆ. ಹೃದ್ಯ ಬಂಧದ 'ಒಡವೆಗಳು' ಕವನದಲ್ಲಿ

ನನ್ನೀ ಶಿಶುತನ ನಿನ್ನೀ ತಾಯ್ತನ
ಎರಡೇ ಒಡವೆಗಳೆಮಗಮ್ಮಾ

—ಈ ತತ್ವ ಮಕ್ಕಳಿಗೆ ಅರ್ಥವಾಗದು; ಆದರೆ ಈ ವಾತ್ಸಲ್ಯ, ಸ್ನೇಹದ ಆದರ್ಶಗಳು ಮಕ್ಕಳಲ್ಲಿ ಆರಂಭದಿಂದಲೇ ತುಂಬಿಕೊಳ್ಳಬೇಕು. ಇಂತಹ ಅರ್ಥಪೂರ್ಣ ರಮಣೀಯ ಸಾಲುಗಳನ್ನು 'ಮೂರ್ತಿಯ ಬೆಳ್ಮುಗಿಲು' ಕವನದಲ್ಲಿಯೂ ಕಾಣುತ್ತೇವೆ. ಕಾವ್ಯವು ತತ್ವಜ್ಞಾನದೆಡೆ ಮುಖಮಾಡುವುದರಿಂದ ಶಿಶುಗಳಿಗೆ ಕಠಿನವೆನಿಸುತ್ತವೆ.

'ಗುರು' ಒಂದು ಚೆಲುವಾದ ಗೀತೆ. ಸಂಪಿಗೆಯನ್ನು ತಂಪಿಗೆಯೆಂದು ಕರೆಯಲು ಹೇಳುವ ಮಗುವಿನ ಬಾಯಲ್ಲಿ ಸಂಪಿಗೆ—ತಂಪಿಗೆಯೇ ಆಗುತ್ತದೆ. ಈ ಸ್ವಾಭಾವಿಕ ಉಚ್ಚಾರಕ್ಕೆ ಕಾರಣ ಶೋಧಿಸುವಂತಿರುವ ಈ ಸುಂದರ ಕವನದಲ್ಲಿ

ಜನರೇನಮ್ಮಾ, ಹಿಂದಿನದೆಂದರೆ
ಕಂಗಳ ಮುಚ್ಚಿಯೆ ಪೂಜಿಪರ

ಎಂಬ ದೊಡ್ಡವರ ವಿಚಾರ ಇಲ್ಲದಿದ್ದರೆ ಚೆನ್ನಾಗಿತ್ತು.

'ಮರಿವಿಜ್ಞಾನಿ' ಸಂಗ್ರಹದಲ್ಲಿ ಹದಿಮೂರು ಗೀತೆಗಳಿವೆ. 'ಹಿರೇತನ'ದಲ್ಲಿ ತಂಗಿಯನ್ನು ಹೆಡ್ಡಳನ್ನಾಗಿಸುವ ಶಿಶು, 'ಹೇರಾಸೆ'ಯಲ್ಲಿ ದೊಡ್ಡವನಾಗುವ ಆಸೆ ತಾಳುತ್ತದೆ. 'ಹೂವುಗಳು' ಮತ್ತು 'ಮಲ್ಲಿಗೆ ಹೂಗಳು' ಕವಿಯ ನಿಸರ್ಗಪ್ರೀತಿಯಿಂದ ಪ್ರೇರಣೆಗೊಂಡುವು. ಮಗುವಿನ ಮನಸ್ಸಿನಲ್ಲಿ ನಿಂತು ಕವಿ ನಿಸರ್ಗವನ್ನು ಕಂಡಿದ್ದಾರೆ. 'ಸೋತೇ ನೀನ್, ಗೆದ್ದೇ ನಾನ್' ಮಗುವಿನ ಚೇಷ್ಟೆಯ ಅಭಿವ್ಯಕ್ತಿ. 'ಹೂವಿನ ಬೇಲಿ'ಯ,

ಮುಡಿಯಲು ಬೇಲಿಯು ಹೂಗಳ ಕೊಡುವೆನು:
ಹಾಡಲು ಹಕ್ಕಿಗಳಿನಿದನಿಯ !
ಹೊದೆಯಲು ಕೊಡುವೆನು ಕಾಮನ ಬಿಲ್ಲಿನ
ಹಕ್ಕಿಯ ಗರಿಗಳ ಮೋಹವನು

ಈ ಕಲ್ಪನೆ ರಮ್ಯವಾಗಿದೆ. 'ಕೈ ಮುಚ್ಚಾಟ', 'ಅಮ್ಮನ ಮೂರ್ತಿ'ಗಳಲ್ಲಿ ತತ್ವಜ್ಞಾನ ಹೆಚ್ಚಾಗಿದೆ. 'ಮೂರ್ತಿಯ ವಿಜ್ಞಾನ' ಮಕ್ಕಳ ಕಲ್ಪನೆಗೆ ದೂರ ಎನಿಸುತ್ತದೆ. ಈ ಸಂಗ್ರಹದ ಕವನಗಳಲ್ಲಿ ಹಿರಿಯರ ಭಾವಭಾರವನ್ನು ಮಕ್ಕಳ ಮನಸ್ಸಿನ ಮೇಲೆ ಇಟ್ಟಂತಾಗಿದೆ.

'ಮೇಘಪುರ'ದಲ್ಲಿ ಹನ್ನೊಂದು ಕವನಗಳಿವೆ. ಇಲ್ಲಿಯ ಕವನಗಳೆಲ್ಲವೂ ಕವಿಯು ಆರಂಭದಲ್ಲಿ ತಿಳಿಸಿದಂತೆ—

'ದೊಡ್ಡವರೆಲ್ಲರ ಹೃದಯದಿ ಕಟ್ಟಿಹ
ತೊಟ್ಟಿಲ ಲೋಕದಲಿ

ಹುಟ್ಟಿ ಬಂದುವು. ದಿಪಿಜತ್ಕಕೆ ಮನುಜಪಶು ಹಾರಬೇಕೆಂಬ, ಏರಬೇಕೆಂಬ ಆಶೆಯಿಂದ ನಿರ್ಮಿತವಾದುವು. ಈ ಕವನಗಳ ಭಾವ, ಭಾಷೆ, ಕಲ್ಪನೆ–ಎಲ್ಲವೂ 'ದೊಡ್ಡವರವು'. ಇವುಗಳನ್ನು ಶಿಶುಗೀತೆಯೆನ್ನುವುದು 'ಮನುಜನ ಕಿರಿಯ ರೂಪ ಮಗು' ಎಂದಂತೆ.

ಈ ನೂರು ಸಂಕಲನಗಳಲ್ಲಿ 'ಮರಿವಿಜ್ಞಾನಿ' ಮಕ್ಕಳ ಭಾವಲೋಕಕ್ಕೆ ದೂರ 'ಮೋಘಪುರ' ಮಾತ್ರೂ ದೂರ. 'ನನ್ನ ಮನೆ' ಕನ್ನಡ ಶಿಶುವಿನ ಭಾವಲೋಕದಲ್ಲಿ ಸದಾಕಾಲ ಉಳಿಯಬಲ್ಲುದು.

'ಮೋಡಣ್ಣನ ತಮ್ಮ' ಹಾಗೂ 'ನನ್ನ ಗೋಪಾಲ' ಕುವೆಂಪು ಅವರು ಮಕ್ಕಳಿಗಾಗಿ ಬರೆದ ನಾಟಕಗಳು.

೧೯೨೬ ರಲ್ಲಿ ರಚಿತವಾದ 'ಮೋಡಣ್ಣನ ತಮ್ಮ' ಒಂದು ಒಳ್ಳೆಯ ಸಂಭಾಷಣೆ. ಬಾನಲ್ಲಿ ತೇಲಿಬರುವ ಮೋಡದಂತೆ ತಾನೂ ತೇಲಬೇಕೆಂಬ ಮಗುವಿನ ಬಯಕೆಗೆ ಚೆಲುವಾದ ಅಭಿವ್ಯಕ್ತಿ. ಮೋಡ, ನಕ್ಷತ್ರಗಳು, ಚಂದ್ರ, ಕಾಡು, ಬನದ ಹಕ್ಕಿ ಮೊದಲಾದುವನ್ನು ಕಂಡು ಮಕ್ಕಳ ಕಲ್ಪನೆ ಗರಿಗೆದರುತ್ತದೆ. ಮೋಡವನ್ನು ಕಂಡು —

ಓ ಮೋಡಣ್ಣಾ, ಓ ಮೋಡಣ್ಣಾ !
ನಾನೂ ಬರುವೆನೊ ಕೈ ನೀಡಣ್ಣಾ

ಎಂದು ಆರಂಭಿಸಿ, ತನ್ನ ಆಸೆಯನ್ನು ಹೀಗೆ ತಿಳಿಸುತ್ತದೆ.

ಹರಿಯುವ ಹೊಳೆಗಳ ನೋಡಲು ಬೇಕೊ;
ಮೆರೆಯುವ ಪುರಗಳ ನೋಡಲು ಬೇಕೊ;
ಗಿರಿಯಾಚೆಯ ನಾ ನೋಡಲು ಬೇಕೊ;
ಹರಿಣಾಂಕನ ನಾ ಕೊಯ್ಯಲು ಬೇಕೋ !

ಮಗುವಿಗೆ ಮಿಂಚಿನ ಬಳೆ ಧರಿಸುವ, ಗುಡುಗಿನೊಡನೆ ಆಡುವ, ಗಿರಿಗಳನ್ನೇರುವ, ಮೋಡದೊಡನೆ ಆಡಬೇಕೆಂಬ ಆಸೆ. ಆವರೆ ಮೋಘವು

ಬರಬೇಡಣ್ಣಾ, ಬರಬೇಡಣ್ಣಾ
ಅವ್ವನು ಬಯ್ವಳು ನೀ ನೋಡಣ್ಣಾ

ಎಂದು ಹೇಳಿದಾಗ, ಬಳಿಯಲ್ಲಿ ಕಾಣುವ ಗಿರಿ-ಕಾಡುಗಳನ್ನು ಮಗು "ತನ್ನನ್ನು ಕರೆದೊಯ್ಯಲು ಹೇಳಿರೆಂದು" ಅವುಗಳಲ್ಲಿ ಪ್ರಾರ್ಥಿಸುತ್ತದೆ. ಮಗುವಿನ ಗೋಳಾಟವನ್ನು ಕಂಡು ಮೋಡಣ್ಣ ಬುದ್ಧಿ ಹೇಳುತ್ತದೆ.

ಧರ್ಮಮೋಘ ನೀನಾಗಲು ಬೇಕು;
ಧರ್ಮದ ಮಳೆಯನು ಸುರಿಸಲು ಬೇಕು.
ಸತ್ಯವನೆಂದಿಗು ಬಿಡಬೇಡ;

ಮಿಥ್ಯವನೆಂದೂ ಹಿಡಿಯಲು ಬೇಡ!
ಚಿತ್ತದಿ ಭಕ್ತಿಯ ಬೀಜವನು
ಬಿತ್ತುತ ಪಡೆಯೈ ಮುಕ್ತಿಯನು!

ಈ ತತ್ವಗಳು ಮಗುವಿಗೆ ಅರ್ಥವಾಗದಿರಬಹುದು. ಆದರೆ ಈ ಆದರ್ಶಗಳು ಎಳೆ ವಯಸ್ಸಿನಲ್ಲಿಯೇ ಮಕ್ಕಳ ಮನಸ್ಸಿನಲ್ಲಿ ಗಾಢವಾಗಿ ಮೂಡಬೇಕೆಂಬ ಆಸೆ ಕವಿಯದು.

'ನನ್ನ ಗೋಪಾಲ' ಮಕ್ಕಳು ಅಭಿನಯಿಸಲು ಅನುಕೂಲವಾದ ನಾಟಕ. ೧೯೩೮ ರಲ್ಲಿ ರಚಿತವಾದ ಈ ನಾಟಕ ಗದ್ಯದಲ್ಲಿದೆ ಇಲ್ಲಿ ಮೂಡಿದ ಭಕ್ತಿ, ಮಗುವಿನ ಮುಗ್ಧತೆ, ಮಾನಸಗುಣಗಳ ಸಹಜಚಿತ್ರಣ ಎಲ್ಲವೂ ಹೃದ್ಯ. ಮೃದುಭಾವಗಳಿಂದ ಕೂಡಿ, ಅಂತರಂಗವನ್ನು ತಟ್ಟುತ್ತದೆ

ನಿರ್ಮಲ ಭಕ್ತಿಗೆ, ನಿಷ್ಠೆಗೆ ದೇವನೊಲಿಯುತ್ತಾನೆ ಎಂಬ ತತ್ವವೇ ಇಲ್ಲಿಯೂ ಇದೆ. ಬಡತಾಯಿಯ ಮಗು ಗೋಪಾಲ ದೂರದ ಶಾಲೆಗೆ ಹೋಗುವಾಗ ಬೇಡಿದ ಸಹಾಯ, ಗುರುದಕ್ಷಿಣೆಗಾಗಿ ಸಹಾಯಗಳಿಗೆ, ತಾಯಿಯ ಭಕ್ತಿಗೆ ಮೆಚ್ಚಿದ ದೇವರೇ ಗೋಪಾಲಣ್ಣನಾಗಿ ಸಹಾಯನೀಡುವುದು ಕಥಾವಸ್ತು. ಮಗುವಿಗೆ ಬಾಲ-ಕೃಷ್ಣನ ದರ್ಶನ. ವೇಣುಗೋಪಾಲಮೂರ್ತಿಗೆ ಹಾಕಿದ ಹಾರ ಅವನ ಕೊರಳಲ್ಲಿರುವುದು, ಸಹಜತೆ ಅದ್ಭುತ ಎರಡನ್ನೂ ಒಳಗೊಂಡ ಚೆಲುವಾದ ಚಿತ್ರಗಳು ಮೊಸರಿನ ಕುಡಿಕೆ ಗುರುದಕ್ಷಿಣೆಯಾಗಿ ಬಂದು ಅಕ್ಷಯವಾಗುವುದು ಅದ್ಭುತ ಪವಾಡವೆನಿಸಿದರೂ, ಮಕ್ಕಳ ಭಾವಲೋಕದಲ್ಲಿ ಸಹಜಸಾಧ್ಯವಾದುದು.

ಪರಿಪಕ್ವ ಜೀವವಾದ ತಾಯಿ ತನ್ನ ಮಗನಲ್ಲಿಯೇ ಪರಮಾತ್ಮನನ್ನು ಕಾಣುತ್ತಾಳೆ. ದೇವರನ್ನು ಕಾಣಲು ಅಡವಿಗೆ ಓಡಿಬಂದ ಗುರುವಿಗೆ ದರ್ಶನ ವಾಗದು. ಕೊನೆಗೆ ಅವರೂ ಶಿಷ್ಯ ಗೋಪಾಲನಲ್ಲಿಯೇ ದೇವನನ್ನು ಕಾಣುತ್ತಾರೆ.

ಗೋಪಾಲ–ಗೋಪಾಲಣ್ಣರ ಆಟ, ಸರಸ, ತಾಯಿ–ಮಗುವಿನ ಮಧುರ ಪ್ರೀತಿ. ವನದ ಸೌಂದರ್ಯ. ಹಕ್ಕಿಗಳ ಕೂಜನ, ಕೃಷ್ಣನ ವೇಣುನಾದ ಸ್ವರ್ಗೀಯ ಆವರಣ ವನ್ನು ನಿರ್ಮಿಸಲು ಸಹಾಯಕವಾಗಿವೆ. ಭಕ್ತಿಭಾವವು ಮಕ್ಕಳ ಮನಮುಟ್ಟುವಂತೆ ಸರಳ-ಸುಲಭ ಭಾಷೆಯಲ್ಲಿ ಮೂಡಿದ ನಾಟಕವಿದು. ಎಳೆ ಮನಸ್ಸಿನ ಮೇಲೆ ಒಳ್ಳೆಯ ಸಂಸ್ಕಾರ ಮಾಡಬಲ್ಲ ನಾಟಕ.

ಶ್ರೀ ಕುವೆಂಪು ರಚಿಸಿದ ಶಿಶುಸಾಹಿತ್ಯವು ಉದಾತ್ತ ಆದರ್ಶಗಳಿಂದ ಪ್ರೇರಿತ ವಾದುದು. ಮಕ್ಕಳು ಮುಗಿಲೆತ್ತರ ಬೆಳೆಯಲಿ, ಘನವಾದ ವ್ಯಕ್ತಿತ್ವ ಬೆಳೆಸಿ ಕೊಳ್ಳಲಿ. ಒಳ್ಳೆಯದನ್ನೇ ಚಿಂತಿಸಲಿ. ನಿಸರ್ಗದಲ್ಲಿ ದೇವನನ್ನು ಕಾಣಲಿ ಎಂಬ ಅಭಿಲಾಷೆಯಿಂದ ಸೃಷ್ಟಿಗೊಂಡವು. ಇವುಗಳನ್ನು ರಚಿಸಿದ ಕವಿ ಮಕ್ಕಳ ಮನಸ್ಸಿನಲ್ಲಿ ಚಿರವಾದ ಸ್ಥಾನ ಪಡೆಯುತ್ತಾರೆ. ಕನ್ನಡ ಮಕ್ಕಳೆಲ್ಲ ಅವರಿಗೆ ಚಿರಋಣಿ

*ಕಾರಂತರ ಶಿಶುಸಾಹಿತ್ಯ

—ವಿ. ಜಿ. ಕುಲಕರ್ಣಿ

ಡಾ॥ ಶಿವರಾಮ ಕಾರಂತರು ನಮ್ಮ ಕನ್ನಡದ ಅತ್ಯಂತ ಪ್ರತಿಭಾವಂತರಾದ ಬರೆಹಗಾರರಲ್ಲಿ ಒಬ್ಬರು; ಕನ್ನಡದಲ್ಲಿ ಅಷ್ಟೇ ಏಕೆ ಭಾರತದಲ್ಲಿಯ, ಜಗತ್ತಿನಲ್ಲಿಯ ಲೇಖಕರನ್ನು ಪರಿಗಣಿಸಿದರೂ ಕಾರಂತರ ಸ್ಥಾನವು ಮೇಲ್ಮಟ್ಟದ್ದಾಗುತ್ತದೆ. ಕಾರಂತರ ವೈಶಿಷ್ಟ್ಯವೆಂದರೆ ಅವರು ಸೃಜನಶೀಲ ಸಾಹಿತ್ಯದಲ್ಲಿಯೂ ಬೌದ್ಧಿಕ ಸಾಹಿತ್ಯದಲ್ಲೂ ಸಮಸಮವಾಗಿ ಅಮೂಲ್ಯವಾದ ಸಾಹಿತ್ಯವನ್ನು ರಚನೆ ಮಾಡಿದ್ದಾರೆ. ಸಾಹಿತ್ಯ ರಚನೆಯಲ್ಲಷ್ಟೇ ಅಲ್ಲದೆ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿಯೂ ಮಹತ್ವದ ಕಾರ್ಯಗಳನ್ನು ಕೈಕೊಂಡು ಯಶಸ್ವಿಯಾಗಿ ಪೂರೈಸಿದ್ದಾರೆ. ಒಟ್ಟಿನಲ್ಲಿ ಅವರೊಬ್ಬ ಅಸಾಧಾರಣ ವ್ಯಕ್ತಿ. ಅವರು ತಮ್ಮ ಜೀವನದಲ್ಲಿ ಸಾಧಿಸಿದ ಕಾರ್ಯಗಳ ವ್ಯಾಪ್ತಿ ಮತ್ತು ಮಹತಿ ವಿಸ್ಮಯಕರವಾಗಿದೆ. ಇವನ್ನು ಪರಿಗಣಿಸಿದರೆ ಅವರ ವಿಷಯವಾಗಿ ಅಪಾರವಾದ ಆದರವೂ ಅಭಿಮಾನವೂ ಹುಟ್ಟುತ್ತವೆ. ಕಾರಂತರ ಎಲ್ಲಾ ಬರೆಹಗಳಲ್ಲಿ—ಅವು ಕಾದಂಬರಿಗಳೇ ಇರಲಿ, ನಾಟಕಗಳೇ ಇರಲಿ, ಪ್ರಬಂಧಗಳೇ ಇರಲಿ, ಶಿಶುಸಾಹಿತ್ಯವೇ ಇರಲಿ, ಬೌದ್ಧಿಕ ಸಾಹಿತ್ಯವೇ ಇರಲಿ, ಎಲ್ಲವುಗಳಲ್ಲಿಯೂ ಅವರ ಕಠೋರ ಪ್ರಾಮಾಣಿಕತೆ, ಅನುಭವಸಂಪನ್ನತೆ ಎದ್ದು ಕಾಣುತ್ತವೆ. ಅವರು ತಮ್ಮ ಆಂತರಿಕ ಮತ್ತು ಬಹಿರಂಗದ ಅನುಭವಕ್ಕೆ ಬಾರದ ಯಾವವಿಷಯವನ್ನೂ ಹೇಳುವದಿಲ್ಲ. ತಮಗೆ ಪ್ರಾಮಾಣಿಕವಾಗಿ ಎನಿಸದೆ ಇದ್ದ ಯಾವ ಮಾತನ್ನೂ ಆಡುವದಿಲ್ಲ [ಈ ರೀತಿಯಾದ ಅಂತರಂಗದ ಮತ್ತು ಬಹಿರಂಗದ ಸತ್ಯಸಂಧತೆಯನ್ನು ಲೇಖಕರಾದವರಲ್ಲಿ ಕಾಣುವದು ವಿರಳ.]

---

* ಆಕಾಶವಾಣಿ, ಧಾರವಾಡ ಅವರ ಕೃಪೆಯಿಂದ

ಕಾರಂತರು ತಮ್ಮ ಅವಿರತವಾದ ಕಾರ್ಯಭರದಲ್ಲಿ ಶಿಶುಸಾಹಿತ್ಯಕ್ಕೂ ವಿಶೇಷವಾದ ಗಮನ ಕೊಟ್ಟಿದ್ದಾರೆಂಬುದು ನಮಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಕನ್ನಡದಲ್ಲಿ ಶಿಶುಸಾಹಿತ್ಯವು ಹೆಚ್ಚಾಗಿ ಬೆಳೆದುಬಂದಿಲ್ಲ. ಇಂಗ್ಲಿಷ ಮೊದಲಾದ ಪಾಶ್ಚಾತ್ಯ ಸಾಹಿತ್ಯಗಳನ್ನು ನೋಡಿದರೆ ಅಲ್ಲಿಯ ಶಿಶುಸಾಹಿತ್ಯದ ವಿಸ್ತಾರವನ್ನೂ ವೈವಿಧ್ಯವನ್ನೂ ವೈಭವವನ್ನೂ ನೋಡಿದರೆ ನಮ್ಮ ಕನ್ನಡದ ಶಿಶುಸಾಹಿತ್ಯವು ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆಯೆಂದು ಹೇಳಬೇಕಾಗುತ್ತದೆ. ಕನ್ನಡದಲ್ಲಿ ಶಿಶುಸಾಹಿತ್ಯವನ್ನು ನಿರ್ಮಿಸಿದ ಕೆಲವರಲ್ಲಿ ಕಾರಂತರ ಸ್ಥಾನವು ಮೇಲ್ಮಟ್ಟದ್ದಾಗಿದೆ. ಈ ಬಾಲಸಾಹಿತ್ಯದಲ್ಲಿಯೂ ಕಾರಂತರ ಪ್ರತಿಭೆ, ಅನೇಕವಿಷಯಗಳ ಪರಿಜ್ಞಾನ, ಸುಲಭವಾಗಿ ಮಾರ್ಮಿಕವಾಗಿ ತಿಳಿಸಿಕೊಡುವ ಚಾತುರ್ಯ–ಇವೆಲವೂ ಕಾಣಬರುತ್ತವೆ. ಕಾರಂತರು ಮಕ್ಕಳಿಗಾಗಿ ಕಥೆಗಳನ್ನು ಬರೆದಿದ್ದಾರೆ, ನಾಟಕಗಳನ್ನು ಬರೆದಿದ್ದಾರೆ; ವಿಜ್ಞಾನವನ್ನು ಕುರಿತು ಬರೆದಿದ್ದಾರೆ; ಇತಿಹಾಸ ಭೂಗೋಲಗಳನ್ನು ಕುರಿತು ಬರೆದಿದ್ದಾರೆ. ವಿಶ್ವಕೋಶವನ್ನು ರಚಿಸಿದ್ದಾರೆ. ಹೀಗೆ ಕಾರಂತರ ಶಿಶುಸಾಹಿತ್ಯರಚನೆಯೂ ಅವರ ಪ್ರೌಢಸಾಹಿತ್ಯರಚನೆಯಂತೆ ವಿಸ್ತಾರವೂ ವೈವಿಧ್ಯಪೂರ್ಣವೂ ಆಗಿದೆ.

ನಮ್ಮ ಭಾರತೀಯ ಭಾಷೆಗಳಲ್ಲಿ ಮೊದಲಿನಿಂದಲೂ ಶಿಶುಸಾಹಿತ್ಯವು ಲಿಖಿತ ರೂಪದಲ್ಲಿ ಹೆಚ್ಚಾಗಿ ಬೆಳೆದು ಬಂದಂತೆ ಕಾಣುವದಿಲ್ಲ. ನಮ್ಮ ಎಲ್ಲಾ ವ್ಯವಹಾರಗಳಂತೆ ಮಕ್ಕಳಿಗಾದರೂ ಬಾಯಿ ಮಾತಿನಿಂದಲೇ ಶಿಕ್ಷಣಕೊಡುವದು ನಮ್ಮ ಪರಂಪರೆಯಾಗಿತ್ತು. ಕಥೆ ಹೇಳುವದು, ವಿವಿಧ ವಿಷಯಗಳನ್ನು ಕಲಿಸುವದು, ಅವರನ್ನು ರಂಜಿಸುವದು, ಯಾವುದಾದರೊಂದು ಕಸುಬನ್ನು ಕಲಿಸುವದು–ಇವೆಲ್ಲವೂ ಗುರುಹಿರಿಯರ ಮುಖದಿಂದ ನಡೆಯುತ್ತಿದ್ದವಲ್ಲದೆ ಪುಸ್ತಕಗಳ ಮುಖಾಂತರವಲ್ಲ. ಮುದ್ರಣಕಲೆಯು ಪ್ರಚಾರದಲ್ಲಿ ಬರುವದಕ್ಕಿಂತ ಮೊದಲು ಬಹುತರವಾಗಿ ಪ್ರಪಂಚದಲ್ಲೆಲ್ಲಾ ಇದೇ ಪದ್ಧತಿ ರೂಢವಾಗಿದ್ದಿರಬೇಕು. ಆದರೂ ನಮ್ಮ ದೇಶದಲ್ಲಿ ಪ್ರಪಂಚದಲ್ಲಿ ಅತ್ಯಂತ ಖ್ಯಾತಿಯನ್ನೂ ಜನಪ್ರಿಯತೆಯನ್ನೂ ಅಪಾರವಾಗಿ ಗಳಿಸಿದ ಪಂಚತಂತ್ರ ಹಿತೋಪದೇಶಗಳಂತಹ ಶಿಶುಸಾಹಿತ್ಯವು ಹುಟ್ಟಿತೆಂದು ನಾವು ಅಭಿಮಾನ ಪಟ್ಟುಕೊಳ್ಳಬೇಕಾದದ್ದು. ಪ್ರಾಣಿಕಥಾಸಾಹಿತ್ಯಕ್ಕೆ (fable literature) ಭಾರತವೇ ಉಗಮಸ್ಥಾನವೆಂದು 'ಅನೇಕ ಪಂಡಿತರ ಅಭಿಪ್ರಾಯವಾಗಿದೆ. ನಮ್ಮಲ್ಲಿ ಉಗಮ ಹೊಂದಿದ ಈ ಪ್ರಕಾರದ ಸಾಹಿತ್ಯವು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೂಪತಾಳಿ ಪ್ರಸಾರ ಹೊಂದಿತು.

ಹಿಂದಿನ ಕಾಲದ ಮಾತಂತಿರಲಿ; ಮುದ್ರಣಕಲೆಯು ಪ್ರಚಾರದಲ್ಲಿರುವ, ಪ್ರಗತಿ ಹೊಂದಿದ ಇಂದಿನ ದಿನಗಳಲ್ಲಿ ಪುಸ್ತಕಗಳೂ ಪುಸ್ತಕಾಲಯಗಳೂ ಪತ್ರಿಕೆಗಳೂ ಜ್ಞಾನ ಪ್ರಸಾರದ ಕಾರ್ಯದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತವೆ. ಮೊದಲಿನಂತೆ ಕೇವಲ ಗುರುಹಿರಿಯರ ಮುಖದಿಂದಲೇ ಈ ಕಾರ್ಯವಾಗಲಾರದು.

ಮಕ್ಕಳಿಗೆ ಒಂದು ವಿಶಿಷ್ಟಪ್ರಕಾರದ ಸಾಹಿತ್ಯ ರಚನೆಯಾಗಬೇಕಾಗುತ್ತದೆ. ವಯಸ್ಕರ ಸಾಹಿತ್ಯದಂತೆಯೇ ಮಕ್ಕಳಸಾಹಿತ್ಯವಿರಲಾರದು. ಅವರು ಯಾವ ವಿಷಯಗಳನ್ನು ಎಷ್ಟರಮಟ್ಟಿಗೆ ತಿಳಿದುಕೊಳ್ಳಬಹುದು, ಅವರಿಗೆ ತಿಳಿಯುವ ಭಾಷೆಯು ಇದೆಯೇ, ಅವರ ಮನಸ್ಸನ್ನು ಅವು ಆಕರ್ಷಿಸುವವೇ-ಇವೆಲ್ಲವನ್ನು ಗಣನೆಗೆ ತೆಗೆದುಕೊಂಡು ಮಕ್ಕಳಸಾಹಿತ್ಯ ರಚನೆಯಾಗಬೇಕಾಗುತ್ತದೆ. ಪಾಶ್ಚಾತ್ಯ ಭಾಷೆಗಳಲ್ಲಿ ಶಿಶುಸಾಹಿತ್ಯವು ವಿಪುಲವಾಗಿ ನಿರ್ಮಿತವಾಗಿದೆ. ಇನ್ನೂ ಆಗುತ್ತಲೇ ಇದೆ. ಮಕ್ಕಳ ಸಲುವಾಗಿಯೇ ಸಚಿತ್ರಪತ್ರಿಕೆಗಳು, ಪ್ರತ್ಯೇಕ ಪುಸ್ತಕಾಲಯಗಳು, ವಿವಿಧ ಜ್ಞಾನವನ್ನು ಮಾಡಿಕೊಡುವ ಪುಸ್ತಕಗಳು—ಇವೆಲ್ಲ ಸಾಕಷ್ಟು ಪ್ರಮಾಣದಲ್ಲಿ ಪ್ರಸಾರದಲ್ಲಿವೆ. ನಮ್ಮ ದೇಶದಲ್ಲಿಯಾದರೋ ಈ ಪ್ರಕಾರದ ಕೆಲಸ ಸಾಗಿದೆ-ಆದರೆ ಮಂದಗತಿಯಲ್ಲಿ ಸಾಗಿದೆ.

ಮಕ್ಕಳ ವರ್ಷವೆಂದು ಘೋಷಿಸಲ್ಪಟ್ಟ ಈ ವರ್ಷದಲ್ಲಿ ಎಂದರೆ ೧೯೭೯ರಲ್ಲಿ ಮಕ್ಕಳ ಸರ್ವತೋಮುಖವಾದ ಏಳಿಗೆಯ ವಿಷಯದಲ್ಲಿ ನಾನಾ ಪ್ರಕಾರದ ಚಟುವಟಿಕೆಗಳು ಪ್ರಾರಂಭವಾಗಿವೆ. ಬೇರೆ ಬೇರೆ ದೇಶಗಳ ಸರಕಾರಗಳೂ, ಸಾರ್ವಜನಿಕ ಸಂಸ್ಥೆಗಳೂ ಇದರಲ್ಲಿ ಆಸ್ಥೆವಹಿಸಿ ಎಷ್ಟೋ ಪ್ರಕಾರದ ಯೋಜನೆಗಳನ್ನು ಹಮ್ಮಿಕೊಂಡಿವೆ. ಶಿಶುಸಾಹಿತ್ಯ ನಿರ್ಮಿತಿಯೂ ಇಂಥ ಯೋಜನೆಗಳಲ್ಲಿ ಒಂದು. ಈ ಪ್ರಸಂಗದಲ್ಲಿ ನಮ್ಮ ಕನ್ನಡದ ಶಿಶುಸಾಹಿತ್ಯದ ವ್ಯಾಪ್ತಿಯೇನು, ಅದರ ಯೋಗ್ಯತೆಯೇನು, ಇನ್ನು ಮುಂದಿನ ಆವಶ್ಯಕತೆಗಳೇನು-ಇವೆಲ್ಲವುಗಳನ್ನು ಕುರಿತು ವಿವೇಚನೆ ಮಾಡಬೇಕಾಗಿದೆ. ಮೊದಲೇ ಹೇಳಿದಂತೆ ಕನ್ನಡದ ಶಿಶುಸಾಹಿತ್ಯ ನಿರ್ಮಾಪಕರಲ್ಲಿ ಕಾರಂತರಿಗೆ ಒಂದು ವಿಶಿಷ್ಟಸ್ಥಾನವು ಮೀಸಲಾಗಿದೆ. ಕಾರಂತರ ಶಿಶುಸಾಹಿತ್ಯದ ವ್ಯಾಪ್ತಿಯನ್ನೂ ವೈವಿಧ್ಯವನ್ನೂ ಮಹತಿಯನ್ನೂ ಕುರಿತು ಸಂಕ್ಷೇಪವಾಗಿ ಸಮಾಲೋಚಿಸಬೇಕಾಗಿದೆ.

ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಕಾರಂತರಿಗೆ ಮೊದಲಿನಿಂದಲೂ ತೀವ್ರತರವಾದ ಆಸ್ಥೆಯಿದೆ. ಇದೇ ಕಾರಣದಿಂದ ಕೆಲವು ವರ್ಷಗಳವರೆಗೆ ಪುತ್ತೂರಿನಲ್ಲಿ ಬಾಲವನವೆಂಬ ಮಕ್ಕಳ ಶಾಲೆಯನ್ನು ನಡೆಸಿದರು. ಅಲ್ಲಿ ಬೇರೆ ಬೇರೆ ಪ್ರಕಾರದ ಪ್ರಯೋಗಗಳನ್ನು ಮಾಡಿದರು. ಚಿಕ್ಕ ಮಕ್ಕಳಲ್ಲಿ ನಾನಾ ಪ್ರಕಾರಗಳ ಅಭಿರುಚಿಗಳನ್ನು ಬೆಳೆಯಿಸಿ ಅವರ ಮನಸ್ಸು ಹೃದಯಗಳು ವಿಕಾಸಗೊಳ್ಳುವಂತೆ ಮಾಡುವದೇ ಅವರ ಪ್ರಯೋಗಗಳ ಗುರಿಯಾಗಿತ್ತು. ನಮ್ಮಲ್ಲಿ ಪ್ರಚಲಿತವಿರುವ ಶಿಕ್ಷಣ ಪದ್ಧತಿಯ ಬಗ್ಗೆ ಕಾರಂತರಿಗೆ ತೀಕ್ಷ್ಣವಾದ ಅತೃಪ್ತಿಯಿದೆ. ಬಾಲಕರಿಗಾಗಿ ಅನೇಕ ರೀತಿಯ ಹೊಸಬಗೆಯ ಆಟಿಗೆಯ ವಸ್ತುಗಳನ್ನೂ ಅವರು ಕೆಲಕಾಲ ನಿರ್ಮಿಸುವದರಲ್ಲಿ ನಿರತರಾಗಿದ್ದರು. ಹೀಗೆ ಮಕ್ಕಳ ಮನೋವಿಕಾಸದಲ್ಲಿ ಆಸ್ಥೆ ವಹಿಸಿದ

ಕಾರಂತರು ಬರಹಗಾರರೂ ಆಗಿದ್ದರಿಂದ ಸ್ವಾಭಾವಿಕವಾಗಿಯೇ ಮಕ್ಕಳ ಸಾಹಿತ್ಯದ ರಚನೆಗೂ ಕೈ ಹಾಕಿದರು.

ಅವರು ರಚಿಸಿದ ಬಾಲಸಾಹಿತ್ಯದ ವ್ಯಾಪ್ತಿಯೂ ವೈವಿಧ್ಯವೂ ವಿಸ್ಮಯಕಾರಿಯಾಗಿದೆ; ಅತ್ಯಂತ ಬೆಲೆ ಬಾಳುವಂಥದಾಗಿದೆ. ಅವರ ಮೊಟ್ಟಮೊದಲನೆಯ ಮಕ್ಕಳ ಸಾಹಿತ್ಯದ ಕೃತಿಯೆಂದರೆ ಬಾಲಪ್ರಪಂಚ ಎಂಬ ಮಕ್ಕಳ ವಿಶ್ವಕೋಶ. ಇದು ಕನ್ನಡದಲ್ಲಿ ಅಷ್ಟೇ ಅಲ್ಲ ಭಾರತೀಯ ಭಾಷೆಗಳಲ್ಲಿಯೇ ಬಾಲಕರಿಗಾಗಿ ರಚಿತವಾದ ಮೊದಲನೆಯ ವಿಶ್ವಕೋಶ. ೧೯೩೬ರಲ್ಲಿ ಪ್ರಕಟವಾದ ಈ ಬೃಹದ್ಗ್ರಂಥವು ಮೂರು ಸಂಪುಟಗಳಲ್ಲಿದೆ ೧೮೦೦ ಪುಟಗಳಷ್ಟು ಗಾತ್ರವುಳ್ಳದ್ದಾಗಿದೆ. ಇದನ್ನು Arthor Mee ಅವರು ಸಂಪಾದಿಸಿದ ‘Both of knowledge’ ಎಂಬ ಇಂಗ್ಲೀಷ ಬಾಲವಿಶ್ವಕೋಶದ (Children's Encyclopaedia) ಮಾದರಿಯ ಮೇಲೆ ಯೋಜಿಸಲಾಗಿದೆ. ಆದರೆ ವಿಷಯ ನಿರೂಪಣೆ, ವಿಷಯಗಳ ಪರಿಯೋಜನೆ ಇವೆಲ್ಲವೂ ಕಾರಂತರ ಸ್ವಂತಿಕೆಯವೇ. ಈ ಬೃಹದ್ಗ್ರಂಥದ ಎಲ್ಲ ಬರವಣಿಗೆಯೂ ಒಬ್ಬ ವ್ಯಕ್ತಿಯಿಂದಲೇ, ಕಾರಂತರಿಂದಲೇ ಪೂರ್ತಿಯಾಯಿತೆಂಬುದು ನಮ್ಮನ್ನು ವಿಸ್ಮಯ ಸ್ತಂಭಿತರನ್ನಾಗಿ ಮಾಡುತ್ತದೆ. ಇದಕ್ಕೆ ಬೇಕಾಗುವ ಸಾವಿರಾರು ಚಿತ್ರಗಳನ್ನು ಪರಿಶ್ರಮ ಪಟ್ಟು ಅವರೇ ಸಂಗ್ರಹಿಸಿದ್ದಾರೆ; ಕೆಲವು ಚಿತ್ರಗಳನ್ನು ತಾವೇ ಬಿಡಿಸಿದ್ದಾರೆ.

ವಿಷಯ ವಿಭಜನೆ ಈ ರೀತಿಯಾಗಿದೆ. ಪ್ರಕೃತಿ ವಿಜ್ಞಾನ, ನಾಡು, ನೆಲೆವೀಡು, ಸಾಹಿತ್ಯ, ಕಲೆ, ಕ್ರೀಡಾವನ, ಇತಿಹಾಸರಂಗ, ಭೌತವಿಜ್ಞಾನ, ಯಂತ್ರಯುಗ, ವಿಶ್ವಕರ್ಮಸಾಧನೆ, ಜೀವನ ಚರಿತ್ರೆ, ಉದ್ಯೋಗ, ಸಾಮಾನ್ಯ ವಿಜ್ಞಾನ. ಈ ವಿಷಯಗಳಿಗೆಲ್ಲ ಹೊಂದಿಕೆಯಾಗುವ ಅನೇಕಾನೇಕ ಚಿತ್ರಗಳಿವೆ.

ಒಟ್ಟಿನಲ್ಲಿ ಇದೊಂದು ಮಕ್ಕಳಿಗೆ ಅತ್ಯಂತ ಉಪಯುಕ್ತವಾಗುವ ಪುಸ್ತಕ; ಮಕ್ಕಳಿಗಷ್ಟೇ ಅಲ್ಲ ವಯಸ್ಕರಿಗೂ ಉಪಯೋಗ ಬೀಳುವ ಗ್ರಂಥ. ಈಗ, ಈ ಗ್ರಂಥದ ಪ್ರತಿಗಳೆಲ್ಲ ತೀರಿಹೋಗಿವೆ. ಇದು ಪರಿಷ್ಕೃತವಾಗಿ ಮತ್ತೊಂದು ಆವೃತ್ತಿ ಹೊರಡಬೇಕಾಗಿದೆ. ಪ್ರತಿಯೊಂದು ಶಾಲೆಯಲ್ಲಿಯೂ ಅವಶ್ಯವಾಗಿ ಇರಲೇಬೇಕಾದ ಪುಸ್ತಕವಿದು. ಮನೆ ಮನೆಗಳಲ್ಲಿಯೂ ಇರಬೇಕಾದದ್ದು. ಭಾರತೀಯ ಭಾಷೆಗಳಲ್ಲಿಯೇ ಪ್ರಪ್ರಥಮವಾದ ಈ ಬಾಲವಿಶ್ವಕೋಶವು ಕನ್ನಡಿಗರೆಲ್ಲರೂ ಹೆಮ್ಮೆ ಪಡಬೇಕಾದ ಮಹಾಕೃತಿ. ಇಂಥ ಸಾಹಸವನ್ನು ಕೈಕೊಂಡು ಏಕಾಂಗ ವೀರರಾಗಿ ಯಶಸ್ವಿಯಾಗಿ ಪೂರೈಸಿದ ಕಾರಂತರನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ.

ಈ ಸಾಹಸಕ್ಕೆ ತೃಪ್ತರಾಗದೇ ಕಾರಂತರು ಮತ್ತೂ ಒಂದು ಸಾಹಸದ ಕಾರ್ಯವನ್ನು ಕೈಕೊಂಡು ಪೂರೈಸಿದರು. ೧೯೫೯ ರಿಂದ ೧೯೬೪ರ ಐದು ವರ್ಷಗಳ ಅವಧಿಯಲ್ಲಿ ವಿಜ್ಞಾನಪ್ರಪಂಚ ಎಂಬ ಹೆಸರಿನ ನಾಲ್ಕು ಸಂಪುಟಗಳನ್ನು ಪ್ರಕಟಿಸಿ

ದರು ಇದು ಸ್ವಲ್ಪ ಹೆಚ್ಚಿನವಯಸ್ಸಿನ ಮಕ್ಕಳಿಗೂ ವಯಸ್ಕರಿಗೂ ಅತ್ಯಂತ ಉಪ
ಯುಕ್ತವಾಗುವ ಗ್ರಂಥ. ಸುಮಾರು ೩೦೦೦ ಪುಟಗಳ ಪ್ರಮಾಣವುಳ್ಳ ಈ
ಸಂಪುಟಗಳು ಆಧುನಿಕ ವಿಜ್ಞಾನವನ್ನು ಸುಲಭ ರೀತಿಯಲ್ಲಿ ತಿಳಿಗನ್ನಡದಲ್ಲಿ ತಿಳಿಸಿ
ಕೊಡುತ್ತವೆ. ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳು ಕನ್ನಡದಲ್ಲಿ ತೀರ ವಿರಳವಾಗಿವೆ.
ಇಂಗ್ಲೀಷ ಮೊದಲಾದ ಪಾಶ್ಚಾತ್ಯ ಭಾಷೆಗಳಲ್ಲಿ ಇಂಥ ಪುಸ್ತಕಗಳು ಹೇರಳವಾಗಿವೆ.
ಕನ್ನಡದ ಈ ಕೊರತೆಯನ್ನು ವಿಜ್ಞಾನ ಪ್ರಪಂಚದ ಸಂಪುಟಗಳು ಸ್ವಲ್ಪಮಟ್ಟಿಗೆ
ನಿವಾರಿಸುತ್ತವೆ. ಇಲ್ಲಿಯೂ ಕಾರಂತರೊಬ್ಬರೇ ಲೇಖಕರು; ಅನೇಕಾನೇಕ ಚಿತ್ರ
ಗಳನ್ನು ಸಂಗ್ರಹಿಸಿದ್ದಾರೆ. ಸುಲಭರೀತಿಯಲ್ಲಿ ಆಧುನಿಕ ವಿಜ್ಞಾನದ ಅನೇಕ ವಿಷಯ
ಗಳನ್ನು ಚಿಕ್ಕವರಿಗೂ ಅರ್ಥವಾಗುವಂತೆ ತಿಳಿಸಿಕೊಡಲು ಯತ್ನಿಸಿದ್ದಾರೆ. ಇದೊಂದು
ಮಹಾ ಪ್ರಯತ್ನ. ಬಹುಮಟ್ಟಿಗೆ ಯಶಸ್ವಿಯಾದ ಪ್ರಯತ್ನ.

ವಿಜ್ಞಾನ ಪ್ರಪಂಚದ ಮೊದಲನೆಯ ಸಂಪುಟದಲ್ಲಿ ಭೂಮಿ, ಸಾಗರ, ವಾಯು
ಮಂಡಲ, ಖಗೋಲ, ಭೂಭೌತವಿಜ್ಞಾನಗಳಿಗೆ ಸಂಬಂಧಪಟ್ಟ ವಿಷಯಗಳ ವಿವೇಚನೆ
ಯಿದೆ. ಜೀವ, ಜೀವನ ಎಂಬ ಎರಡನೆಯ ಸಂಪುಟದಲ್ಲಿ ಜೀವದ ಉತ್ಪತ್ತಿ, ಅದು
ಬೆಳೆದ ಬಗೆ, ಸಸ್ಯ ಹಾಗೂ ಪ್ರಾಣಿಜೀವನ, ಡಾರ್ವಿನ್ನನ ವಿಕಾಸವಾದ, ಪ್ರಾಗ್ಜೀ
ವನದ ಇತಿಹಾಸ, ಜೀವಿಗಳ ದೇಹರಚನೆ, ಮನಸ್ಸು-ಇವೇಮೊದಲಾದ ವಿಷಯ
ಗಳು ಬಂದಿವೆ. ವಸ್ತು, ಚೇತನ್ಯ ಎಂಬ ಮೂರನೆಯಸಂಪುಟದಲ್ಲಿ, ಭೌತಶಾಸ್ತ್ರ,
ರಸಾಯನ ಶಾಸ್ತ್ರ, ಜಡ ಮತ್ತು ಅದರ ಅವಸ್ಥಾನತ್ರಯಗಳು, ಚೇತನ್ಯದ ನಾನಾ
ರೂಪಗಳು, ಪರಮಾಣು, ಸಾಪೇಕ್ಷಸಿದ್ಧಾಂತ-ಇವೇ ಮೊದಲಾದ ವಿಷಯಗಳು
ಬಂದಿವೆ. ವಿಜ್ಞಾನಸಾಧನ ಎಂಬ ಹೆಸರಿನ ನಾಲ್ಕನೆಯ ಸಂಪುಟದಲ್ಲಿ ವಿಜ್ಞಾನದಿಂದ
ಮಾನವನು ಪಡೆದ ಉಪಯೋಗವನ್ನು ವಿವರಿಸಲಾಗಿದೆ. (Applied Science)
ಇಲ್ಲಿ ಮಾನವನಿಗೆ ಉಪಯುಕ್ತವಾಗುವ ವೈದ್ಯಕೀಯ ಸಾಧನಗಳು, ಸ್ಥಾಪತ್ಯ ಶಾಸ್ತ್ರ
ದಿಂದ (Engineering) ಮಾನವನು ಸಾಧಿಸಿದ ಅದ್ಭುತಗಳು-ಇವೇ ಮೊದಲಾದವು
ಗಳನ್ನು ವಿವರಿಸಲಾಗಿದೆ.

ಈ ಸಂಪುಟಗಳಲ್ಲಿ ವಿವರಿಸಲಾದ ವಿಷಯ ವೈವಿಧ್ಯವೂ ಅವುಗಳನ್ನು ಸರಳ
ರೀತಿಯಲ್ಲಿ ತಿಳಿಸಿಕೊಡುವ ಕನ್ನಡ ಶೈಲಿಯೂ ಆಶ್ಚರ್ಯಾರ್ಹವಾಗಿವೆ. ಇಷ್ಟೆಲ್ಲ
ಒಬ್ಬ ವ್ಯಕ್ತಿಯೇ ಹೇಗೆ ಮಾಡಿದ್ದಾನು ಎಂದು ಮತ್ತೆ ಮತ್ತೆ ವಿಸ್ಮಯ ಮೂಕರಾಗು
ತ್ತೇವೆ. ಕಾರಂತರೇನೋ ವಿನಯದಿಂದ 'ಇಲ್ಲಿ ಬರುವ ವಿಷಯಗಳೆಲ್ಲವೂ ಬೇರೆ ಬೇರೆ
ಮೂಲಗಳಿಂದ ಸಂಗ್ರಹಿತವಾದವು. ನನ್ನದು ಕೇವಲ ಪೋಸ್ಟಮನ್ನನ ಕೆಲಸ. ಆದರೆ
ಇಷ್ಟೆಲ್ಲ ಸಂಗ್ರಹಮಾಡುವುದು ಎಂಥ ಭಾರೀ ಪರಿಶ್ರಮದ ಕೆಲಸ ಎಂದು ನಾವು
ಬೆರಗಾಗುತ್ತೇವೆ. ಕಾರಂತರು ಕೇವಲ ಬಾಲಪ್ರಪಂಚವನ್ನೂ ವಿಜ್ಞಾನಪ್ರಪಂಚ
ವನ್ನೂ ರಚಿಸಿ ತೃಪ್ತರಾಗಿದ್ದರೂ ಕನ್ನಡದಲ್ಲಿ ಮೊದಲನೆಯ ವಿಶ್ವಕೋಶಕಾರನೆಂದ

ಅವರ ಹೆಸರು ಅಮರವಾಗಿ ಉಳಿಯುತ್ತಿತ್ತು. ಅವರ ಬೇರೆ ಬೇರೆ ಪ್ರಕಾರಗಳ ಸಾಹಿತ್ಯವನ್ನು ಇವುಗಳ ಜೊತೆಗೆ ಗಣನೆಗೆ ತಂದುಕೊಂಡರೆ ಕಾರಂತರೊಂದು ಅದ್ಭುತವ್ಯಕ್ತಿ, ಅಸಾಮಾನ್ಯ ಸಾಹಸಿ ಎಂದು ತಲೆಬಾಗಬೇಕಾಗುತ್ತದೆ.

ಇವಿಷ್ಟೇ ಅಲ್ಲದೆ ಕಾರಂತರು ಶಿಶುಸಾಹಿತ್ಯ ಕ್ಷೇತ್ರದಲ್ಲಿ ಬೇರೆ ಬೇರೆ ಕಾರ್ಯಗಳನ್ನೂ ಮಾಡಿದ್ದಾರೆ. ಅವುಗಳನ್ನು ಸಂಕ್ಷೇಪವಾಗಿ ವಿವರಿಸಲಿಕ್ಕೆ ಯತ್ನಿಸೋಣ ನಿಸರ್ಗಪ್ರಿಯತೆಯು ಕಾರಂತರಿಗೆ ನೈಸರ್ಗಿಕವಾಗಿಯೇ ಬಂದಿದೆ. ಅದರಲ್ಲಿಯೂ ತಮ್ಮದೇಆದ ದಕ್ಷಿಣ ಕನ್ನಡ ಜಿಲ್ಲೆಯ ನಿಸರ್ಗರಮಣೀಯತೆಯನ್ನು ಅವರು ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಚಿತ್ರಮಯ ದಕ್ಷಿಣಕನ್ನಡ ಜಿಲ್ಲೆ ಎಂಬ ಒಂದು ಚಿಕ್ಕದಾದ ಪುಸ್ತಕವು ದಕ್ಷಿಣಕನ್ನಡ ಜಿಲ್ಲೆಯ ಪ್ರಕೃತಿ ಸೌಂದರ್ಯದ ಪರಿಚಯವನ್ನು ಮಾಡಿಕೊಡುತ್ತದೆ. ಚಿಕ್ಕ ಮಕ್ಕಳೂ ಓದಿ, ಚಿತ್ರಗಳನ್ನು ನೋಡಿ ಆನಂದಿಸಬೇಕಾದ ಪುಸ್ತಕವಿದು. ಇದೇರೀತಿ ಚಿತ್ರಮಯ ದಕ್ಷಿಣ ಹಿಂದುಸ್ಥಾನ ಎಂಬುದು ದಕ್ಷಿಣ ಭಾರತ ಮತ್ತು ಶ್ರೀಲಂಕಾದ ಸುಂದರ ಸ್ಥಾನಗಳನ್ನು ಚಿತ್ರಗಳೊಂದಿಗೆ ವಿವರಣೆ ಕೊಡುವ ಚಿಕ್ಕ ಮಕ್ಕಳ ಮನಸ್ಸನ್ನು ಹಿಡಿಯುವ ಚಿಕ್ಕ ಪುಸ್ತಕ. ಹೀಗೆಯೇ 'ಒಂದೇ ರಾತ್ರಿ ಒಂದೇ ಹಗಲು' ಎಂಬ ಪುಸ್ತಕವು ವರ್ಷದಲ್ಲಿ ಆರು ತಿಂಗಳುಗಳ ಒಂದೇ ರಾತ್ರಿ ಮತ್ತಾರು ತಿಂಗಳಗಳಲ್ಲಿ ಒಂದೇ ಹಗಲು ಇರುವ ಉತ್ತರ ದಕ್ಷಿಣ ಧ್ರುವ ಪ್ರದೇಶಗಳ ವರ್ಣನೆಯನ್ನು ಒಳಗೊಂಡಿದೆ. ಭಾಷೆ ತಿಳಿಯಾಗಿದೆ. ಚಿಕ್ಕ ಮಕ್ಕಳಿಗೂ ಮನೋರಂಜನೆಯನ್ನೂ ಪ್ರಪಂಚದ ಚಮತ್ಕಾರಗಳ ಅರಿವನ್ನೂ ಒದಗಿಸುವ ಪುಸ್ತಕವಿದು.

ಇವಲ್ಲದೆ ಕಾರಂತರು ಕೆಲವು ಶಾಲಾಮಕ್ಕಳಿಗಾಗಿ ಪಾಠಮಾಲೆಯನ್ನೂ ರಚಿಸಿದ್ದಾರೆ. ಹುಟ್ಟು ಸಾವು ಒಟ್ಟು ಒಟ್ಟು, ಅಳಿಲಸೇವೆ, ಬೇರೆಯವರೂ ಸರಿಯಿರಬಹುದು–ಇವು ಕನ್ನಡ ಪ್ರಾಥಮಿಕ ವರ್ಗಗಳ ಅಭ್ಯಾಸಕ್ಕಾಗಿ ವಿರಚಿತ ಚಿಕ್ಕ ಪುಸ್ತಕಗಳು. 'ಸಮಾಜನೀತಿ' ಎಂಬುದು ಸಮಾಜ ಜೀವನದ ರೀತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವ ಒಳ್ಳೆಯ ಪುಸ್ತಕ. ಮುಲಿವಾಳದಲ್ಲಿ ೧೯೫೪ ರಲ್ಲಿ ನಡೆದ UNESCO group training schemeದ ಪ್ರತಿಯಿಂದ ವಯಸ್ಕರ ಉಪವಾಚನ ಪುಸ್ತಕಗಳಲ್ಲಿ ಕೆಲವನ್ನು ಕಾರಂತರು ರಚಿಸಿದ್ದಾರೆ. ಇವು ವಯಸ್ಕರ ಸಲುವಾಗಿ ಬರೆದವುಗಳಾಗಿದ್ದರೂ ಚಿಕ್ಕಮಕ್ಕಳಿಗೂ ಉಪಯೋಗವಾಗುವಂತಿವೆ.

India Book Houseದವರು ಪ್ರಕಟಿಸುತ್ತಿರುವ ಚಿಕ್ಕ ಚಿಕ್ಕ ಕನ್ನಡ ಪುಸ್ತಕಗಳಲ್ಲಿ ಕಾರಂತರು ಕೆಲವು ಪುಸ್ತಿಕೆಗಳನ್ನು ಬರೆದಿದ್ದಾರೆ. ಇವನ್ನು ನಾವು ಬಾಲಸಾಹಿತ್ಯದಲ್ಲಿ ಸೇರಿಸಬಹುದು. ಏಕೆಂದರೆ ಇವು ನೇರವಾಗಿ ಸುಲಭ ಭಾಷೆಯಲ್ಲಿ ಸಂಕ್ಷೇಪವಾಗಿ ಮಾಲೆಯಲ್ಲಿ ಕೆಲವೊಂದು ಮಾಹಿತಿಮಾಡಿಕೊಡುವ ಪುಸ್ತಕಗಳು. ಈ ಪುಸ್ತಕ ಕಾರಂತರು, ೧) ಪಂಜೆ ಮಂಗೇಶರಾಯರು ೨) ಕರ್ನಾಟಕದಲ್ಲಿ ನೃತ್ಯ

ಕಲೆ ೩) ಕಡಲಿನ ಜೀವಿಗಳು ೪) ಯಕ್ಷಗಾನ ಬಯಲಾಟ ೫) ಕನ್ನಡದಲ್ಲಿ ನಾಟಕಗಳು ೬) ಕರ್ನಾಟಕದಲ್ಲಿ ಶಿಲ್ಪ ೭) ಕಾರ್ನಾಡ ಸದಾಶಿವರಾಯರು— ಈ ಪುಸ್ತಕಗಳನ್ನು ಬರೆದಿದ್ದಾರೆ. ಇವೆಲ್ಲವುಗಳು ಸರಳ ಭಾಷೆಯಲ್ಲಿದ್ದು ಆಕರ್ಷಕ ರೀತಿಯಲ್ಲಿ ಬರೆದುವಾಗಿವೆ. ಚಿಕ್ಕವರು ಇದರಿಂದ ಲಾಭ ಪಡೆಯಬಹುದು.

India Book House ದವರ ಅಮರ ಚಿತ್ರಕಥಾ ಎಂಬ ಸಚಿತ್ರ ಚಿಕ್ಕಮಕ್ಕಳ ಸಲುವಾಗಿ ರಚಿತವಾದ ಪುಸ್ತಕಮಾಲೆಯ ಕನ್ನಡ ಭಾಷೆಯ ಪುಸ್ತಕಗಳಿಗೆ ಕಾರಂತರು ಸಂಪಾದಕರಾಗಿದ್ದಾರೆ. ಅವರೇ ಚಿತ್ರಗಳ ವಿವರಣೆ ಬರೆದಿದ್ದಾರೆ. 'ಸಾವಿತ್ರಿ, ಶಕುಂತಲೆ, ಹನುಮಾನ್, ಸುಧೀರ ಮತ್ತು ಶೈಲಳ ಸಾಹಸ. ಜಾತಕ ಕಥೆಗಳು, ಚಂದ್ರನಲ್ಲಿ ಮಾನವ – ಇವೇ ಮುಂತಾದವು ಕಾರಂತರ ಸಂಪಾದಕತ್ವ ದಲ್ಲಿಯವು. ಅವರ ಚಿತ್ರ ವಿವರಣೆಗಳನ್ನೊಳಗೊಂಡಿವೆ. ಇಂಥ ಒಟ್ಟು ೨೫ ಪುಸ್ತಕಗಳಿವೆ.

ಇವೆಲ್ಲವೂ ಮಕ್ಕಳಿಗಾಗಿ ಬರೆದ ಜ್ಞಾನದಾಯಕ ಸಾಹಿತ್ಯದ ಮಾತಾಯಿತು ಇವಲ್ಲದೆ ಕಾರಂತರು ಮಕ್ಕಳಿಗಾಗಿಯೇ ಸೃಜನಾತ್ಮಕ ಸಾಹಿತ್ಯವನ್ನೂ ರಚಿಸಿದ್ದಾರೆ. ಇವು ಮಕ್ಕಳಿಗೆ ರಂಜನೆಯನ್ನು ಒದಗಿಸಿ ಅವರ ಸುಪ್ತ ಶಕ್ತಿಗಳನ್ನು ಜಾಗೃತಗೊಳಿಸು ವಂತಿವೆ. ಇಲ್ಲಿ ಕಥೆ, ಕವನ, ನಾಟಕ ಇವೆಲ್ಲವೂ ಇವೆ. 'ಗಜರಾಜ' ಎಂಬ ಚಿಕ್ಕ ಕಥೆ ಹಿಂಡಿನಿಂದ ತಪ್ಪಿದ ಆನೆಮರಿಯೊಂದು ದೇವಾಲಯಕ್ಕೆ ದತ್ತಿಯಾಗಿ, ತಿರುಗಿ ತನ್ನ ಹಿಂಡಿನೊಂದಿಗೆ ಸೇರಿದ್ದನ್ನು ವಿವರಿಸುತ್ತದೆ. 'ಗೆದ್ದವರ ಸತ್ತ' ಎಂಬ ಚಿಕ್ಕ ನಾಟಕವು ವಿಡಂಬನಾತ್ಮಕವಾಗಿದೆ. ಈ ನಾಟಕದಲ್ಲಿ ಎರಡನೇ ಮಹಾಯುದ್ಧದ ನಾಯಕರು ಬೇರೆ ಬೇರೆ ಕಾಡು ಪಶುಗಳಾಗಿ ರಂಗವಮೇಲೆ ಬರುತ್ತಾರೆ. ಶಿಶುಗೀತದ ರೀತಿಯಲ್ಲಿ ಬರೆದ ಅಣಕವಾಡಿನ ನಾಟಕವಿದು.

'ಢಂ ಢಂ ಡೋಲು' ಎಂಬ ಪುಸ್ತಕವಲ್ಲಿ ಮಕ್ಕಳಿಗಾಗಿ ಬರೆದ ಕಥನ ಕವನ ಗಳೂ ಅಭಿನಯ ಗೀತಗಳೂ ಇವೆ. 'ನರನೋ ವಾನರನೋ' ಎಂಬುದು ಒಂದು ಮಕ್ಕಳ ನಾಟಕ. ರಾಜಕುಮಾರನು ಮಾಯೆಯಿಂದ ಮಂಗನಾಗಿ ಗೊಂದಲಕ್ಕೀಡಾ ದುದು ಇಲ್ಲಿಯ ಕಥಾವಸ್ತು. ಮರಿಯಪ್ಪನ ಸಾಹಸಗಳು, ಅಡವಿಯಲ್ಲಿ ಬೆಳೆದ ಮರಿಯಪ್ಪನೆಂಬ ಹುಡುಗನು ಒಬ್ಬ ರಾಜಪುತ್ರಿಯೊಡನೆ ಮದುವೆಯಾದ ಕಾಲ್ಪನಿಕ ಸಾಹಸದ ಕಥೆಯಾಗಿದೆ. ಮಂಗನ ಮದುವೆಯೆಂಬುದು ಮಕ್ಕಳ ಅಭಿನಯಕ್ಕೆ ಯೋಗ್ಯವಾದ ನಾಟಕ. ಹೀಗೆಯೇ ಸೂರ್ಯ ಚಂದ್ರ ಎಂಬುದು ಸೂರ್ಯಚಂದ್ರರ ಕಾಲ್ಪನಿಕ ಕಥೆಯಿಂದ ಮಕ್ಕಳ ಅಭಿನಯಕ್ಕೆ ಯೋಗ್ಯವಾದ ಕಿರುನಾಟಕ. ಹುಲಿ ರಾಯ ಎಂಬುದು ಹಳ್ಳಿಯ ಹುಡುಗನೊಬ್ಬನು ಹುಲಿಯೊಡನೆ ಗೆಳೆತನ ಬೆಳಸಿದ ಸೊಗಸಿನ ಕಥೆಯಾಗಿದೆ.

ಇಲ್ಲಿಯ ವರೆಗೆ ಸೂಚಿಸಿದ, ಬಹಳ ಮಟ್ಟಿಗೆ ದೀರ್ಘವಾದ ಕಾರಂತರ ಬಾಲಸಾಹಿತ್ಯ ಕೃತಿಗಳ ಪಟ್ಟಿಯನ್ನು ಅವಲೋಕಿಸಿದರೆ ಅವರ ಬಾಲಸಾಹಿತ್ಯದ ವ್ಯಾಪ್ತಿಯೂ ಅದರ ವೈವಿಧ್ಯವೂ ಪ್ರಯೋಜನವೂ ಮನದಟ್ಟಾಗದೆ ಇರದು. ಕಾರಂತರ ಬಾಲಸಾಹಿತ್ಯದ ವ್ಯಾಪ್ತಿ ಇಷ್ಟಕ್ಕೇ ಸೀಮಿತವಾಯಿತೆಂದು ನಾವು ತಿಳಿದುಕೊಳ್ಳಲಿಕ್ಕೆ ಕಾರಣವಿಲ್ಲ. ೭೫ ವರ್ಷಗಳ ಗಡಿಯನ್ನು ದಾಟಿದ್ದರೂ ಕಾರಂತರು ಇನ್ನೂ ಕಾರ್ಯ ನಿರತರಾಗಿಯೇ ಇದ್ದಾರೆ. ಅವರೊಬ್ಬ ಚಿರತರುಣರು. ಅವರಿಗೆ ಯಾವ ಹೊತ್ತಿಗೆ ಯಾವ ಕೆಲಸದ ಹುರುಪು ಹುಟ್ಟುತ್ತದೆಯೋ ಹೇಳಲಿಕ್ಕಾಗದು. ಅಂಥ ಲಹರಿ ಉತ್ಪನ್ನವಾದಾಗಲೇ ಕಾರ್ಯವನ್ನು ಪ್ರಾರಂಭಿಸುತ್ತಾರೆ; ಸರಿಯಾಗಿ ಪೂರೈಸುತ್ತಾರೆ. ದೇಹಶ್ರಮವನ್ನೂ ಮಾನಸಿಕ ಶ್ರಮವನ್ನೂ ಲೆಕ್ಕಿಸುವದಿಲ್ಲ. ಬಾಲಸಾಹಿತ್ಯ ಕೃತಿಯ ಲಹರಿ ಮತ್ತೊಮ್ಮೆ ಅವರಲ್ಲಿ ಏಳಬಹುದು. ಮತ್ತಷ್ಟು ಅಮೋಘ ಕೃತಿಗಳು ನಮ್ಮ ಮಕ್ಕಳಿಗೆ ದೊರೆಯಬಹುದು.

* ಮಕ್ಕಳ ಸಾಹಿತ್ಯಕ್ಕೆ ಡಾ. ಜಿ. ಪಿ. ರಾಜರತ್ನಂ ಅವರ ಕೊಡುಗೆ

ಎಸ್. ಎಂ. ವೃಷಭೇಂದ್ರಸ್ವಾಮಿ

ಪ್ರಾತಃಸ್ಮರಣೀಯರಾದ ದಿವಂಗತ ಡಾ. ಜಿ. ಪಿ ರಾಜರತ್ನಂ ಅವರನ್ನು ನೆನೆದಾಗಲೆಲ್ಲ ಸಮಕಾಲೀನ ಮಾನವ ಶ್ರೇಷ್ಠರೊಬ್ಬರ ಚಿತ್ರ ಕಣ್ಣ ಮುಂದೆ ನಿಲ್ಲುತ್ತದೆ. ಅವರ ಜೀವನದ ಸಂಗತಿಗಳನ್ನೆಲ್ಲ ಪರಿವೀಕ್ಷಿಸಿದಾಗ ಕಹಿಯನ್ನುಂಡು ಸಿಹಿಯನ್ನೇ ಹಂಚಿದ ತ್ಯಾಗ ಜೀವನದ ಆದರ್ಶ ಮೇಲೆದ್ದು ನಿಲ್ಲುತ್ತದೆ. ವ್ಯಕ್ತಿ ಜೀವನದ ಶಕ್ತಿ ಸಮಸ್ತವನ್ನು ಅರಳಿಸಿಕೊಂಡ, ಪರಿಸರದ ಬಿಗಿ–ಬಿಲಿಗಳ ಮಧ್ಯದಲ್ಲಿ ಹೋರಾಡಿ ಬದುಕಿನ ಮೌಲ್ಯಗಳನ್ನು ರೂಪಿಸಿಕೊಂಡ, ಆದರ್ಶ ಜೀವಿಯ ಮಾನವೀಯತೆಗೊಂದು ಮಾದರಿಯಾಗಿದೆ ಶ್ರೀ ಜಿ. ಪಿ. ರಾಜರತ್ನಂ ಅವರ ಜೀವನ ಈ ಜೀವನದ ವಿಶಿಷ್ಟ ಶಕ್ತಿ – ಅದನ್ನೇ ಪ್ರತಿಭೆ ಎನ್ನೋಣ–ಯ ಕ್ರಿಯೆ, ಸಾಹಿತ್ಯ ನಿರ್ಮಾಣ. ಮಕ್ಕಳಿಂದ ಹಿಡಿದು ಮುದುಕರ ವರೆಗಿನ ಎಲ್ಲ ಜನರಿಗೆ ಪ್ರಿಯವಾಗುವ ಸಾಹಿತ್ಯ ರಚನೆ, ಮಾನವ ಜೀವನದ ಔನ್ನತ್ಯ ಸಾಧಕ ಮೌಲ್ಯಪ್ರಸಾರ, ಧರ್ಮ-ಸಂಸ್ಕೃತಿ-ಸಮಕಾಲೀನ ಸಮಾಜ ಕ್ಷೇಮಸಾಧಕ ಚಟುವಟಿಕೆಗಳ ಬಗೆಗೆ ಕ್ರಿಯಾಶೀಲ ಪ್ರತಿಕ್ರಿಯೆ–ಮೌಲ್ಯ ವಿಸ್ತರಣೆ, ಶ್ರೀ ಜಿ. ಪಿ. ರಾಜರತ್ನಂ ಅವರ ಜೀವನದ ಸಾಧನೆ–ಸಿದ್ಧಿಗಳ ಗುರಿ. ತಮ್ಮ ವ್ಯಕ್ತಿ ಶಕ್ತಿ ಸಮುದಾಯದ ತುಂಬು ಅಭಿವ್ಯಕ್ತಿ ಅವರ ಸಮಸ್ತ ಜೀವನ; ಅದಕ್ಕೆ ಕನ್ನಡಿ ಅವರು ನಿರ್ಮಿಸಿದ ವಿಸ್ತಾರವಾದ ಸಾಹಿತ್ಯ. ಅದರಲ್ಲೂ ಅವರದೇ ವಿಶೇಷ ಕಾಣಿಕೆಯಾಗಿರುವ ಮಕ್ಕಳ ಸಾಹಿತ್ಯ. ಕನ್ನಡ ಮಕ್ಕಳ ಸಂತತಿ ಇರುವವರೆಗೆ, ಎದೆದುಂಬಿದ ಕನ್ನಡ–ನಾಡು ನುಡಿ ಪ್ರೇಮ ಜೀವಂತವಾಗಿರುವವರೆಗೆ, ಮಾನವ ಬದುಕಿನಲ್ಲಿ ನೀತಿ, ನಿಷ್ಠೆ, ತ್ಯಾಗ.

* ಆಕಾಶವಾಣಿ, ಧಾರವಾಡ ಅವರ ಕೃಪೆಯಿಂದ.

ಸೇವೆ, ಮುಂತಾದ ಮೌಲ್ಯಗಳ ಅವಶ್ಯಕತೆ ಬೇಳುವವರೆಗೆ ರಾಜರತ್ನಂ ಅವರ ಶುಚಿ–ಶೀಲ, ರುಚಿ–ರಮ್ಯ ಸಾಹಿತ್ಯ ನಿಲ್ಲುತ್ತದೆ: ಆಹ್ಲಾದ ಹಂಚುತ್ತದೆ. ಆದರ್ಶ ರೂಪಿಸುತ್ತದೆ.

ಇಂಥ ರಂಜನೀಯ ಮಕ್ಕಳ ಸಾಹಿತ್ಯ ಹಾಗೂ ಆತ್ಮೋನ್ನತಿಯ ಮುಮುಕ್ಷು ಸಾಹಿತ್ಯ ನಿರ್ಮಾಣದ ಬೇರುಗಳು ಶ್ರೀ ರಾಜರತ್ನಂ ಅವರ ಜೀವನದಲ್ಲಿಯೇ ಇವೆ. ಜಿ ಪಿ. ಎಂದರೆ 'ಗುಂಡ್ಲು ಪಂಡಿತ' ಎಂಬ ಮನೆತನದ ಹೆಸರಿನ ಸಂಕ್ಷಿಪ್ತ ರೂಪ. ಪಂಡಿತ ಶಿಕ್ಷಕರ ಮಗನಾಗಿ ಹುಟ್ಟಿ ಕನ್ನಡ ಎಂ. ಎ. ಅಭ್ಯಾಸಮಾಡಿ, ಶಿಕ್ಷಕ ಪ್ರಾಧ್ಯಾಪಕ ವೃತ್ತಿಯನ್ನೇ ಆಶ್ರಯಿಸಿ, ಗುರುಭಕ್ತಿ–ಶಿಷ್ಯಪ್ರೇಮ ಮುಮುಕ್ಷು ನಿಷ್ಠೆಗಳನ್ನು ಜೀವನದ ಸರಸ-ವಿರಸಗಳಲ್ಲಿ ಬಿಡದೆ ಆಶ್ರಯಿಸಿದ ದೊಡ್ಡ ಜೀವನ ಅವರದು. ಜೀವನದ 'ಸಣ್ಣ ಪುಟ್ಟ ಘಟನೆಗಳಲ್ಲಿಯಂತೆ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪದದ ಉನ್ನತಿ ಸಾಧನೆಗಳಲ್ಲಿಯೂ ಈ 'ರಾಜರತ್ನಮತ್ವ' ಸುವ್ಯಕ್ತವಾಗಿದೆ. ಕನ್ನಡದ ಇನ್ನೊಂದು ಹಿರಿಯ ಜೀವ ಶ್ರೀ ಶಿವರಾಮ ಕಾರಂತರೆನ್ನುವಂತೆ…… "ದೊಡ್ಡ ಬದುಕು ಅವರದು, ಅದು ಧೀರೋದಾತ್ತ ಬದುಕು, ಧೈರ್ಯ ಸೊಗಸು, ಸುಚಿ, ನಿಷ್ಠೆ ಮೊದಲಾದುವುಗಳಿಂದ ಅವರು ನನ್ನ ಪಾಲಿಗೆ ಎಂದೂ ಮರೆಯಲಾರದ ವ್ಯಕ್ತಿಯಾಗಿದ್ದಾರೆ" ಹಾಗೆಯೇ ಅವರ ಆತ್ಮೀಯರಾದ ಶ್ರೀ ಎಂ. ವಿ. ಸೀತಾರಾಮಯ್ಯನವರೆನ್ನುತ್ತಾರೆ: " 'ಕನ್ನಡದಪುಣ್ಯ' ಅವರು ಪಟ್ಟ ಪಾಡು ಹಾಡಾಯಿತು ಅವರು ಉಂಡ ನಂಜು ಕಂಠದಲ್ಲೇ ನಿಲ್ಲದೆ, ಅವರ ಹೃದಯ ಕಲಶದಲ್ಲಿ ಕಾವ್ಯರಸಾಯನ ಕ್ರಿಯೆಗೆ ಒಳಪಟ್ಟು ಕಾವ್ಯಾಮೃತವಾಗಿ ಹೊರಸೂಸಿತು." 'ಶ್ರೀ ವೈಷ್ಣವರಾಗಿ ಜನ್ಮತಳೆದ ರಾಜರತ್ನಂ ವೇಷ ಬೌದ್ಧ ಭಿಕ್ಷುವಿನಂತೆ, ಜೈನಧರ್ಮ, ತತ್ವ ಕಥೆಗಳನ್ನು ಕುರಿತ ಅವರ ವಿದ್ವತ್ಪೂರ್ಣ ಕೃತಿಗಳಿಂದಾಗಿ ಕೆಲವರು ಅವರನ್ನು ಹಾಗೆ ಭಾವಿಸಿದ್ದೂ ಉಂಟು. ಮನೆಮಾತು ತಮಿಳು ಆಗಿದ್ದರೂ, ಅವರ ಕನ್ನಡದ ಅಭಿಮಾನ ಅತ್ಯುಗ್ರವಾಗಿತ್ತು. ಹಲವು ಭಾಷೆಗಳ ವ್ಯಾಸಂಗ ಮಾಡಿದ ಅವರ ಸೇವೆ ಕನ್ನಡಕ್ಕೆ ಮೀಸಲಾಗಿತ್ತು. ಉನ್ನತ ಆಲೋಚನೆಗಳನ್ನು ಪ್ರಚುರಪಡಿಸಿದ ಅವರ ಬದುಕು ತೀರ ಸರಳವಾಗಿತ್ತು. ಸ್ವಂತ ಬಾಳಿನ ದಾರುಣ ಸನ್ನಿವೇಶಗಳನ್ನು ಅವರು ಧೀರೋದಾತ್ತವಾಗಿ ಎದುರಿಸಿದರು. ಬಡತನದ ಬಾಳುವೆಯನ್ನು ಗಂಭೀರ ಚಿತ್ತದಿಂದ ಸ್ವೀಕರಿಸಿದರು. ಯಾರ ಹಂಗಿಗೂ ಒಳಗಾಗದ ಆತ್ಮಗೌರವದಿಂದ ಬಾಳಿದರು" ಎನ್ನುತ್ತಾರೆ ಉದ್ದಾಮ ಸಾಹಿತಿ ಶ್ರೀ ಸ. ಸ. ಮಾಳವಾಡರು. ಇಂಥ ವ್ಯಕ್ತಿತ್ವದ ಅಭಿವ್ಯಕ್ತಿ, ಅನಿವಾರ್ಯವಾಗಿ ಬೋಧಕ–ರಂಜಕ–ಸರಳಸಾಹಿತ್ಯ.

ಡಾ. ರಾಜರತ್ನಂ ಸೃಜನಶೀಲಕವಿ, ಚಿಂತನಶೀಲ ಲೇಖಕ, ನೇರ–ಸರಳ–ಸ್ಪಷ್ಟ ಶೈಲಿಯ ಉಪಾಸಕ. ಜೀವನದ ವಿರಸಗಳಿಗೆ ಅವರ ಪ್ರತಿಕ್ರಿಯೆ ಗಂಡು ಗೊಡಲಿ

ಯದಲ್ಲಿ, ಆಪರೇಷನ್ ಮಾಡುವ ಹರಿತ ಆಯುಧದಲ್ಲ. ಕನ್ನಡ ಎಂ. ಎ. ಪಾಸಾಗಿ ಕೆಲಸವಿಲ್ಲದೆ ಅಲೆದು, 'ಶಿಶುವಿಹಾರ'ದ ಶಿಕ್ಷಕರಾಗಿ ಜೀವನ ಪ್ರಾರಂಭಿಸಿದ್ದು, ಅವರ ವ್ಯಕ್ತಿತ್ವದಲ್ಲಿ 'ಮಕ್ಕಳ' - ಮುಗ್ಧತೆ, ಸರಳವಾತು, ಸಾಹಸಪ್ರಿಯತೆ, ರಕ್ತ-ಮಾಂಸಗಳಾದುವು. ಈ ಲೋಕ ಪ್ರಪಂಚಕ್ಕಿಂತ 'ಮಕ್ಕಳ ಪ್ರಪಂಚ'ವೇ ಪ್ರಿಯವಾಯಿತು. ಬಾಲ-ಬಾಲಿಕಿಯರ ಸ್ವಭಾವ, ಅವರ ಮನೋಧರ್ಮ, ಹೂವಿನಂಥ ಮನಸ್ಸು, ಕಟಕಿಯರಿಯದ ಸರಳತೆ, ಅನುಕಂಪ-ಸರ್ವಸ್ನೇಹಾಕಾಂಕ್ಷೆ, ನಗು-ಅಳು-ಆಟ ಪಾಟ-ಹಟ ಮುಂತಾದ ಮಗುತನದ ಭಾವ-ಭಾವನೆಗಳು ರಾಜರತ್ನಂ ಪ್ರತಿಭೆಯ ವಿಕಾಸಕ್ಕೆ ನೀರು-ನೆರಳಾದುವು, ಅವರ 'ಸ್ವಭಾವ'ವೇ ಆದಾಯಿತು. ರತ್ನನ ಪದಗಳಂಥ ನಾಗನ ಪದಗಳಂಥ ವಿಶಿಷ್ಟ ಸೃಜನ ಸಾಹಿತ್ಯ ನಿರ್ಮಿಸಿದ ರಾಜರತ್ನಂ ಪ್ರತಿಭೆ ವೈವಿಧ್ಯವುಳ್ಳ ಶಿಶುಸಾಹಿತ್ಯ ನಿರ್ಮಾಣಕ್ಕೇ ಹೆಚ್ಚು ಮೀಸಲಾಯಿತು. ಕನ್ನಡದ ಇನ್ನಾವ ಶಿಶುಸಾಹಿತ್ಯ ನಿರ್ಮಾಪಕರಿಗೂ ದೊರೆಯಲಾರದಂಥ 'ಪ್ರಥಮಕೀರ್ತಿ' ರಾಜರತ್ನಂ ಅವರದಾಯಿತು. ಇಂದು ಮಕ್ಕಳ ಸಾಹಿತ್ಯ ನಿರ್ಮಾಣ ವಿಪುಲವಾಗಿ ಆಗುತ್ತಿದೆ ಅನೇಕರು ಈ ಕ್ಷೇತ್ರದಲ್ಲಿ ಕೃಷಿ ಮಾಡುತ್ತಿದ್ದಾರೆ. ಮಕ್ಕಳ ಸಾಹಿತ್ಯಕ್ಕೆ ಮೀಸಲಾದ ಬೆಂಗಳೂರಿನ 'ಬಾಲಬೆಳಕು', ಬಿಜಾಪುರದ 'ಬಾಲಭಾರತಿ' ಯಂಥ ಪತ್ರಿಕೆಗಳಿವೆ. ಐ. ಬಿ. ಎಚ್. ಭಾರತ ಭಾರತಿ, ಸಮಾಜ ಪುಸ್ತಕಮಾಲೆಯ ಕೃತಿಗಳು, ಕಿರಿಯರ ವಿಶ್ವಕೋಶ, ಮುಂತಾದುವುಗಳ ಪ್ರಮೇಯವೇ ಇಲ್ಲದ, ೩೦-೪೦ ವರ್ಷಗಳ ಹಿಂದಿನ ಬರಡು ಪರಿಸ್ಥಿತಿಯಲ್ಲಿ ರಾಜರತ್ನಂ ಪ್ರತಿಭೆ ಮಕ್ಕಳ ಸಾಹಿತ್ಯ ಕೃಷಿಯತ್ತ ತಿರುಗಿದುದು ಕನ್ನಡದ ಪುಣ್ಯ. ಈ ರಂಗದಲ್ಲಿ ದುಡಿದ ಶ್ರೀ ರಾಜರತ್ನಂ ಸುಪ್ರಸಿದ್ಧರು.

ರಾಜರತ್ನಂ ಸಾಹಿತ್ಯದ ಪಟ್ಟಿ ತಯಾರಿಸಿದ 'ಗ್ರಂಥಲೋಕ, (1-5-1978) ಇನ್ನೂರೈವತ್ತು ಕೃತಿಗಳನ್ನು ಗುರುತಿಸಿದೆ. ಅದು ಸುಮಾರು ಮುನ್ನೂರಕ್ಕೂ ಏರಬಹುದೆಂದು ತೋರುತ್ತದೆ. ಇವರಲ್ಲಿ ಅರ್ಧಕ್ಕರ್ಧ ಮಕ್ಕಳಸಾಹಿತ್ಯ. ಅವರಲ್ಲಿ ಪದ್ಯಗಳು, ಹಾಡುಗಳು, ಸಮೂಹಗೀತೆ, ಚುಟುಕು ಮುಂತಾದ ಕಾವ್ಯ ಸಂಗ್ರಹಗಳೇ ಪ್ರಮುಖವಾದುವು. ಪುಟಾಣಿಗಳಿಗಾಗಿ ಪುಟ್ಟ ಪುಟ್ಟ ಸುಲಭ ಬೆಲೆಯ ಪುಸ್ತಕಗಳನ್ನು ಪ್ರಕಟಿಸಿದರು ರಾಜರತ್ನಂ, ಅವರ ಮೊದಲ, ಅಷ್ಟೇ ಅಲ್ಲ, ಮೊದಲ ತರಗತಿಯ ಮಕ್ಕಳ ಹಾಡಿನ ಸಂಗ್ರಹ 'ತುತ್ತೂರಿ' ೧೯೩೨ರಲ್ಲಿ ಪ್ರಕಟವಾಯಿತು. 'ಬಣ್ಣದ ತಗಡಿನ ತುತ್ತೂರಿ' ಈ ೪೦-೫೦ ವರ್ಷಗಳ ನಂತರವೂ ಕನ್ನಡದ ಎಲ್ಲ ಮಕ್ಕಳ ಬಾಯಲ್ಲಿ ತು ತು ತೂ ಮಾಡುತ್ತಿದೆ. ೧೯೩೩ರಲ್ಲಿ ಮಕ್ಕಳಿಗೆ ಅತಿ ಪ್ರಿಯವಾದ 'ಕಡಲೆಪುರಿ' ಪ್ರಕಟವಾಯಿತು. ಕನ್ನಡ ಕಾವ್ಯಪ್ರಕಾರಕ್ಕೆ ಇತ್ತೀಚಿನ ಕೊಡುಗೆಯಾದ 'ಚುಟುಕು'ಗಳನ್ನು ರಚಿಸಿ, ಗುರುತಿಸಿ, ಹೆಸರಿಸಿದ ಪ್ರಥಮ ಕೀರ್ತಿ ರಾಜರತ್ನಂ ಅವರದು. ಆಮೇಲೆ ಕಲ್ಲುಸಕ್ಕರೆ, ರಸಕವಳ,

ಗುಲಗಂಜಿ, 'ಕೆನೆಹಾಲು,' 'ಕಲ್ಲುಸಕ್ಕರೆ,' ಮುಂತಾದ ಶಿಶುಸಾಹಿತ್ಯ ಓತಪ್ರೋತವಾಗಿ ನಿರ್ಮಾಣವಾಯಿತು. ಅಂದವಾದ ಮುದ್ರಣ, ಭಾವಕ್ಕೊಪ್ಪುವ ಚಿತ್ರಗಳು, ಮಕ್ಕಳಿಗೆ ಲಭ್ಯವಾಗುವಷ್ಟು ಬೆಲೆ, ಹಾಡಿನ ರೀತಿ, ಜನಪ್ರಿಯತೆ, ಮುಂತಾದ ಅಂಶಗಳತ್ತ ವಿಶೇಷ ಗಮನ ನೀಡಿದರು. ಆ 'ಶಿಶುಗೀತ'ಗಳ ವಿಸ್ತಾರ-ವೈವಿಧ್ಯಗಳ ವಿವರಗಳಿಗಿಳಿಯದೆ, ಅವುಗಳ ಮುಖ್ಯಾಂಶಗಳನ್ನು ಮಾತ್ರ ನಮೂದಿಸಬಹುದು.

'ಶಿಶುಗೀತ'ಗಳ ವಸ್ತು–ಮಕ್ಕಳ ಅನುಭವ ಪ್ರಪಂಚದ ಸರ್ವಸಂಗತಿಗಳು ತಾಯಿ–ತಂಗಿ, ಮಾವ–ಭಾವ, ಅಣ್ಣ–ತಮ್ಮ, ಗೆಳೆಯ–ಗೆಳತಿ ಪ್ರಪಂಚ.

ಬನ್ನಿರೆಲ್ಲ ತಿನ್ನಿರೆಲ್ಲ!
ಕಲ್ಲು ಸಕ್ಕರೆ!
ಬಾಯಿಗಿಷ್ಟು ಹಾಕಿ ನೋಡಿ
ಕಲ್ಲು ಸಕ್ಕರೆ–ಏ
ಬಾಯಲಿದು ಕರಗುವುದು
ಕಲ್ಲುಸಕ್ಕರೆ
... ...
ಕಾಲಿಗೆರಡು ಗೆಜ್ಜೆ ಹ ಹ್ಹ
ಕಲ್ಲುಸಕ್ಕರೆ
ತಕ್ಕ ತಕಾ, ತಕ್ಕ ತಕಾ
ಕಲ್ಲುಸಕ್ಕರೆ–ಏ
ಬನ್ನಿರೆಲ್ಲ, ತಿನ್ನಿರೆಲ್ಲ
ಕಲ್ಲು ಸಕ್ಕರೆ

ಎಂಬ ಸರಸಹಾಡನ್ನು ನೋಡಿ, ಹಾಗೆಯೆ 'ಕಾಳನ ಪೀಪಿ', 'ಪುಟಾಣಿ ಕೃಷ್ಣ' 'ಗಾಳಿಪಟ', ಮುಂತಾದ ಮಕ್ಕಳ ಅನುಭವ ಪ್ರಪಂಚದ ಹಲವು ಹನ್ನೊಂದು ವಿಷಯ ಪ್ರಸ್ತಾಪಿಸುವ ಪದ್ಯಗಳಿವೆ. ಅಂತೆಯೇ ಮಕ್ಕಳಿಗೆ ಪ್ರಿಯವಾಗಿರುವ ಹಕ್ಕಿ, ನಾಯಿ, ಹುಲಿ, ತೋಳ, ಕೊಕ್ಕರೆ, ಗಿಳಿ, ಇಲಿ, ಇತ್ಯಾದಿಗಳೆಲ್ಲ ರಾಜರತ್ನಂ ಅವರ ಗೀತಗಳಲ್ಲಿ ವಿಪುಲವಾಗಿ ಓಡಾಡಿವೆ. ಅವುಗಳ ರೂಪ, ರಚನೆ, ಸ್ವಭಾವ ಗಳ ಪರಿಚಯದ ಮೂಲಕ, ಅವುಗಳ 'ನೀತಿ'ಯನ್ನೇ ಮಕ್ಕಳಿಗೆ ಬೋಧಿಸುತ್ತಿವೆ. ಸುಪ್ರಸಿದ್ಧವಾದ 'ನಾಯಿಮರಿ, ನಾಯಿಮರಿ ತಿಂಡಿಬೇಕೇ' ಎಂಬ ಹಾಡಿನ ಅಂತ್ಯ ದಲ್ಲಿ ಕಳ್ಳನನ್ನು ಓಡಿಸುವ, ಮನೆಕಾಯುವ ಕರ್ತವ್ಯವನ್ನು ಬೋಧಿಸುವ ಸಾಲು ಗಳಿಂದ ಅದು ಸಾರ್ಥಕವಾಗಿದೆ. 'ತೋಳನ ತೀರ್ಪು' ಬೆಕ್ಕು–ನಾಯಿ ಗಿಳಿಯ ಮಾತು, ಕರಡಿ–ಬೇಟೆಗಾರರು, 'ದೊಡ್ಡಪಟ್ಟೆಹುಲಿ' ಮುಂತಾದ ನೂರಾರು ಹಾಡು

ಗಳಲ್ಲಿ ರಂಜಿಸುವ ಗುಣವಿದೆ ಬೋಧಿಸುವ ದನಿ ಇದೆ. ಹಾಡಿಗೆ, ಹಾವ-ಭಾವಕ್ಕೆ, ಸಂಭಾಷಣೆಗೆ, ಪುನರಾವೃತ್ತಿಗೆ ಹೊಂದುವಂಥ ಪದ ಶೈಲಿ ಶಿಶುಗೀತಗಳಿಗೆ ಜೀವ ತುಂಬಿವೆ. ಇಷ್ಟೊಂದು ಸಂಖ್ಯೆಯ ಜನಪ್ರಿಯ ಶಿಶುಗೀತಗಳನ್ನು ಕನ್ನಡಕ್ಕೆ ನೀಡಿದವರು ರಾಜರತ್ನಂ ಒಬ್ಬರೇ. ಈ ಹಾಡುಗಳಲ್ಲಿ ಪೌರಾಣಿಕ ಹಾಗೂ ಚಾರಿತ್ರಿಕ ಮಹಾಪುರುಷರ ಜೀವನ ಸಾಧನೆಗಳು, ಪಂಚತಂತ್ರದ ಕಥಾ ಪ್ರಪಂಚ, ಭಾಗವತ, ಭಾರತ, ರಾಮಾಯಣಗಳ ಪ್ರಸಂಗ, ಸಮಕಾಲೀನ ಭಾರತದ ವೀರ-ಧೀರರ ಸಂಗತಿಗಳೆಲ್ಲ ಮೂಡಿಬಂದಿವೆ. ಗುಬ್ಬಚ್ಚಿ, ಪುಟಾಣಿ, ಗಿಳಿಮರಿ, ಮುಂತಾದ ಪ್ರಿಯ ಮಾತುಗಳು, ವಿವಿಧ ಪ್ರಾಸಾನುಪ್ರಾಸಗಳು, ವಿನೂತನವಾದ ಛಂದೋಪ್ರಯೋಗಗಳು, ಶ್ರೀ ರಾಜರತ್ನಂ ಅವರ ವಿಶೇಷ ಕೊಡುಗೆ. ಇತ್ತೀಚಿನ ಅನೇಕ ಜನ ಶಿಶುಸಾಹಿತ್ಯ ಲೇಖಕರು. ಶ್ರೀ ರಾಜರತ್ನಂ ಅವರ ಪ್ರಭಾವಲಯ ಪ್ರೇರಿತರು. ಅನುಕರಣೆ ಮಾಡಿದವರು, ಆದರ್ಶ ಪಡೆದವರು. ಅನೇಕ ಶಿಶುಗೀತಾ ಲೇಖಕರನ್ನು ರೂಪಿಸಿದ್ದು ಶ್ರೀ ರಾಜರತ್ನಂ ಅವರ ಗಣನೀಯ ಕೊಡುಗೆ.

ಗೀತದಂತೆ, ಮಕ್ಕಳಿಗೆ ಅತ್ಯಂತ ಪ್ರಿಯವಾದುವು 'ಕಥೆಗಳು'. ಅಜ್ಜಿಯಿಂದ, ಅಜ್ಜನಿಂದ, ಅಮ್ಮ-ಅಪ್ಪರಿಂದ, ಮಾವ-ಭಾವರಿಂದ ಕಥೆ ಕೇಳುವುದು, ಕಥೆಯ ಅಂಶಗಳಲ್ಲಿ ಒಂದಾಗುವುದು, ಅಲ್ಲಿನ ಭಾವ-ರೀತಿಗಳಲ್ಲಿ ಸೋಲುವುದು, ನಿದ್ದೆಗಣ್ಣಿನಲ್ಲೂ ಕಥೆಗೆ ಹೂಗುಟ್ಟುವುದು, ಅದೇ ಕಥೆಯನ್ನು ಮತ್ತೆ ಮತ್ತೆ ಕೇಳುವುದು ಮಕ್ಕಳ ಸ್ವಭಾವ. ಈ ಎಲ್ಲ ಕುತೂಹಲ, ರಂಜನೆ, ಭಾವ ಮಗ್ನತೆ ಹಾಗೂ ನೀತಿ ಬೋಧನೆಯ ಸಾವಿರಾರು ಕಥೆಗಳನ್ನು ಶ್ರೀ ರಾಜರತ್ನಂ ರಚಿಸಿದ್ದಾರೆ. ಬೌದ್ಧ, ಜೈನ, ವೈದಿಕ, ಶೈವ, ಮಹಮ್ಮದೀಯ ಧಾರ್ಮಿಕ ಮಹಾಪುರುಷರ ಜೀವನಕಥೆ, ಹಾಗೂ ಅವರ ಬೋಧನ ಕತೆಗಳ ವಿಸ್ತಾರ ಪ್ರಪಂಚವನ್ನೇ ಕನ್ನಡ ಮಕ್ಕಳಿಗೆ ನೀಡಿದ್ದಾರೆ. ಬುದ್ಧ ಹೇಳಿದ ಕಥೆಗಳು, ಜಾತಕ ಕಥೆಗಳು, ಗುಲಿಸ್ತಾನ ಕಥೆಗಳು, ಇತ್ಯಾದಿ ಹತ್ತಿಪ್ಪತ್ತು ಮಕ್ಕಳ ಕಥೆಗಳು ಸಂಗ್ರಹಗಳು. ಅವು ಹಿರಿಯರಿಗಾಗಿಯೂ ಬರೆಯಲಾದುವು ಕೂಡಾ – ಬಂದಿವೆ. ಕಥೆಯನ್ನು ರಸವತ್ತಾಗಿ ಬೆಳೆಯಿಸುವ ರೀತಿ, ಸಂಭಾಷಣೆ ಕಥೆಯೊಳಗೆ ಕಥೆ, 'ಉದ್ಧಾರ'ಗಳ ಸರಳ ಅನುವಾದ, ಸಲೀಲವಾದ ಭಾಷೆ, ಅತಿ ವಿಸ್ತರಕ್ಕಿಳಿಯದ ಸಂಕ್ಷಿಪ್ತತೆ, ಪಾತ್ರಗಳ ಸ್ವಭಾವ ವಿಶ್ಲೇಷಣೆ. ಮುಂತಾದ ಯೋಗ್ಯ ಮಕ್ಕಳ ಕಥೆಗಳ ಕಣಜ ತುಂಬಿದ್ದಾರೆ ರಾಜರತ್ನಂ. ಕನ್ನಡದ ಮಕ್ಕಳ ಬಹುಸಂಖ್ಯೆಯ ಕಥಾ ಸಾಹಿತ್ಯ ರಚನೆಯಲ್ಲಿಯೂ ಶ್ರೀ ರಾಜರತ್ನಂ ಪ್ರಥಮ ಬಹುಮಾನ ಪಡೆಯುತ್ತಾರೆ.

ಗೀತ, ಕಥೆಗಳಂತೆ, ನಾಟಕಗಳೂ ಮಕ್ಕಳಿಗೆ ಅತ್ಯಂತ ರಂಜನೆಯನ್ನೊದಗಿಸುತ್ತವೆ, ನೀತಿ ಬೋಧಿಸುತ್ತವೆ. ಪಾತ್ರವಹಿಸಿ, ರಂಗದ ಮೇಲೆ ಪ್ರದರ್ಶಿಸುವ ಸನ್ನಿವೇಶ ಜೊತೆಗೂ ಮಕ್ಕಳ ನಾಟಕ ಸಾರ್ಥಕವೆನಿಸುತ್ತದೆ. ಹಿರಿಯರಿಗೆ

ಪ್ರಿಯವಾಗುವ ಗೀತನಾಟಕ, ಏಕಾಂಕ ನಾಟಕಗಳ ಜೊತೆಗೆ, ಮಕ್ಕಳಿಗೆ ಮುದ್ದಾಗುವ ನಾಟಕಗಳನ್ನೂ ಬರೆದಿದ್ದಾರೆ ರಾಜರತ್ನಂ. 'ಗಂಡುಗೊಡಲಿ', 'ಕಂಬ್ಳಿಸೇನೆ', 'ದುರಾಸೆಯ ದಂಡ' ಮುಂತಾದ ಏಕಾಂಕಗಳು ಮಕ್ಕಳಿಗೂ ಪ್ರಿಯವಾಗುವಂತಿವೆ. ಇಂದಿಗೂ ಶಾಲೆ-ಕಾಲೇಜ ರಂಗಭೂಮಿಯಲ್ಲಿ ಪ್ರದರ್ಶಿತವಾಗುತ್ತಿವೆ.

ಇಷ್ಟಲ್ಲದೆ, ಮಕ್ಕಳಸಾಹಿತ್ಯದ ಇತರ ಪ್ರಕಾರಗಳಿಗೂ ಶ್ರೀ ರಾಜರತ್ನಂ ಸೇವೆ ಸಲ್ಲಿಸಿದ್ದಾರೆ. ಕನ್ನಡ ಭಾಷೆಯನ್ನು, ಜನನುಡಿಯನ್ನು, ಗಾದೆ, ಒಗಟು, ನುಡಿಗಟ್ಟುಗಳನ್ನು ಬಳಸಿ, ಸಾಹಿತ್ಯ ಕೃತಿಗಳು ಸಮಕಾಲೀನತೆ-ಜೀವಂತಿಕೆಗಳನ್ನು ಪಡೆಯುವಂತೆ ಮಾಡಿದ್ದಾರೆ ಮಕ್ಕಳಲ್ಲಿ ಕನ್ನಡತನ ತುಂಬಿದ್ದಾರೆ. ಓದುವ ಹವ್ಯಾಸ ಬೆಳೆಯಿಸಿದ್ದಾರೆ. ಭಾಷಣ ಚಾತುರ್ಯದಿಂದ ಕನ್ನಡ ಮಕ್ಕಳನ್ನು ಮೋಹಗೊಳಿಸಿದ್ದಾರೆ. ಮಕ್ಕಳ ಕಲ್ಪನೆಯ ಪ್ರಪಂಚವನ್ನು ವಿಸ್ತರಿಸಿದ್ದಾರೆ. ಅನುಭವವನ್ನು ತೀಕ್ಷ್ಣಗೊಳಿಸಿದ್ದಾರೆ. ಕೈಲಾಸಂ ಅವರನ್ನೂ, ಗಾಂಧಿಯವರನ್ನೂ, ಕೃಷ್ಣನ ವಿವಿಧ ವಿಲಾಸ ಮಹಿಮೆಗಳನ್ನೂ, ಬುದ್ಧ, ಜಿನ, ಮಹಮ್ಮದರನ್ನು ನಮ್ಮ ಮಕ್ಕಳಿಗೆ ಪರಿಚಯಿಸಿದ್ದಾರೆ. ಶ್ರೀ ಪಂಜೆ, ಎಂ. ಎಸ್. ಪುಟ್ಟಣ್ಣ, ಹೊಯಿಸಳ, ಜಿಟಗೇರಿ, ಕಾರಂತ, ಕುವೆಂಪು, ಮುಂತಾದ ಪ್ರಮುಖ ಮಕ್ಕಳ ಸಾಹಿತ್ಯ ನಿರ್ಮಾಪಕರ 'ಸಾಲಿ'ನಲ್ಲಿ ಬಹುಶಃ ಪ್ರಥಮ ಪೀಠಕ್ಕೆ ಯೋಗ್ಯವಾದ ವ್ಯಕ್ತಿ ರಾಜರತ್ನಂ. ಈ ಎಲ್ಲ ಶಿಶುಸಾಹಿತ್ಯ ಕೃತಿಗಳಲ್ಲಿ ಎದ್ದು ನಿಂತಿದೆ ಶ್ರೀ ರಾಜರತ್ನಂ ಅವರ ಉದಾರ, ಮಾನವೀಯ, ಆದರ್ಶ ವ್ಯಕ್ತಿತ್ವ.

ಆದಕ್ಕಾಗಿಯೇ ಅವರು 'ಮಕ್ಕಳಿಗೆ ಮಂದಾರ': 'ಮಾನವ ಮಂದಾರ'ವೂ ಅಹುದು. ಅವರು ಜೀವನದಲ್ಲಿ ಕೈಕೊಂಡ ಕೊಟ್ಟ ಕೊನೆಯ ಕಾರ್ಯ, ಧರ್ಮಸ್ಥಳದ ಕನ್ನಡ ಸಾಹಿತ್ಯ ಸಮ್ಮೇಳನದ ಮಕ್ಕಳ ಸಾಹಿತ್ಯ ಗೋಷ್ಠಿಯ ಅಧ್ಯಕ್ಷತೆ, ಮಕ್ಕಳೇ ಅವರಿಗೆ ನಂಟುಗಂಟು. 'ಶಿಶುವಿಹಾರ'ದ ಶಿಕ್ಷಕರಾಗಿ ಜೀವನ ಆರಂಭಿಸಿದ ಶ್ರೀ ರಾಜರತ್ನಂ, 'ಶಿಶುಸಾಹಿತ್ಯ ವಿಹಾರ' (= ಜೈನ ಪರಿಭಾಷೆ!!) ದಲ್ಲಿಯೇ 'ವಿದೇಹಿ'ಗಳಾದರು.

ಮುಗ್ಧ ಮಕ್ಕಳಲ್ಲಿ ದೇವರಿದ್ದಾನೆ ಎಂಬುದು ನಿಜವಾದರೆ, ಮಕ್ಕಳಪ್ರಿಯ ರಾಜರತ್ನಂ ಇಂದೂ ದೇವರೊಡನೆಯೇ ಇದ್ದಾರೆ, ಕನ್ನಡ ಮಕ್ಕಳ ಸಂತತಿ ಇರುವವರೆಗೆ ಅವರೂ ಇರುತ್ತಾರೆ, 'ತಾರೆ' ಯಾಗಿಯಲ್ಲದಿದ್ದರೂ 'ತಾತ'ನಾಗಿ ಇರುತ್ತಾರೆ. ಜೀವನದ ಸಾರ್ಥಕತೆ ಎಂದರೆ ಮತ್ತಿನ್ನೇನು ?

● ●

ಡಾ|| ದಿನಕರ ದೇಸಾಯಿ ಅವರ "ಮಕ್ಕಳ ಪದ್ಯಗಳು" (ಒಂದು ಸಮೀಕ್ಷೆ)

—ಗೌರೀಶ ಕಾಯ್ಕಿಣಿ

ಇವರು ರಾಷ್ಟ್ರಕವಿಗಳು. ಇವರು ಅನುಭಾವಿ ಕವಿಗಳು. ಇನ್ನಿವರು ನವ್ಯ ಕವಿಗಳು. ಓ ಇವರು ಸಮನ್ವಯ ಕವಿಗಳು–ಎಂದೆಲ್ಲ ನಮ್ಮ ಹೊಸಗನ್ನಡ ಕಾವ್ಯ ಪ್ರಪಂಚದಲ್ಲಿ ಒಂದು ಬಗೆಯ 'ಸ್ವಯಂಭೂ' ವರ್ಗೀಕರಣ ನಡೆದು ಬಂದಿದೆ. ಅದರ ಯುಕ್ತಾಯುಕ್ತತೆ ಇಷ್ಟಾನಿಷ್ಟತೆ ಏನೇ ಇರಲಿ, ಅದೇ ಚಾಳಿಗೆ ಈಡಾಗಿ ನಾನೂ ಮುಂದುವರಿಯುವದಾದರೆ ಮಕ್ಕಳ ಕವಿಗಳು ಜನತೆಯ ಕವಿಗಳು ಎಂಬ ಇನ್ನೆರಡು ಗುಂಪುಗಳನ್ನು ಗುರುತಿಸಬಲ್ಲೆನು–ಬಲ್ಲವರೆನ್ನುವವರು ಅದನ್ನು ಒಪ್ಪಲಿ ಬಿಡಲಿ.

ಏಕೆಂದರೆ ಸಂಕೀರ್ಣ ಕ್ರತುಶಕ್ತಿಯ ಸಂಮಿಶ್ರ ಗುಣವೈಖರಿಯ ಒಬ್ಬ ಕವಿಯನ್ನು ಆಡು–ಕುರಿಗಳಂತೆ ಇಷ್ಟುಸಲೀಸಾಗಿ ವಿಂಗಡಿಸಿ ಬೇರೆ ಬೇರೆ ದಾವಣಿಗಳಲ್ಲಿ ಕಟ್ಟಿ ನಿಲ್ಲಿಸಲು ನಿಜವಾಗಿಯೂ ಸಾಧ್ಯವಿಲ್ಲ. ಅಂಥ ಬಹುಮುಖ ಪ್ರತಿಭೆಯ ಕವಿ ತನ್ನ ಕಾವ್ಯ ಸೃಷ್ಟಿಯ ಋತುಮಾನದಲ್ಲಿ ಒಂದೇ ಕಾಲಕ್ಕೆ ಒಂದಕ್ಕಿಂತ ಹೆಚ್ಚು ಮಾದರಿಯ ಕವಿತಾರಚನೆ ಸಾಧಿಸಿದ್ದುಂಟು. 'ಸಖೀಗೀತ', 'ಗಂಗಾವತರಣ' ಬರೆದ ಅಂಬಿಕಾತನಯದತ್ತರು 'ಕರುಳಿನ ವಚನ'ಗಳನ್ನು ಬರೆದರು. ಚಂದ್ರನ ಕುರಿತು ಪ್ರೌಢಕವಿತೆಯಂತೆ ಮಕ್ಕಳ ಕವನಗಳನ್ನೂ ಬರೆದಿದ್ದಾರೆ. 'ರಕ್ತಾಕ್ಷಿ', 'ಪಾಂಚಜನ್ಯ'ದಂಥ ಕೃತಿಗಳನ್ನು ಕಟಿಸಿದ ಕುವೆಂಪು ಪ್ರತಿಭೆ 'ಮನೆ ಮನೆ ಮುದ್ದು ಮನೆ' 'ಬೊಮ್ಮನ ಹಳ್ಳಿಯ ಕಿಂದರಜೋಗಿ'ಯನ್ನೂ ಸೃಷ್ಟಿಸಿತು. 'ಗಂಡುಗೊಡಲಿ' ರಚಿಸಿದ ರಾಜರತ್ನಂ 'ರತ್ನನ ಪದಗಳು' ಬರೆದಂತೆ ಅನೇಕ ಮುದ್ದು ಮುದ್ದಾದ ಶಿಶುಗೀತಗಳನ್ನೂ ಬರೆದರು.

ಆದಾಗ್ಯೂ ಸ್ಥೂಲವಾಗಿ ಒಂದು ಮೊತ್ತದಲ್ಲಿ, ಹಾಗೆಯೇ ಸೂಕ್ಷ್ಮವಾಗಿ ಒಂದು ಗುಣಮಟ್ಟದಲ್ಲಿ ಯಾವನೊಬ್ಬ ಕವಿಯ ಕೃತಿರಾಶಿಯನ್ನು ಒಟ್ಟಾರೆ ಗಮನಿಸಿದಾಗ ಅದರಲ್ಲಿ ಮೇಲಾಗಿ–ಮಿಗಿಲಾಗಿ ವಿಜೃಂಭಿಸುವ ಒಂದು ಕಾವ್ಯರೀತಿಯನ್ನೋ ಮಾದರಿಯನ್ನೋ ಗುರುತಿಸುವದು ಸಾಧ್ಯ. ಆ ದೃಷ್ಟಿಯಿಂದ ಮೇಲೆ ನಮೂದಿಸಿದ ವರ್ಗೀಕರಣವೂ ಸಾಧು ಎನ್ನಬಹುದು. ಇಂಥ ವರ್ಗೀಕರಣ ತಕ್ಕು (Valid)ದಾಗಲಿಕ್ಕೆ ಮುಖ್ಯ ಕಾರಣ ಆ ಕವಿ ಏನೇ ಬರೆದರೂ ಹೇಗೇ ಬರೆದರೂ ಅದರಲ್ಲಿ ಹರಿದಾಡುವ ಅವನ ಊಹನೆಯ ಗುಣ, ಕಲ್ಪನೆಯ ತೀವ್ರತೆ ಹಾಗೂ ಪ್ರಯೋಗಿಸುವ ಭಾಷೆಯ ಜಾಡು–ಅದರ ಪದಪವಣಿಕೆ, ಶಬ್ದಗಳ ಆಯ್ಕೆ. ಬಳಕೆ ತಡಿಕೆಗಳ ಹದ–ಹವಣೂ–ಇವೆಲ್ಲವುಗಳ ಒಂದು ವಿಶಿಷ್ಟವೂ ನಿರ್ದಿಷ್ಟವೂ ಆದ ರೀತಿ ಅವನು ಹೆಚ್ಚಾಗಿ ಯಾವ ವರ್ಗೀಕರಣಕ್ಕೆ ಒಗ್ಗುವವನೆಂಬುದನ್ನು ಹೆಚ್ಚುಕಡಿಮೆ ಖಚಿತಗೊಳಿಸಬಹುದು.

ಈ ದೃಷ್ಟಿಯಿಂದ ನಮ್ಮ ಉತ್ತರ ಕನ್ನಡದ ಹಿರಿಯ ಕವಿ ಡಾ. ದಿನಕರ ದೇಸಾಯಿ ಸತ್ವದಿಂದಲೂ ಸಿದ್ಧಿಯಿಂದಲೂ ಜನತೆಯ ಕವಿ. ಅದರ ಜತೆಗೇ ಪ್ರಸಿದ್ಧಿಯಿಂದ ಮಕ್ಕಳ ಕವಿ. ಅವರು ಪ್ರೌಢರಿಗಾಗಿಯೇ ಮೊದಲು ಕವಿತೆ ರಚಿಸತೊಡಗಿದರು. ಅಂಥ ಕೆಲವನ್ನು ದಿ ಬಿ. ಎಂ. ಶ್ರೀ ಅವರು ದಿನಕರರು ಕಾಲೇಜ ಕಲಿಯುವ ದಿನಗಳಲ್ಲಿಯೇ 'ತಳಿರು' ಸಂಕಲನದಲ್ಲಿ ಪ್ರಕಟಿಸಿದ್ದರು. ಆದರೆ ವಿದ್ಯಾ ಇಲಾಖೆಗಳ ಅನುಗ್ರಹದಿಂದ ಕನ್ನಡ ಪಠ್ಯದ ಅನೇಕ ಕ್ರಮಿಕ ಪುಸ್ತಕಗಳಲ್ಲಿ ಪ್ರಾಥಮಿಕ–ಮಾಧ್ಯಮಿಕ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಇವರ ಮಕ್ಕಳ ಪದ್ಯಗಳು ಕಾಣಿಸಿಕೊಂಡು ಕನ್ನಡ ಮಕ್ಕಳ ಮೆಚ್ಚುಗೆಯಲ್ಲಿ ಅಚ್ಚಳಿಯದ ಸ್ಥಾನವನ್ನು ಗಳಿಸಿಕೊಂಡವು.

ಈ ಜನಪ್ರಿಯತೆಯ ಶಕ್ತಿಗೆ ನಾನೂ ಸೋತುಹೋಗಿ ಡಾ. ದೇಸಾಯರು ಮೂಲತಃ ಮಕ್ಕಳ ಕವಿಗಳು, ಮಕ್ಕಳ ಪದ್ಯಗಳನ್ನೇ ಮೊದಲಿಗೆ ಬರೆದಿರಬೇಕು ಎಂದು ಭಾವಿಸಿದೆ. ಆ ಬಗೆಗೆ ಅವರಿಗೇ ನೇರ ಬರೆದು ಕೇಳಿದಾಗ ಅವರು ಹೀಗೆ ಖುಲಾಸೆ ಕೊಟ್ಟರು :—

"I first wrote the poems for adults. After some years I wrote poems for Children·········One reason why I began to write Children's poems much later than my poems for adults was that I began to use simple words".

ಇಲ್ಲಿದೆ ದಿನಕರರ ಕಾವ್ಯದೃಷ್ಟಿಯ ಸಿಲುಕು. ಅವರು ಮಕ್ಕಳ ಕವಿಯೋ ಜನತೆಯ ಕವಿಯೋ ಎಂಬ ಪ್ರಶ್ನೆಗೆ ಅವರ ಈ ಸಿಲುಕಿನಿಂದಲೇ ಉತ್ತರ ಸಿಗುತ್ತದೆ.

ಅವರು ಮಕ್ಕಳ ಪದ್ಯ ಬರೆದಂತೆ ಒಕ್ಕಲ ಪದ್ಯ ಬರೆದರು. "ದೀನನಗಿಂತ ದೇವ ಬಡವ". "ನನ್ನ ದೇಹದ ಬೂದಿ" ಮುಂತಾದ ಮನನೀಯ ಪ್ರೌಢ ಪದ್ಯ ಬರೆದರು. "ನಾಡವರೇ ನಿಜ ನಾಡಿಗರು" "ಕೆಂಪು ಬಾವುಟವು ರೈತರದು" ಇತ್ಯಾದಿ ರಾಷ್ಟ್ರೀಯ, ವರ್ಗಜಾಗೃತಿಯ ಗೀತ ಹಾಡಿದರು. "ಕೇಶವ ಕಮಲೆ ಕೇಳೋ ಸಂಗತಿ। ಊರಿಗೆ ದೊಡ್ಡ ಒಡೆಯ। ದೆವ್ವಕ್ಕಿಂತ ಕಡೆಯ॥" ಎಂದು ಮುಂತಾದ ಅವರ ಗುಮಟೆಯ ಪದ್ಯಗಳು ಇನ್ನೂ ನಮ್ಮ ಕರಾವಳಿಯ ಹಾಲಕ್ಕಿ ಒಕ್ಕಲ ಬಾಯಲ್ಲಿ ನಲಿದಾಡುತ್ತಿವೆ.

ಅಂದಾಗ ಮಕ್ಕಳ ಹಾಗೂ ಜನತೆಯ ಮನಸ್ಸನ್ನು ಸೂರೆಗೊಳ್ಳುವ ಅವರ ಕಾವ್ಯದ ಮೋಹನಶಕ್ತಿ ಯಾವದು? ಅದೇ ಅವರು ಕಾವ್ಯಸಾಧನೆಯಲ್ಲಿ ಮಾಡಿದ ಸಂಕಲ್ಪ. "I began to use simple words" ಆದರೆ ಇಲ್ಲಿ ಅವರು ಆರಂಭಿಸಿದ್ದು ಕೇವಲ ಸಾದಾಸರಳ ಶಬ್ದಸರಣಿ ಮಾತ್ರವಲ್ಲ. ಹರಿಯುವ ಹಳ್ಳ ತನ್ನ ನೀರಿನ ಮೊತ್ತ, ರಭಸ, ನಿಟ್ಟುನಡೆಗಳಿಗೆ ತಕ್ಕಂತೆ ತನ್ನ ಪಾತ್ರವನ್ನು ಅದರ ಗಾತ್ರವನ್ನೂ ಕೊರೆದುಕೊಂಡು ಮುಂದುವರಿಯುತ್ತದೆ. ಕವಿಯ ಶಬ್ದಶೈಲಿಯ ಬೆನ್ನಿಗೆ ಅದನ್ನು ಅವರು ರೂಪಿಸಿಕೊಳ್ಳುವ ವಿಶಿಷ್ಟ ಮನೋಧರ್ಮ. ಭಾವ ಸೂಕ್ಷ್ಮ ಹಾಗೂ ಉತ್ಪ್ರೇಕ್ಷೆಯ ಉಡ್ಡಾಣ ಅಥವಾ ಪ್ರತಿಭೆಯ ಉನ್ಮೇಷ ತನ್ನದೇ ಆದ ಒತ್ತಡದಿಂದ ಕೆಲಸಮಾಡುತ್ತದೆ. ಭಾರತ ಸೇವಕ, ಜನಸೇವಕ, ಸಮಾಜ ಕಾರ್ಯಕ್ಕೆ, ದೀನ-ದಲಿತ ಬಹುಜನ ಸಮುದಾಯದ ಕಲ್ಯಾಣಕ್ಕಾಗಿ ಜೀವಮಾನ ವೆಲ್ಲ ಮುಡಿಪಿಟ್ಟು ದುಡಿಯುವ ಕವಿ ದಿನಕರರ ಕಾವ್ಯ ಅದು ಪ್ರೌಢವಿರಲಿ, ಮುಗ್ಧವಿರಲಿ ಜನತೆಯ ಹೃದಯಕ್ಕೆ ನಿಲುಕುವಂತೆ ಆ ಹೃದಯದ ಮಿಡಿತ ನುಡಿಸು ವಂತೆ ಸರಳ ಸಾದಾ ಸುಬೋಧ ಶಬ್ದಶೈಲಿಯನ್ನೇ ಕೊನೆಗೂ ಆಯ್ದು ತನ್ನನ್ನು ಎರಕ ಹೊಯ್ದುಕೊಳ್ಳುತ್ತದೆ.

ಮಕ್ಕಳ ಮನಸ್ಸಿನಂತೆಯೇ ಜನತೆಯ ಮನಸ್ಸು. ಅಲ್ಲಿ ಸಲ್ಲುವದೇ ಇಲ್ಲೂ ಸಲ್ಲುತ್ತದೆ. ಅಲ್ಲಿ ಶಿಷ್ಟ-ಶ್ಲೇಷ (Sophistry)ಕ್ಕೆ, ಬೌದ್ಧಿಕ ಕಸರತ್ತಿಗೆ, ಸ್ವೈರ ಕಲ್ಪನಾವಿಲಾಸದ ಕರಾಮತ್ತಿಗೆ ಅಷ್ಟೊಂದು ಇಂಬಿಲ್ಲ. ಪ್ರೌಢವಿರಲಿ, ಬಾಲವಿರಲಿ ಅಲ್ಲಿ ಪ್ರಗಲ್ಭತೆಗಿಂತ ಪ್ರಸನ್ನತೆ ಪ್ರಫುಲ್ಲತೆಗೇ ಪ್ರಾಮುಖ್ಯತೆ.

ಆದ್ದರಿಂದಲೇ ಡಾ. ದಿನಕರ ದೇಸಾಯಿರನ್ನು ಜನತೆಯ ಕವಿಯೆಂದರೂ ಸರಿಯೇ, ಮಕ್ಕಳ ಕವಿಯೆಂದರೂ ಸರಿಯೇ. ಆದರೆ ಇಲ್ಲಿ ನಾವು ಅವರನ್ನು ಗಮ ನಿಸುವದು ಕನ್ನಡ ಕಾವ್ಯದಲ್ಲಿಯ ಒಬ್ಬ ಶ್ರೇಷ್ಠ ಮಕ್ಕಳ ಕವಿಯೆಂದು.

ಕವಿ ದಿನಕರರು ಪ್ರಕಟಿಸಿದ ಪ್ರಪ್ರಥಮ ಮಕ್ಕಳ ಪದ್ಯಯಾವುದು? ಮಕ್ಕಳಿಗೆ ಕೇಳಿದರೆ ಅವರಲ್ಲಿ ಇತ್ತಂಡವಾಗಿ ವಾದವೇ ಏಳಬಹುದು. ಒಂದು ತಂಡ

"ಟಿಕ್ ಟಿಕ್ ಗೆಳೆಯ" ಎಂಬ ಗಡಿಯಾರದ ಪದ್ಯ, ಇನ್ನೊಂದು ತಂಡ "ಬೆಕ್ಕೇ ಬೆಕ್ಕೇ ಮುದ್ದಿನಸೊಕ್ಕೇ" ಎಂಬ ಬೆಕ್ಕಿನ ಪದ್ಯವನ್ನು ಎತ್ತಿ ಓದಿದು ಹಾಡಿ ಕೈ ತಟ್ಟಿ ಕುಣಿಯುವುದು. ಆದರೆ ಇವೆರಡರಲ್ಲಿ ಒಂದು ಮೊದಲನೆಯದೆಂಬ ಭಾವನೆ ಬೇರೂರಲು ಒಂದು ಕಾರಣ ಶೀರ ಪ್ರಾಥಮಿಕ ಇಯತ್ತೆಗಳಲ್ಲಿ ನಮ್ಮ ಮಕ್ಕಳು ಇದನ್ನು ಓದಿದ್ದೇ ಆಗಿರಬೇಕು.

ಈ ಕುರಿತು ನಾನು ದಿನಕರರನ್ನು ಕೇಳಿದಾಗ ಅವರು ತಿಳಿಸಿದ್ದು ಹೀಗೆ : "ಯಾವುದು ಮೊದಲು ನನ್ನ ಕವನವೋ ನನಗೆ ಈಗ ನೆನಪಾಗುವದಿಲ್ಲ. ಆದರೆ 'ಬೆಕ್ಕಿ'ನ ಪದ್ಯ ಮಾತ್ರ ಮೊದಲನೆಯದಲ್ಲ." ಅದೇನೇ ಇರಲಿ, ಅವರ "ಮಕ್ಕಳ ಗೀತಗಳು" ಎಂಬ ಪ್ರಥಮ ಕವನ ಸಂಕಲನ ೧೯೫೧ ರಲ್ಲಿ ಪ್ರಕಟವಾಯಿತು. ಆಗ ಅದಕ್ಕೆ ಅಂದಿನ ಮುಂಬಯಿ ಸರಕಾರದಿಂದ ಬಹುಮಾನವೂ ಸಂದಿತ್ತು. ಅನಂತರ ಅವರ "ಮಕ್ಕಳ ಪದ್ಯಗಳು" ಎಂಬ ಎರಡನೆಯ ಸಂಕಲನ ೧೯೬೬ ರಲ್ಲಿ ಹೊರ ಬಂತು. ಅದೇ ವರ್ಷ 'ಗೀತ'ಗಳ ಎರಡನೆಯ ಆವೃತ್ತಿಯು ಪ್ರಕಟವಾಯಿತು. ದಿನಕರರ ಶಿಶುಕಾವ್ಯ ಇವೆರಡೇ ಸಂಕಲನಗಳಲ್ಲಿ ಅಡಕವಾಗಿದೆ. (ಇದೀಗ ಅವರ ಕೊಂಕಣಿ ಕವನ ಸಂಗ್ರಹ ಹೊರಬರಲಿದೆ. ಅದರಲ್ಲಿ ಮತ್ತೆ ಮಕ್ಕಳ ಪದ್ಯಗಳಿರ ಬಹುದೇನೋ!) ಈಚೆಗೆ ೧೯೭೪ ರಲ್ಲಿ ಕವಿವರ್ಯರು ತಮ್ಮ ಹಿಂದಿನ ಎರಡು ಸಂಗ್ರಹಗಳಿಂದ ಆಯ್ದ ಕವನಗಳನ್ನು ಸೇರಿಸಿ "ಮಕ್ಕಳ ಪದ್ಯ" ಎಂಬ ಹೆಸರಿನಲ್ಲಿ ಸಂಗ್ರಹವನ್ನೊಂದು ಪ್ರಕಟಿಸಿದ್ದಾಗಿದೆ. (ಅದರಲ್ಲಿ ಇನ್ನು ಮೂರು ಹೊಸ "ಬೆಕ್ಕಿನ ಪದ್ಯ"ಗಳನ್ನು ಸೇರಿಸಿದ್ದಾರೆ). ಈ ಹೊಸ ಸಂಗ್ರಹವನ್ನೇ ಮುಂದಿಟ್ಟುಕೊಂಡು ದಿನಕರರ "ಮಕ್ಕಳಪದ್ಯ"ಗಳ ಬಗೆಗೆ ಈ ಪರಿಶೀಲನೆ ಕೈಕೊಳ್ಳಲಾಗಿದೆ, ಸದ್ಯದ ಪರಿಮಿತಿಯ ಅನುಕೂಲಕ್ಕಾಗಿ.

ಈ ಮಕ್ಕಳ ಪದ್ಯಗಳ ಸರ್ವಸಾಮಾನ್ಯ ಸ್ಥೂಲ ಲಕ್ಷಣಗಳನ್ನು ನಿರೂಪಿಸುವ ಮುನ್ನ, ಈ ಪದ್ಯ ಪ್ರಕಾರದ ವೈಶಿಷ್ಟ್ಯವನ್ನು ತುಸು ಜ್ಞಾಪಿಸಿಕೊಳ್ಳಬೇಕು. ಮಕ್ಕಳ ಪದ್ಯವೆಂದರೇನು? ಮಕ್ಕಳಿಗಾಗಿ ಬರೆದ ಪದ್ಯವೋ? ಮಕ್ಕಳೇ ಬರೆದ ಪದ್ಯವೋ? ಅಥವಾ ಶುದ್ಧ ಮಕ್ಕಳೇ ಬರೆದ ಪದ್ಯವೋ? ಈ ಕೊನೆಯ ಪ್ರಕಾರವು ಇಂದು ಸಾಹಿತ್ಯದಲ್ಲಿ ಒಂದು ವಿಶೇಷ ಕುತೂಹಲದ ಸ್ಥಾನವನ್ನೂ ಬೆಲೆಯನ್ನೂ ಪಡೆಯುತ್ತಿದೆ. ಅನೇಕ ಮಕ್ಕಳಲ್ಲಿ ಅವರ ತೀಕ್ಷ್ಣಬುದ್ಧಿ, ಸೂಕ್ಷ್ಮ ದೃಷ್ಟಿ ಮತ್ತು ತೀವ್ರ ಕಲ್ಪನೆಗಳೊಂದಿಗೆ ಅಷ್ಟೇ ಬಲವಾದ ತಾಲದ ಅಥವಾ ಲಯದ (Rhythm) ಪ್ರಜ್ಞೆಯೂ ಇದ್ದರೆ ಅವರು ತಮ್ಮ ಶಬ್ದಕೋಶದ ಇತಿಮಿತಿಯಲ್ಲಿಯೇ ತಮ್ಮ ಅನುಭವದ ತೆಕ್ಕೆಯೊಳಗೆ ಪದ್ಯ ಕಟ್ಟಿ ಹೇಳುವುದೂ ಹಾಡುವದೂ ಉಂಟು. ಗೋವಾದಲ್ಲಿ ಪ್ರಸಿದ್ಧ ಕೊಂಕಣಿ ಕವಿ ಶ್ರೀ ಆರ್. ವಿ. ಪಂಡಿತರಿದ್ದಾರೆ. ಅವರು ತಮ್ಮ ಮಗ ಮಾತು

ಬಂದಾಗಿನಿಂದ ಪ್ರಾಸಕಟ್ಟಿಹಾಡಿದ ಚುಟುಕುಗಳನ್ನು. ಆತ ತಾನಾಗಿಯೇ ಕಟ್ಟಿದ ಬಾಲಭಾವದ ಪುಟ್ಟಕತೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇದು ನಿಜವಾದ ಶಿಶುಸಾಹಿತ್ಯ–ಮಕ್ಕಳೇ ಮಕ್ಕಳಿಗಾಗಿ ೫–೬ ವರ್ಷ ಪ್ರಾಯದೊಳಗೇ ರಚಿಸಿ ರೂಪಿಸಿದ ಸಾಹಿತ್ಯ. ಆದರೆ ಇಂಥ ರಚನೆ ತೀರ ಅಪರೂಪದ್ದು.

ಇನ್ನು ಮೊದಲನೆಯ ಮಾದರಿ–ಮಕ್ಕಳಿಗಾಗಿ ಬರೆದದ್ದು. ರವೀಂದ್ರನಾಥ ರಿಂದ ಆನಂದಕಂದರ ವರೆಗೂ ಬೇಂದ್ರೆಯವರಿಂದ ನಾರಾಯಣ ತೂರ್ಕೆಯವರೆಗೂ ಮಕ್ಕಳಿಗಾಗಿ ಪದ್ಯಗಳನ್ನು ಬರೆದಿದ್ದಾರೆ. ಟಾಗೋರರ 'ಕ್ರಿಸೆಂಟಮೂನ್'– (ಬಿದಿಗೆಯ ಚಂದ್ರ) ಆನಂದಕಂದರ 'ಮುದ್ದನಮಾತು' ಹಾಗೆಯೇ ಬೇಂದ್ರೆಯವರ ಹಲವಾರು ಮಕ್ಕಳ ಮನೋಲಹರಿ ಬಿಂಬಿಸುವ "ಯಾರಿಗೂ ಹೇಳೋಣ ಬ್ಯಾಡಾ" 'ಬನ್ನಿ ಬನ್ನಿ ಕನಸುಗಳೇ' 'ಚಂದ್ರ' ಮುಂತಾದ ಉತ್ಕೃಷ್ಟಕವನಗಳು ಮಕ್ಕಳ ಪಾತಳಿಯಲ್ಲಿ ನಡೆದ ಪ್ರಗಲ್ಭ ಪ್ರೌಢ ಪ್ರತಿಭೆಯ ಕಲ್ಪನಾವಿಲಾಸದ ಲೀಲೆಗಳಾಗಿವೆ. ಅವುಗಳ ಮಾತು, ಧಾಟಿ ಮಕ್ಕಳವರಂತೆ. ಆದರೆ ಅಲ್ಲಿ ಒಡಮೂಡಿದ ಊಹೆಯ, ಉಕ್ತಿಯ ಚಮತ್ಕೃತಿ ಅಷ್ಟು ಸರಳವಲ್ಲ. ಮುಗ್ಧವೂ ಅಲ್ಲ. ಇದರ ಬಗೆಗೆ ಹೆಚ್ಚಿನ ವಿಶ್ಲೇಷಣೆ ಇಲ್ಲಿ ಅಶಕ್ಯ. ರವೀಂದ್ರರ "ಲಿಟ್ಲ ಬಿಗ್‌ಮ್ಯಾನ್" ಅಥವಾ ಬೇಂದ್ರೆಯವರ 'ಕರಿಮರಿನಾಯಿ' ಬಾಲಿಶ ಭಾವನನ್ನೂ ಮೀರಿ ಪರಿಸ್ಪಂದನಗೊಳ್ಳುತ್ತದೆ. ಇರಲಿ ಇಂಥ ಹೃದ್ಯಪದ್ಯಗಳಲ್ಲಿ ಅಭಿವ್ಯಕ್ತಿಯು ಬಾಲ ಬಾಷಿತವಾಗಿ ಕಂಡರೂ ಅದರೊಳಗಿಂದ ವ್ಯಂಜನಗೊಂಡ ರಂಜನೆಗೂಡುವ ಆಶಯದ ಸತ್ವದಲ್ಲಿ ಒಂದು ಪ್ರೌಢಿಮೆಯ ಅರ್ಥಗೌರವವಿರುತ್ತದೆ. ಹೀಗೆ ಆಡುವ, ಹಾಡುವ ಮಕ್ಕಳು ಮರಿಟಾಗೋರರು, ಮರಿಬೇಂದ್ರೆ, ಮರಿಕೃಷ್ಣಶರ್ಮರು. ಅರ್ಥಾತ್ ಚಿಕ್ಕಕವನಗಳೆಲ್ಲ ಚಿಕ್ಕವರಿಗಾಗಿ ಬರೆದ ಕವನಗಳೆಂದ ಮಾತ್ರಕ್ಕೆ ಚಿಕ್ಕವರ ಚಿಕ್ಕಂದಿನ ಬಗೆಯ ಕವನಗಳಲ್ಲ.

ಆದ್ದರಿಂದ, ಮೇಲೆ ಹೇಳಿದ ಎರಡನೆಯ ಪ್ರಕಾರದ ಕವನಗಳೇ ನಿಜವಾದ ಮಕ್ಕಳಪದ್ಯಗಳು. ಮಕ್ಕಳ ದೃಷ್ಟಿಯಿಂದ ಅವರ ಭಾವ ಲಹರಿಯಂತೆಯೇ ಮೂಡಿಬಂದ ಪದ್ಯಗಳು. ಇವುಗಳ ಮುಖ್ಯ ಲಕ್ಷಣವೆಂದರೆ, ಇಂಥ ಪದ್ಯವನ್ನು ಓದಿದಾಗ ಮಕ್ಕಳಿಗೆ ಇದು ತಮ್ಮದೇ ಪದ್ಯ ವೆನಿಸಬೇಕು. ಹಾಗೆ ಅನಿಸುವದು ಯಾವಾಗ? ಹೇಗೆ?

ಮಕ್ಕಳ ಹೃದಯ ನಾದಲೋಲ. ಮಕ್ಕಳಿಗೆ ಕಿವಿಗೆ ಸವಿಯಾಗುವ, ಹುಚ್ಚು ಹಿಡಿಸುವ, ಗಟ್ಟಿಮುಟ್ಟಾದ ಲಲಿತ ಮಧುರವಾದ ಪ್ರಾಸಮಯತೆ ಬೇಕು. ಹಾಗೆಯೇ ಕಟ್ಟುನಿಟ್ಟಾದ ಲಯಗಾರಿಕೆಯ ಕಾಲದ ಆವರ್ತ, ತಾಲದ ಗತ್ತು ಬೇಕು. ಪದ್ಯ ಓದಿದಾಗ ಅದನ್ನು ಹಾಡುವಂತೆ ಹಾಡಿದಾಗ ಅದಕ್ಕೆ ಹೆಜ್ಜೆ ಹಾಕಿ ಕೈತಟ್ಟಿ ಕುಣಿಯುವಂತೆ ಮಕ್ಕಳಿಗೆ ಅನಿಸಬೇಕು. ಈ ಪ್ರಾಸ (Ryme) ಮತ್ತು ಈ ಲಯಬಂಧ

(Rhythm) ಮಕ್ಕಳ ಪದ್ಯದ ಜೀವಾಳ. ಆ ಮೇಲೆ ಪದ್ಯದಲ್ಲಿಯ ಲಾಕ್ಷಣಿಕ ಅಂಶಗಳು ಮಕ್ಕಳ ಬುದ್ಧಿಗೆ ನಿಲುಕುವಂತೆ ಇರಬೇಕು. ಅಲ್ಲಿಯ ಊಹೆ-ಉತ್ಪ್ರೇಕ್ಷೆಗಳು, ಉಪಮೆ ರೂಪಕಗಳು ಚಿತ್ರಮಯವಾಗಿ ಅದ್ಭುತರಮ್ಯವಾಗಿ ವಿಚಿತ್ರಲೋಕವನ್ನೆ ತೆರೆದು, ಅಲ್ಲಿಗೆ ಕರೆಯುವಂತೆ ಅವರ ಭಾವಕೋಶಕ್ಕೆ ಬಣ್ಣವನ್ನೂ ರೂಪನ್ನೂ ಸೊಗಸನ್ನೂ ತುಂಬುವಂತೆ ಇರಬೇಕು. ಮಕ್ಕಳ ಕಣ್ಣು 'ಕ್ಷ' ಕಿರಣದಂತೆ ಯಥಾರ್ಥ ಪಾರದರ್ಶಿ ಅಲ್ಲ: ಅದು ಯಕ್ಷಕಿರಣ. ಮಾಯಾದೀಪ್ತಿಯ ಅಪರಾದರ್ಶಿ. ಕೊನೆಗೆ ಪದ್ಯದ ಭಾಷೆ ಮತ್ತು ಭಣಿತದ ಶೈಲಿ ಮಕ್ಕಳ ನಾಲಗೆಗೆ ನಡವಳಿಕೆಗೆ ಹಾಗೂ ತಿಳುವಳಿಕೆಗೆ ಸಹಜವಾಗಿ ಹೊಂದಿಕೊಳ್ಳಬೇಕು. ಕೆಲವು ಸಲ ಈ ಪಂಚತಂತ್ರಗಳಲ್ಲಿ ಒಂದೆರಡು ಲೋಪವಾದರೂ ಉಳಿದವುಗಳ ಕಸುವಿನಿಂದ ಪದ್ಯ ಮಕ್ಕಳ ಎದೆಯನ್ನು ತಟ್ಟಬಲ್ಲದು. ವಿಶೇಷತಃ ಅವರನ್ನು ಬಲವಾಗಿ ಸೆರೆಹಿಡಿಯುವ ಪ್ರಾಸ ಮತ್ತು ಲಯ ಬದ್ಧತೆಗಳು ಬಲಿಷ್ಠವಿದ್ದರೆ. ಇವಕ್ಕೊಂದು ಉತ್ತಮ ಉದಾಹರಣೆ, ಅಂಬಿಕಾತನಯದತ್ತರ ''ಪಾತರ ಗಿತ್ತಿ ಪಕ್ಕಾ.'' ಪ್ರಾಸ, ಲಯ, ಊಹೆ, ಭಾಷೆ ಮತ್ತು ಶೈಲಿ ಈ ಪಂಚಾಂಗ ಶುದ್ಧಿಯ ಒರೆಗಲ್ಲಿಗೆ ದಿನಕರರ ಮಕ್ಕಳ ಪದ್ಯಗಳನ್ನು ಒರೆದು ನೋಡಿದಾಗ ಅವು 'ಸರಾಸರಿ' ಹೊನ್ನಿನ ಬೆಲೆಗೆ ತೂಗುತ್ತವೆ.

'ಪಂಚಖಾದ್ಯ' ಎಲ್ಲ ಮಕ್ಕಳ ಪರಮ ಪ್ರೀತಿಯ ಕಜ್ಜಾಯ. ದಿನಕರರ ಈ ಗೀತ-ಪದ್ಯಗಳನ್ನು ಓದಿದಾಗೆಲ್ಲ ನನಗೆ ಈ ಪಂಚ-ಖಜ್ಜಾಯದ ನೆನಪಿನಿಂದ ನಾಲಗೆಗೆ ನೀರೂರುತ್ತದೆ. ಮೇಲೆ ನಮೂದಿಸಿದ ಐದು ಗುಣಗಳ ಹಿತಮಿತವಾದ ಹೊಂದಾಣಿಕೆಯಲ್ಲಿ ದಿನಕರರು ತಮ್ಮದೇ ಆದ ಒಂದು ಹದವನ್ನು ಸಾಧಿಸಿದ್ದಾರೆ. ಅವರ ಯಾವ ಪದ್ಯವನ್ನೇ ಎತ್ತಿಕೊಳ್ಳಿ, ದನಿತೆಗೆದು ಓದಿಕೊಳ್ಳಿ. ಅವುಗಳ ಸಹಜ ಪ್ರಾಸ, ಬಿಗುವಿನ ಪದಬಂಧ, ಲಲಿತವಾದ ಲಯಗಾರಿಕೆ ಶೀರ ಪ್ರವಾಹಿಯೂ ಅರ್ಥವಾಹಿಯೂ ಆದ ಆಡುಮಾತಿನ ನಡಿಗೆ ಇವುಗಳ ಉತ್ಕೃಷ್ಟ ಸಮವಾಯ ಅಲ್ಲ, ಸಮನ್ವಯ–ಈ ಕಾವ್ಯದ ಪಾಕಸಿದ್ಧಿ. ಇಲ್ಲಿ ಮಕ್ಕಳ ಭಾವನೆ, ಊಹನೆಗಳ ಬೀಸು ಹಾಸುಗಳ ಎತ್ತರ ಬಿತ್ತರಗಳನ್ನು ಮೀರಿ ಕವಿಯ ಕಲ್ಪನೆ ಎಲ್ಲೂ ಸ್ವೈರವಾಗಿ ಏರಾಡುವದಿಲ್ಲ, ಹಾರಾಡುವದಿಲ್ಲ. ಆದಾಗ್ಯೂ ಅದು ಬಾಲರ ಮನೋ ಭೂಮಿಯ ಆಕರ್ಷಣೆಯಿಂದ ಚಿತ್ತ ಭಿತ್ತಿಯ ಆಧಾರದಿಂದ ಜಾರಿ ತಪ್ಪಿಹೋಗುವದಿಲ್ಲ. "ಮಕ್ಕಳ ಆಟದ ಹಕ್ಕಿ ದಿಟ" ಎಂಬ "ಗಾಳಿಪಟ" ದಂತೆ ಅದು ಹಕ್ಕಿಯ ಮೀರಿ। ದಿಕ್ಕಿಗೆ ಹಾರಿ। ಹದ್ದಿಗೆ ಸೋಲು। ಚಿಕ್ಕೆಗು ಮೇಲು। ಏರಿ ಹಾರಾಡಿ ಮುಗಿಲಲಿ ಮಾಟ ಸೊಗಸಿನ ಆಟ |. ಆಡಿದರೂ ಅದರ ಹುರಿ ಪುತಾಣಿಗಳ ಪುಟ್ಟ ಮುಷ್ಟಿಯಲ್ಲಿ ಭದ್ರವಾಗಿಯೇ ಇರುತ್ತದೆ. ದಿನಕರರ ಪದ್ಯಗಳು ನಿಜವಾಗಿಯೂ ಮಕ್ಕಳ ಬದುಕಿನ ಯಾವ ಭಾವ ಭಂಗಿಯೊಂದಿಗೂ ಪೂರ್ತಿ ಹೊಂದಿಕೊಂಡೇ ಪಡಿನುಡಿಯುತ್ತವೆ. ಮಕ್ಕಳ ಮನೋಗತವನ್ನು ಅವು ಎಲ್ಲೂ ಕೈ ಬಿಡುವದಿಲ್ಲ. ಮಕ್ಕಳ ಆನಂದದ ಭರವಸೆಗೆ ಎಂದೂ ಕೈ ಕೊಡುವದಿಲ್ಲ.

ಈ "ಗಾಳಿಪಟ" ಎಂಬ ಪದ್ಯವನ್ನೇ ಅಭ್ಯಸಿಸಿ : ಹಾರಾಡು । ಹೋರಾಡು, ಮೀರಿ । ಹಾರಿ, ಸೋಲು । ಮೇಲು, ಪಟ । ದಿಟ, ಆಟ । ಮಾಟ, ಸಣ್ಣ । ಅಣ್ಣ ಇಂಥ ಕೆಲವೇ ಸುಲಭ ಶಬ್ದ ಪ್ರಾಸಗಳನ್ನು ಇದು ಪಡೆದಿದೆ. ಇಂಥ ಪರಿಮಿತ ಹಾಗೂ ಪರಿಚಿತ ಪ್ರಾಸಗಳು ಎಲ್ಲಾ ಪದ್ಯಗಳಲ್ಲಿಯೂ ಆಗಾಗ್ಗೆ ಬರುತ್ತಿರುತ್ತವೆ. ಮುಗಿಲು, ಹಕ್ಕಿ, ಹದ್ದು, ಚಿಕ್ಕೆ ಮುಂತಾದ ಪ್ರತಿಮೆಗಳು ಇತರ ಪದ್ಯಗಳಲ್ಲಿಯಂತೆ ಇಲ್ಲಿಯೂ ಮಕ್ಕಳ ಅರಿವಿನ ಅಳವು ಮೀರಿ ನಿಲ್ಲುವದಿಲ್ಲ.

ಆದಾಗ್ಯೂ ಈ ಪದ್ಯ ಬಾಲ ಮನೋಭಾವದ ಒಂದು ಲಹರಿಯ ಉದ್ಗಾರ ವನ್ನು ಪೂರ್ತಿಯಾಗಿ, ಪರ್ಯಾಪ್ತವಾಗಿ ಮಾತಿನಲ್ಲಿ ಸಾಕಾರಗೊಳಿಸುತ್ತದೆ. ಮಾತ್ರವಲ್ಲ, ಒಂದೆರಡು ಕಡೆಗೆ ಮಕ್ಕಳ ಎದೆಯಾಳದ ಒಂದು ಸಾತ್ವಿಕ ಶ್ರದ್ಧೆಯ ಮಿಣುಕನ್ನು ಫಕ್ಕನೆ ಬೆಳಗಿಸಿ ಮುಂದೆ ಸಾಗುತ್ತದೆ. ಮೊದಲನುಡಿಯ ಮುಗಿತಾ ಯಕ್ಕೆ ಗಾಳಿಪಟ ಹಾರಿಸುವ ಹುಡುಗ ಹೇಳುತ್ತಾನೆ :

"ನೋಡೋ ಮುಟ್ಟಿತು ಮುಗಿಲಲ್ಲಿ

ದೇವರ ಅಟ್ಟದ ತುದಿಯಲ್ಲಿ!". ಆ ಬಾಲಕನ ಊಹೆಗೆ ಈ ದೈವಿಕತೆಯ ಈಷತ್‌ಸ್ಪರ್ಶ ದಿನಕರ ದೃಷ್ಟಿಯ ಕಾಣ್ಕೆ. ಹಾಗೆಯೇ ಪದ್ಯದ ಮುಗಿತಾಯಕ್ಕೆ ಮಿಂಚುವ ಈ ಸುಂದರ ಉತ್ಪ್ರೇಕ್ಷೆ ನೋಡಿ :

"ನೋಡೋ ಎತ್ತರದಲಿ ಚೆಂದ

ಬಾನಿನ ಹಣೆಯಲಿ ಶ್ರೀಗಂಧ।." ದೂರದ ಎತ್ತರದಲ್ಲಿ ಸಂಜೆಯ ಹೊಂಬಿಸಿಲಲ್ಲಿ ಹೊಳೆಯುವ ಆ ಗಾಳಿಪಟ ಆ ಬಾಲಕನಿಗೆ ಒಮ್ಮೆಲೆ ಬಾನಿನ ಹಣೆ ಯಲ್ಲಿ ಹಚ್ಚಿದ ಗಂಧದ ಬೊಟ್ಟಿನಂತೆ ಕಂಡಿತು ! ಎಂಥ ಎದೆದುಂಬುವ ಮಾನವೀಯ ಕಂಪಿನ ಕಾವನ್ನು ಈ ಪಂಕ್ತಿಯು ಸೂಸುತ್ತದೆ! ಈ ಉತ್ಪ್ರೇಕ್ಷೆಯ ನಿಲುಕು ಎಷ್ಟು ಹೃದ್ಯವೋ ಸೂಚಿಯಾದ ಬಾಲಕನ ಊಹೆಯ ನಿಲುಕಿಗೂ ಅದು ಅಷ್ಟೇ ಸಾಧ್ಯ.

ಕೇವಲ ನಾಲ್ಕೈದು ಬಣ್ಣದ ಕಾಜಿನ ತುಣುಕುಗಳನ್ನೋ ಬಳೆಯ ಓಡುಗ ಳನ್ನೋ 'ಬಹುರೂಪಿ' ಕೆಲೀಡೊಸ್ಕೋಪ (Kaleidoscope)ದ ನಳಿಕೆಯ ಒಂದು ತುದಿಯಲ್ಲಿಟ್ಟು ಅದನ್ನು ಸುತ್ತಾಡಿಸಿದಂತೆ, ಇನ್ನೊಂದು ತುದಿಯಿಂದ ನೋಡುವ ವರಿಗೆ ಚಿತ್ರ, ವಿಚಿತ್ರ ಚೆಲುವು ರೂಪುಗಳ ವರ್ಣರಂಜಿತ ವ್ಯೂಹಗಳು ಮರುಳುಗೊಳಿ ಸುತ್ತವೆ. ಅದೇ ರೀತಿ, ಕೆಲವೇ ಪರಿಚಿತ ಶಬ್ದ ಪ್ರಾಸಗಳು ಒಂದೆರಡೇ ಮಾದರಿಯ ಮಾತ್ರಾಗಣಗಳು, ಇವುಗಳನ್ನೇ ಸುತ್ತಾಡಿಸಿ ಪ್ರತಿಶಬ್ದದ ವ್ಯೂಹದಲ್ಲಿಯೂ ಹೊಸ ಸೊಗಸಿನ ರೂಪುಗಾರಿಕೆಯನ್ನು ಸಾಧಿಸುವ ಹಸ್ತಕೌಶಲ್ಯ ಈ ಕವಿಗೆ ಸಿದ್ಧಿಸಿದೆ.

ಈ ಪದ್ಯಗಳಲ್ಲಿ ಕವಿಯು ಸಾಧಿಸಿದ ಯಶಸ್ಸಿನ ಮರ್ಮ ಕವಿಯ ವಾಗ್ಧೋರಣೆಯ ದನಿಯಲ್ಲ. ಮಕ್ಕಳೊಂದಿಗೆ ಆತ ವಹಿಸಿದ ನಿಲುಮೆಯಲ್ಲಿ ಇದೆ. ಕಥನ ಕವನಗಳನ್ನು ಕೆಲವು ಪೂರ್ಣ ಪ್ರಮಾಣದ (Ful length) ಸ್ವಭಾವ ಚಿತ್ರಗಳನ್ನು ಬಿಟ್ಟರೆ ಉಳಿದ ಎಲ್ಲಾ ಪದ್ಯಗಳಲ್ಲಿ ಕವಿಯು ಒಂದಲ್ಲ ಒಂದು ಬಗೆಯಲ್ಲಿ ನಾಟಕೀಯ (Dramatic) ಗುಣವನ್ನು ತುಂಬಿದ್ದಾರೆ. 'ಚಿಕ್ಕಿನ' ಕವನಗಳಂಥ ಹಲವಾರು ಪದ್ಯಗಳು ಸಂಬೋಧನೆಯ ಇಲ್ಲವೆ ಸಂವಾದ ರೂಪದಲ್ಲಿ ಇರುತ್ತವೆ. (ಸಂಬೋಧನೆ ಎಂದರೆ ಇಲ್ಲಿ Apostrophising ಎಂಬ ಅರ್ಥದಲ್ಲಿ) ಪದ್ಯದುದ್ದಕ್ಕೂ ಆದರ ವಸ್ತುವಾದ ಪ್ರಾಣಿಯನ್ನೋ ವಸ್ತುವನ್ನೋ ಸಂಬೋಧಿಸಿ ಮಾತನಾಡುವುದು, ಇಲ್ಲವೆ ಬಣ್ಣಿಸುವದು ಇದರ ರೀತಿ. ಚಿಕ್ಕಿನ ಕುರಿತ ಐದು ಪದ್ಯಗಳು 'ಇಣಚಿ' 'ಕಾಮನಬಿಲ್ಲು' ಮುಂತಾದವು ಈ ಬಗೆಯವು. ಆದರೆ 'ಚಿಕ್ಕಿನ ಉತ್ತರ' ''ತಾಯಿಯ ಉತ್ತರ'' ಇವು ಪಶ್ನೋತ್ತರಗಳ ಧಾಟಿಯವು. ಇಂಥವುಗಳಲ್ಲಿ ಕವನ ಒಂದು ರೀತಿ ಸಕ್ರಿಯ ಅವಾಯಕ ಸಜೀವವಾಗುತ್ತದೆ. ಈ ನಾಟಕೀಯತೆಯನ್ನು ತರುವ ಇನ್ನೊಂದು ರೀತಿ ಮಗುವೆ ಪದ್ಯದ ನಾಯಕನಾಗಿ ಮಾತನಾಡುವದು. ಅಲ್ಲಿಯ ವಸ್ತುವಿನ್ಯಾಸ ಮಗುವಿನ ಮಾತಿನಲ್ಲಿಯೇ ಆಡಿತೋರುವ ರೀತಿ ಇದು. 'ಮಳೆರಾಯ', 'ಮಕ್ಕಳ ಬಯಕೆ,' 'ನಮ್ಮ ಹಳ್ಳಿ', 'ಬಳಗ' ಮುಂತಾದವು ಇಂತಹವು. 'ಅಕ್ಕನಬಂಡಿ' 'ಅಕ್ಕನ ಲಗ್ನ' 'ನಮ್ಮೂರ ಪಟ್ಟ' ಮುಂತಾದವೂ ಕಥನ (Narrative) ಶೈಲಿಯಲ್ಲಿ ಇದ್ದರೂ ಅದನ್ನು ಕಥಿಸುವ ದನಿ ಕವಿಯದಲ್ಲ. ಒಂದು ಮಗುವಿನದೇ ಎಂಬಂತೆ ನುಡಿಯುವಂತೆ ಕವಿ ಎಚ್ಚರಿಕೆವಹಿಸಿದ್ದಾರೆ.

ಇನ್ನುಳಿದ ದೊಡ್ಡ ಗುಂಪು ಕಥನ ಕವನಗಳದು. 'ಮಲಮಗನ ಮದುವೆ' ''ಇಲಿಸಮ್ಮೇಳನ'' 'ಚಂದ್ರನ ಕೂಸು' ಹಾಗೂ 'ರೈತ ಮತ್ತು ಕರಡಿ' ಇವು ಕವನ ಕಥೆಗಳು. ಇದೇ ಜಾಡಿನ ಪ್ರಸಂಗ ಕಥನಗಳೆಂದರೆ 'ತಿಪ್ಪಾಭಟ್ಟರು ನೇಗಿಲು ಹಿಡಿದ,' 'ತಿಪ್ಪಾಭಟ್ಟರ ಕುಂಬಳಕಾಯಿ,' 'ಅಕ್ಕನಲಗ್ನ' ಇತ್ಯಾದಿ. ಪೂರ್ತಿಶಬ್ದಚಿತ್ರಗಳು 'ಅಡಿಗೆಭಟ್ಟ' ಕೀಟಲೆ ಹುಡುಗ, ನಮ್ಮೂರಪೇದೆ, ಸೋವಾರಿಮಲ್ಲ, ಮತ್ತು ಸುದೀರ್ಘವಾದ ತಿಪ್ಪಾಭಟ್ಟರು. ಶುದ್ಧ ವರ್ಣನಾ ಕವನಗಳು 'ಚೆನ್ನಿ ಮತ್ತು ಕುನ್ನಿ,' 'ಊದಬತ್ತಿ' 'ತತ್ತಿಯದೋಸೆ' 'ಪಾತರಗಿತ್ತಿ' 'ಚಂದಿರ ಮತ್ತು ತಾರೆಗಳು' 'ಕುಂಬಾರನ ತಿಗರಿ' 'ಚೆಳಿ' 'ದೇವರ ಎತ್ತು' 'ಹೊಲಿಗೆಯ ಯಂತ್ರ' ಮತ್ತು 'ಮೈಸೂರಿನ ತಿಂಡಿಗಳು.'

ಈ ಪದ್ಯಗಳನ್ನು ವಸ್ತುವಿನ ಪ್ರಕಾರದಂತೆ ವರ್ಗೀಕರಿಸಲೂಬಹುದು : ೧) ಪಶುಪಕ್ಷಿಗಳ ಬಗೆಗೆ–ಇವುಗಳಲ್ಲಿ ೬ ಕಥೆಗಳನ್ನು ಬಿಟ್ಟು ಉಳಿದವು ೪. ೨) ನಿಸರ್ಗ–ನಕ್ಷತ್ರಲೋಕ, ಒಟ್ಟು ೫. ೩) ಕೌಟುಂಬಿಕ : ಜೋಗುಳಹಿಡಿದು ೩ ಮತ್ತು ೪) ಬಾಲಲೀಲೆಯ ವಿನೋದ ವಿಷಯಗಳವು.

ಈ ಸಂಕಲನದಲ್ಲಿ ಎರಡು ಎದ್ದು ಕಾಣುವ ಗುಂಪುಗಳಿವೆ. ಒಂದು ಬೆಕ್ಕಿನ ಪದ್ಯಗಳು ಆರು; ಇನ್ನೊಂದು ತಿಪ್ಪಾಭಟ್ಟರ ಕುರಿತು ನಾಲ್ಕು. ಈ ನಾಲ್ಕರಲ್ಲಿ ಒಂದು ಸುದೀರ್ಘಕವನ 'ತಿಪ್ಪಾಭಟ್ಟರು'. ಆ ವಿನೋದ ಮೂರ್ತಿಯ ಆಳತೆಯ ಸ್ವರೂಪ ದರ್ಶನ. ನಿಜವಾಗಿಯೂ ಆ ಭಟ್ಟರ ಬಗೆಗೆ ಬಂದ ಇತರ ತುಂಡುಪದ್ಯಗಳು ಇದರೊಳಗೆ ಸೇರಿ ಈ ಖಂಡಕಾವ್ಯ ಪೂರ್ತಿಯಾಗಬಹುದಿತ್ತು. 'ತಿಪ್ಪಾಭಟ್ಟರ' ಕೊಡೆಯಲ್ಲಿ ಸ್ನಾನ, ರೂಮಾಲು, ಬುದ್ಧಿಯ ಬಲಶಾಲಿ, ಪಾಯಸದ ಹುಚ್ಚು, ಅವರು ನೇಗಿಲು ಹಿಡಿದದ್ದು, ಅವರ ಜನಿವಾರ, ಕುಂಬಳಕಾಯಿ ಖರೀದಿ – ಇವೆಲ್ಲ ಬಿಡಿ ಹಾಗೂ ಪ್ರಾಸಂಗಿಕ (Episodic) ಪದ್ಯಗಳು ಆ ವ್ಯಕ್ತಿಯ ವ್ಯಂಗ್ಯ ಚಿತ್ರಣ (Caricature)ದ ವಿವಿಧ ಭಂಗಿಗಳೇ ಆಗಿವೆ. ಆದರೆ ಈ ತುಂಡು ಪದ್ಯಗಳ ಗಣ ಸಂಖ್ಯೆ ಆ ಸುದೀರ್ಘ ಕವನದ ವೃತ್ತಕ್ಕೆ ಹೊಂದಿಕೆ ಆಗದು. ಇಲ್ಲವಾದರೆ ಇವೆಲ್ಲ ಒಂದೇ ವಸ್ತುವಿನ್ಯಾಸದ ನೀಳ್ಗವನವಾಗಬಹುದಿತ್ತು, ಇರಲಿ.

ಬೆಕ್ಕಿನ ಪದ್ಯಗಳು ಹೆಚ್ಚು ನಾಟಕೀಯ. ಚಿಕ್ಕಮಕ್ಕಳ ಭಾವಲೋಕಕ್ಕೆ ಹೆಚ್ಚು ಹತ್ತಿರ ಹಾಗೂ ಹಿಗ್ಗಿನವು. ಅವುಗಳ Pattern ಕೂಡಾ ಒಂದೇ—'ಬೆಕ್ಕೋ ಬೆಕ್ಕೋ ಮುದ್ದಿನ ಸೊಕ್ಕೋ' ಆರಂಭವಾಗುವ ಈ ಪದ್ಯಗಳು ಮಗುವಿಗೂ ಅದರ ಮುದ್ದಿನ ಬೆಕ್ಕಿಗೂ ನಡೆದ ಸಂವಾದ ಕಥನಗಳಂತಿವೆ. 'ಕೇಳೋ ಕಳ್ಳಾ, ಮುದ್ದಿನ ಮಳ್ಳಾ' ಎಂಬ ಮಾತಿನಿಂದ ಬೆಕ್ಕಿನ ಉತ್ತರ ಆರಂಭ (ಅನುಬಂಧದಲ್ಲಿ).. ಇವುಗಳಲ್ಲಿ 'ಬೆಕ್ಕು' ಮಾತ್ರ ಒಂದು ಶಬ್ದಚಿತ್ರಣ-ಮಗುವಿನ ಮಾತಿನಲ್ಲಿಯೇ ಕವಿ ಬರೆದದ್ದು.

ಬೆಕ್ಕಿನ ಕುರಿತು ಮೊದಲನೆಯ ಕವನ Pussy cat pussy cat Where had you Been? ಎಂಬ ಜನಪ್ರಿಯ ಇಂಗ್ಲೀಷ ಶಿಶುಗೀತದ ಅನುಕರಣ. ದಿನಕರರ ಶಿಶುಗೀತಗಳಲ್ಲಿ ಇದೊಂದೇ ಅಂಥ ಅನುಕರಣ ಗೀತ. ಇದೂ ಪೂರ್ತಿ ಕನ್ನಡೀಕರಣ ಗೊಂಡಿದೆ. ಮಗು ಬೆಕ್ಕಿಗಾಗಿ 'ಹಾಲೂ ಬೆಲ್ಲ ಕಾಯಿಸಿ ಇಟ್ಟದ್ದೆ' ಅನ್ನುವದು ಈ ಕನ್ನಡತನಕ್ಕೆ ಕನ್ನಡಿ. ಆಂಗ್ಲ Pussy ಲಂಡನ್ನಿಗೆ ಹೋಗಿತ್ತು ರಾಣಿಯನ್ನು ನೋಡಲು. ಆದರೆ ಅಲ್ಲಿ ನೋಡಿದ್ದು ಆಕೆಯ ಸಿಂಹಾಸನದ ಕೆಳಗೆ ಒಂದು ಇಲಿಯನ್ನು! ಬೆಕ್ಕಿಗೆ ಎಲ್ಲೇ ಹೋಗಲಿ ಇಲಿಯೊಂದೇ ಲಕ್ಷ್ಯ! ದಿನಕರರ ಈ ಕನ್ನಡ ಬೆಕ್ಕು ಹೆಚ್ಚು ನಿರೀಕ್ಷಕ. ಅದು 'ರಾಜನಸಂಗಡ ರಾಣಿಯೂ ಇದ್ದಳು | ಅಂತಃಪುರ ದೊಳಗೆ'—ಎಂದು ಕಂಡುಕೊಳ್ಳುತ್ತದೆ. ಇಲ್ಲಿ ಅಂತಃಪುರ, ರಾಣಿಯಮಂಚ, ರಾಜನ ದಂಪತಿಯ ಏಕಾಂತ ಸೂಚಿತವಾಗಿದೆ. ಆದರೆ ಅದು ಚಿಲಿಪಿಲಿ ಇಲಿಯೊಂದನ್ನು ಗಮನಿಸುವದು ಅನಂತರ. ಅಂದರೆ ಈ ಪದ್ಯದ ಬೆಕ್ಕಿನ ಆಸಕ್ತಿಯ ಒಮ್ಮೊಗತನ ಸಡಿಲು ಬೀಳುತ್ತದೆ ಇದರಿಂದ ವಿವರ ವರ್ಣಿಕೆಯಲ್ಲಿ ಈ ಪದ್ಯ ಇಂಗ್ಲೀಷ ಕವನ ಕ್ಕಿಂತ ಹೆಚ್ಚು ತುಂಬಿಬಂದಿದ್ದರೂ ಗುರಿಗಾರಿಕೆಯಲ್ಲಿ ಮೊಂಡವೆನಿಸುತ್ತದೆ.

Pussy cat ಹೋದದ್ದು ರಾಣಿಯ ದರ್ಶನಕ್ಕೆ ಆದರೆ ಮಾಡಿದ್ದು ಇಲಿಯ ಬೇಟೆ–ಕಂಡಿದ್ದೂ ಇಲಿಯನ್ನೇ. ಆದರೆ ದಿನಕರರ ಮುದ್ದಿನಸೊಕ್ಕು ಹಾಗಲ್ಲ, ಇದಕ್ಕೆ "ಪರಿಸರ ಪ್ರಜ್ಞೆ" ಹೆಚ್ಚು!

'ಕುಮಟೆಯ ತೇರು' ಬೇರೆ ಯಾವ ಊರ ತೇರಜಾತ್ರೆಗೂ ಸಲ್ಲುವ ಚೆಂದಪದ್ಯ. ಕುಮಟೆಯೇ ಏಕೆ? 'ಗುಮಟೆಯ ಪನಕ್ಕೆ' ಅದು ಸರಿಗೂಡುತ್ತದೆ! 'ಬೆಕ್ಕಿನ ಆರೈಕೆ'ಯಲ್ಲಿ 'ಮುದ್ದಿನಮಳ್ಳ' ನಿಗೆ ಬೆಕ್ಕು ಉತ್ತರಕೊಡುವದಿಲ್ಲ. ಕವಿಯೇ ಹಾಡುತ್ತಾನೆ. ಬೆಕ್ಕಿಗೆ ಜಳಕ ಬೇಡವೆಂದು ಹಾಗೆಯೇ ಜಳಕದ ಥೀಮನ್ನೆ ಇಟ್ಟುಕೊಂಡ ಪದ್ಯ. ಕೊನೆಗೆ ಆರೈಕೆ–ಹಾಲು. ಮೀನುಗಳ ಪೂರೈಕೆಯ ಕಲ್ಪನೆಯಲ್ಲಿ ಕೊನೆಗಾಣುತ್ತದೆ! 'ಬೆಕ್ಕಿನ ಉತ್ತರ' ಇದೇ ಮಾದರಿಯ ಸುಟಿಯಾದ ಪದ್ಯ. ಆದರೆ ಕಳ್ಳ–ಮಳ್ಳ ಕೇಳಿದ ಪ್ರಶ್ನೆ ಎರಡು. ಬೆಕ್ಕಿನ ಉತ್ತರ ಮಾತ್ರ ಒಂದು. 'ಎರಡೂ ಕಣ್ಣಲಿ ಕಾಜಿನಗೋಲಿಯ ನಾಟಿಸಿದನೆ ಜೊಮ್ಮ!' ಎಂಬುದಕ್ಕೆ ಬೆಕ್ಕಿನ ಉತ್ತರವಿಲ್ಲ. ಬೆಕ್ಕಿಗೆ ತನ್ನ ಮೀಸೆಯ ಬಗೆಗೆ ದೊಡ್ಡ ಹೆಮ್ಮೆ. 'ಮೀಸೆಯ ಬೋಳಿಸಿಕೊಂಡರೆ ಕೆಡುವದೆ ಬೆಕ್ಕಿನ ಸಿಂಗಾರ?' ಎಂಬ ಪ್ರಶ್ನೆ ಕವಿಯದೇ ಉದ್ಗಾರವೆನಿಸುತ್ತದೆ. 'ಬೆಕ್ಕಿನ' ಎಂಬ ಪರೋಕ್ಷ ಕಥನದಿಂದ ಮಗು ಕೇಳಿದರೆ "ನಿನ್ನಯ" ಎಂದಾಗಬೇಕಿತ್ತು. ಇರಲಿ 'ಬೆಕ್ಕು' "ಶಬ್ದಚಿತ್ರದ ರಚನೆ (Structure) "ಪುನರಾಗಮನ" ಕವನಕ್ಕೆ ತುಸು ಗಂಭೀರ ('ಮಾರ್ಗೀಯ'?) ಶೀರ್ಷಿಕೆ ಅಡ್ಡಿ. ಬೆಕ್ಕನ್ನು ಕೊತ್ತಲದಲ್ಲಿ ತುಂಬಿ ಬೆಟ್ಟದ ಬುಡದಲಿ ಕತ್ತಲೆಯನು ನಂಬಿ ಬಿಟ್ಟು ಬಂದ ಬೆಕ್ಕು ತಪ್ಪದೆ ಹಿಂದಿರುಗುತ್ತದೆ. ಅದರ ಗುಟ್ಟು ಮಗು ಬೆಕ್ಕಿಗೆ ಕೇಳುತ್ತದೆ. ಮಗುವಿಗೆ ಮುದ್ದು ಬೆಕ್ಕಿನಮೇಲೆ ಅಪಾರ ಮರುಕ. ಅಜ್ಜಿಯ ಕಾಟ ತಪ್ಪಿಸಿಕೊಳ್ಳಲು ಸದ್ದಿಲ್ಲದೆ ಅಕ್ಕನ ಊರಿಗೆ ಜಾರಿ ಹೋಗೋಣವೇ? ಎಂದು ಮಗು ಬೆಕ್ಕಿನೊಡನೆ ಸಂಚಿನ ಹಂಚಿಕೆ ಎತ್ತುತ್ತದೆ. ಈ ಪದ್ಯ ಮಗುವಿನ ಮನೋಭಾವದಲ್ಲಿ ನಿಜವಾಗಿಯೂ ಹೃದ್ಯವಾಗಿದೆ. ಆದರೆ ಇದರ ಆಡುಮಾತಿನ ಜಾಡಿಗೆ 'ಪುನಃ' 'ಹೋಗಿ ಬರೋಣವೆ ?' ಇಂಥ ಪದಪ್ರಯೋಗ ಕೀಸರವೆನಿಸುತ್ತದೆ. ಈ ಪದ್ಯ ಮಗುವಿನದೇ ಭಾಷಣ. ಬೆಕ್ಕು 'ಮೌನ. 'ಬೆಕ್ಕು' ಪದ್ಯದ ರಚನೆಯಲ್ಲಿ ಪ್ರತಿ ನುಡಿಯ ಕೊನೆಯ ಎರಡು ಸಾಲುಗಳ ಮುಗಿತಾಯ ನಾದಾನುಕರಣ (ಮೆಂವ್, ಮೆಂವ್, ಡ್ರೊಂವ್, ಡ್ರ್ಯಾಂವ್, ಗುರ್ ಗುರ್, ಕುರ್ ಕುರ್! ಹೋ ಹೋ ಫೋ ದೊ; ಚೀ ಚೀ, ಸೀ ಸಿ; ಹಾಳ್ ಹಾಳ್, ತಾಳ್ ತಾಳ್) ದಿಂದ ರುಚಿಕಟ್ಟಾಗಿದ್ದರೆ ಈ ಕವನದ ಸೊಗಸು ಬೆಕ್ಕಿನೊಂದಿಗೆ ಮಗು ಮಾಡುವ ಸಂಚಿನ ಭಾವ ಸಂವೇದನೆಯಲ್ಲಿದೆ. ಹೀಗೆ ಅದೇ ಬೆಕ್ಕು ಅದೇ ಮಗು; ಆದರೆ ಆರೂ ಪದ್ಯಗಳು ತಮ್ಮ Structure, theme, tone ಗಳ ವೈವಿಧ್ಯದಿಂದಾಗಿ ಒಂದೇ ಗಣ ವೃತ್ತದಲ್ಲಿಯೂ ಹೊಸ ಸ್ವಾರಸ್ಯವನ್ನು ಸಾಧಿಸಿರುತ್ತವೆ. ದಿನಕರರು ಬಹಳ ವರ್ಷ ಒಂದು ಬೆಕ್ಕು ಸಾಕಿದ್ದರು. ಅದು

ಅವರ ಮೇಜಿನ ಮೇಲೆಯೇ ಉಣ್ಣುತಿತ್ತು. ಮುದ್ದಿನ ಸೊಕ್ಕಿನಿಂದ ಬೆಳೆದಿತ್ತು. ಅವರ ದೊಡ್ಡ ಭಾವಚಿತ್ರವು ಒಮ್ಮೆ 'ಜನಸೇವಕ'ದ ವಿಶೇಷಾಂಕದ ಮುಖಪುಟವನ್ನು ಅಲಂಕರಿಸಿತ್ತು. ಇವೆಲ್ಲ ಕವನಗಳು ಅದಕ್ಕೆ ಮುಡಿಪಾಗಬಹುದಿತ್ತು.

ಇನ್ನು ತಿಪ್ಪಾಭಟ್ಟರ ಪದ್ಯಗಳ ರುಚಿಯೇ ಬೇರೆ. ಅಲ್ಲಿ ಒಗರು, ಚುರುಕು, ಹರಿತ, ಅಣಕ ಗೇಲಿ, ಗಮ್ಮತ್ತು ಎಲ್ಲ 'ಭೇಳ ಮಿಸಳ'ದಂತೆ ಹುರಿಕಟ್ಟಾಗಿ ಕಲಬೆರಕೆ ಆಗಿವೆ. ಭಟ್ಟರ ಫಜೀತಿ ಕೆಲವು ಬಿಡಿ ಪದ್ಯಗಳ ವಿಷಯ. ಹಳೆ ಹರಕು ಕೊಡೆಯಲ್ಲಿಯೇ ಭಟ್ಟರಿಗೆ ಸ್ನಾನ. ಕುಂಬಳಕಾಯಿ ಖರೀದಿ ಮಾಡಿ ತರುವಾಗ ಮನೆವಣಪೆಯಲ್ಲಿ ಅದು ಬಿದ್ದು ಒಡೆದದ್ದು, ನೇಗಿಲು ಊಳಲುಹೋಗಿ ಹೋರಿಗಳು ಓಡಿ ಹಿಡಿತ ಜಾರಿ ದೋತ್ರ ಬಿಚ್ಚಿ ಭಟ್ಟರು ಆಚೆ ಈಚೀನ ಒಕ್ಕಲಿಂದ ನಗಿಸಿಕೊಂಡದು. ಅವರ ರೂಮಾಲು ಜರಿವಾರದ ವೈಚಿತ್ರ್ಯ, ಇವಲ್ಲದೆ ಕೀಟಲೆ ಹುಡುಗನ ಕೀಟಲೆಗೂ ಭಟ್ಟರು ಬಲಿ ಆಗುತ್ತಾರೆ. ಅವರ ಕುರಿತ ಸುದೀರ್ಘ ಕವನ ಎರಡು ಕನ್ನಡ ಶಿಶು ಸಾಹಿತ್ಯದಲ್ಲಿಯೇ ಒಂದು ಅಖಂಡ ಕಲಾ ಮೌಲ್ಯದ ಖಂಡ ಕಾವ್ಯ. ಇಂಥ ನಗೆ ಮೋಡಿಯ ಸೀಳ್ಗವನ ಅದೂ ಮಕ್ಕಳಿಗಾಗಿ ಬರೆದದ್ದು ನಮ್ಮಲ್ಲಿ ತೀರ ವಿರಳ. ಇದರ ೪೮ ನುಡಿಗಳು ೧೧ ಪರಿಚ್ಛೇದಗಳಲ್ಲಿ ೧೯೨ ಸಾಲಿನ ಚೌಪದಿಗಳಾಗಿ ಹರಿದಿವೆ. ತಿಪ್ಪಾಭಟ್ಟರ ಚರ್ಯೆ ಚರಿತೆ, ಚಟ-ಚಾಳಿಗಳು ಗುಡಿಯಲ್ಲಿ, ಹಬ್ಬದಲ್ಲಿ, ಪೇಟೆಯಲ್ಲಿ, ಬಯಲಾಟದಲ್ಲಿ, ಊಟದಲ್ಲಿ, ಲೇವಾದೇವಿಯಲ್ಲಿ, ಮನೆಮುಂದಿಯಲ್ಲಿ, ಬಾಳಿನಲ್ಲಿ, ಸಾವಿನಲ್ಲಿ ಆ ಭಟ್ಟರ ವಿವಿಧ ನಿಕಟವಾದ ವಿಕಟವಾದ ನೋಟಗಳನ್ನು ಕವಿ, ಮಕ್ಕಳ ಕುತೂಹಲ ಉದ್ದಕ್ಕೂ ಸೆರೆಹಿಡಿಯುವಂತೆ ನಿರೂಪಿಸಿದ್ದಾರೆ. ಅಲ್ಲಲ್ಲಿ ಮಿಂಚುವ ಅವರ ಟೀಕೆಯ ತಿವಿತಗಳು ತುಂಬ ಮಾರ್ಮಿಕವಾಗಿವೆ.

ಆದರೆ ಇಲ್ಲಿ ಹರಿದಾಡುವ ಹಾಸ್ಯ ತಿಳಿಯಾದರೂ ತುಸು ಕಟುವೇ ಆಗಿದೆ.— ಪರಿಹಾಸ, ಉಪಹಾಸ ಅಪಹಾಸ್ಯಗಳ ಎಲ್ಲ ಛಾಯೆಗಳನ್ನು ಅದು ಪಡೆದಿದೆ ಈ ಪರಿಣಾಮ (Effect) ಸಾಧಿಸಲಿಕ್ಕೆ, ಕವಿ ತಿಪ್ಪಾಭಟ್ಟರನ್ನು ಏನೆಲ್ಲ ಸನ್ನಿವೇಶಗಳಿಗೆ ಒಡ್ಡಿ ತೋರಿಸಿದ್ದಾರೆ. ಅವರ ಹೊಲಸು, 'ಜಿಪುಣತೆ, ಹೊಟ್ಟೆಬಾಕತನ ಡಂಭಾಚಾರ, ಗೊಡ್ಡು ಬ್ರಾಹ್ಮಣಿಕೆಗಳ ಜೊತೆಗೆ ಅವರಿಗೆ ಅಂಟಿದ ಸೂಳೆಗಾರಿಕೆ ಮೀನ ತಿನ್ನುವ ಚಟ, ಅಡ್ಡವೇಷ ಕಟ್ಟುವ ಚಾಪಲ್ಯ-ಹೀಗೆ ಅನೇಕ ವಿಸಂಗತವಲ್ಲದಿದ್ದರೂ ಅಸಂಗತ ಚಿತ್ರಗಳಲ್ಲಿ ತಿಪ್ಪಾಭಟ್ಟರು ಒಂದೇಸವನೆ ಕಾಣಿಸಿಕೊಳ್ಳುತ್ತಾರೆ. ಇಲ್ಲಿಯ ಹಾಸ್ಯ Sardonic ಜಾತಿಯದು. ಕಟುವಾದ ಕುಚೇಷ್ಟೆ, ಆದರೆ ಅದು ಹರಿತವಿದ್ದರೂ ಅದರಲ್ಲಿ ಕಹಿ ಹುಳಿ ಉರಿ ಏನೂ ಇಲ್ಲ. ಕೆಲವು Sampling ನೋಡಿರಿ—

"ತಿಪ್ಪಾ ಭಟ್ಟರ ಡೊಳ್ಳು। ನೋಡಲು ಮಕ್ಕಳು ಮಳ್ಳು।
ಕುಂಬಳಕಾಯಿಯಹಾಗೆ। ಉರುಟುರುಟಾಗಿದೆ ಹೀಗೆ"

ಇಲ್ಲಿ ಕೊನೆಯ ಪಾದ ಸಾಭಿನಯವಾಗಿಯೇ ಅಡಿತೋರಿಸಬೇಕು. ಕುಂಬಳ ಕಾಯಿಯಂಥ ಡೊಳ್ಳು ಅಂದಾಕ್ಷಣ ಮಕ್ಕಳಿಗೆ ಈ ಹಸ್ತಾಭಿನಯ ತಾನಾಗಿಯೇ ತೋಚುವಂತಿದೆ.

"ತಿಪ್ಪಾ ಭಟ್ಟರ ಜುಟ್ಟಾ । ತಲೆಯಲಿ ಎಲ್ಲಿಗು ಮುಟ್ಟಾ
ಮೂರೇ ಕೂದಲು ಕೂಡಿ । ಗಾಳಿಗೆ ಕುಣಿವುದು ನೋಡಿ"

"ಭಟ್ಟರ ಕಾಲಿನಜೋಡು । ಒಳಗಡೆ ಪೂರಾ ಓಡು ।
ಭಟ್ಟರ ದುಡ್ಡಿಗೆ ತಕ್ಕ ! ಅಂದನು ಚಮಗಾರ್ ಪೊಕ್ಕ"

ಇಂಥ ಅಡ್ಡ ಟಿಪ್ಪಣಿ ಮರ್ಮಭೇದಿಯಾಗಿ ಬರುತ್ತವೆ.

"ಭಟ್ಟರು ಮಾಡಲು ಮಾಟ । ತಪ್ಪಿತು ದೆವ್ವದಕಾಟ ।
ಹರಿಜನ ಸೋವಿಗೆ ಜಡ್ಡು । ಭಟ್ಟರಿಗಾಯಿತು ಮುಡ್ಡು"
"ಗುಡಿಯಲಿ ದೇವರ ತೀರ್ಥ । ಭಟ್ಟರಿಗದು ಚರಿತಾರ್ಥ
("ತೀರ್ಥದ ನೀರನು ಚೆಲ್ಲಿ । ಹೂವಿನ ಪಕಳೆಗೆ ಬಿಲ್ಲಿ!")
ಹೊಂಡದ ನೀರೂ ಸುದ್ದಾ । ಭಟ್ಟರ ಕೈಯಲಿ ಶುದ್ಧ ।"

"ಭಟ್ಟರ ಕೈಯಲಿ ತಟ್ಟೆ । ಅದರಲಿ ಕೋಳಿಯ ಮೊಟ್ಟೆ
ಸಾಲೆಯ ಮಕ್ಕಳು ನೋಡಿ । ನಲಿದರು ಚೇಷ್ಟೆಯ ಮಾಡಿ"

"ಭಟ್ಟರು ತಿಂದರು ಮೀನು । ನಮ್ಮಾಪ್ಲರ ಗತಿ ಏನು ?
ಭಟ್ಟರಿಗೇತಕೆ ಮೀನು ? । ಹರಗೀ ದಡಿ ಇಲ್ಲೇನು ?"

"ಭಟ್ಟರು ಕಂಡರು ಸುಗ್ಗಿ । ಮನದಲಿ ಬಹಳೇ ಹಿಗ್ಗಿ ।
ಕೊಟ್ಟರು ಒಂದೇ ಬಿಲ್ಲಿ । ಕರಡೀಗೂ ಅದರಲ್ಲಿ ।"

ಅಂದರೆ ಕರಡಿಯ ವೇಷ ಬೇರೆ ಸುಗ್ಗಿಯ ಜತೆಗೆ. ಆದರೆ ಭಟ್ಟರ ಬಿಲ್ಲಿಯಲ್ಲಿ ಎರಡೂ ಸಮಾವೇಶ!

"ಬೇಸಿಗೆ ಬಿಸಿಲಿನ ತಾಪ । ಭಟ್ಟರಿಗಾಗದು ಪಾಪ ।
ನೋಡಲು ಹೋದರು ಕುತ್ರಿ । ತಿಂಗಳ ಬೆಳಕಿಗು ಛತ್ರಿ ।"

"ತಿಪ್ಪಾ ಭಟ್ಟರ ಜಿಕ್ಕಾ ಮೈಯಲಿ ಬಹಳೇ ಸೊಕ್ಕಾ
ನೆರೆಮನೆ ಮಕ್ಕಳ ಹಾಲು । ಭಟ್ಟರ ಜಿಕ್ಕನ ಪಾಲು ।"
ಹೇಗಿದೇ ಈ ವ್ಯಂಗ್ಯ ? ಇದಕ್ಕೂ ಖಾರ ಇಲ್ಲಿದೆ.

"ತಿಪ್ಪಾಭಟ್ಟರ ಮಾಣಿ । ಕೆಲಸಕೆ ಬಾರದ ಪ್ರಾಣಿ
ಇಸ್ಪಿದ ವ್ಯಸನಕೆ ಬಿದ್ದ । ಸೂಳೆಯು ದಾಗಿನ ಕದ್ದ"

ಈ ಕೆಲಸಕ್ಕೆ ಬಾರದ ಭಟ್ಟರ ಮಾಣಿ ಸೂಳೆಗಾರಿಕೆಯಿಂದ ತಾನೇ ಲಾಭ ಪಡೆದ ! ಸೂಳೆಯು ಒಡವೆಯನ್ನೆ ಕದೀಮ ಕದ್ದನಂತೆ !

ಪಾಪ ಈ ವಯೋಗುಣ ವಿಶೇಷಣ ವಿಶಿಷ್ಟ. ತಿಪ್ಪಾಭಟ್ಟರಿಗೆ ಎಷ್ಟುತ್ತಾಯಿತು. ಆದರೆ ಶರಣನನ್ನು ಮರಣದಲ್ಲಿ ನೋಡಬೇಕು. ಭಟ್ಟರದು ವೀರ ಮರಣ.

"ಭಟ್ಟರು ಹಿಡಿದರು ಬೆತ್ತ । ಬಡಿದರು ಬಲ್ಲೆಯ ಹುತ್ತ
ಹುತ್ತಿನ ಒಳಗಡೆ ಹಾವು । ಭಟ್ಟರಿಗಾಯಿತು ಸಾವು"

ಭಟ್ಟರು ಸತ್ತರೆಂದು ಊರಮಕ್ಕಳಿಗೆಲ್ಲ ನೋವು ಆದರೆ ಸತ್ತರೂ ಅವರು ಅಮರರು. ಹೇಗೆಗೊತ್ತೆ ? ಇಲ್ಲಿದೆ ಕವಿಯ Master Stroke

"ಊರಿನ ಬಂಡೀ ಹಬ್ಬ । ಇಡು ಕಟ್ಟೆಯ ಸುಬ್ಬ ।
ಭಟ್ಟರ ಹಗರಣ ಮಾಡಿ । ತೋರಿಸಿದನು ಉಂಡಾಡಿ"

ಇದೇ ಬಗೆಯ ವ್ಯಂಗ್ಯ ವಿನೋದ "ಅಡಿಗೆಭಟ್ಟ"ನ ಚಿತ್ರಣದಲ್ಲಿದೆ ಪ್ರಾಥಮಿಕ ಶಾಲೆಯ ಕೆಳವರ್ಗದ ಮಕ್ಕಳು ಈ ಪದ್ಯವನ್ನು ಸಾಭಿನಯವಾಗಿ ಪ್ರದರ್ಶಿಸಿದ್ದನ್ನು ನಾನು ನೋಡಿದ್ದೇನೆ. ಓದಿದಾಗಿನಗಿಂತ ನೋಡಿ ಕೇಳಿದಾಗ ಅವರ ಕಾವ್ಯಗುಣ ಹೆಚ್ಚಿನ ಪ್ರಭಾವ ಬೀರಿತು. ದಿನಕರರ ಇಂಥ ಶಿಶುಗೀತಗಳ ಸ್ವಾರಸ್ಯವೇ ಇದು. ಈ ಕವನದ ಆರಂಭ ಹೀಗೆ

"ಅಡಿಗೆಯ ಭಟ್ಟ । ನಾಲಿಗೆ ಕೆಟ್ಟ ।
ಬಡಿಸುವ ಮೊದಲೆ । ಬಾಯೊಳಗಿಟ್ಟ । "

ಇದರ ಕೊನೆಯ ನುಡಿ

"ಅಡಿಗೆಯ ಭಟ್ಟ । ಜಗದಲಿ ಶ್ರೇಷ್ಟ
ಭಟ್ಟನ ಬೈದರೆ । ಕೂಳಿಗೆ ಕಷ್ಟ । "
"ಕೀಟಲೆ ಹುಡುಗ ಗೋಪಾಲ । ಹಳ್ಳಿಗೆ ಅವನೆ ಭೂಪಾಲ । "

ಆತನ ಕೀಟಲೆಯ ವರ್ಣನೆ ಹೊಳೆಗೆ ಮೀಯಲು ಇಳಿದ ತಿಪ್ಪಾಭಟರನ್ನೆ ಕಾಡಿದ್ದು.- ಅವರು ಉಡಲು ತಂದ ಪಂಜೆಯನ್ನೆ ಅಡಗಿಸಿಟ್ಟದ್ದು. ಆದರೆ ಈ ಕವನ ಉತ್ತರಾರ್ಧ ದಲ್ಲಿ ಗೋಪಾಲನನ್ನು ಮರೆತು ತಿಪ್ಪಾಭಟ್ಟರ ಪೇಚಾಟವನ್ನೆ ಬಣ್ಣಿಸುತ್ತ ಮುಗಿದಿದೆ 'ನಮ್ಮೂರ ಪೆದ್ದ'ನು ಕೀಟಲೆಹುಡುಗನ ಅಪರಾವತಾರ. ಆದರೆ ಹೇಳಿ ಕೇಳಿ

ಪೆದ್ದ. ಎಷ್ಟೋ ಸರ್ತಿ ಮಿಠಾಯಿ ಕದ್ದ ಹಣ ಕದ್ದ; ಒಮ್ಮೆ ಉಂಡೆಯ ಕದ್ದ (ಓಡು ವಾಗ) ತಿನ್ನುವ ಮೊದಲೇ ಗುಂಡಿಗೆ ಬಿದ್ದ! ಈ ಪದ್ಯವು ಒಂದರ್ಥದಲ್ಲಿ action song ಆಗಬಹುದು. "ಸೋಮಾರಿಮಲ್ಲ" ಪೆದ್ದಗಿಂತಲೂ ಹೆಚ್ಚು ಯಶಸ್ವಿ ಪದ್ಯ. ಇದು ಪ್ರಶ್ನೋತ್ತರ ರೂಪದಲ್ಲಿ ಇದ್ದುದರಿಂದ ಇದರ ನಾಟಕೀಯ ಸ್ವಾರಸ್ಯ ಹೆಚ್ಚು. ಇವೇ ಭಾವವನ್ನು ವ್ಯಕ್ತಮಾಡುವ ಬೇರೊಂದು ಹಳ್ಳಿಯ ಹಾಡನ್ನು ನಾನು ಎಂದೋ ಕೇಳಿದ್ದುಂಟು. ಸೋಮಾರಿಮಲ್ಲಾ ಯಾವ ಕೆಲಸಕ್ಕೂ ಬಾರಾ. ಪ್ರತಿ ಯೊಂದು ಕೆಲಸಕ್ಕೂ ಒಂದು ನೆಪಹೇಳಿ ಕಳ್ಳಬೀಳುತ್ತಾನೆ. ಆದರೆ "ಊಟಕೆ ಬಾರೋ ಮಲ್ಲಾ" ಅಂದಾಕ್ಷಣ ಹಾಜರು ಇದ್ದೇನಲ್ಲಾ। ಎಂದು ಸಿದ್ಧ.

"ನಮ್ಮ ಹಳ್ಳಿಯಲ್ಲಿ' ಒಂದು ವೈಶಿಷ್ಟಪೂರ್ಣ ಕವನ. ತನ್ನ ಮನೆ, ತನ್ನ ಊರು ತನಗೆ ಚೆಂದ, ತನಗೆ ಮೆಚ್ಚು. There is no place like home. ಆದರೆ ಈ ಭಾವವನ್ನು ಹುಚ್ಚು ಆವೇಶದಿಂದ ಕುರುಡು ಅಚ್ಚೆಯಿಂದ ಇಲ್ಲಿ ಮೂಡಿ ಸಿಲ್ಲ. ಈ ಊರ ಪ್ರೇಮಿಗೆ ತನ್ನ ಊರಿನ ಲೋಪ-ದೋಷಗಳೆಲ್ಲ ಗೊತ್ತು. ಆದರೂ ಅವನಿಗೆ ಆ ಹಳ್ಳಿ ಸುಂದರ, ಶ್ರೇಷ್ಠ. ಒಂದೆರಡು ನುಡಿ ಕೇಳಿರಿ :

"ಎಲ್ಲಾ ಕಡೆಯಲಿ ಬೆಳೆದರು ಕಳ್ಳಿ
ಧರೆಯಲಿ ನಮದೇ। ಸುಂದರ ಹಳ್ಳಿ'

"ತುಸು ಮಳೆ ಬಂದರು ಕೆಸರೇ ಕೆಸರು
ಆದರು ಹಳ್ಳಿಗೆ ಒಳ್ಳೇ ಹೆಸರು.
ಮಾವಿನ ಮರಗಳು ಊರೊಳಗೆಲ್ಲಾ
ಒಂದೂ ಹಣ್ಣಿಗೆ ಸವಿರಸವಿಲ್ಲಾ.
ಕೆರೆಯೊಳಗಂತು ತಾವರೆ ಕಾಣ
ತಪ್ಪದೇ ಕಾಂಬುದು ಮಲಗಿದ ಕೋಣ"

ಆದರೂ ನಮದೇ ಹಳ್ಳಿಯು ಶ್ರೇಷ್ಠ ಏಕೆ ?

"ನಮ್ಮೀ ಹಳ್ಳಿಗೆ ನಾವೇ ಯೋಗ್ಯ
ಈತರದೂರೇ ನಮ್ಮದು ಭಾಗ್ಯ"

ನಾಡ ಒಲುಮೆಯ ಒಂದು ನೈಜವಾದ ನಮ್ರೋನ್ಮೇಷವಿದು.

ದಿನಕರರ ಮಕ್ಕಳ ಪದ್ಯಗಳ ಇನ್ನೊಂದು ಮಾದರಿ ಕಥನ ಕವನಗಳು– ಪದ್ಯರೂಪದಲ್ಲಿ ಹೇಳಿದ ಕತೆಗಳು. ಅಂಥ ನಾಲ್ಕನ್ನು ಇಲ್ಲಿ ಗಮನಿಸೋಣ.

'ಮಂಗನ ಮದುವೆ' ಇದೊಂದು ಪ್ರಸಂಗ ಕಥನ. "ಬಿಸಿಲಲಿ ಮಳೆ; ಮಂಗನ ಮದುವೆ" ಎಂಬುದೊಂದು ಜಾನಪದ ನಾಣ್ಣುಡಿ. ಅದನ್ನು ಕವಿ ಇಲ್ಲಿ "ಮರ್ಕಟ ಕುಕ್ಕುಟ" ಲಗ್ನವಾಗಿ ಬಣ್ಣಿಸಿದ್ದಾರೆ.

"ಬಿಸಿಲಲಿ ಮಳೆಹನಿ ಮಂಗನ ಲಗ್ನ
ಮದುವೆಯ ನೋಡಲು ಮಕ್ಕಳು ಮಗ್ನ"

ಈ ಮದುವೆಯ ಪೌರೋಹಿತ್ಯವೂ ನಮ್ಮ ತಿಪ್ಪಾಭಟ್ಟರದೇ : ಕಾಮನ ಬಿಲ್ಲಿನ ಮಂಟಪ. ಕರಿಪುಕ್ಕದ ಹೇಂಟೆಯೇ ಮದುವಳತಿ.

"ದಿಬ್ಬಣ ಹೊರಡಲು ಕುಣಿಯಲುಕೆಂದು
ಬೆಟ್ಟದ ನವಿಲುಗಳೆಲ್ಲಾ ಬಂದು" 'ಥಕ ಥೈ ಕುಣಿದವು.

ಮಂಗನ ಮನದಲಿ ಮುಂದಿನ ಗಣಿತ (ನವಿಲ ಕುಣಿತಕ್ಕೆ ಅವನ ಲಕ್ಷ್ಯ ಇದ್ದಿಲ್ಲಾ!)

"ಹೊಸ ಸಂಸಾರವ ಹೂಡುವ ಕನಸು" ಅಂದರೆ
"ಬೇಗನೆ ಅಪ್ಪನು ಆಗುವ ಮನಸು"

ಅಂತೂ ನಿರ್ವಿಘ್ನವಾಗಿ ಈ ಕೋತಿ ಹೇಂಟೆಗಳ ಮದುವೆ ಮುಗಿಯಿತು. ಕೋತಿಯು ಕೊರಳಿಗೆ ಹಾರ ಹಾಕಿದ ಹೇಂಟೆಗೆ ಬಡಿವಾರ! ಆದರೆ ಅಷ್ಟರಲ್ಲಿ ಗುಡುಗು ಮಿಂಚು ಮಳೆಯ ಆರ್ಭಟ ಸುರು. ಮಂಟಪ ತುಂಬ ನೀರು. ಚಪ್ಪರವ ಮಡಲು ಹಾರಿ ಹೋದವು. ಜತೆಗೆ "ಮಂಗನು ಹಾರಿದ ಟೊಂಗೆಯ ತುದಿಗೆ। ಹೇಂಟೆಯೂ ಹಾರಿತು ಗೂಡಿನ ಒಳಗೆ". ಕವಿಗೆ ಇಲ್ಲಿ ತಾತ್ಪರ್ಯ ಹೇಳುವ ಚಾಪಲ್ಯ.

"ಒಬ್ಬರಿಗೊಬ್ಬರು ದರುಶನವಿಲ್ಲ"

ಇಂತಹ ಮದುವೆಯು. 'ಇಲಿ ಸಮ್ಮೇಳನ' ಇದು ಇಸೋಪನ ಒಂದು ನೀತಿ ಕಥೆ. ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವ ಠರಾವು ಪಾಸು ಮಾಡಿದ ಇಲಿಗಳ ಕೂಟದ ಕತೆ.

ಕವಿಯು ಕತೆಯನ್ನು ನೇರವಾಗಿ ಜೋರಾಗಿ ಹೇಳಿದ್ದಾರೆ. ಇಲಿಗಳ ತಂಡವು ಒಂದೆಡೆ ಸೇರಲು ಅದರ ಮುಖಂಡ ಆವೇಶದಿಂದ ಭಾಷಣ ಬಿಗಿಯುತ್ತಾನೆ. ಬೆಕ್ಕಿನ ಬಳಗದ ಸೊಕ್ಕಿನ ಆಟವನ್ನು ಮೂಷಕ ಕುಲಕ್ಕೆ ಆಗುವ ಕಾಟವನ್ನು ತಪ್ಪಿಸಲು ಒಂದು ಯುಕ್ತಿಯನ್ನು ಸೂಚಿಸಲು ಕೇಳಿಕೊಳ್ಳುತ್ತಾನೆ. ಈಗ ಸಭೆಯಲ್ಲಿ ಒಂದಿಲಿ ಎದ್ದು ದೇವರ ಮುಂದಿನ ಗಂಟೆಯ ಕುಂಟಿ ಬೆಕ್ಕಿನ ಕೊರಳಿಗೆ ಕಟ್ಟುವ ಸೂಚನೆ ಮುಂದಿಡುತ್ತಾನೆ.

ಗಂಟೆಯ ಕಟ್ಟಲು ಬೆಕ್ಕಿನ ಪಾಡು
ಕುನ್ನಿಗಿಂತ ಕನಿಷ್ಠವು ನೋಡು;
ಗಂಟೆಯ ಸಪ್ಪಳ ಕೇಳಿದ ಕ್ಷಣಕೆ
ಬಿಲದೊಳು ಸೇರಲು ನಮಗೆಚ್ಚರಿಕೆ"

ಸರಿ 'ಗಂಟೆಯ ಸೂಚನೆ ಮಂಜೂರಾಯ್ತು। ಗಂಟೆಯ ದೊರಕಿಸಿ ತಂದದ್ದಾಯ್ತು' ಆದರೆ ಬೆಕ್ಕಿನಕೊರಳಲಿ ಕಟ್ಟುವರಾರು? 'ಪ್ರಶ್ನೆಗೆ ಉತ್ತರ ಸಿಗಲಿಲ್ಲ। ಸಭೆಯಲಿ ಸಪ್ಪಳವೇ ಇಲ್ಲ'. ಕವಿಯ ಮುಗಿತಾಯ ಹೀಗೆ

"ಇಲಿಯ ಮುಖಂಡನಿಗೂ ಸುಸ್ತು
ಇಲಿ ಸಮ್ಮೇಳನ ಬರಖಾಸ್ತು"

ಆಡು ಮಾತಿನ ಧಾಟಿಯಲ್ಲಿ ಈ ಕಥನ ರಭಸದಿಂದ ಸಾಗಿದಷ್ಟೇ ನಾಟ್ಯಮಯವಾಗಿ ಡಿಕ್ಕಿಹೊಡೆದಂತೆ ಮುಗಿಯುತ್ತದೆ. (ಈ ರಭಸದಲ್ಲಿ ಬಂದಿಲಿಯ ಸೂಚನೆಯ ಕೊನೆಗೆ ಆತ ಮಾತು ಮುಗಿಸಿದ ಸೂಚನೆ ಕ್ರಿಯಾಪದವೇ ತಪ್ಪಿಹೋಗಿದೆ।) 'ಚೀ ಪೀ ಎನ್ನುತ ಇಲಿಗಳ ತಂಡ, "ಗಣಗಣ ಗಂಟೆ ಝಣಝಣ ವೆನ್ನಲು" "ಜಯ ಜಯವೆನ್ನಿ" ಇಂಥ ಶಬ್ದ ಸರಣಿ ಮಕ್ಕಳ ಕಿವಿಗೆಮೆಚ್ಚಿಗೆ ಆಗುವಂತಿದೆ. ಇಲಿಯ ಮಾತಿನಲ್ಲಿ ಆವೇಶ ಹೆಚ್ಚಿಸಲು ಅದರ ಕೊನೆಯ ನುಡಿಯ ಪ್ರತಿಪಾದಕ್ಕೆ ಗಣಸಂಖ್ಯೆ (ನಾಲ್ಕುಮಾತ್ರೆಯ ಒಂದು ಗಣ) ೪ ರಿಂದ ೨ ಕ್ಕೆ ಇಳಿಸಲಾಗಿದೆ. ಮುಖಂಡರ ಮಾತು ಎಷ್ಟು ಉದ್ದವೋ ಆ ಅಬ್ಬರ ಭಾಷಣದ ನಂತರ ಸಭೆ ಸದ್ದಿಲ್ಲದೆ ಬರಖಾಸ್ತು

ಇದಕ್ಕೂ ಸುದೀರ್ಘ ಕಥೆ 'ರೈತ ಮತ್ತು ಕರಡಿ'. ತಿಪ್ಪಾಭಟ್ಟರ ಚರಿತ್ರೆಯ ನಂತರ ಇದುವೆ ಒಂದು ನೀಳ್ಗತೆ. ಕತೆಯ ವಸ್ತು ಚಿಕ್ಕದು. ಮಲೆನಾಡ ಸೆರಗಿನಲ್ಲಿ ಮೂಲಂಗಿ ಬೆಳೆಯುವ ರೈತ ಮೋಚಂಗಿ (ಈ ಹೆಸರು ಪ್ರಾಸಕ್ಕಾಗಿಯೇ ಹುಟ್ಟಿದ್ದು?) ಈ ರೈತನ ಬೆಳೆಗೆ ಹುಚ್ಚಾಗಿ ಬೆಟ್ಟದ ಕರಡಿ ಅವನನ್ನು ಕಾಡುತ್ತದೆ. ದೊಡ್ಡ ಕರಡಿ ಯೊಂದಿಗೆ ರೈತ ಒಪ್ಪಂದ ಮಾಡಿಕೊಳ್ಳುತ್ತಾನೆ. ಎರಡು ಸಲ, ಎರಡೂ ಸಲ ಕರಡಿಯೆ ಬೇಸ್ತು ಬೀಳುತ್ತದೆ. ರೈತನಿಗೇ ಲಾಭ. ಮೊದಲ ಸಲ ಹೊಲದಲ್ಲಿ ಮೇಲೆ ಬೆಳೆದದ್ದೆಲ್ಲ ಕರಡಿಗೆ, ಕೆಳಗೆ ನೆಲದಲ್ಲಿ ಬೆಳೆದದ್ದೆಲ್ಲ ರೈತನಿಗೆ. ಅಂದಾಗ ಕರಡಿಯ ಬಾಯಿಗೆ ಸೊಪ್ಪುದೇಟು, ಮೋಚಂಗಿಯ ಮನೆಗೆ ಮೂಲಂಗಿ ಗಡ್ಡೆಗಳ ರಾಶಿ. ಈ ಅನುಭವದಿಂದ ಬುದ್ಧಿ ಕಲಿತ (!) ಕರಡಿ ಎರಡನೆಯ ಸಲ ಕೆಳಗಿನ ಬೆಳೆ ತನಗೆ, ತುದಿಯ ಬೆಳೆ ರೈತನಿಗೆ ಎಂದು ಕರಾರು ಹಾಕುತ್ತದೆ. ರೈತ ಒಪ್ಪಿ ರಾಗಿಯನ್ನು ಈ ಸಲ ಬಿತ್ತಿ ರಾಗಿಯ ಕದರ ಕಣಜ ಕಟ್ಟುತ್ತಾನೆ. ಕೆಳಗಿನ ದೇಟು ಹುಲ್ಲೂ ಕರಡಿಯ ಪಾಲಿಗೆ ಹೋಗುತ್ತದೆ. ಮೊದ್ದಕರಡಿ ಹೀಗೆ ಮೋಸ ಹೋದರೂ ರೈತನನ್ನು ಬಯ್ಯುವದಿಲ್ಲ. "ಅಯ್ಯೋ ಈ ಬುಡ ಬರಿ ಸಪ್ಪೆ। ಹಾಳಾ ಗಲಿ ರೈತನ ತಿಪ್ಪೆ॥ ಆತನ ಗೊಬ್ಬರವೇ ಹಾಳು! ಹಾಳಾಯಿತೆ ರಾಗಿಯಕಾಳು।" ಎಂದು ಕರಡಿಯ ಕೋಪ ಬರಿ ಬರಿ ಶಾಪ।

ಈ ಕಥನ ಕವನ ಸರಾಗವಾಗಿ ಸಾಗುತ್ತದೆ. ಇಲ್ಲಿ ಕಥೆಯ ಸ್ವಾರಸ್ಯ ಮಕ್ಕಳನ್ನು ಮುಂದೊಯ್ಯುತ್ತದೆ. ಅವರಿಗೆ ಪ್ರಾಸ-ಪ್ರಸ್ತಾರಗಳ ಆಕರ್ಷಣೆ

ಕಡಿಮೆ ಆದರೂ ಪರಿವೆ ಇಲ್ಲ. ಈ ಕಥನಕವನ ೪ ಪರಿಚ್ಛೇದಗಳಾಗಿ ೨೦ ನುಡಿಗಳಲ್ಲಿ ಸುದೀರ್ಘವಾಗಿ ಬೆಳೆದುನಿಂತಿದೆ. ಈ ನುಡಿಗಳು ಹೆಚ್ಚಾಗಿ ಚೌಪದಿಗಳು. ಆದರೆ ಎರಡು ದ್ವಿಪದಿಗಳು ಒಂದು ಷಟ್ಪದಿ(?)ಯೂ ಒಳಗೊಂಡಿದೆ. ಕೊನೆಯ ನುಡಿಯು ಜನೆಯು ಹಾಗೂ ಕೊನೆಯ ನುಡಿಯಲ್ಲಿ ೪ ಮಾತ್ರೆಗಳ ಎರಡೆರಡೇ ಗಣಗಳ ಎರಡು ಪಾದ ಗಳಿವೆ. ಮಾತಿನ ದನಿಪಲ್ಲಟಣೆಗಾಗಿ ಇರಬೇಕು.

"ಗೇಣಿಯು ತಿಂದರೆ ನೋಡಯ್ಯ
ನಿನ್ನನು ನಾ ತಿಂದೇ ಬಿಡುವೆ.

ನಾನೇ ಒಡೆಯ
ಸುಳ್ಳದು ನಡೆಯ

ಇಬ್ಬರಿಗೂ ಸರಿಸಮ ಭಾಗ
ಕಡಿಮೆಯು ಕೊಟ್ಟರೆ ಆದು ಆಗ''

ಕರಡಿಯು ಈ ಗೇಣಿ ಕರಾರಿನ ಮಾತಿಗೆ ಆ ಧೂರ್ತ ರೈತ ಅದರ ಚೌಕಟ್ಟಿನಲ್ಲಿಯೇ ಈ ಒಡೆಯಗೆ ಪೂರ್ತಿ ಮೋಸ ಮಾಡುತ್ತಾನೆ. ಒಡೆಯರ ಮೋಸಗಾರಿಕೆಯ ವಿರುದ್ಧ ರೈತರ ಚಳವಳಿಯನ್ನು ಯಶಸ್ವಿಯಾಗಿ ಸಂಘಟಿಸಿದ ದೇಸಾಯರ ಈ ಕವನ ಒಡೆಯ–ಒಕ್ಕಲ ಸಂಬಂಧಕ್ಕೆ ಪ್ರತೀಕವಿರಲಾರದು. ಇದು ಶುದ್ಧ ಮಕ್ಕಳ ಮನೋರಂಜನೆಯ ಕಥೆ. (ಶ್ರೀರಾಮನು ಮರಳಿ ಬರುವತನಕ ಅವನ ಪ್ರತಿನಿಧಿಯಾಗಿ ಆಡಳಿತ ನಡೆಯಿಸಿದ ಭರತನಿಗೂ ಅಂದು ಅಯೋಧ್ಯೆಯ ರೈತರು ಹೀಗೆಯೇ ಬೋಳೈಸಿದರೆಂದು ಒಂದು ಜಾನಪದ ಕತೆಯಿದೆ!)

ಈ ನಡುವೆ ಕವಿ ಒಂದು ದ್ವಾಪರಯುಗದ್ದೆಂಬ ಪುರಾಣ ಕಥೆಯನ್ನು ಹಾಡಿದ್ದಾರೆ. ಅದು 'ಚಂದ್ರನ ಕೂಸು.' ಚಂದ್ರಶಶಿ–ಶಶಾಂಕ ಹೇಗಾದ? ಒಮ್ಮೆ ಆ ಯುಗದಲ್ಲಿ ಒಂದು ಬೆಳದಿಂಗಳರಾತ್ರಿ ಅಡವಿಯಲ್ಲಿ ಮೊಲಗಳು ಮೇಯುತಿದ್ದಾಗ ಬೇಡರು ಅವುಗಳ ಬೇಟೆಗೆ ನುಗ್ಗಿಬಂದರು. ಆಗ ಒಂದು ಮೊಲ ಹೆದರಿ ಹೌಹಾರಿ ಮುಗಿಲಿಗೆ ಹಾರಿ ಚಂದ್ರನಲ್ಲಿಯೇ ಅವಿತುಕೊಂಡಿತು. ಅಲ್ಲಿ ನಿರ್ಭಯವಾಗಿ ಕೂತ ಆ ಮೊಲಕ್ಕೆ ಹಾಗೆ ಆಸರೆ ನೀಡಿ 'ಚಂದ್ರನಿಗಾನಂದವು ಹಿರಿದು'. "ಆ ಮೊಲವೆ ಶಾಶ್ವತವಾಗಿ। ಮೆರೆವುದು ಚಂದ್ರನ ಕೂಸಾಗಿ''. ರಸಿಕರ ಪುಣ್ಯ, ಕವಿಯ ನೀತಿಪಾಠ ಹೇಳುವ ಮೋಹ ಈ ಚೆಂದ ಕವನದ ಕೊನೆಗೆ ಕಾಣಿಸಿಕೊಂಡಿಲ್ಲ.

'ದೇವರ ಎತ್ತು' ಈ ವರ್ಣನೆಯ ಕವನದ ಕೊನೆಗೆ ಆ ಎತ್ತು ಯಾಕೆ ಬಂತು– ಎಂದು ಕವಿ ಹೇಳಿದ್ದಾರೆ.

"ಈಶ ಭಕ್ತಿಯ ಲೋಕಕೆ ಸಾರಿ
ನಮ್ಮ ವರ್ತನೆಯ ರೀತಿಯ ತೋರಿ
ನಮನ ಹಾಕುವದು ಮುಂಡಿಯ ನೂಕಿ"

"ಬಿಸಿ ಬಿಸಿ ಕಾಫಿ" "ಕುಂಬಾರನ ತಿಗರಿ" "ಹೋಲಿಗೆಯ ಯಂತ್ರ" 'ಮೈಸೂರಿನ ತಿಂಡಿಗಳು" ಮುಂತಾದ ವರ್ಣನಾಪದ್ಯಗಳ ಆಕರ್ಷಣೆ ಅವುಗಳ ಶಬ್ದಚಿತ್ರಣ ಶಕ್ತಿ ಹಿತಮಿತವಾದ ಅಲಂಕಾರಿಕತೆಯಿಂದ ಇಲ್ಲಿಯ ಸ್ವಭಾವೋಕ್ತಿ ಮನದಟ್ಟಾಗುವಂತಿದೆ. 'ಕುಂಬಾರನ ತಿಗರಿ' ಮತ್ತು 'ಹೋಲಿಗೆಯ ಯಂತ್ರ' ಇದಕ್ಕೆ ಸಾಕ್ಷಿ. ಮಕ್ಕಳ ಬೆರಗು ಗಣ್ಣಿಗೆ ತಿಗರಿಗು ಬುಗರಿಗು ಸಂಬಂಧ ತೋರುತ್ತದೆ. ಅದಕ್ಕೂ ಮುಂದೆ "ಮಣ್ಣಿನ ಮುದ್ದೆಗೆ ಆನಂದ। ಗರಗರ ತಿರುಗುವದೇ ಚೆಂದ" ಅನಿಸುತ್ತದೆ. ಅಂದಾಗ "ನಾವೂ ತಿಗರಿಯನೇರುವದು। ಮುದ್ದೆಯ ಪರಿಯಲಿ ತಿರುಗುವದು। ನಾವೂ ಗಡಿಗೆಗಳಾದಲ್ಲಿ। ಸೋಜಿಗವಲ್ಲವೆ ಜಗದಲ್ಲಿ"? ಹೇಗಿದೆ ಈ ಬಾಲಭಾವದ ಉತ್ಪ್ರೇಕ್ಷೆ?

'ಹೋಲಿಗೆಯ ಯಂತ್ರ' ಮಕ್ಕಳ ಪಾತಳಿಯಿಂದ ಹಾಡಿದ ಯಂತ್ರಯುಗದ ಹಾಗೂ ವಿದ್ಯೆಯ (Technology) ಮಹಿಮೆ ಈ ಯಂತ್ರ "ಹಳ್ಳಿಯ ಜನರಿಗೆ ಹೊಸದೌಲತ್ತು | ಸಿಂಪಿ ಮುರಾರಿಯ ನಿಜ ಸಂಪತ್ತು". ಯಂತ್ರದ ಸುತ್ತಲು ಅರಿವೆಯ ಗಟ್ಟಿ. ಒಂದೇ ದಿನದಲಿ ತೀರಿಸಿಬಿಟ್ಟ. ಇದರಿಂದ "ಕಲಿತೆವು ಯಂತ್ರ ಸಿಪಾಯಿಯ ಗುಟ್ಟ |" (ಆದರೆ ಯಂತ್ರವು ಸಿಪಾಯಿಯಾಗಿಯೇ ಕೆಲಸ ಮಾಡಬೇಕು. ಅದೇ ಒಡೆಯನಾಗಿ ಮಾನವನನ್ನು ಆಳಬಾರದು!) ಪ್ರತಿನುಡಿಯ ಕೊನೆಯ ಸಾಲು ಒಂದೇ "ಭರ ಭರ ಹೊಲಿ ಹೊಲಿ ಸಿಂಪಿಗನೇ।"

ಇನ್ನುಳಿದವು ನಿಜವಾಗಿಯೂ ಅಪ್ಪಟ ಮಕ್ಕಳ ಪದ್ಯಗಳು. ಬುದ್ಧಿಗಿಂತ ಅವರ ಭಾವನೆ ಕಲ್ಪನೆಗಳನ್ನು ಕೆರಳಿಸಿ ಕೊನರಿಸಿದ ವಸ್ತುಗಳ ಕವನರೂಪಗಳು. ಅವುಗಳಿಗೆ ಹಾಯುವ ಮುಂಚೆ 'ಬೆಳೆ' ಕವನವನ್ನು ಗಮನಿಸಬೇಕು.

"ಬಿಸಿನೆಲದಲಿ ತುಸು ಹಸಿಯಾಯ್ತು
ಬಿತ್ತಿದ ಬೀಜವು ಸಸಿಯಾಯ್ತು
ಸಸಿ ದೊಡ್ಡಾಗಲು ತೆನೆಯಾಯ್ತು
ತೆನೆಯೇ ದೇವರಮನೆಯಾಯ್ತು"

ಪ್ರಕೃತಿಯ ವಿಕಾಸ ಕ್ರಮವನ್ನು ಒಂದು ದೈವಿಕ ಭಾವದಿಂದ ನೋಡುವ ಸಂಸ್ಕಾರ ಇದು ಮಕ್ಕಳ ಮನಸ್ಸಿಗೆ ಕೊಡುತ್ತದೆ. ತೆನೆಯೆಂದರೆ ದೇವರ ಮನೆ. ತೆನೆಯಿಂದ ಮನೆಮನೆಗೆ ಅನ್ನವು ಬಂತು. ಅದರಿಂದ "ದೂರಾಯಿತು ಹೊಟ್ಟೆಯ ಹಸಿವು। ಜೋರಾಯಿತು ರಟ್ಟೆಯ ಕಸುವು" (ಇಲ್ಲಿ ಬಾಲಭಾವದ ಸಹಜ ಪ್ರಾಸ

ದೊಂದಿಗೆ ಅರ್ಥದ ಒಂದು ಪ್ರಾಸಾದಿಕತೆಯೂ ತುಂಬಿದೆ) ಆದ್ದರಿಂದ ಕವಿಯ ಕೊನೆಯ ತಿರ್ಮಾನ

ಬೆಳೆಯೇ ಭೂಮಿಯ ಬಂಗಾರ
ಬೆಳೆಯೇ ದೇವರ ಅವತಾರ"

ಬೇಂದ್ರೆ ಹಾಡಿದ "ಅನ್ನಾವತಾರ" ಇಲ್ಲಿ ಮಕ್ಕಳ ಮಾತಿನಲ್ಲಿ ದಿನಕರರು ಅದಕ್ಕೆ ದನಿಗೂಡಿಸಿದ್ದಾರೆ.

ಇನ್ನು ಅಪ್ಪಟ ಮಕ್ಕಳ ಪದ್ಯಗಳಲ್ಲಿ 'ಜೋಗುಳ' ಗೀತದ ಈ ಒಂದು ಮಾದರಿ ಕೇಳಿರಿ :

ಜೋ ಜೋ ಜೋ ಜೋ ನನ ತಂಗಿ
ಜೋಗುಳ ಹಾಡುವೆ ರಸರಂಗಿ

ಆ ತಂಗಿಯನ್ನು ಈ ಅಕ್ಕ ಮಾವಿನ ಕುಡಿಯೇ ಮುದ್ದಿನ ಮಗಿಯೇ, ಜೀವದ ಜೇನೇ ಬಾಳಿನ ಬೆಳಕೇ, ಅರಳಿದ ಹೂವೇ ಎಂದೆಲ್ಲ ಕೊಂಡಾಡುತ್ತಾಳೆ. ಆ ತಂಗಿಗೆ ಕುಡಿಯಲು ಗಂಜಿ. ಆಟಕೆ ಗುಲಗಂಜಿ ಅವಳ ಮೈ ಕೈ ಬಣ್ಣ ನಾರಂಗಿ. ಅವಳಿಗೆ ರೇಶಿಮೆ ನಿಲುವಂಗಿ. ಕೊರಳಿಗೆ ಚಿನ್ನದ ಮಾಗಾಯಿ. ಈ ಹಾಡು ನೈಜ ಗರತಿಯ ಹಾಡಿನ ದನಿ ಮೂಡಿಸುತ್ತದೆ. ವಾತ್ಸಲ್ಯದ ಧ್ವನಿ ಮಿಡಿಯುತ್ತದೆ.

ಶಿಶುಗೀತದ ಒಂದು ಲಕ್ಷಣ ಅದ್ಭುತರಮ್ಯ ಕಲ್ಪನೆ Fantasy. ಅದು ಭಾವ್ಯವೇ ಆಗಿರಬೇಕಾಗಿಲ್ಲ. ಅಂಥ ಮಹಾವಿಲಾಸದ ಪದ್ಯಗಳಲ್ಲಿಯೇ ಈ ಕವಿಯ ಪ್ರತಿಭೆ ಪಳಗಿದೆ. "ತಾಯಿಯ ಉತ್ತರ' "ಅಕ್ಕನ ಬಂಡಿ" 'ಮಕ್ಕಳ ಬಯಕೆ' 'ಚಂದಿರ ಮತ್ತು ತಾರೆಗಳು" ಇವು ಅವಕ್ಕೆ ತಕ್ಕ ನಿದರ್ಶನ. ಇಲ್ಲಿ ಎಲ್ಲೂ ಉತ್ಪ್ರೇಕ್ಷೆ ಬಾಲ ಮನೋಲಹರಿಯನ್ನು ಮೀರಿ ಓಡುವದಿಲ್ಲ.

"ಮಕ್ಕಳಿಗೆಲ್ಲ ಸಿಕ್ಕುವದೇನೇ ಆಕಾಶದ ಚಿಕ್ಕಿ ?
"ನೀನಾದರೆ ಹಕ್ಕಿ"
"(ಹಾಗೆಯೇ) ಜರತಾರಿಯ ಬಟ್ಟೆ ?"
"ನೀನಾದರೆ ಚಿಟ್ಟೆ"
"(ಮತ್ತೆ) ಬೆಟ್ಟದ ನಾರಿಂಗ ?"
'ನೀನಾದರೆ ಮಂಗ"

ಇವು ತಾಯಿ ಕಂದನ ಪ್ರಶ್ನೆಗಳಿಗೆ ಕೊಡುವ ಉತ್ತರ.

ಅರಬ್ಬೀಲು ಘಟ್ಟ ಹತ್ತಲು ಹೊರಟ "ಅಕ್ಕನಬಂಡಿ" ಹೇಗಿದೆ ? ಪುಂಡಬೆಕ್ಕು ಅದರ ನೊಗ ಹಿಡಿಯಿತು. ಕುನ್ನಿಮರಿ ಡೋಲು ಬಡಿಯಿತು. ಮಂಗ ಮುಂದೆ

ಕೂತು ಬಂಡಿ ನಡಿಸಿತು. ಹೇಂಟೆಯೊಂದು ಹಾರಿಬಂದು ಹಾದಿ ಗುಡಿಸಿತು. ಆಗ ಅಕ್ಕ ನಕ್ಕು ನಕ್ಕು ಬಾಯಿ ಕಿಸಿವಳು. ಪಕ್ಕದಲ್ಲಿ ಕೂತ ತಂಗಿ ತುಂಬ ಹಸಿದಳು. ಇಲ್ಲಿಂದ ಅನಾಹುತಕ್ಕೆ ಆರಂಭ.

ಕೊತ್ತಳಗದ್ದೆ ಬಂತು. ಮಾಣಿಭಟ್ಟ ಹಾಲು ಬೆಲ್ಲ ಬಾಳೇಹಣ್ಣು ತಂದು ಇಟ್ಟ. ಹಾಲು ಕಂಡು ಹಾಳು ಬೆಕ್ಕು ಮೇಲೆ ಹಾರಿತು. ಆಗ ಬಂಡಿ ಓರೆಯಾಗಿ ಕೆಳಗೆ ಜಾರಿತು. ಬದಿಯ ಹಳ್ಳದಲ್ಲಿ ಅಕ್ಕತಂಗಿ ಬಿದ್ದರು. ಇಲ್ಲಿಗೆ ಕತೆ ಮುಗಿಯಲಿಲ್ಲ. ಮಗುವಿನ ಮನಸ್ಸಿಗೆ ಸೋಲಿಲ್ಲ. ಅವರಿಬ್ಬರೂ ದೇವರನ್ನೆ ಎತ್ತಿಕೊಂಡು ನಭಕೆ ನೆಗೆದರು. ಅಲ್ಲಿ ಈ Fantasyಗೆ ಟಾಚಣಿಯ ಚುಚ್ಚು — "ಮಾಣಿ ಭಟ್ಟ ಬೆಪ್ಪಾಗಿ ಕವಳ ಜಗಿದನು."

"ಮಕ್ಕಳ ಬಯಕೆ' ಇದೇ ಮನೋರಾಜ್ಯದ ದೃಶ್ಯ. ಮುಗಿಲಿನವರೆಗೂ ಮಕ್ಕಳರಾಜ್ಯ।

"ಆಕಾಶದ ವರೆಗೂ ನಾ ಹೋಗಿ
ತೋರಣ ಕಟ್ಟುವೆ ಓರಣವಾಗಿ
ಮುಗಿಲಲಿ ಆಡಗುವೆ ಮಳೆಹನಿಯಾಗಿ
ಮಿಂಚಿನ ಬೆಳಕಿಗೆ ತೊರುವೆನು
ಹಂಚಿನ ಮಾಡಕೆ ಹಾರುವೆನು"

"ಗುಡು ಗುಡು ಗುಮ್ಮನ ಪದ್ಯ' ಈ ಕಂದನೇ ಬಾರಿಸುವನು. ಗುಡ್ಡದ ಬದಿಗೆ ಮಳೆಯಾಗಿ ಬಿದ್ದು ಗಿಡಮರಗಳ ಹಸಿರೆಲೆಗಳ ತುದಿಗೆ ಆತ ಪಟ ಪಟ ಕುಣಿಯುವನು. ಅಲ್ಲಿ ಮುಂದೆ "ಅಂಗಳದಲಿ ನೀರಾಗುವೆನು | ಗುಳ್ಳೆಯ ರೂಪದಿ ತೋರುವೆನು' ಈ ಬಯಕೆ ಒಂದೇ ವಿಚಾರ ಬೆಳೆದಿದೆ. ಮಳೆಯಾಗಿ ಬಿದ್ದು ಹೊಳೆಯಾಗಿ ಹರಿದು ತಡಸಲಾಗಿ ಧುಮ್ಮಿಕ್ಕಿ 'ಶರಧಿ'ಯನ್ನು ಸೇರಿ ತೆರೆಗಳೊಂದಿಗೆ ಆಡಬೇಕೆಂಬ ವಿಚಾರ. ಆದರೆ ಇಲ್ಲಿ ಮಗುವಿಗೆ ಹೀಗೆ ಸಮಗ್ರ ನದಿ ನಿರ್ವಾಹದ ಕಲ್ಪನೆ ಅಷ್ಟೊಂದು ಸಹಜ ವಲ್ಲ. ಅದೂ ತಡಸಲಾಗಬೇಕೆಂಬುದು ಕೇಳಿ ತಿಳಿದ ವಿಚಾರ. "ಶರಧಿ" ಮಗುವಿನ ಶಬ್ದಕೋಶಕ್ಕೆ ಮೀರಿದ ಮಾತು ಇರಲಿ.

ಆದರೆ 'ಪಾತರಗಿತ್ತಿ' ಪೂರ್ತಿ ಮಕ್ಕಳ ಮನೋಲಹರಿ-ಮನೋಹರ ಊಹನೆ. ಇಲ್ಲಿ ಮಗುವಿನ ಕಣ್ಣಿನ ಬೆಳಕು ಬಣ್ಣ ತುಂಬಿದೆ. ಆದರೆ ಇಡಿಯ ಕಲ್ಪನಾ ವಿಲಾಸವನ್ನು ಕವಿ ಆ ಮಗುವಿನ ಕನಸನ್ನಾಗಿ ಪರಿಭಾವಿಸಿದ್ದೇಕೋ. "ಮಿಕಿ ಮಿಕಿ ಕನಸು" (ಮಿಕಿ ಮಿಕಿ ನೋಡು ಎಂಬ ಪದಪ್ರಯೋಗದ ಹೊಸರೂಪವಿದು!) ಮೊದಲ ಮೂರು ಪುಟ್ಟ ನುಡಿಗಳಲ್ಲಿ ಮಗುವಿನ ದೃಷ್ಟಿಯಲ್ಲಿ ಪಾತರಗಿತ್ತಿಯ ಬೆನ್ನು ಮೈಮಾಟದ ಬಣ್ಣನೆ ಇದೆ. "ಪಾತರಗಿತ್ತಿಯ ಬೆನ್ನನು ಹತ್ತಿ। ಕೂತೆನು ನಾನು

ಅಳಕೇನು ? ಇಲ್ಲಿಂದ ಕನಸು ಸುರು. ಅದರ ಸವಾರಿ ಮಾಡಿ ಮುಗಿಲಿಗೆ ಹಾರಿ ಭೂಮಿಗೆ ಇಳಿದು, ಬಗೆ ಬಗೆ ಹೂವಿನ ಬಣ್ಣದ ತೋಟದಲ್ಲಿ ಜಿಗಿ ಜಿಗಿದಾಡಿ, ಪಾತರಗಿತ್ತಿಯು ಈಂಟಿದ ಹೂವಿನ ಹಾಲಿನಲ್ಲಿ ಮಗುವೂ ಪಾಲು ಪಡೆಯುತ್ತದೆ! "ಹೂ ಮಕರಂದ। ಬಲುರುಚಿಯಿಂದ॥ ನಾನು ತಿಂದೆ। ಸವಿ ಸವಿಯಿಂದೆ॥ ಹಿಗ್ಗಿತು ಮನಸು ಮುಗಿಯಿತು ಕನಸು ॥"

ಇದೇ ಕಲ್ಪನೆಯು ನೇರದ ಅರಳು "ಕಾಮನಬಿಲ್ಲು''. ಕಾಮನ ಬಿಲ್ಲು (ರಾಮನ ಬಿಲ್ಲೇ। ?) ಮುಗಿಲಿನಲಿ ಬಣ್ಣದ ತೋರಣ. ಮಗುವಿನ ಪ್ರಜ್ಞಾಪ್ರಪಂಚದಲ್ಲಿ ಕಾಮನಬಿಲ್ಲಿನ ಹುಟ್ಟು ಹೇಗೆ ?

"ದೇವರ ಮಕ್ಕಳು | ಸಾಬೂನಿನ ನೀ- । ಗುಳ್ಳೆಯ
ಊದಿದರೆ ? ॥ ಗುಳ್ಳೆಗಳೆಲ್ಲವು | ಪಂಕ್ತಿಯು ಸೇರಲು ।
ಮುಗಿಲಲಿ ತೂಗಿದರೆ ?'

ಇದೇ ರೀತಿ 'ಚಂದಿರ ತಾರೆಗಳ' ಕುರಿತ ಪದ್ಯದಲ್ಲಿ ಚಂದ್ರನ ಕೋರೆಬಿಂಬವನ್ನು ಕಂಡಾಗ ಮಗುವಿನ ಪ್ರಶ್ನೆ ''ಲಕ ಲಕ ಹೊಳೆಯುಲು ಬಿಳಿ ಬೆಳ್ಳಿ, ಈತರ ಹೊಳೆವುದೆ ಬೆಳ್ಳುಳ್ಳಿ ?" ಈ ಪದ್ಯದಲ್ಲಿ ಚಂದಿರನಾನು ಮೋಡಗಳಲ್ಲಿ ಅಡಗಿದಾಗ 'ಉಡುಗಣ' ಅವನನ್ನ ಹುಡುಕಾಡುತ್ತಾರೆ. ಈ ಹಿರಿಯಣ್ಣ ಕಿರಿಚಿಣ್ಣರ ಕಣ್ಣು ಮುಚ್ಚಾಲೆ ಕಂಡಾಗ ತಂದೆದೇವರ ಬೇಸರಿಕೆ ಮುಗಿಯುವದು. ನೀರಡಿಕೆ ತಣಿಯುವದು. (ಇಲ್ಲಿ ಬಳಕೆಯ ಶಬ್ದ 'ನೀರಡಿಕೆ'ಯ ಬದಲು ಪ್ರಯೋಗಿಸಬಹುದಿತ್ತು. 'ಉಡುಗಣ' ಮಕ್ಕಳ ಮಾತಿನ ಶಬ್ದವಲ್ಲ. ಗ್ರಾಂಥಿಕ, 'ಡ' ಕಾರದ ದ್ವಿತೀಯಾಕ್ಷರ ಪಾಸಕ್ಕೇ ತಂದಂತಿದೆ!)

"ಚೆನ್ನಿ ಮತ್ತು ಕುನ್ನಿ'' 'ಇಣಚಿ'' ಇವೆರಡೂ ಬಾಲಕನ ಭಾವಲೋಕದಲ್ಲಿ ಈ ಸಾಧು ಪ್ರಾಣಿಗಳು ಗೆದ್ದ ಮುದ್ದಿನ ಸ್ಥಾನವನ್ನು ಜೀವಂತವಾಗಿ ಬಿಂಬಿಸುತ್ತವೆ ಇದೇ ಬಗೆಯ ವರ್ಣನಾ ವೈಖರಿ "ದೇವರ ಎತ್ತು'' ಪಡೆದಿದೆ. ಆದರೆ ಸ್ವಾಭಾವಿಕವಾಗಿಯೇ ಈ ದೊಡ್ಡ ಪ್ರಾಣಿಯು ಇದಿರು ಮಗು ತಟಸ್ಥ. ಕವಿಯೇ ಮಕ್ಕಳೊಂದಿಗೆ ನಿಂತು ಬಣ್ಣಿಸುತ್ತಾರೆ "ಬಂತು ಬಂತು ದೇವರ ಎತ್ತು ! ಹಣೆಯಮೇಲೆ ಕುಂಕುಮ ಮುತ್ತು" ''ಟಪ ಟಪ ಕೋಲು'' "ಡುಬು ಡುಬು ಡೋಲು" "ಗಿಜಗಿಜಿ ಗೆಜ್ಜೆ" ಇದೆಲ್ಲ ಮಕ್ಕಳದೇ ಥಾಟ. ಆದರೆ "ಮಕ್ಕಳೆಲ್ಲರೂ ನೆರೆದರು ಸುತ್ತು' ಎನ್ನುವ ಬದಲು ಆ ಮಕ್ಕಳೇ ನಾವೆಲ್ಲ ನೆರೆದೆವೆಂದರೆ ಈ ಪದ್ಯ ಇನ್ನೂ ಆತ್ಮೀಯವಾಗುತ್ತಿತ್ತು ಮಕ್ಕಳಿಗೆ.

ಕೊನೆಯದಾಗಿ ಎರಡು ಕುಣಿತದ ಪದ್ಯಗಳು. ಮಕ್ಕಳ ಗೀತದ ಉತ್ತಮ. ಮಾದರಿ "ಮಕ್ಕಳ ಕುಣಿತ" "ಮಕ್ಕಳ ಕೋಲಾಟ". ಕುಣಿತಕ್ಕಿಂತಲೂ 'ಕೋಲಾಟ' ಹೆಚ್ಚು ಚಟುವಟಿಕೆಯ ಚಪಲದ ಚಲುವಿನ ಕವನ. ಈ ಪದ್ಯಗಳ ಜೀಕಿನ ಲಯ, ಗತಿ ಮಕ್ಕಳ ಲವಲವಿಕೆಯ ಲಕ್ಷಣವಂತಿಕೆಯಿಂದ ತುಂಬಿದೆ. 'ಮಕ್ಕಳ ಕುಣಿತ' ಹೀಗೆ ಆರಂಭವಾಗಿದೆ :

"ಕುಣಿವುದು ನಾನು
ಮಣಿವುದು ನೀನು
ಬಾರೇ ಅಕ್ಕಾ ತಾಧಿಮಿ ಥೈ
ಹಿಗ್ಗುವೆ ನಾನು
ಬಗ್ಗುವೆ ನಾನು
ಇಬ್ಬರು ಕೂಡಿಯೇ ತಕಧಿಮಿಥೈ

ಇಲ್ಲಿಯ ಆಶಯ ಪ್ರಕೃತಿಯ ಪ್ರತಿಮೆಗಳನ್ನು ಬಳಸಿಕೊಂಡಿದೆ. "ಮಿಂಚಿನ ತೆರದಲಿ ಮೆರೆವರೆ ಸೈ । ಮಂಜಿನವೊಲು ಧರೆಗಿಳಿವರೆ ಸೈ" "ಹೂವಿನ ತೆರದಲಿ ನಾವ್ ನಗಲು। ಭೂಮಿಗೆ ಇಳಿವುದು ಆ ಮುಗಿಲು". ಆಗ ಮಗು ಆ ಮೋಡದ ಮರೆಗೆ ಅಡಗುವದು. ಅಕ್ಕ ಹಾಗೆ ಅಡಗಿದರೆ ತಂಗಿ ಹಕ್ಕಿಯಾಗಿ ಮೇಲೆ ಹಾರಿ ಅವಳನ್ನು ಕಂಡುಹಿಡಿಯುವಳು. ಬಾಲ ಭಾವದ ಚಕ್ಕಂದ ಇಲ್ಲಿದೆ. ಆದರೆ

ಒಬ್ಬರಿಗೊಬ್ಬರು ಅಪ್ಪುವದೈ
ಅವ್ವನು ಅಪ್ಪನು ಒಪ್ಪಲು ಸೈ

ಈ ವಿಚಾರ ಆ ಕುಣಿತದ ಮನದಣಿ ಮೋಜಿನಲ್ಲಿ ಮೈಮರೆತದ ಹಿಗ್ಗಿನಲ್ಲಿ ವಿಸಂಗತ. ಕುಣಿತದ ಭಂಗಿಗೆ ಅವ್ವ-ಅಪ್ಪರ ಒಪ್ಪಿಗೆ ಯಾಕೆ ಬೇಕು ? ಸ್ವಚ್ಛಂದಕ್ಕೆ ಈ ಬಂಧನೇಕೆ ?

ಆದರೆ 'ಮಕ್ಕಳ ಕೋಲಾಟ' ಕವಿಯ ಅಪ್ರತಿಮ ರಚನೆ. ಕನ್ನಡದ ಹಿರಿಯ ಶಿಶುಗೀತಗಳಲ್ಲಿ ಒಂದು. ಅಂಬಿಕಾತನಯ ದತ್ತರು ಪ್ರಗಲ್ಭ ಪ್ರಜ್ಞೆಯ ಲೋಕದಲ್ಲಿ "ಕುಣಿಯೋಣ ಬಾ' ಕವನದಿಂದ ಸಾಧಿಸಿದ ಒಂದು ಪ್ರೌಢಿಮೆಗೆ ಸರಿಸಾಟಿಯಾಗಬಲ್ಲ ಶ್ರೇಯಸ್ಸು ದಿನಕರರು ಬಾಲಕರ ಭಾವಲೋಕದಲ್ಲಿ ಈ ಕೋಲಾಟದ ಹಾಡಿನಿಂದ ಸಾಧಿಸಿದ್ದಾರೆ ಅಂದರೆ ಅತಿಶಯೋಕ್ತಿ ಆಗದು. ೧೧ ಪ್ರಷ್ಟ ಷಟ್ಪದಿಗಳಿಂದ ಕೂಡಿದ ಈ ಸೀಳ್ಗವನ ಈ ಮಾದರಿಯ ಮಕ್ಕಳ ಪದ್ಯಗಳಲ್ಲಿಯೇ ಅಪ್ರತಿಮ ಇದರ ಆರಂಭ-

ಶರಣೂ ಶರಣೂ ಕೋಲೇನಾ
ಧರಣಿಗೆ ನಮನಾ ಬೆನಾ ಬೆನಾ

ಇಲ್ಲಿಯ ರೀತಿ ಒಕ್ಕಲು ಗುಮಟೆಯ ಪದ್ಯದ್ದು. ಧರಣಿಗೆ- ಭೂಮಿತಾಯಿಗೆ ನಮನ ಸೂಚಕವಾಗಿದೆ. ಬೆನಕ (ವಿನಾಯಕ)ನ ಚಿಕ್ಕರೂಪ 'ಬೆನಾ'. ಇದು ಕವಿಯದೇ ಕಲ್ಪನೆ ಇರಬೇಕು. ತಾಯಿ ತಂದೆಗಳೊಂದಿಗೆ ಮಕ್ಕಳು ಟೆಂಗಿನಕಾಯಿಗೂ ನಮನ ಹೇಳುತ್ತಾರೆ.

"ಕುಡಿಯಿರಿ ಹಾಲಾ। ಹಿಡಿಯಿರಿ ಕೋಲಾ।
ಇದು ಹೊಸ ಕಾಲಾ-ಕೋಲೇನಾ
ಮಕ್ಕಳಿಗೆಲ್ಲಾ ಸಕ್ಕರೆ ಬೆಲ್ಲಾ
ಚಿಂತೆಯ ಸಲ್ಲಾ-ಕೋಲೇನಾ

ಕಿರಿದಾದ ಸೊಲ್ಲಿನಲ್ಲಿ ಹಿರಿದಾದ ಭಾವವ್ಯಂಜನೆ ಇಲ್ಲಿದೆ. ಸಡಗರದ ಹೆಜ್ಜೆ-ಗೆಜ್ಜೆಗಳ ಬಿಜ್ಜೆಯಲ್ಲಿ ಸಾಗಿದ ಈ 'ಮೋಹನ ಲೀಲೆಯ ಕಂಡು' 'ನಲಿವುದು ಮುಗಿಲು। ಏತಕೆ ದಿಗಿಲು ? | ಹಗಲೂ ಇರುಳೂ ಕೋಲೇನಾ" "ತಿಂಗಳ ಬೆಳಕೂ ಮಂಗಳ ಥಳಕೂ | ಅಂಗಳದೊಳಗೇ ಕೋಲೇನಾ".

ಇದು "ಮಕ್ಕಳ ಸುಗ್ಗಿ। ಮುದುಕರು ಕುಗ್ಗಿ। ಬೆನ್ನನು ಬಗ್ಗಿಸೆ ಕೋಲೇನಾ" ಇಲ್ಲಿಯ ಭಾವಾವೇಶದ ಈ ಹಿಗ್ಗು ನೋಡಿ —

"ಕುಣಿಯಲಿ ಕಡಲೂ
ತೆಂಗಿನ ಮಡಲೂ
ಭೂಮಿಯ ಒಡಲೂ ಕೋಲೇನಾ
ಭತ್ತದ ಕದಿರೂ
ಬೆಟ್ಟದ ಬಿದಿರೂ
ಹಕ್ಕಿಯ ಹೋದರೂ ಕೋಲೇನಾ"

ಮಣ್ಣಿನ ಮಕ್ಕಳ ಈ ಪ್ರತಿಮಾ ಸೃಷ್ಟಿ ಎಷ್ಟು ನೈಜ ಮತ್ತು ಸಹಜವಾಗಿದೆ!

ಸಂತಸ ಉಕ್ಕಿ
ಆಗಸ ಮಿಕ್ಕಿ
ಮಿನುಗಲಿ ಚುಕ್ಕಿ ಕೋಲೇನಾ
ಕುಣಿಯಲಿ ಕೋಲಾ
ಹಾರಳಿಹಳ್ಳಾ
ಜಗವೇ ಮಳ್ಳಾ, ಕೋಲೇನಾ

ಮಾತಿನ ಚಕ್ಕಂದದೊಂದಿಗೆ ಭಾವದ ಉಕ್ಕಂದ ಹೇಗೆ ಚಿಮ್ಮಿ ಚೆಲ್ಲುವರಿದಿದೆ! ಈ ಕವನದ ೯ ನೆಯ ನುಡಿ—

ಮಕ್ಕಳದೃಷ್ಟಿ
ಮಂಗಳ ಸೃಷ್ಟಿ
ನವ ಸಂತುಷ್ಟಿ ಕೋಲೇನಾ
ಕುಣಿವುದೆ ಶಕ್ತಿ
ಮಣಿವುದೆ ಭಕ್ತಿ
ಜೀವನ್ಮುಕ್ತಿ ಕೋಲೇನಾ

ಎಂಥ ಹಿರಿಯ ತತ್ವಸೂಕ್ಷ್ಮ ಈ ಪುಟ್ಟ ಮಾತುಗಳಲ್ಲಿ ತುಂಬಿ ತುಳುಕಾಡಿದೆ. "ಜೀವನ್ + ಮುಕ್ತಿಗೆ" ಇಲ್ಲಿ ಹೊಸ ಸ್ವಾರಸ್ಯದ ಅರ್ಥತುಂಬಿದೆ ಈ ಪದ್ಯ ಇಲ್ಲಿಯೇ ಮುಗಿಯಬೇಕು. ಆದರೆ ಕವಿಗೆ ನೀತಿಬೋಧಕ ಮೋಹ ಬಿಟ್ಟಿಲ್ಲ. ಅದಕ್ಕಾಗಿ ೧೦ನೆಯ ನುಡಿ—

ಹುಣ್ಣಿವೆ ಹೋಳಿ
ಚಿಣ್ಣರೆ ಏಳಿ
ದುಮ್ಮನ ನುಡಿರೋ ಕೋಲೇನಾ

ಈ ಚರಣಾರ್ಥವಲ್ಲಿ ಕುಣಿತಕ್ಕೆ ಹೋಳಿಹಬ್ಬದ ಹಿನ್ನೆಲೆ ಕಲ್ಪಿಸಿದೆ. ಸರಿ; ಆದರೆ ಮುಂದೆ?

ನೃತ್ಯವ ಕುಣಿದು
ಸತ್ಯವ ನುಡಿದು
ನಿತ್ಯತೆಪಡೆಯಿರಿ ಕೋಲೇನಾ

ಇದೆಂಥ ಉಪದೇಶ ? ಕೋಲಾಟವ ಕುಣಿತಕ್ಕೂ—ಸತ್ಯನುಡಿಯುವದಕ್ಕೂ ಯಾವ ಸಂಬಂಧ? ನಿತ್ಯತೆ ಪಡೆಯುವದು ಯಾರು? ಇದು ಮಕ್ಕಳಿಗೆ ಕವಿಯ ಬೋಧವೋ ಮಕ್ಕಳೇ ಕೋಲಾಟ ನೋಡುವವರಿಗೆ ಸಾರುವ ಸಂದೇಶವೋ? ಇದು ಹೋಳಿ ಹಬ್ಬದ ನೂತನ ಸುಗ್ಗಿಯ ನವ ಸಂತೋಷದ ಸಂದರ್ಭಕ್ಕೆ ಹೊಂದಿಕೆ ಆಗುವಂತಿಲ್ಲ.

ಮಕ್ಕಳ ಮನಸ್ಸು ಉತ್ಸಾಹದ ಬುಗ್ಗೆ, ಉಲ್ಲಾಸದ ಮೊಗ್ಗೆ. ಅದನ್ನು ಚಿಮ್ಮಿಸಲು ಅರಳಿಸಲು ಬೇಕಾದ ಭಾವ–ಭಾಷೆ, ಭಣಿತ ಭಂಗಿಮೆಗಳ ಯೋಗ್ಯ ಯೋಗ ಒಂದು ಮಾಂತ್ರಿಕತೆ ಕಿಂದರ ಜೋಗಿಯ ಮಾಯಾಕಿನ್ನರಿಯಂತೆ. ಅಂಥ ಸ್ವರಗಳ ಮಿಡಿತ ನುಡಿತ ಈ ಕವಿಗೆ ಕರಗತವಾಗಿವೆ. ಆದಾಗ್ಯು ಅಲ್ಲಲ್ಲಿ ಅಪ್ಪಿತಪ್ಪಿ

ಮಗುವಿನ ನಾಲಿಗೆಗೆ ನಿಲುಕದ, ಅರಿವಿಗೆ ಎಟುಕದ ಶಬ್ದ ಪದ ಪ್ರಯೋಗಗಳು ಪದ್ಯಗಳಲ್ಲಿ ನುಸುಳಿಬರುವದುಂಟು. ಅಂಥ ಕೆಲವನ್ನು ಮೇಲೆ ಪ್ರಸಂಗವಶವಾಗಿ ಎತ್ತಿ ತೋರಿಸಿದ್ದಾಗಿದೆ. ಇನ್ನು ಕೆಲವನ್ನು ನೋಡಬಹುದು. 'ಕಂದಾ' ಪ್ರಾಸಕ್ಕೆ 'ಮಕರಂದ' ತಂಗಿ ಪ್ರಾಸಕ್ಕೆ 'ರಸರಂಗಿ' ಮೀಸೆಗಳ ಪ್ರಾಸಕ್ಕೆ ಮೂಷಿಕ. ಇವು rather too clever ಅನಿಸುತ್ತವೆ. ಹಾಗೆಯೇ ವನಚರ, ಶಾಶ್ವತ, ಪಂಕ್ತಿ, ನೂತನ, ಸಂತುಷ್ಟಿ, ಈಶ, ನಮನ, ಬೊಮ್ಮ, ಸೊಂಪು, ಜಳಕ, ದೊರಕು, ನಾಚಿಸು ಏಕೈ ! ಸಾಕ್ಕೈ(ಇ) ಆರೈಕೆ,. ಎನಿತು ಇತ್ಯಾದಿ. ಅದೇ ರೀತಿ ಬರೋಣವೆ, ಬಿಡೋಣವೆ, ನೃತ್ಯವಕುಣಿವುದು, ವಳದಿ| ಕೆಳದಿ. 'ನಿತ್ಯವು ಇಡ್ಲಿಗೆ ಸಾಂಬಾರ'-ಇದರ ಅರ್ಥ ಮಕ್ಕಳಿಗೆ ಗೊತ್ತಾಗುತ್ತದೆ. 'ನಿತ್ಯತೆ ಪಡೆಯಿರಿ'–ಇದು ಅವರಿಗೆ ಅರ್ಥವಾಗುವದೇ? ಈ ಮುಂತಾದ ಪ್ರಯೋಗಗಳನ್ನು ತಪ್ಪಿಸಲು ಸಾಧ್ಯವಿತ್ತು.

ದಿನಕರರ ಪದ್ಯಗಳ ಲಯ (rhythm) ಬಲಿಷ್ಠವಿರುತ್ತದೆ. ಈ ಪದ್ಯಗಳ ಒಂದು ಸೋಜಿಗವೆಂದರೆ "ಮಕ್ಕಳ ಪದ್ಯ" ಸಂಕಲನದ ೫೨ ಪದ್ಯಗಳಲ್ಲಿ ಒಂದೆರಡು ಬಿಟ್ಟರೆ–ಅಲ್ಲಿ ಬಹುಶಃ ಒಂದೇ "ಅಕ್ಕನ ಬಂಡಿ". ಉಳಿದೆಲ್ಲ ಪದ್ಯಗಳ ಒಂದೊಂದು ಪಾದಕ್ಕೆ ಗಣ ಸಂಖ್ಯೆ ತುಸು ಹೆಚ್ಚುಕಡಿಮೆ ಆದರೂ ಗಣ ಒಂದೇ ೪ ಮಾತ್ರೆಯ ಒಂದುಗಣ. ಇಂಥವು ನಾಲ್ಕು। ಮೂರು ಇಲ್ಲವೆ ಮೂರು। ಎರಡು ಅದಲುಬದಲಾಗಿ ಬಂದು ವೃತ್ತವೈವಿಧ್ಯವನ್ನು ಕಲ್ಪಿಸಿವೆ. ಅವುಗಳಲ್ಲಿ ಪವಣಿಸಿದ ಶಬ್ದಗಳ ಲಘು ಗುರುಗಳ ಸ್ಥಿತಿಗತಿಗಳಿಂದಲೇ ಈ ವೈವಿಧ್ಯಕ್ಕೆ ಜೀಕುತೂಕ ಕೊಡುವ ಒತ್ತು (stress) ಗತ್ತು (movement) ಕವಿ ಸಾಧಿಸಿದ್ದಾರೆ. ಇದಕ್ಕೆ ಕೆಲವು ಉದಾಹರಣೆ :

೧ ಬೆಕ್ಕೇ । ಬೆಕ್ಕೇ । ಮುದ್ದಿನ । ಸೊಕ್ಕೇ
ಎಲ್ಲಿಗೆ । ಹೋಗಿದ್ದೆ

೨ ಗುರು ಗುರು । ಗುರು ಗುರು
ನೆಗೆಯುತ । ಬಂದು

೩ ಒಂದು । ಎರಡು
ಆಕಳು । ಬರಡು

೪ ಬಾರೋ । ಬಾರೋ । ಮಳೆ ರಾ । ಯಾss

೫ ತಿಪ್ಪಾ | ಭಟ್ಟರ। ಚಂದ ಕೊ | ಡೆ
ಸಾವಿರ । ತೂತು ಗ | ಳೆಲ್ಲ ಕ । ಡೆ

೬ ಈಚೆಗೆ ಇಣಕಿ । ಆಚೆಗೆ ಹಣಕಿ
ಕುಣಿಯುವೆ ನಾಲ್ಕೂಕಡೆಯಲ್ಲಿ
ಕೆಳಗೂ ಮೇಲೂ ಬುಡದಲ್ಲಿ

೭ ಕೋಳಿಯ | ತತ್ತಿ
ಬೆಳ್ಳಗೆ । ಹತ್ತಿ
ದುಂಡಗೆ । ಸುತ್ತಿದ | ನೀರುಳ್ಳಿ

೮ ಎಲ್ಲಾ । ಕಡೆಯಲಿ ।
ಬೆಳೆದರು । ಕಳ್ಳಿ ।
ಧರೆಯಲಿ । ನಮ್ಮದೇ ।
ಸುಂದರ । ಹಳ್ಳಿ

೯ ಜೋ ಜೋ । ಜೋ ಜೋ ನನ । ತಂಗಿ
ಜೋಗುಳ ! ಹಾಡುವೆ । ರಸರಂ । ಗಿ

೧೦ ಕುಣಿವುದು । ನಾನು ।
ಮಣಿವುದು । ನೀನು ।
ಬಾರೇ । ಅಕ್ಕಾ । ತಾ ಧಿಮಿ । ಥೈ

೧೧ ಶರಣೂ । ಶರಣೂ । ಕೋಲೇ । ನಾ
ಧರಣಿಗೆ । ನಮನಾ । ಬೆನಾ ಬೆ।ನಾ

೧೨ ಮೈಸೂ । ರಿನ ಟೀ । ಕಾಫೀ । ಕ್ಲಬ್ಬು
ಎಲ್ಲಾ । ತಿಂಡಿಗ । ಳಾಗರ | ಸುಬ್ಬು

ಹೀಗೆ ನಾಲ್ಕುಮಾತ್ರೆಯ ಗಣ ಈ ಮಕ್ಕಳ ಪದ್ಯಗಳ ವಿವಿಧ ಕಟ್ಟೋಣದ ಇಟ್ಟಿಗೆ. 'ಅಕ್ಕನ ಬಂಡಿ' ಒಂದೇ ಮೂರು ಮಾತ್ರೆಯ ಗಣದ ಆಕೃತಿ "ನಮ್ಮ ।ಅಕ್ಕ| ಪುಟ್ಟ । ಬಂಡಿ ಕಟ್ಟಿ | ಕೊಂಡ । ಳು—"

"ಮೈಸೂರಿನ ಟೀ ಕಾಫೀ ಕ್ಲಬ್ಬಿ"ನಂತೆಯೇ ಡಾ. ದಿನಕರ ದೇಸಾಯಿಯವರ "ಮಕ್ಕಳ ಪದ್ಯ"ಗಳು "ಸುಬ್ಬು"ಗೆ 'ಎಲ್ಲಾ ತಿಂಡಿಗಳಾಗರ : ಇಲ್ಲಿಯ ತುಪ್ಪದ ದೋಸೆ ಎಲ್ಲ ಮಕ್ಕಳಿಗೂ–ಅವರ ತಂದೆ ತಾಯಿಗಳಿಗೂ ತಿನ್ನುವ ಆಸೆ. ದೋಸೆಗೆ ತೂತು ಏನೇ ಇದ್ದರೂ ಅದರ ರುಚಿಗೆ ಯಾವ ಕುಂದೂ ಇಲ್ಲ. ದೋಸೆಗಳು ಚಿಕ್ಕ ದೊಡ್ಡ; ಆದರೆ ಅವುಗಳ ಆಕಾರ ಒಂದೇ "ಗೋಲಾಕಾರ". ಅಂದಮಾತ್ರಕ್ಕೆ ಅವುಗಳ ಸ್ವಾದ ಸ್ವಾದಾಕಾರಕ್ಕೇನು ಕಡಿಮೆ? ನಮ್ಮ ಕನ್ನಡ ಮಕ್ಕಳು ಮಕ್ಕಳಾಗಿರುವ ತನಕವೂ ಕನ್ನಡ ಕಲಿತಿರುವತನಕವೂ ಈ ಪದ್ಯಗಳಿಗೆ ಮನಸೋತು ದನಿಗೂಡಿಸಿ ಕೈತಟ್ಟಿ ಹೆಜ್ಜೆ ಹಾಕುವದೇ ಸೈ "ತಾಧಿಮಿ ತಾ ಧಿಮಿ ಥೈ ।"

ಸಂಸ್ಕೃತ ನಾಟಕಗಳಲ್ಲಿ ಮುಗ್ಧ ಮಕ್ಕಳು

ದ. ನ. ಶಾನಭಾಗ

ಸಂಸ್ಕೃತ ನಾಟಕಗಳಲ್ಲಿ ಕಥಾವಸ್ತುವಿಗೆ ತಕ್ಕಂತೆ ನಾನಾವಿಧ ಪಾತ್ರಗಳ ಚಿತ್ರಣವಿದೆ. ಈ ನಾಟಕಗಳಲ್ಲಿ ಸಾಮಾನ್ಯವಾಗಿ ಪ್ರೌಢಪಾತ್ರಗಳೇ ಚಿತ್ರಿತ ವಾಗಿದ್ದರೂ ಕೆಲವು ನಾಟಕಗಳಲ್ಲಿ ಕಥಾವಸ್ತುವಿನ ಬೆಳವಣಿಗೆಗೆ ಸಹಾಯಕವಾಗಿ ಮಕ್ಕಳ ಪಾತ್ರಗಳೂ ಬಂದಿವೆ. ಮಕ್ಕಳು ಸ್ವಭಾವದಿಂದ ಮುಗ್ಧರು; ಅವರ ಮನಸ್ಸು ಎಂದಿಗೂ ತೆರೆದಿರುತ್ತದೆ. ಅವರ ಮಾತುಗಳಲ್ಲಿ ಅವರ ಮುಕ್ತ ಮನಸ್ಸು ಪ್ರತಿಬಿಂಬಿತವಾಗುತ್ತದೆ. ಮಕ್ಕಳಲ್ಲಿ ಹೊರಗೊಂದು ಒಳಗೊಂದು ಎಂಬುದಾಗಲಿ, ವಿಚಾರವೇ ಬೇರೆ ಮಾತೇ ಬೇರೆ ಎಂಬುದಾಗಲಿ ಇರುವದಿಲ್ಲ. ಮುಖದಾಕ್ಷಿಣ್ಯ ಕ್ಕಾಗಿ ಪ್ರಿಯವಾದ ಮಾತನ್ನಾಡುವದಿಲ್ಲ ಮಕ್ಕಳು. ಪ್ರಿಯವೋ ಅಪ್ರಿಯವೋ, ಸತ್ಯವನ್ನೇ ಅವರು ನುಡಿಯುತ್ತಾರೆ. ಅವರು ತಾವಿದ್ದ ಪರಿಸರದಿಂದ ಮನಸ್ಸಿನ ಮೇಲಾದ ಪರಿಣಾಮವನ್ನು ಮಾತುಗಳಲ್ಲಿ ಹೊರಗೆಡವಿಬಿಡುತ್ತಾರೆ. ಇವೇ ಮೊದ ಲಾದ ವೈಶಿಷ್ಟ್ಯಗಳನ್ನು ಸಂಸ್ಕೃತ ನಾಟಕಗಳಲ್ಲಿ ಬರುವ ಮಕ್ಕಳ ಪಾತ್ರಚಿತ್ರಣ ದಲ್ಲಿಯೂ ಕಾಣಬಹುದಾಗಿದೆ

ಮುಖ್ಯವಾಗಿ ಸಂಸ್ಕೃತದ ನಾಲ್ಕು ನಾಟಕಗಳಲ್ಲಿ ಮಕ್ಕಳ ಪಾತ್ರಗಳು ಬಂದಿವೆ. ಕಾಳಿದಾಸನ 'ಶಾಕುಂತಲ', ಭವಭೂತಿಯ 'ಉತ್ತರರಾಮಚರಿತ', ಶೂದ್ರಕನ 'ಮೃಚ್ಛಕಟಿಕ' ಮತ್ತು ವಿಶಾಖದತ್ತನ 'ಮುದ್ರಾರಾಕ್ಷಸ' ಇವೇ ಆ ನಾಲ್ಕು ನಾಟಕಗಳು.

ಕಾಳಿದಾಸ ಶ್ರೇಷ್ಠ ನಾಟಕಕಾರ: ಅವನ ಉತ್ತಮ ನಾಟಕ 'ಶಾಕುಂತಲ' ದುಷ್ಯಂತ-ಶಕುಂತಲೆಯರ ಪ್ರೇಮ ಮತ್ತು ಸಮಾಗಮಗಳನ್ನು ನಾಟಕೀಯವಾಗಿ

ಚಿತ್ರಿಸುವ ಈ ನಾಟಕದ ಕೊನೆಯ ಅಂಕದಲ್ಲಿ ದುಷ್ಯಂತ-ಶಕುಂತಲೆಯರ ಸಮಾಗಮದ ಮೊದಲು ದುಷ್ಯಂತನು ತನ್ನ ಮಗನಾದ ಭರತನನ್ನು ನೋಡುತ್ತಾನೆ. ಅಲ್ಲಿಯ ತನಕ ತಂದೆ ಮಗನನ್ನು ನೋಡಿದ್ದಿರಲಿಲ್ಲ. ಮಗನಿಗೂ ತಂದೆಯ ಪರಿಚಯವಿರಲಿಲ್ಲ. ಮಾರೀಚಾಶ್ರಮದಲ್ಲಿ ಅಶೋಕವೃಕ್ಷದ ಕೆಳಗೆ ಕುಳಿತ ದುಷ್ಯಂತನ ಬಳಿಗೆ ಇಬ್ಬರು ತಾಪಸಿಯರೊಡನೆ ಭರತನು ಆಗಮಿಸುತ್ತಾನೆ. ಭರತ ಕ್ಷತ್ರಿಯ ಕುಮಾರ; ಆದ್ದರಿಂದ ಸ್ವಾಭಾವಿಕವಾಗಿಯೇ ಶಕ್ತಿಶಾಲಿ ಮತ್ತು ಧೈರ್ಯವಂತ. ಅವನಿಗೆ ಪ್ರಾಣಿಗಳ ಕ್ರೂರತೆಯ ಪರಿಚಯವೇ ಆಗಿದ್ದಿರುವದಿಲ್ಲ. ಹೀಗಾಗಿ ಸಹಜವಾಗಿಯೇ ಪ್ರಾಣಿಗಳನ್ನು ಆಟದ ಗೊಂಬೆಗಳಂತೆ ಕಾಣುತ್ತಾನೆ.

ಅವನು ಬಾಲಕರಿಗೆ ಸಹಜವಾದ ತುಂಟತನವನ್ನು ತೋರಿಸುತ್ತ ರಂಗಮಂಚದ ಮೇಲೆ ಪ್ರವೇಶಿಸುತ್ತಾನೆ. ಸಿಂಹಿಣಿಯೊಂದು ತನ್ನ ಮರಿಗೆ ಹಾಲೂಡಿಸುತ್ತಿದ್ದಾಗ ಆ ಮರಿಯನ್ನು ಭರತ ಎಳೆಯುತ್ತಾನೆ. ಮರಿಗೆ ಹಾಲೂಡಿಸಬೇಕೆಂದು ಸಿಂಹಿಣಿಯು ಅವನು ಮರಿಯನ್ನು ಎಳೆದೊಯ್ದಂತೆ ಅವನನ್ನೇ ಅನುಸರಿಸುತ್ತದೆ. ಇದರಿಂದ ಅವನಿಗೆ ತಮಾಷೆಯೆನಿಸುತ್ತದೆಯೇ ಹೊರತು ಆ ಮರಿಯ ಮೇಲೆ ಕರುಣೆ ಬರುವದಿಲ್ಲ; ಸಿಂಹಿಣಿಯ ಬಗ್ಗೆ ಹೆದರಿಕೆಯಂತೂ ಇರುವದೇ ಇಲ್ಲ. ಹಾಗೆ ಎಳೆದು ತಂದ ಮರಿಯನ್ನು ಅವನು ಅವರಪ್ಪಕ್ಕೆ ಬಿಡುವದಿಲ್ಲ. ಆ ಮರಿಗೆ "ಏ ಸಿಂಹ, ಬಾಯಿ ತೆಗೆ! ನಿನ್ನ ಹಲ್ಲು ಎಣಿಸ್ತೇನೆ" ಎಂದು ಕಾಡಲು ತೊಡಗಿದಾಗ ಏನು ಮಾಡಿದರೆ ಅವನ ಕೈಯಿಂದ ಆ ಮರಿಯನ್ನು ಬಿಡಿಸಬಹುದೆಂದು ತೋಚದೆ ಓರ್ವ ತಾಪಸಿ ಅವನನ್ನು ಬೆದರಿಸಲು ನೋಡುತ್ತಾಳೆ: ಈ ಸಿಂಹಿಣಿಯು ಮರಿಯನ್ನು ನೀನು ಬಿಡಲಿಲ್ಲವಾದರೆ ಅದು ನಿನ್ನನ್ನು ತಿನ್ನುವದು" ಎಂದು ಹೇಳುತ್ತಾಳೆ. ಆದರೆ ಅವನೂ ಪಕ್ಕಾ ಘಾಟೀ ಹುಡುಗ. ಅವಳ ಬೆದರಿಕೆಯ ಮಾತಿಗೆ ನಕ್ಕು "ಓಹೋ! ನನಗೆ ಬಹಳ ಅಂಜಿಕೆಯಾಗುತ್ತಿದೆ" ಎಂದು ನಟಿಸಿ ಅವಳ ಕಡೆಗೆ ತುಟಿ ಚಾಚಿ ಅಣಕಿಸುತ್ತಾನೆ. ಈ ದೃಶ್ಯವನ್ನು ರಂಗಮಂಚದ ಮೇಲೆ ನೋಡಿದ ಪ್ರೇಕ್ಷಕರು ಅವನ ಬಾಲಸಹಜ ತುಂಟತನಕ್ಕೆ ಮೆಚ್ಚದಿರಲಾರರು ! ಬೆದರಿಕೆಯ ಈ ಗುಂಡು ಹುಸಿಯಾದಾಗ ಇನ್ನೊಬ್ಬಳು ಅವನಿಗೆ ಸಮಾಧಾನದಿಂದ ಹೇಳುತ್ತಾಳೆ :--"ಮಗು ಈ ಮರಿಯನ್ನು ಬಿಡು; ನಿನಗೆ ಬೇರೆ ಆಟಿಗೆ ಕೊಡುತ್ತೇನೆ". ಆದರೆ ಮೊದಲೇ ಹೇಳಿದಂತೆ ಅವನು ಪಕ್ಕಾ ಘಾಟಿ. ತನ್ನ ಕೈಯನ್ನು ಚಾಚಿ "ಎಲ್ಲಿದೆ ? ಕೊಡು" ಎನ್ನುತ್ತಾನೆ. ಆದರೆ ಆಕೆಯ ಬಳಿ ಆಟಿಗೆಯಿರುವದಿಲ್ಲ. ಆಟಿಗೆಯ ಮಾತಿನಿಂದಲೇ ಅವನ ಕೈಯಿಂದ ಸಿಂಹದಮರಿಯನ್ನು ಪಾರುಮಾಡಲು ಅವಳು ಹವಣಿಸಿದ್ದಳು. ಆದರೆ ಆ ಮಾತೂ ವಿಫಲವಾಯಿತು. ಆಗ ಅವಳು ಇನ್ನೊಬ್ಬಳಿಗೆ ಗುಡಿಸಲಿಗೆ ಹೋಗಿ ಬಣ್ಣಕೊಟ್ಟ ಮಣ್ಣಿನ ನವಿಲನ್ನು ತರಲು ಹೇಳುತ್ತಾಳೆ. ಆಗಲೂ ಅವನು ಆ ಮರಿಯನ್ನು ಬಿಡುವದಿಲ್ಲ. ಮೇಲಾಗಿ ಅವಳ ಕಡೆಗೆ ನೋಡಿ "ಅಲ್ಲಿಯ ತನಕ ಇದರ ಜೊತೆಗೇ ಆಡುವೆನು" ಎಂದೆಂದು ನಗುತ್ತಾನೆ.

ಹೀಗೆ ಭರತನ ಬಾಲಸಹಜ ಘಾಟೀಸ್ವಭಾವದ ಪರಿಚಯುವಾದ ಬಳಿಕ ನಾಟಕ ಕಾರನು ಅವನ ಮಾತೃಪ್ರೇಮವನ್ನು ಚಿತ್ರಿಸುತ್ತಾನೆ. ಗುಡಿಸಲಿಗೆ ಹೋದ ತಾಪಸಿಯು ಮಣ್ಣಿನ ನವಿಲನ್ನು ಹಿಡಿದುಕೊಂಡು ಬಂದು "ಮಗು! ಈ ಶಕುಂತ-ಲಾವಣ್ಯವನ್ನು ನೋಡು' ಎನ್ನುತ್ತಾಳೆ. (ಶಕುಂತ-ಲಾವಣ್ಯ-ಹಕ್ಕಿಯ ಸೊಬಗು) ಅವನು ಮಾತ್ರ 'ಶಂಕುತಲಾ' ಎಂಬ ಪದವನ್ನು ಕೇಳಿ ನನ್ನ ತಾಯಿಯೆಲ್ಲಿ" ಎಂದು ಕೇಳುತ್ತಾನೆ. ಆ ಬಳಿಕ ಆ ಆಟಿಗೆಯನ್ನು ತೆಗೆದುಕೊಂಡು ಅವನು ಆ ಮರಿಯನ್ನು ಬಿಟ್ಟು ಬಿಡುತ್ತಾನೆ.

ಇದೆಲ್ಲ ನಡೆದಾಗ ಭರತನು ತನ್ನ ಮಗನೆಂಬುದು ದುಷ್ಯಂತನಿಗೆ ಖಚಿತವಾಗಿ ಅವನು ಮಗನನ್ನು ಅಪ್ಪಿಕೊಳ್ಳುತ್ತಾನೆ. ಭರತನಿಗೆ ಮಾತ್ರ ತನ್ನನ್ನು ಅಪ್ಪಿ ಕೊಂಡವನು ತನ್ನ ತಂದೆಯೆಂಬುದು ತಿಳಿದಿರುವದಿಲ್ಲ. ಯಾರೋ ಅಪರಿಚಿತರು ಅಪ್ಪಿಕೊಂಡರೆಂದು ಅವನು ಭಾವಿಸಿ "ನನ್ನನ್ನು ಬಿಡು. ತಾಯಿಯ ಹತ್ತಿರ ಹೋಗು ವೆನು" ಎಂದು ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆಗ ದುಷ್ಯಂತನು ಅವನಿಗೆ "ಮುದ್ದಿನ ಮಗನೆ, ನನ್ನ ಜೊತೆಗೇ ಹೋಗಿ ತಾಯಿಯನ್ನು ಅಭಿನಂದಿಸುವಿಯಂತೆ" ಎಂದು ಹೇಳಿದಾಗ ಅಪರಿಚಿತನೊಡನೆ ತಾಯ ಬಳಿ ಹೋಗುವದು ಹೇಗೆ? ಎಂಬ ವಿಚಾರ ಭರತನ ಮನಸ್ಸಿನಲ್ಲಿ ಮೂಡುತ್ತದೆ. "ತಂದೆಯ ಸಂಗಡವಾದರೆ ತಾಯ ಬಳಿ ಹೋಗಬಹುದು; ಇವನಾರು? ನನ್ನ ತಂದೆಯೋ?" ಎಂದು ಅವನು ಯೋಚಿಸಿ ತಟ್ಟನೆ ಹೇಳಿ ಬಿಡುತ್ತಾನೆ-"ನನ್ನ ತಂದೆ ದುಷ್ಯಂತ ನೀನಲ್ಲ" ಈ ಮಾತಿ ನಿಂದ ದುಷ್ಯಂತನಿಗೆ ಅವರ್ಣನೀಯವಾದ ಆನಂದವಾಗುತ್ತದೆಯೆಂದು ಬೇರೆ ಹೇಳ ಬೇಕೆ? ಮತ್ತು ಈ ಬಾಲಸಹಜ ಪ್ರತಿಕ್ರಿಯೆಯಿಂದ ಪ್ರೇಕ್ಷಕರ ಮನಸ್ಸನ್ನೂ ಹೃದಯವನ್ನೂ ಭರತನು ಗೆದ್ದುಕೊಂಡುಬಿಡುತ್ತಾನೆಂಬುದನ್ನು ವಿವರಿಸಬೇಕೆ? ಈ ವೈಶಿಷ್ಟ್ಯದ ಮೂಲಕವೇ ಕಾಳಿದಾಸನು ಚಿತ್ರಿಸಿದ ಭರತನ ಪಾತ್ರ ಇಂದಿಗೂ ರಸಿಕರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ.

ಭವಭೂತಿಯ 'ಉತ್ತರರಾಮಚರಿತೆ'ಯಲ್ಲಿ ಬರುವ ಮಕ್ಕಳು ಭರತನಷ್ಟು ಚಿಕ್ಕವರಲ್ಲ. ಪ್ರಾಥಮಿಕ ಶಾಲಾ ಮಕ್ಕಳ ವಯಸ್ಸಿನವರು. ಈ ವಯಸ್ಸಿನ ಮಕ್ಕಳು ಸಹ ತೆರೆದ ಮನಸ್ಸಿನವರೇ ಆಗಿರುತ್ತಾರೆ. ಆದರೆ ಈ ವಯಸ್ಸಿನಲ್ಲಿ ಮಕ್ಕಳ ಸ್ವಭಾವದೊಳಗಿನ ಅಂತರ ಕಾಣಿಸಲು ಪ್ರಾರಂಭವಾಗುತ್ತದೆ 'ಉತ್ತರ ರಾಮ ಚರಿತೆ'ಯ ನಾಲ್ಕನೆಯ ಅಂಕ ವಾಲ್ಮೀಕಿಯ ಆಶ್ರಮದಲ್ಲಿ ಪ್ರಾರಂಭವಾಗುತ್ತದೆ. ಆಶ್ರಮಕ್ಕೆ ಜನಕ ಮಹಾರಾಜನೂ ವಸಿಷ್ಠಮಹರ್ಷಿಯೂ ದಶರಥನ ಮಡದಿಯರೂ ಬಂದಿರುವದರಿಂದ ವಿಶೇಷ ಅಡಿಗೆಯ ಸಿದ್ಧತೆ ನಡೆದಿದೆ. ಮತ್ತು ಮಕ್ಕಳ ಪಾಠಕ್ಕೆ ಸೂಟಿ ಕೊಡಲಾಗಿದೆ. ಅಂಕದ ಪ್ರಾರಂಭದಲ್ಲಿ ದಾಂಡಾಯನ ಮತ್ತು ಸೌದಾತಕಿ ಗಳೆಂಬ ಮಕ್ಕಳು ಪ್ರವೇಶಿಸುತ್ತಾರೆ. ವಿಶೇಷ ಅಡಿಗೆಯ ಸುಗಂಧದಿಂದ ದಾಂಡಾ

ಯನನಿಗೆ ಆನಂದವಾಗಿದ್ದರೆ, ಪಾಠಕ್ಕೆ ರಜೆ ದೊರಕಿರುವದರಿಂದ ಸೌಧಾತಕಿಗೆ ಪರಮಸಂತೋಷವಾಗಿದೆ. ದಾಂಡಾಯನ ತುಸು ಗಂಭೀರ ಸ್ವಭಾವದವ; ಸೌಧಾತಕಿ ಹಾಸ್ಯಪ್ರವೃತ್ತಿಯವ ತಮ್ಮ ತಮ್ಮ ಸ್ವಭಾವಕ್ಕೆ ತಕ್ಕಂತೆ ಅವರು ಆ ಸನ್ನಿವೇಶವನ್ನು ಬಣ್ಣಿಸುತ್ತಾರೆ. ಇದು ದಾಂಡಾಯನನ ಪ್ರತಿಕ್ರಿಯೆ:- "ಸೌಧಾತಕಿ, ಈ ದಿನ ಅನೇಕ ಅತಿಥಿಗಳು ಬಂದಿರುವದರಿಂದ ಗುರುಗಳಾದ ವಾಲ್ಮೀಕಿಗಳ ಆಶ್ರಮದಲ್ಲಿ ಸಂಭ್ರಮದಿಂದ ಜರುಗುತ್ತಿರುವ ಸಮಾರಂಭಗಳು ಬಹಳ ರಮಣೀಯವಾಗಿವೆ" –ಹೀಗೆ ನುಡಿದು ವಿಶೇಷ ಅಡಿಗೆಯ ಬಗೆಗೆ ಮೆಚ್ಚುಗೆ ವ್ಯಕ್ತ ಪಡಿಸುತ್ತಾನೆ. ಸೌಧಾತಕಿಯ ಪ್ರತಿಕ್ರಿಯೆ ನೋಡಿರಿ:- ನಮಗೆ ರಜೆ ಕೊಡಿಸಿರುವ ಈ ಹಣ್ಣುಗಡ್ಡಗಳಿಗೆಲ್ಲ ಸುಸ್ವಾಗತ" ಆಶ್ರಮಕ್ಕೆ ಬಂದಂಥ ಹಿರಿಯರನ್ನು ಸೌಧಾತ್ಕಿಯು ಹೀಗೆ ಸಂಬೋಧಿಸಿದ್ದನ್ನು ಕೇಳಿ ದಾಂಡಾಯನನಿಗೆ ಸಿಟ್ಟು ಬರುತ್ತದೆ. ಆದರೆ ಸೌಧಾತಕಿಯು ತನ್ನ ಸ್ವಭಾವಕ್ಕೆ ತಕ್ಕಂತೆಯೇ ಮಾತನಾಡುತ್ತಾನೆ. ವಸಿಷ್ಠನನ್ನು ಸ್ವಾಗತಿಸುವಾಗ ಮಾಂಸಸಮೇತ ಮಧುಪರ್ಕವನ್ನು ಕೊಟ್ಟದ್ದನ್ನು ನೋಡಿದ ಆತನು ವಸಿಷ್ಠನು ಹುಲಿಯೋ ತೋಳವೋ ಆಗಿರಬೇಕೆಂದು ತಾನು ತಿಳಿದಿದ್ದೆನೆನ್ನುತ್ತಾನೆ. ಮತ್ತು ಕೊನೆಯಲ್ಲಿ "ಈ ಮುದುಕರು ಪರಸ್ಪರ ಕೂಡಿಕೊಂಡಂತೆ ನಾವು ಕೂಡ ಜತೆಯ ಹುಡುಗರೊಡನೆ ಕೂಡಿಕೊಂಡು ರಜೆಯ ಹಬ್ಬವನ್ನು ಆಡುತ್ತ ಕಳೆಯೋಣ" ಎಂದು ಮಕ್ಕಳಲ್ಲಿ ಸ್ವಾಭಾವಿಕವಾಗಿರುವ ಆಟದ ಅಭಿರುಚಿಯನ್ನು ತೋರ್ಪಡಿಸುತ್ತಾನೆ. ಇಂದಿಗೂ ಮಕ್ಕಳು ಹಾಡುವದಿಲ್ಲವೆ ?

ಮೊಸರಂಬೋಡೆಗೆ ರುಚಿಯಿರಬೇಕು
ದಿನದಿನ ಶಾಲೆಗೆ ಬಿಡುವಿರಬೇಕು
ಕುಣಿಕುಣಿದಾಡುವ ಆಟವು ಬೇಕು—ಎಂದು ಮುಂತಾಗಿ.

ಮಕ್ಕಳಲ್ಲಿ ಸಾರ್ವತ್ರಿಕವಾಗಿ ಕಾಣುವ ಇನ್ನೊಂದು ವೈಶಿಷ್ಟ್ಯವನ್ನೂ ಈ ಪ್ರಸಂಗದಲ್ಲಿ ಕಾಣಬಹುದು. ಜನಕ ಮಹಾರಾಜನೂ ಕೌಸಲ್ಯಾ ಮೊದಲಾದವರೂ ಶ್ರೀರಾಮನ ಸೀತಾಪರಿತ್ಯಾಗದಿಂದ ದುಃಖಿತರಾಗಿದ್ದಾರೆ. ಅದರಿಂದ ಅಲ್ಲಿ ನಿಜವಾಗಿ ಸಂತಸಪಡುವ ಸನ್ನಿವೇಶವಿಲ್ಲ. ಆದರೆ ಮಕ್ಕಳಿಗೆ ಮಾತ್ರ ಅದರ ಗೊಡವೆಯಿಲ್ಲ. ಅವರಿಗೆ ರಜೆ ದೊರಕಿದ್ದು ಮತ್ತು ಅದನ್ನು ಆಟದಲ್ಲಿ ಕಳೆಯಬೇಕೆಂಬುದು ಮಾತ್ರ ಗೊತ್ತು. ಇಂದು ಕೂಡ ಮಹಾವ್ಯಕ್ತಿಯ ನಿಧನಕ್ಕಾಗಿ ರಜೆ ಕೊಟ್ಟರೆ ಮಕ್ಕಳಿಗೆ ಸಂತೋಷವೇ ಹೊರತು ದುಃಖವಿಲ್ಲವೆಂಬುದನ್ನು ಗಮನಿಸಬಹುದು.

'ಉತ್ತರರಾಮಚರಿತೆ'ಯ ಅದೇ ಅಂಕದಲ್ಲಿ ಇನ್ನೊಂದು ಚಿಕ್ಕ ದೃಶ್ಯವಿದೆ. ವಾಲ್ಮೀಕಿ ಆಶ್ರಮದ ವಿದ್ಯಾರ್ಥಿಗಳು ಕುದುರೆಯನ್ನು ನೋಡಿರಲಿಲ್ಲ. ಆ ಶಬ್ದವನ್ನು ಓದಿದ್ದರು. ಅದೊಂದು ಪ್ರಾಣಿಯೆಂದಷ್ಟೇ ಅವರಿಗೆ ತಿಳಿದಿತ್ತು. ಶ್ರೀರಾಮನ

ಅಶ್ವಮೇಧಯಾಗದ ಕುದುರೆ ಅಲ್ಲಿ ಬಂದಾಗ ಅವರು ಅದೇ ಮೊದಲಬಾರಿ ಅದನ್ನು ನೋಡಿ, ಅದನ್ನು ಲವನಿಗೂ ತೋರಿಸಲು ಅವನಿದ್ದಲ್ಲಿ ಓಡಿ ಬರುತ್ತಾರೆ;—

"ವಟುಗಳು :– ಲವ, ಓ ಲವ, 'ಕುದುರೆ' 'ಕುದುರೆ' ಎಂದು ನಾವು ಓದಿಲ್ಲವೆ? ಆ ಪ್ರಾಣಿವಿಶೇಷವನ್ನು ನಾವು ಈ ಹೊತ್ತು ಪ್ರತ್ಯಕ್ಷ ನೋಡಿದೆವು.

ಲವ :—ಅದು ಹೇಗಿದೆ?

ವಟುಗಳು:– ಅದಕ್ಕೆ ಹಿಂದುಗಡೆ ದೊಡ್ಡ ಬಾಲವಿದೆ: ಆ ಬಾಲವನ್ನು ಅದು ಯಾವಾಗಲೂ ಬೀಸುತ್ತಿರುತ್ತದೆ. ಅದರ ಕುತ್ತಿಗೆ ಬಹಳ ಉದ್ದ! ಅದಕ್ಕೆ ನಾಲ್ಕೇ ನಾಲ್ಕು ಗೊರಸುಗಳಿವೆ. ಅದು ಹುಲ್ಲನ್ನು ಮೇಯುತ್ತದೆ. ಮಾವಿನಕಾಯಿಯ ಗಾತ್ರದ ಹಿಕ್ಕೆಗಳನ್ನು ಹಾಕುತ್ತದೆ"

ಹೇಗೆ ಇದ್ದಕ್ಕಿದ್ದಂತೆ ಬಣ್ಣಿಸಿದ್ದಾರೆ ನೋಡಿರಿ.

ಆದುದರಿಂದಲೇ, ಈ ಶ್ಲೋಕವನ್ನು 'ಸ್ವಭಾವೋಕ್ತಿ' ಅಲಂಕಾರದ ಉತ್ತಮ ಉದಾಹರಣೆಯೆಂದು ಆಲಂಕಾರಿಕರು ಪರಿಗಣಿಸಿದ್ದಾರೆ.

ಶೂದ್ರಕನ 'ಮೃಚ್ಛಕಟಿಕ' ಮತ್ತು ವಿಶಾಖದತ್ತನ 'ಮುದ್ರಾರಾಕ್ಷಸ'ದಲ್ಲಿ ಬರುವ ಮಕ್ಕಳು ಕಷ್ಟಕ್ಕೆ ಸಿಲುಕಿ ತೊಳಲಾಡಿದವರು. ಹೀಗಾಗಿ ಅವರ ಮಾತುಗಳು ಅವರು ಅನುಭವಿಸಿದ ಸಂಕಟಗಳಿಂದ ನೊಂದ ಮನಸ್ಸನ್ನು ಪ್ರತಿಬಿಂಬಿಸುತ್ತವೆ. ಅವರು ಅನುಭವಿಸಿದ ಕಷ್ಟಗಳು ಮಾತ್ರ ಬೇರೆ ಬೇರೆ. 'ಮೃಚ್ಛಕಟಿಕ' ದೊಳಗಿನ ಚಾರುದತ್ತನ ಮಗನು ತಂದೆಯ ಬಡತನದಿಂದ ಕಂಗಾಲಾಗಿದ್ದಾನೆ; 'ಮುದ್ರಾರಾಕ್ಷಸ' ದೊಳಗಿನ ಚಂದನದಾಸನ ಮಗನು ರಾಜಕೀಯ ಕುತಂತ್ರಕ್ಕೆ ಬಲಿಯಾದ ತನ್ನ ತಂದೆಯ ದುರವಸ್ಥೆಯಿಂದ ನೊಂದುಕೊಂಡಿದ್ದಾನೆ.

'ಮೃಚ್ಛಕಟಿಕ'ದ ಆರನೆಯ ಅಂಕದ ಆರಂಭದಲ್ಲಿ ಮೊದಲನೆಯ ಬಾರಿ ನಾವು ಚಾರುದತ್ತನ ಮಗ ರೋಹಸೇನನನ್ನು ಕಾಣುತ್ತೇವೆ. ಈತನು ನೆರೆಯ ಸಿರಿವಂತರ ಹುಡುಗನ ಚಿನ್ನದ ಆಟದ ಬಂಡಿಯಿಂದ ಆಡುತ್ತಿದ್ದನು. ಆ ಹುಡುಗನು ಅದನ್ನು ಒಯ್ದ ಬಳಿಕ ಈತ ಅಳತೊಡಗಿದ. ಅಳುತ್ತಿರುವವನನ್ನು ಸಮಾಧಾನಗೊಳಿಸಲು ಸೇವಕಿ ರದನಿಕೆಯು ಮಣ್ಣಿನ ಚಿಕ್ಕ ಬಂಡಿಯನ್ನು ಕೊಡುತ್ತಾಳೆ ಅದನ್ನು ತೆಗೆದುಕೊಳ್ಳಲೊಪ್ಪದೆ ರೋಹಸೇನನು ಅಳುತ್ತ—"ರದನಿಕೆ, ಮಣ್ಣಿನ ಈ ಕಿರುಬಂಡಿ ನನಗೇಕೆ? ಆ ಚಿನ್ನದ ಬಂಡಿಯನ್ನೇ ಕೊಡು" ಎಂದು ಹಟಮಾಡತೊಡಗುತ್ತಾನೆ. ಇದನ್ನು ಕೇಳಿದ ರದನಿಕೆಗೂ ದುಃಖವಾಗುತ್ತದೆ. ಏಕೆಂದರೆ, ಒಂದು ಕಾಲದಲ್ಲಿ ಚಾರುದತ್ತನೂ ಶ್ರೀಮಂತನಾಗಿದ್ದನು. ದಾನ-ಧರ್ಮಾದಿಗಳಿಂದ ಈಗ ಬಡವನಾಗಿರುತ್ತಾನೆ. ಆದರೆ ಇದೆಲ್ಲ ಆ ಸಣ್ಣ ಮಗುವಿಗೆ ತಿಳಿಯುವದೆಂತು? ಅದಕ್ಕಾಗಿ ಅವನ

ಮನಸ್ಸನ್ನು ಬೇರೆಡೆ ತಿರುಗಿಸಲು ರದನಿಕೆಯು ಅವನನ್ನು ವಸಂತಸೇನೆಯ ಬಳಿ ಒಯ್ಯುತ್ತಾಳೆ. ವಸಂತಸೇನೆಯನ್ನು ಅವನು ನೋಡುವುದು ಅದೇ ಮೊದಲು. ತಂದೆಯ ಬಡತನದ ಬೇಗೆಯಿಂದ ಆ ಹುಡುಗನು ಅಳುತ್ತಿರುವುದನ್ನು ಕೇಳಿದ ವಸಂತಸೇನೆಯೂ ಕಣ್ಣೀರು ಸುರಿಸತೊಡಗುತ್ತಾಳೆ. ಆಗ ರೋಹಸೇನ ಕೇಳುತ್ತಾನೆ:— “ರದನಿಕೆ, ಇವಳು ಯಾರು?” ರದನಿಕೆ ಉತ್ತರಿಸುತ್ತಾಳೆ:— “ಮಗು, ಈಕೆಯೂ ನಿನಗೆ ತಾಯಿಯಾಗಬೇಕು”. ಈ ಉತ್ತರವನ್ನು ಕೇಳಿದ ಕೂಡಲೇ ರೋಹಸೇನ ಅಂದುಬಿಡುತ್ತಾನೆ:—“ರದನಿಕೆ, ನೀನು ಸುಳ್ಳಾಡುತ್ತಿರುವೆ. ನನ್ನ ತಾಯಿಯಾದರೆ ಇವಳಿಗೆ ಒಡವೆಯೆಲ್ಲಿಂದ ಬರಬೇಕು?” ಈ ಮಾತು ಸಹಜವಾಗಿಯೇ ಬಂದಿದ್ದರೂ ಎಷ್ಟೊಂದು ಕರುಣಾಜನಕವಾಗಿದೆ! ತಾಯಿ ಬಂಗಾರದ ಒಡವೆಗಳನ್ನು ಧರಿಸಿದ್ದು ಅವನು ನೋಡಿಯೇ ಇಲ್ಲ. ಆ ಮನೆಯಲ್ಲಿ ಅವನ ಪ್ರವೇಶವಾಗುವ ಮೊದಲೇ ಬಡತನ ಪ್ರವೇಶಿಸಿ ಎಲ್ಲರನ್ನೂ ಆಕ್ರಮಿಸಿ ಬಿಟ್ಟಿತ್ತು. ಹೀಗಾಗಿ ಒಡವೆಗಳನ್ನು ಧರಿಸಿದವಳು ತನ್ನ ತಾಯಿಯಾಗಲು ಸಾಧ್ಯವೇ ಇಲ್ಲವೆಂಬುದನ್ನು ಆತನು ಮನಗಂಡಿದ್ದನು. ವಸಂತಸೇನೆಯೂ ಅವನ ಮನಸ್ಸನ್ನು ಅರ್ಥಮಾಡಿಕೊಂಡು ತನ್ನ ಒಡವೆಗಳನ್ನು ಕಳಚಿಟ್ಟು ಅಳುತ್ತ—“ಮಗು, ಇಲ್ಲಿ ನೋಡು. ಈಗ ನಿಜವಾಗಿಯೂ ನಿನ್ನ ತಾಯಿಯಾಗಿದ್ದೇನೆ. ಈ ಒಡವೆಗಳನ್ನು ನೀನೇ ತೆಗೆದುಕೊ. ಚಿನ್ನದ ಕಿರುಬಂಡಿಯನ್ನು ಮಾಡಿಸಿಕೊ” ಎನ್ನುತ್ತಾಳೆ. ಆಗ ರೋಹಸೇನನ ಕಣ್ಮುಂದೆ ತನ್ನ ತಾಯಿಯ ಇನ್ನೊಂದು ಚಿತ್ರ ಸುಳಿಯುತ್ತದೆ. ತಾಯಿಗೆ ಬಡತನ ಪೀಡಿಸುತ್ತಿರಬಹುದು. ಆದರೆ ಅವಳು ಎಂದಿಗೂ ಅತ್ತವಳಲ್ಲ. ಆದಕ್ಕಾಗಿ ಅವನು ನುಡಿಯುತ್ತಾನೆ:—“ನನಗೆ ಬೇಡ; ನೀನು ಅಳುತ್ತಿರುವಿ” ಇದನ್ನು ಕೇಳಿದಾಗ ಚಾರುದತ್ತನ ಮಡದಿ ಧೂತಾದೇವಿಯ ಕಷ್ಟಸಹಿಷ್ಣುತೆಯ ಚಿತ್ರ ಪ್ರೇಕ್ಷಕರ ಕಣ್ಮುಂದೆ ಮೂಡುವುದು ಸಹಜವಲ್ಲವೆ? ಆಗ ವಸಂತಸೇನೆಯು ಕಣ್ಣೊರಸಿಕೊಂಡು ರೋಹಸೇನ ರದನಿಕೆಯರನ್ನು ಕಳಿಸಿಕೊಡುತ್ತಾಳೆ.

ರೋಹಸೇನನು ಪುನಃ ಕಾಣಿಸಿಕೊಳ್ಳುವುದು ನಾಟಕದ ಕೊನೆಯದಾದ ಹತ್ತನೆಯ ಅಂಕದಲ್ಲಿ. ವಿಧಿಯ ಮತ್ಸ್ಯಚಕ್ರಗಳಿಗೆ ಸಿಲುಕಿದ ಚಾರುದತ್ತನಿಗೆ ಮರಣದಂಡನೆಯ ಶಿಕ್ಷೆಯಾಗುತ್ತದೆ ಮತ್ತು ಅವನನ್ನು ವಧಸ್ಥಾನಕ್ಕೆ ಒಯ್ಯುತ್ತಿದ್ದಾಗ ವಿದೂಷಕನು ರೋಹಸೇನನನ್ನು ಕರೆದುಕೊಂಡು ಬರುತ್ತಾನೆ. ತಂದೆಯನ್ನು ಕೊಲ್ಲಲು ಒಯ್ಯುತ್ತಾರೆಂದು ತಿಳಿದಕೂಡಲೇ ರೋಹಸೇನ “ಅಯ್ಯೋ ಅಪ್ಪಾ! ಅಯ್ಯೋ ಅಪ್ಪಾ!” ಎಂದು ಚೀರುತ್ತಾನೆ. ಬಳಿಕ ಚಾರುದತ್ತನನ್ನು ಹಿಡಿದೊಯ್ಯುತ್ತಿದ್ದ ಚಂಡಾಲರನ್ನು ಬಿನ್ನವಿಸುತ್ತಾನೆ:—“ನನ್ನನ್ನು ಕೊಲ್ಲಿರಿ. ತಂದೆಯನ್ನು ಬಿಟ್ಟುಬಿಡಿರಿ”. ಆದರೆ ಆ ಚಂಡಾಲರಿಗೆ ಆ ಅಧಿಕಾರವೆಲ್ಲಿ? ಅವರು—“ಮಗು, ಹೀಗೆ ಹೇಳುವ ನೀನು ದೀರ್ಘಾಯುಸ್ಯವಂತನಾಗು” ಎಂದು ಹರಸುತ್ತಾರಷ್ಟೇ. ಇಲ್ಲಿ

ರೋಹಸೇನನಿಗೆ ತನ್ನ ತಂದೆಯ ಬಗೆಗಿದ್ದ ಪ್ರೀತಿ ಚೆನ್ನಾಗಿ ಮೂಡಿಬಂದಿದೆ. ಆ ಬಳಿಕ ಚಾರುದತ್ತನೂ ಚಂಡಾಲರೂ ವಿದೂಷಕನೊಡನೆ ರೋಹಸೇನನನ್ನು ಕಳಿಸಿ ಬಿಡುತ್ತಾರೆ.

ರೋಹಸೇನನು ತಾಯಿ ಧೂತಾದೇವಿಯ ಬಳಿಹೋದಾಗ ಅವಳು ಅಗ್ನಿಪ್ರವೇಶಕ್ಕೆ ಸಿದ್ಧತೆ ಮಾಡಿಕೊಂಡಿದ್ದ ದೃಶ್ಯ ಕಾಣುತ್ತದೆ. ಚಾರುದತ್ತನ ಮರಣದ ವಾರ್ತೆ ಕಿವಿಗೆ ಬೀಳುವ ಮೊದಲೇ ತಾನು ದೇಹತ್ಯಾಗಮಾಡಬೇಕೆಂದು ಅವಳು ಸಿದ್ಧತೆ ನಡೆಸಿದ್ದಾಳೆ. ಅವಳನ್ನು ತಡೆಯಲು ರೋಹಸೇನ ಅವಳ ಕಾಲಿಗೂ ಸೆರಗಿಗೂ ಅಂಟಿಕೊಂಡು ಪ್ರಯತ್ನಿಸುತ್ತಾನೆ. ಅವಳು ಬಿಡಿಸಿಕೊಂಡು ಬೆಂಕಿಯಿದ್ದೆಡೆ ಹೋಗತೊಡಗುತ್ತಾಳೆ. ಆಗ ಅವನು—“ತಾಯೆ, ಅಮ್ಮಾ, ನನ್ನನ್ನು ನೋಡಿಕೊ, ನೀನಿಲ್ಲದೆ ನಾನು ಜೀವದಿಂದಿರಲಾರೆ” ಎಂದು ಗೋಗರೆದು ತನಗಾಗಿಯಾದರೂ ಬದುಕಿರಲು ಬಿನ್ನವಿಸುತ್ತಾನೆ. ಆದರೆ ನಿಜಸಂಗತಿ ಬಹಿರಂಗವಾದ ಬಳಿಕ ಬಿಡುಗಡೆ ಹೊಂದಿದ ಚಾರುದತ್ತನು ಅಲ್ಲಿಗೆ ಬಂದು ಎಲ್ಲರನ್ನೂ ಸಮಾಧಾನಗೊಳಿಸುತ್ತಾನೆ. ಹೀಗೆ ರೋಹಸೇನನಲ್ಲಿ ಮನೆಮಾಡಿದ್ದ ತಾಯಿ–ತಂದೆಯರ ಬಗೆಗಿನ ಬಾಲಸಹಜವಾದ ಉತ್ಕಟಪ್ರೀತಿ ನಾಟಕದಲ್ಲಿ ಪ್ರಭಾವಿಯಾಗಿ ಮೂಡಿಬಂದಿದೆ.

‘ಮುದ್ರಾರಾಕ್ಷಸ’ದ ಕಥಾವಸ್ತು ಅತಿಗಹನವಾದ ರಾಜಕೀಯ ತಂತ್ರ–ಪ್ರತಿತಂತ್ರಗಳಿಂದ ಕೂಡಿದ್ದು. ಹೀಗಾಗಿ ಅಲ್ಲಿ ಕೋಮಲ ಸ್ವಭಾವದ ಸ್ತ್ರೀಪಾತ್ರಗಳಿಗಾಗಲಿ, ಮುಗ್ಧಮಕ್ಕಳಿಗಾಗಲಿ ಆಸ್ಪದವಿಲ್ಲ. ಆದರೆ ಕೊನೆಯದಾದ ಏಳನೆಯ ಅಂಕದಲ್ಲಿ ಚಾಣಕ್ಯನ ತಂತ್ರಕ್ಕೆ ಬಲಿಯಾಗಿ ವಧಸ್ಥಾನಕ್ಕೆ ಒಯ್ಯಲ್ಪಡುವ ಚಂದನದಾಸನ ಹೆಂಡತಿ ಮತ್ತು ಮಗ ಕಾಣಿಸಿಕೊಳ್ಳುತ್ತಾರೆ. ತನ್ನ ತಂದೆಯು ನಿರ್ದೋಷಿಯಾಗಿದ್ದರೂ ಮಿತ್ರಕಾರ್ಯಕ್ಕಾಗಿ ಮರಣದಂಡನೆಯನ್ನು ಅನುಭವಿಸುತ್ತಿದ್ದಾನೆಂಬುದು ಆ ಮಗನಿಗೆ ತಿಳಿದಿದೆ. ಅದರಿಂದ ತಂದೆಯ ಬಗೆಗೆ ಅಭಿಮಾನವೂ ಹೃದಯದಲ್ಲಿ ಮೂಡಿದೆ. ಅದಕ್ಕಾಗಿ ಚಂದನದಾಸನು ಮಗನನ್ನು ತಬ್ಬಿಕೊಂಡು—“ಮಗು, ಸಾವು ಎಂದಿಗೂ ತಪ್ಪಿದ್ದಲ್ಲ; ಈಗ ನಾನು ಸಾಯುವುದು ಮಿತ್ರಕಾರ್ಯಕಾಗಿ” ಎಂದಾಗ ಮಗನೆನ್ನುತ್ತಾನೆ:—“ಅಪ್ಪಾ ಇವನ್ನು ನನಗೆ ಹೇಳಬೇಕೆ? ಇದು ನಮ್ಮ ಕುಲಧರ್ಮವಲ್ಲವೆ?” ಹೀಗೆಂದು ತಂದೆಗೆ ನಮಸ್ಕರಿಸುತ್ತಾನೆ.

ಈ ರೀತಿಯಾಗಿ ಸಂಸ್ಕೃತನಾಟಕಗಳಲ್ಲಿ ಮುಗ್ಧಮಕ್ಕಳ ಮುಕ್ತಮನಸ್ಸಿನ ಚಿತ್ರಣ ಒಳ್ಳೇ ಪ್ರಭಾವಿಯಾಗಿ ಮೂಡಿಬಂದಿದೆ.

● ●

ಹಿಂದಿ ಭಾಷೆಯಲ್ಲಿ ಶಿಶುಸಾಹಿತ್ಯ

ಎಸ್. ರಾಮಚಂದ್ರ

ಹಿಂದಿ ಸಾಹಿತ್ಯದ ಚರಿತ್ರೆಯಲ್ಲಿ ಸುಮಾರು ನೂರುವರ್ಷಗಳಿಂದ ಶಿಶುಸಾಹಿತ್ಯ ರಚನೆಯ ಬೆಳವಣಿಗೆಯ ಸಾಕ್ಷ್ಯಾಧಾರಗಳು ದೊರೆಯುತ್ತವೆ. ಇತರ ಪ್ರಾಂತೀಯ ಭಾಷೆಗಳಲ್ಲಿ ಹೇಗೋ ಹಾಗೆ ಹಿಂದಿಯಲ್ಲಿಯೂ ಸಹ ಸಂಸ್ಕೃತದ 'ಪಂಚತಂತ್ರ', 'ಹಿತೋಪದೇಶ' ಹಾಗೂ ಪಾಳಿಭಾಷೆಯ 'ಜಾತಕ ಕತೆ'ಗಳಿಗೇ ಪ್ರಾಶಸ್ತ್ಯ ದೊರೆತಿತ್ತು. ಅಂತೆಯೇ ಜನ ಭಾಷೆಯಲ್ಲಿ ಚಾಲ್ತಿಯಿದ್ದ ಕತೆ ಕವನಗಳಿಂದಲೂ ಬಾಲಸಾಹಿತ್ಯ ರಚನೆಗೆ ಸ್ಫೂರ್ತಿ ಸಿಕ್ಕಿತು. ಇಪ್ಪತ್ತನೆಯ ಶತಮಾನದ ಆದಿಯಿಂದ ಈ ದಿಸೆಯಲ್ಲಿ ಸ್ವತಂತ್ರ ಶಿಶು ಸಾಹಿತ್ಯರಚನೆಯ ಕೆಲಸವೂ ಶುರುವಾಯಿತು. ವಿದೇಶಿ ಸಾಹಿತ್ಯ ಸಂಪರ್ಕದಿಂದಾಗಿ—ಮುಖ್ಯವಾಗಿ ಆಂಗ್ಲ ಭಾಷೆಯ ಸಾಹಿತ್ಯದ ಪ್ರಭಾವದಿಂದ—ಭಾರತೀಯ ಭಾಷೆಗಳಲ್ಲೂ ಬಾಲ ಸಾಹಿತ್ಯಕ್ಕೆ ಸಾಕಷ್ಟು ಮನ್ನಣೆ ಸಿಗುವಂತಾಯಿತು.

ಹಿಂದಿ ಸಾಹಿತ್ಯದಲ್ಲಿ ಮಹಾಕವಿ ಸೂರದಾಸರ 'ಸೂರಸಾಗರ'ದಲ್ಲಿ ಬಾಲ ಲೀಲೆಗೆ ಸಂಬಂಧಿಸಿದ ಹಲವಾರು ಗೀತೆಗಳಿವೆ ಬಾಲಕರ ಸ್ವಭಾವವನ್ನು ಸಹಜ ವಾಗಿ ಮೈಗೂಡಿಸಿ ಬ್ರಜ ಭಾಷೆಯಲ್ಲಿ ಅತ್ಯಂತ ಮನೋಜ್ಞವಾದ ಬಾಲಲೀಲೆಯನ್ನು ಬಣ್ಣಿಸುವುದರಲ್ಲಿ ಸೂರದಾಸರನ್ನು ಮೀರಿಸುವುದಿರಲಿ, ಅವರಿಗೆ ಸರಿಸಮಾನರಾದ ವರೂ ಬಲು ಕಡಿಮೆ. ಆದರೆ ಇದರಿಂದ ಸಾಹಿತ್ಯಪ್ರೇಮಿಗಳಿಗೆ ರಸೌತಣದೊರೆಯ ಬಹುದಾದರೂ ಮಕ್ಕಳ ಮನರಂಜನೆಗೆ ಇದು ಅನುಕೂಲವಾದೀತೆಂದು ಹೇಳಲಾ ಗುವುದಿಲ್ಲ. ಆದಾಗಿ ಈ ಬಾಲಲೀಲೆಯ ಪ್ರಸಂಗದಿಂದ ಹಿಂದಿಯಲ್ಲಿ ಬಾಲಸಾಹಿತ್ಯ ಆರಂಭವಾಯಿತೆಂದು ಹೇಳುವುದು ತಪ್ಪಾಗುವುದು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಮಕ್ಕಳಿಗಾಗಿ ಸ್ವತಂತ್ರ ಸಾಹಿತ್ಯ ರಚಿಸಬೇಕೆಂಬ ಒಲವು ಕಾಣಬಂದಿತು.

ಭಾರತೇಂದು ಹರಿಶ್ಚಂದ್ರರು ಇದರ ಮಹತ್ವವನ್ನರಿತು ೧೮೭೪ ರಿಂದ 'ಬಾಲಾ ಬೋಧಿನಿ' ಹೆಸರಿನ ಮಾಸಪತ್ರಿಕೆಯನ್ನು ಹೊರಡಿಸಿದರು. ಸ್ತ್ರೀ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡುವಂತೆ ಕರೆಕೊಡುವ ಈ ಪತ್ರಿಕೆಯಲ್ಲಿ ಬಾಲಸಾಹಿತ್ಯಕ್ಕೂ ವಿಶೇಷ ಪ್ರೋತ್ಸಾಹ ದೊರೆತಿರುವುದನ್ನು ನಾವು ನೋಡಬಹುದು. ಇವರಿಗೂ ಮೊದಲು ರಾಜಾ ಶಿವಪ್ರಸಾದ ಸಿತಾರೆ ಹಿಂದ್ ಎಂಬ ವಿದ್ವಾಂಸರು ಮಕ್ಕಳ ಮನರಂಜನೆಗಾಗಿ ಹಲವಾರು ಕತೆಗಳನ್ನು ತಿಳಿಯಾದ ಭಾಷೆಯಲ್ಲಿ ಬರೆದು ಮುಂದಿನವರಿಗೆ ಮೇಲ್ಪಂಕ್ತಿ ಹಾಕಿದ್ದರು. 'ಸೋಮಾರಿಗಳಿಗೆ ಚಾಟಿ' 'ಭೋಜರಾಜನಕತೆ,' 'ಬಾಲಬೋಧೆ' 'ಮಕ್ಕಳಿಗೆ ಬಹುಮಾನ,' ಮಕ್ಕಳ ಕತೆಗಳು' ಇದೇ ಇವರ ಪ್ರಮುಖ ರಚನೆಗಳು. ಭಾರತೇಂದು ಹರಿಶ್ಚಂದ್ರರು ಇವರ ಮೇಲ್ಪಂಕ್ತಿಯನ್ನನುಸರಿಸಿ ನಾಡಿನ ಮಕ್ಕಳ ಮಾನಸಿಕ-ಬೌದ್ಧಿಕ ಬೆಳವಣಿಗೆಯ ಅಗತ್ಯವನ್ನು ಒತ್ತಿಹೇಳಿ ಅವರಿಗಾಗಿ ಉತ್ತಮ ಸಾಹಿತ್ಯವನ್ನು ರಚಿಸಿ ಇತರರನ್ನು ಆ ಮಾದರಿಯ ಸಾಹಿತ್ಯ ರಚಿಸುವಂತೆ ಪ್ರೇರೇಪಿಸಿದರು. ೧೮೭೪ ರಲ್ಲಿ ಬೆಳಕುಕಂಡ 'ಬಾಲಾಭೋಧಿನೀ' ಮಾಸಪತ್ರಿಕೆಯಿಂದ ಹಿಂದಿಯಲ್ಲಿ ಬಾಲಸಾಹಿತ್ಯದ ಚರಿತ್ರೆ ಆರಂಭವಾಯಿತೆನ್ನ ಬಹುದು.

ಭಾರತೇಂದು ಹರಿಶ್ಚಂದ್ರರು 'ಸತ್ಯಹರಿಶ್ಚಂದ್ರ', 'ಅಂಧೇರ್‌ನಗರಿ' ಎಂಬ ತಮ್ಮ ನಾಟಕಗಳಲ್ಲಿ ಬಾಲಕರ ಮನರಂಜನೆ ಹಾಗೂ ಮಾನಸಿಕ ಬೆಳವಣಿಗೆಗೆ ಉಪಯುಕ್ತವಾದ ವಸ್ತು ಹಾಗೂ ಶೈಲಿಯನ್ನು ರೂಪಿಸಿದರು. ೧೮೭೪ ರಲ್ಲಿ ರಚಿತವಾದ 'ಸತ್ಯ ಹರಿಶ್ಚಂದ್ರ' ನಾಟಕವನ್ನು ಮಕ್ಕಳಿಗೆ ಓದಲು ಓದಿಸಲು ಅನುಕೂಲವಾಗಲೆಂದೇ ತಾವು ಬರೆದೆನೆಂದು ಅವರು ನಾಟಕದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಪುರಾಣ ಪ್ರಸಿದ್ಧವಾದ ಈ ಕತೆಯನ್ನು ಬಾಲೋಪಯೋಗಿ ಶೈಲಿಯಲ್ಲಿ ನಾಟಕ ರೂಪದಲ್ಲಿ ಅವರು ಹೆಣೆದಿದ್ದಾರೆ. ನಾಲ್ಕು ಅಂಕಗಳ ಈ ನಾಟಕವು ಸಮಯಸ್ಫೂರ್ತಿಯನ್ನು ಒಳಗೊಂಡಿದೆಯೆಂದು ಹೇಳಬಹುದು. ನಾರದನಿಂದ ಹರಿಶ್ಚಂದ್ರನ ಹೊಗಳಿಕೆಯನ್ನು ಕೇಳಿದ ವಿಶ್ವಾಮಿತ್ರನು ಮೊದಲನೆಯ ಅಂಕದಲ್ಲಿ ಹರಿಶ್ಚಂದ್ರನ ತೇಜೋವಧೆಯ ಸಂಕಲ್ಪಮಾಡುತ್ತಾನೆ. ಎರಡನೆಯ ಅಂಕದಲ್ಲಿ ಹರಿಶ್ಚಂದ್ರನ ರಾಣಿ ಶೈವ್ಯಾ ಕೆಟ್ಟ ಕನಸು ಕಾಣುತ್ತಾಳೆ. ಕೆಂಡವಾದ ವಿಶ್ವಾಮಿತ್ರನಿಗೆ ತನ್ನರಾಜ್ಯವನ್ನೆಲ್ಲಾ ಧಾರೆ ಎರೆದು ದಕ್ಷಿಣೆಗಾಗಿ ಒಂದು ತಿಂಗಳು ಕಾಲಾವಧಿಯನ್ನು ಕೇಳಿ ಮಡದಿ ಹಾಗೂ ಮಗನೊಂದಿಗೆ ಹರಿಶ್ಚಂದ್ರನು ಅರಮನೆಯಿಂದ ಹೊರಬೀಳುತ್ತಾನೆ. ಮೂರನೆಯ ಅಂಕದಲ್ಲಿ ಹರಿಶ್ಚಂದ್ರನು ಚಾಂಡಾಲನಿಗೆ ತನ್ನನ್ನೇ ಮಾರಿಕೊಂಡು ದಕ್ಷಿಣೆಯ ಹಣವನ್ನು ಮುಟ್ಟಿಸಿ ಸ್ಮಶಾನದಲ್ಲಿ ದಾಹ ಕ್ರಿಯೆಯ ಹಾಸಲು ವಸೂಲಮಾಡತೊಡಗುತ್ತಾನೆ. ನಾಲ್ಕನೆಯ ಅಂಕದಲ್ಲಿ ಹರಿಶ್ಚಂದ್ರನು ತನ್ನ ಪ್ರತಿಜ್ಞಾ ಪಾಲನೆಯಲ್ಲಿ ಯಶಸ್ವಿಯಾಗುತ್ತಾನೆ. ದೇವಾಧಿದೇವತೆಗಳು ಅವನನ್ನು ಆಶೀರ್ವದಿಸಿ ಸತ್ಯಧರ್ಮ

ಪಾಲಕನಾದ ಹರಿಶ್ಚಂದ್ರನಿಗೆ ಜಯಕೋರುತ್ತಾರೆ. ಕರುಣರಸಭರಿತವಾದ ಈ ನಾಟಕ ದಲ್ಲಿ ರೋಹಿತಾಶ್ವನಿಗೆ ಸಂಬಂಧಿಸಿದ ಸನ್ನಿವೇಶಗಳು ಬಾಲಕರ ಮನಸ್ಸನ್ನು ಸೂರೆ ಗೊಳ್ಳುವಂತಿವೆ.

'ಅಂಧೇರ್‌ನಗರಿ' (೧೮೮೧) ಅವರ ರಸವತ್ತಾದ ಪ್ರಹಸನವಾಗಿದೆ. ಇಲ್ಲಿ ಮಕ್ಕಳ ಮನರಂಜನೆಗೆ ಸಾಕಷ್ಟು ಪೋಷಕ ಸಾಮಗ್ರಿಯಿದೆ. ಆರು ಅಂಕಗಳನ್ನೊಳ ಗೊಂಡ ಈ ಪ್ರಹಸನದ ಪ್ರಸಿದ್ಧವಾಕ್ಯ—'ಅಂಧೇರ್ ನಗರಿ ಚೌಪಟ್‌ರಾಜ ಟಕೆ ಸೇರ್ ಭಾಜಿ ಟಕೆ ಸೇರ್ ಖಾಜಾ—ನಾಣ್ಣುಡಿಯಾಗಿದೆ; ನಾರಾಯಣದಾಸ ಮತ್ತು ಗೋವರ್ಧನದಾಸ ಹೆಸರಿನ ತನ್ನ ಶಿಷ್ಯರಿಗೆ ಭಿಕ್ಷೆ ಬೇಡುವಾಗ ದುರಾಸೆ ಪಡಬಾರ ದೆಂದು ಗುರುವು ಮೊದಲನೆಯ ಅಂಕದಲ್ಲಿ ಬೋಧಿಸುತ್ತಾನೆ. ವ್ಯಾಪಾರಿಗಳು ತಮ್ಮ ತಮ್ಮ ಸರಕುಗಳನ್ನು ಕೊಳ್ಳಲು ಜನರ ಮನಸ್ಸನ್ನು ಎರಡನೆಯ ಅಂಕದಲ್ಲಿ ಒಲಿಸಿ ಕೊಳ್ಳುತ್ತಾರೆ. ಅವರ ಚೀರಾಟದಲ್ಲಿ ಅಣಕು ತುಂಬಿದೆ. ಪ್ರತಿ ಸರಕೂ ಸೇರಿಗೆ ಒಂದು ರೂಪಾಯಿ ಮತ್ತು ನಗರಿಯ ಹೆಸರು ಅಂಧೇರ್‌ನಗರಿ ಹಾಗೂ ರಾಜನ ಹೆಸರು ಚೌಪಟ್‌ರಾಜ ಎಂದು ಕೇಳಿ ಭ್ರಾಂತನಾದ ಶಿಷ್ಯನು ಮಿಠಾಯಿಕೊಂಡು ಗುರುವಿನ ಬಳಿ ಬರುತ್ತಾನೆ. ತನ್ನ ಶಿಷ್ಯನಾದ ಗೋವರ್ಧನ ದಾಸನಿಂದ ಆ ಪಟ್ಟಣ ಹಾಗೂ ಅಲ್ಲಿನ ರಾಜನ ಸಂಗತಿಗಳನ್ನು ತಿಳಿದ ಗುರುವು ಮೂರನೆಯ ಅಂಕದಲ್ಲಿ ಅಲ್ಲಿಂದ ಬೇರೆಡೆಗೆ ಹೋಗುವುದು ಒಳಿತೆಂದು ಶಿಷ್ಯರಿಗೆ ಸೂಚಿಸುತ್ತಾನೆ. ನಾಲ್ಕನೆಯ ಅಂಕದಲ್ಲಿ ಮದಿರೋನ್ಮತ್ತನಾದ ರಾಜನು ಪಟ್ಟಣಿಗನೊಬ್ಬನ ಕುರಿಯ ಸಾವಿಗೆ ಕಾರಣರಾದವರನ್ನು ಬಿಟ್ಟು ನಗರದ ರಕ್ಷಣಾಧಿಕಾರಿಯ ಮೆರವಣಿಗೆಯಿಂದಲೇ ಕುರಿ ಸತ್ತಿತೆಂದು ತೀರ್ಪಿತ್ತು ಆ ಅಧಿಕಾರಿಗೇ ಮರಣದಂಡನೆ ವಿಧಿಸುತ್ತಾನೆ. ಆದರೆ ಉರುಳು ಹಾಕಲು ಆ ಅಧಿಕಾರಿಯ ಕುತ್ತಿಗೆ ತೆಳುವಾದುದರಿಂದ ರಾಜಭಟರು ದಪ್ಪ ಕತ್ತುಳ್ಳ ಗೋವರ್ಧನದಾಸನನ್ನು ಹಿಡಿದುತಂದು ಐದನೆಯ ಅಂಕದಲ್ಲಿ ಅವನನ್ನು ಮರಣದಂಡನೆಗೆ ಗುರಿಮಾಡಬಯಸುತ್ತಾರೆ. ಗೋವರ್ಧನದಾಸನಿಗೆ ಆಗ ತನ್ನ ಗುರುವಿನ ಮಾತು ನೆನಪಾಗುತ್ತದೆ. ಗೋವರ್ಧನದಾಸನನ್ನು ಗಲ್ಲಿಗೆ ಹಾಕಬೇಕೆ ನ್ನುವ ವೇಳೆಗೆ ಶಿಷ್ಯ ನಾರಾಯಣದಾಸನೊಂದಿಗೆ ಗುರುವು ಆರನೆಯ ಅಂಕದಲ್ಲಿ ಆ ವಧಸ್ಥಳಕ್ಕೆ ಬರುತ್ತಾನೆ. ಅದೇ ವೇಳೆಗೆ ಮಂತ್ರಿ, ರಕ್ಷಣಾಧಿಕಾರಿ ಇವರೊಡನೆ ರಾಜನೂ ಅಲ್ಲಿಬರುತ್ತಾನೆ. ಈ ಕ್ಷಣವೇ ಮರಣವನ್ನಪ್ಪುವವರಿಗೆ ವೈಕುಂಠ ಪ್ರಾಪ್ತಿಯ ಯೋಗ ವಿದೆಯೆಂದು ನುಡಿದ ಗುರುವಿನ ಮಾತನ್ನು ಕೇಳಿ ರಾಜ, ಮಂತ್ರಿ, ರಕ್ಷಣಾಧಿ ಕಾರಿ ಈ ಮೂವರಲ್ಲಿ ಸಾಯಲು ಪೈಪೋಟಿ ಶುರುವಾಗುತ್ತದೆ. ಆದರೆ ವೈಕುಂಠ ರಾಜನಿಗಲ್ಲದೆ ಇತರರಿಗೆ ಸಿಗೋಣವೆಂದರೇನು? ರಾಜನೇ ಗಲ್ಲಿಗೇರುತ್ತಾನೆ. ಮೂರ್ಖ ರಾಜನ ಬಾಳು ಕೊನೆಗೊಳ್ಳುತ್ತದೆ. ವಿವೇಕ-ಅವಿವೇಕದ ತಾರತಮ್ಯವಿಲ್ಲದ ರಾಜ್ಯ ದಲ್ಲಿ ಪ್ರಜೆಗಳು ಎಂದೂ ಸುಖಿಯಾಗಿರಲಾರರೆಂಬುದೇ ಈ ಪ್ರಹಸನದ ಸಂದೇಶ

ವಾಗಿದೆ. ಅತ್ಯಂತ ವಿನೋದಪೂರ್ಣವಾದ ಈ ಪ್ರಹಸನವು ಮಕ್ಕಳಿಗೆ ರಂಜನಕಾರಿಯಾಗಿದೆ.

ಭಾರತೇಂದು ಹರಿಶ್ಚಂದ್ರರ ಹಾದಿಯಲ್ಲಿಯೇ ಬಾಲಸಾಹಿತ್ಯ ರಚಿಸಿದವರಲ್ಲಿ ಬದರಿನಾರಾಯಣ ಚೌಧರಿ ಪ್ರೇಮಘನ, ಪ್ರತಾಪನಾರಾಯಣ ಮಿಶ್ರ, ಲಾಲಾ ಶ್ರೀನಿವಾಸದಾಸ, ಬಾಲಕೃಷ್ಣಭಟ್ಟ, ರಾಧಾಕೃಷ್ಣದಾಸ, ಕಾಶಿನಾಥಖತ್ರಿ, ಫ್ರೆಡರಿಕ್ ಪಿಂಕಾಟ್ ಮುಂತಾದವರು ಪ್ರಮುಖರು. ಲಾಲಾಶ್ರೀನಿವಾಸದಾಸರ 'ಪ್ರಲ್ಹಾದ ಚರಿತ್ರೆ', ರಾಧಾಕೃಷ್ಣದಾಸರ 'ಮಹಾರಾಣಾ ಪ್ರತಾಪ', ಕಾಶಿನಾಥ ಖತ್ರಿ ಇವರ 'ಮೂರು ಚಾರಿತ್ರಿಕ ರೂಪಕಗಳು,' ಫ್ರೆಡರಿಕ್ ಪಿಂಕಾಟ್ ಇವರ 'ಲಾಲದೀಪ' ಇವು ವಿಶೇಷ ಜನಪ್ರಿಯವಾದವು.

ಇಪ್ಪತ್ತನೆಯ ಶತಮಾನದ ಆದಿಭಾಗದಿಂದ ಸುಮಾರು ಮೂವತ್ತು ವರ್ಷಗಳ ವರೆಗೆ ಬಾಲಸಾಹಿತ್ಯ ರಚನೆಗೆ ಭದ್ರಬುನಾದಿ ಹಾಕಿದವರೆಂದರೆ ಆಚಾರ್ಯ ಮಹಾವೀರ ಪ್ರಸಾದ ದ್ವಿವೇದಿಯವರು. ಇವರು ೧೯೦೩ರಲ್ಲಿ ಅಲಹಾಬಾದಿನಿಂದ ಪ್ರಕಟವಾದ 'ಸರಸ್ವತಿ' ಮಾಸಪತ್ರಿಕೆಯ ಸಂಪಾದಕರಾದರು. 'ಸರಸ್ವತಿ' ಆ ಕಾಲದಲ್ಲಿ ಹೆಸರಾಂತ ಸಾಹಿತ್ಯ ಪತ್ರಿಕೆಯಾಗಿತ್ತು. ಆಗ ಲಕ್ನೋದಿಂದ 'ಬಾಲಹಿತಕರ' ಮಾಸಪತ್ರಿಕೆ ಹೊರಟಿತು. ೧೯೦೬ ರಲ್ಲಿ ಅಲಿಘರ್‌ನಿಂದ 'ಛಾತ್ರಹಿತೈಷಿ' ಪ್ರಕಟವಾಯಿತು. ಕಾಶಿಯಿಂದ 'ಬಾಲಪ್ರಭಾಕರ' ಆರಂಭವಾಯಿತು. ೧೯೧೨ ರಲ್ಲಿ ನರಸಿಂಹಪುರದಿಂದ 'ಮಾನಿಟರ್' ಪತ್ರಿಕೆಯು ಬಿಡುಗಡೆಯಾಯಿತು. ೧೯೧೪ ರಲ್ಲಿ 'ವಿದ್ಯಾರ್ಥಿ' ಅತ್ಯಂತ ಲೋಕಪ್ರಿಯ ಬಾಲ ಮಾಸಪತ್ರಿಕೆ ಶುರುವಾಯಿತು. ಇದೇ ಇಸ್ವಿಯಲ್ಲಿ ಮಾಳವದೇಶದ ಆಗರ ಎಂಬ ಊರಿನಿಂದ 'ಬಾಲಮನೋರಂಜನ' ಪತ್ರಿಕೆ ಹೊರಟಿತು. ೧೯೧೫ರಲ್ಲಿ ಪ್ರಯಾಗದಿಂದ 'ಶಿಶು' ಪತ್ರಿಕೆ ಪ್ರಕಟವಾಯಿತು. ೧೯೧೬ರಲ್ಲಿ ಪಟ್ನಾದಿಂದ 'ಬಾಲಕ' ಮಾಸಪತ್ರಿಕೆ ಶುರುವಾಯಿತು. ೧೯೧೭ರಲ್ಲಿ ಆರಂಭವಾದ 'ಬಾಲಸಖಾ' ಮಾಸಪತ್ರಿಕೆ ಈಗಲೂ ಉಳಿದು ಬೆಳೆದು ಬಂದಿದೆ. ಈ ವೇಳೆಗೆ ವೈಜ್ಞಾನಿಕ ರೀತಿಯಲ್ಲಿ ಬಾಲಸಾಹಿತ್ಯರಚನೆ ಯತ್ನ ಭಾಷೆ ಹಾಗೂ ಸಾಹಿತ್ಯ ಪ್ರೇಮಿಗಳ ಗಮನ ಹಿಡಿದಿತ್ತು. ಪಂಡಿತ ಮಹಾವೀರ ಪ್ರಸಾದ ದ್ವಿವೇದಿಯವರು ಹಿಂದಿ ಭಾಷೆಗೆ ಮೆರಗು ಕೊಟ್ಟಂತೆಯೇ ಹಿಂದಿ ಬಾಲಸಾಹಿತ್ಯದ ಬೆಳವಣಿಗೆಗೂ ಕಾರಣಪುರುಷರಾದರು.

ಮಕ್ಕಳ ಸಾಹಿತ್ಯ ರಚಿಸಿದವರಲ್ಲಿ ೧೯೦೧ ರಿಂದ ೧೯೩೦ ರ ಅವಧಿಯಲ್ಲಿ ಪಂಡಿತ ವಿನಾಯಕರಾವ್, 'ಕವಿನಾಯಕ,' ಸುಖರಾಮ ಚೌಬೆ 'ಗುಣಾಕರ', ಕಾಮತಾ ಪ್ರಸಾದ 'ಗುರು', ಲಜ್ಜಾಶಂಕರ ಝಾ, ಮೈಥಿಲೀಶರಣಗುಪ್ತ, ಮಾಖನಲಾಲ ಚತುರ್ವೇದಿ, ಡಾ. ಮಹೇಂದ್ರನಾಥಗರ್ಗ, ಚಂದ್ರಮೌಳಿ ಶುಕ್ಲ, ರಾಮದಾಸ

ಗೌಡ, ರಾಮನರೇಶ ತ್ರಿಪಾಠಿ, ಛವಿನಾಥ ಪಾಂಡೆ ಮೊದಲಾದವರು ಪ್ರಮುಖ ರೆನಿಸಿಕೊಂಡಿದ್ದಾರೆ. ಈ ಮಹನೀಯರು ತಮ್ಮ ತಮ್ಮ ಕೃತಿಗಳಲ್ಲಿ ಮಕ್ಕಳಿಗೆ ಮನರಂಜನೆ, ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯ ತಿಳಿವಳಿಕೆ. ಜ್ಞಾನ ಸಂವರ್ಧನೆ ಮತ್ತು ಸಾಹಿತ್ಯಪರಿಚಯ, ಪೌರಾಣಿಕ ಕತೆಗಳ ಮೂಲಕ ಧರ್ಮ ಹಾಗೂ ನೀತಿಬೋಧನೆ ಮುಂತಾದ ಕ್ಷೇತ್ರಗಳಲ್ಲಿ ಉಪಯುಕ್ತ ಸಾಮಗ್ರಿಯನ್ನು ಒದಗಿಸಿದ್ದಾರೆ. ವಿದೇಶಿ ಭಾಷೆಗಳಲ್ಲಿನ ಬಾಲ ಸಾಹಿತ್ಯದಿಂದ ಪ್ರೇರಿತರಾಗಿ ಈ ಲೇಖಕರು ಆಯಾ ಸಾಹಿತ್ಯದ ರಚನಾ ತಂತ್ರವನ್ನು ಮೈಗೂಡಿಸಿಕೊಂಡು ಬಾಲೋಪಯೋಗಿ ಸಾಹಿತ್ಯ ನಿರ್ಮಿಸಲು ಮುಂದಾಗಿದ್ದಾರೆ.

ಪಂಡಿತ ಮಹಾವೀರ ಪ್ರಸಾದ ದ್ವಿವೇದಿಯವರು ಸರಳ ಭಾಷೆಯಲ್ಲಿ ಪುರಾಣದ ಕತೆಗಳನ್ನು ಬರೆದಿದ್ದಾರೆ. ಬಾಲ ಮುಕುಂದ ಗುಪ್ತರು ಕ್ರೀಡಾವಿನೋದ ಮತ್ತು ಆಟಗೆಗಳನ್ನು ಕುರಿತು ಸರಸ ಕವನಗಳನ್ನು ರಚಿಸಿದ್ದಾರೆ. ಮೈಥಿಲಿ ಶರಣಗುಪ್ತರು ಮಕ್ಕಳಿಗಾಗಿಯೇ ಹಲವಾರು ಕವನ ಸಂಕಲನಗಳನ್ನು ಬೆಳಕಿಗೆ ತಂದಿದ್ದಾರೆ. ಸರ್ಕಸ್ಸಿನ ವರ್ಣನೆಯ ಮೂಲಕ ಮಕ್ಕಳ ಮನಸ್ಸಿನಲ್ಲಿ ಸ್ವಾತಂತ್ರ್ಯಪ್ರೇಮವನ್ನು ಅಂಕುರಿಸಲು ಇವರು ಬಳಸಿರುವ ಈ ತಂತ್ರಕೌಶಲವನ್ನು ನೋಡಬಹುದು—

ಕುತೂಹಲದಿಂದ ಒಮ್ಮೆ ನಾನು ಸರ್ಕಸ್ಸಿಗೆ ಹೋದೆ
ಭಯ ವಿಸ್ಮಯ ಭರಿತ ಆಟ ವ್ಯಾಯಾಮ ನೋಡಿದೆ
ಮಂಗ ಬಂತೊಂದು; ಹಚ್ಚಿಸಿತು ದೀಪ
ಕುರ್ಚಿ ಮೇಲೆ ಕುಳಿತ ಕಪಿಗೆ ಮೈನಾ ಹೇಳಿತು :
'ಕುದುರೆ ಸಿದ್ಧವಾಗಿದೆ ಒಡೆಯ', ಕೇಳಿ ಇದ ಚಾಟಬೀಸಿತು
ಬಂದು ನಿಂತ ಮರಿಯ ಮೇಲೆ ಮಂಗನೇರಿತು
ಕುದುರೆ ಒಂದು ಬೇಲಿಹಾರಿ ಸುತ್ತು ಹಾಕಿತು.

ಕೊನೆಗೆ ಒಬ್ಬ ಸಿಂಹವೊಂದ ಹಿಡಿದುತಂದನು
ಅದರ ನಡುವೆ ನಡೆದ ಜಗಳ ಮೋಜು ಎನಿಸಿತು.
ವೀರನಂಜುವನೇ—ಸಿಂಹವದಸಿಗೆ ಅಧೀನ
ಗೆಳೆಯ ನುಡಿದನಾಗ—ನೀನು ಭೋಳನಿದೀಯ
ಸಿಂಹ ಶಿಶುವಿದೀಗ ನರಿಯಂತಾಗಿದೆ ತಮ್ಮ
ಬಂಧನದಿ ಸಿಲುಕಿದೀಗ ಸ್ವತಂತ್ರವಿಲ್ಲ ತಮ್ಮ
ಎಳೆಮರಿಯ ಹಿಡಿದು ಬಡಿದು ಕಲಿಸಿದಾರೆ
ತನ್ನ ಮರೆತು ಇರುವ ಅವನ ಕಂಡು ಜನ ಬೆರಗಾಗಿದಾರೆ.

ಪರತಂತ್ರದಲ್ಲಿದ್ದ ಭಾರತದ ಸ್ಥಿತಿಯನ್ನು ಮಕ್ಕಳಮನಸ್ಸಿನ ಮೇಲೆ ಬಿಂಬಿಸುವ ಈ ಕೌಶಲ ಮೆಚ್ಚುವಂತಹದಾಗಿದೆ.

ಪಂಡಿತ ಅಯೋಧ್ಯಾಸಿಂಹ ಉಪಾಧ್ಯಾಯ ಹರಿಔಧ ಇವರೂ ಮಕ್ಕಳಿಗೆ 'ಬಾಲವಿಭವ', 'ಬಾಲವಿಲಾಸ', 'ಫೂಲಪತ್ತೆ', 'ಪಥಪ್ರಸೂನ', 'ಖೇಲತಮಾಶಾ' ಮುಂತಾದ ಪ್ರಸಿದ್ಧ ಕವನಸಂಕಲನಗಳನ್ನು ಬರೆದಿದ್ದಾರೆ.

ಪಂಡಿತ ಕಾಮತಾಪ್ರಸಾದಗುರು ಇವರು 'ಬಾಲಸಖಾ' ಪತ್ರಿಕೆಯಲ್ಲಿ ಸರಳ ಹಾಗೂ ಸ್ವಾರಸ್ಯಕರವಾದ ಕವನಗಳನ್ನು ಬರೆದಿದ್ದಾರೆ. 'ಚಿಟ್ಠಿವಾಲಾ', 'ರೈಲುಗಾಡಿ', 'ತರುವರ', 'ಬಗೀಚಾ' ಇವರ ಪ್ರಸಿದ್ಧ ಕೃತಿಗಳಾಗಿವೆ.

ರಾಮಜಿಲಾಲ ಶರ್ಮರು 'ವಿದ್ಯಾರ್ಥಿ' 'ಖಿಲೌನಾ' ಮುಂತಾದ ಮಾಸ ಪತ್ರಿಕೆಗಳನ್ನು ಆರಂಭಿಸಿದರು. ಇವರ 'ಬಾಲರಾಮಾಯಣ' 'ಬಾಲ ಭಾಗವತ', 'ಬಾಲಚರಿತಮಾಲೆ' ಬಲು ಹೆಸರುವಾಸಿಯಾಗಿವೆ.

ಪಂಡಿತ ಸುಖರಾಮ ಚೌಬೆ ಗುಣಾಕರರವರು 'ಪಂಚತಂತ್ರ' 'ಹಿತೋಪದೇಶ' ಗಳ ಕತೆಗಳನ್ನು ಕವನರೂಪದಲ್ಲಿ ಅಂದವಾಗಿ ಬರೆದಿದ್ದಾರೆ.

ಪಂಡಿತ ರಾಮನರೇಶ ತ್ರಿಪಾಠಿಯವರು ೧೯೩೧ ರಲ್ಲಿ 'ವಾನರ' ಮಾಸಪತ್ರಿಕೆ ಯನ್ನು ಹೊರಡಿಸಿದರು. ಇವರ ಕತೆ ಮತ್ತು ಕವನಗಳು ಬಲು ಮುದ್ದಾಗಿವೆ.

ಬಾಲ ಸಾಹಿತಿಗಳಲ್ಲಿ ಡಾ. ವಿದ್ಯಾಭೂಷಣ ವಿಭು ಪ್ರಸಿದ್ಧರೆನಿಸಿಕೊಂಡಿದ್ದಾರೆ. ಇವರು 'ಶಿಶು' ಪತ್ರಿಕೆಯ ಸಂಪಾದಕರೂ ಇದ್ದರು. ಇವರ ಕವನಗಳನ್ನು ಮಕ್ಕಳು ಸುಲಭವಾಗಿ ಕಂಠಪಾಠ ಮಾಡುತ್ತಾರೆ.

ಮಕ್ಕಳ ಸ್ವಭಾವ ಹಾಗೂ ಅವರ ಬೇಡಿಕೆಯನ್ನು ಅರಿತ ನುರಿತ ಸಾಹಿತಿ ಗಿರಿಜಾದತ್ತ ಶುಕ್ಲ ಗಿರೀಶರು. ಇವರ ಕವನಗಳಲ್ಲಿ ರಾಷ್ಟ್ರಪ್ರೇಮ, ದೇಶ ಭಕ್ತಿ ಬಲು ಚೆನ್ನಾಗಿ ಹೊರಹೊಮ್ಮಿದೆ. ಠಾಕುರ ಶ್ರೀನಾಥಸಿಂಹರೂ ಈ ದಿಸೆಯಲ್ಲಿ ಮಹೋನ್ನತ ಸೇವೆ ಸಲ್ಲಿಸಿದ್ದಾರೆ. 'ಬಾಲಸಖಾ' ಪತ್ರಿಕೆಯಲ್ಲಿ ಪ್ರಕಟವಾದ ಇವರ 'ಶಿಶುಗೀತ' ಗಳು ಬಲು ಪ್ರಸಿದ್ಧವಾಗಿವೆ. 'ಕಲಿಯಿರಿ' ಶೀರ್ಷಿಕೆಯ ಇವರ ಕವನ ಮಕ್ಕಳ ಅಭಿರುಚಿಗೆ ತಕ್ಕ ನೀತಿಬೋಧೆಯ ಉತ್ತಮ ಉದಾಹರಣೆಯಾಗಿದೆ ಎನ್ನಬಹುದು.

ಹೂವಿನಂತೆ ನಗಬೇಕು ದುಂಬಿಯಂತೆ ಹಾಡಬೇಕು
ಫಲಭರಿತ ಕೊಂಬೆಗಳಂತೆ ತಲೆಬಾಗಬೇಕು
ಪವನದಂತೆ ಕೋಮಲ ಭಾವನೆಯ ಹರಡಬೇಕು
ಹಾಲು ನೀರುಗಳಂತೆ ಕಲೆತು ಕಲೆಸಬೇಕು
ಸೂರ್ಯಕಿರಣಗಳಂತೆ ಏಳಬೇಕು ಎಚ್ಚರಗೊಳಿಸಬೇಕು
ಬಳ್ಳಿ ಮತ್ತು ತರುಗಳಂತೆ ಪ್ರೀತಿಸಬೇಕು.

ಮಳೆಯ ಹನಿಗಳಂತೆ ಜನಮನ ತಣಿಸಬೇಕು
ಮದರಂಗಿಯಂತೆ ಅರೆಯಿಸಿ ಇತರ ಸಿಂಗರಿಸಬೇಕು
ದೀಪದಂತೆ ಕತ್ತಲನು ದೂರಮಾಡಬೇಕು
ಭೂಮಿಯಂತೆ ಪ್ರಾಣಿಗಳ ಸೇವೆಮಾಡಬೇಕು
ಹರಿವ ನೀರಿನಂತೆ ಬಾಳಪಥದಿ ಸಾಗಬೇಕು
ಹೊಗೆಯಂತೆ ಸದಾ ಮೇಲೆ ಏರಬೇಕು
ಸತ್ಪುರುಷರ ಬಾಳಿನಂತೆ ನಡೆಯಬೇಕು
ಗುರುಗಳಂತೆ ಒಳ್ಳೆ ವಿದ್ಯೆ ಕಲಿಯಬೇಕು.

ಪಂಡಿತ ಸುದರ್ಶನಾಚಾರ್ಯರು ಅನೇಕ ಉತ್ತಮ ರಚನೆಗಳನ್ನು ಬರೆದಿದ್ದಾರೆ. 'ಶಿಶು' ಮಾಸಪತ್ರಿಕೆಯ ಸಂಪಾದಕರಾಗಿ ಇವರು ಹಿಂದಿ ಬಾಲ ಸಾಹಿತ್ಯಕ್ಕೆ ಅಮೋಘ ಸೇವೆ ಸಲ್ಲಿಸಿದ್ದಾರೆ. ಇವರ ಕತೆಗಳು ಮಕ್ಕಳಿಗೆ ಬಲು ಮೆಚ್ಚಾಗಿವೆ.

ಸುಪ್ರಸಿದ್ಧ ಕತೆಗಾರರಾದ ಸುದರ್ಶನರ ಹಲವಾರು ಕತೆಗಳು 'ಬಾಲಸಖಾ' ಪತ್ರಿಕೆಯಲ್ಲಿ ಅಚ್ಚಾಗಿವೆ.

ಶ್ರೀ ಗೋಪಾಲಶರಣಸಿಂಹರ ಕವನಗಳಲ್ಲಿ ರಾಷ್ಟ್ರಪ್ರೇಮ ಮತ್ತು ಭಾರತೀಯ ಸಂಸ್ಕೃತಿಯ ಹಿರಿಮೆಯ ವರ್ಣನೆಯಿದೆ. ಇವರ ಕವನಗಳು ಅತ್ಯಂತ ಜನಪ್ರಿಯತೆ ಗಳಿಸಿವೆ.

ಶ್ರೀ ದೇವಿದತ್ತ ಶುಕ್ಲರು ಶ್ರೇಷ್ಠ ಬಾಲಸಾಹಿತ್ಯ ರಚನಾಕಾರರೆನಿಸಿಕೊಂಡಿದ್ದಾರೆ. ಬಾಲ ಮನೋವಿಜ್ಞಾನವನ್ನು ಸೂಕ್ಷ್ಮವಾಗಿ ತಿಳಿದಿರುವ ಶುಕ್ಲರು ಸರಳ ಶೈಲಿಯಲ್ಲಿ ಕವನಗಳನ್ನು ಬರೆದಿದ್ದಾರೆ. ಶ್ರೀ ಶಾಲಗ್ರಾಮ ವರ್ಮಾ ಇವರ ಕತೆಗಳು ಬಾಲಸಾಹಿತ್ಯಕ್ಕೆ ಉತ್ತಮ ಕೊಡುಗೆಯಾಗಿವೆ.

ಡಾ. ರಾಮಕುಮಾರ ವರ್ಮಾರವರು ಮಕ್ಕಳಿಗಾಗಿ ಕವನ ಹಾಗೂ ಕತೆಗಳನ್ನು ಬರೆದಿದ್ದಾರೆ. ಶ್ರೀ ರಘುನಂದನ ಪ್ರಸಾದ ತ್ರಿಪಾಠಿಯವರ ಕವನಗಳು ವಿಶೇಷ ಜನಪ್ರಿಯವಾಗಿವೆ. ಶ್ರೀ ಶಂಭುದಯಾಳ ಸಕ್ಸೇನಾರವರು ಸಾಕಷ್ಟು ಬಾಲೋಪಯೋಗಿ ಸಾಹಿತ್ಯ ಬರೆದಿದ್ದಾರೆ. ಶ್ರೀ ಚಂದ್ರಮೌಳಿ ಶುಕ್ಲರ ಕತೆಗಳೂ ಹೆಸರುವಾಸಿಯಾಗಿವೆ.

೧೯೩೦ ರಿಂದ ೧೯೪೬ರ ಅವಧಿಯಲ್ಲಿ ಹಿಂದಿ ಬಾಲ ಸಾಹಿತ್ಯದ ಬೆಳವಣಿಗೆಗೆ ಹೆಚ್ಚು ಅವಕಾಶ ದೊರೆತಂತಾಯಿತು. ಸ್ವದೇಶಿ ಆಂದೋಳನ ಹಾಗೂ ಎರಡನೆಯ ಮಹಾಯುದ್ಧದ ಪರಿಣಾಮವಾಗಿ ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮ ರಭಸದಿಂದ ಸಾಗಿತ್ತು. ಇದರ ಕಾವು ಮಕ್ಕಳ ಸಾಹಿತ್ಯಕ್ಕೂ ತಟ್ಟಿತು.

ಪ್ರಸಿದ್ಧ ಕವಿ ಸೋಹನಲಾಲ ದ್ವಿವೇದಿಯವರು ತಮ್ಮ ಕವನಗಳಲ್ಲಿ ಸ್ವರಾಜ್ಯ ಆಂದೋಳನವನ್ನು ಹೃದಯಂಗಮವಾಗುವ ಭಾಷೆಯಲ್ಲಿ ಬಣ್ಣಿಸಿದರು. ಮಕ್ಕಳಲ್ಲಿ ಶೌರ್ಯ ಸಾಹಸವನ್ನು ಬೆಳೆಸುವ ಕೃತಿಗಳೂ ಕಾಣಬಂದವು. ಪ್ರಯಾಗದ ಇಂಡಿಯನ್ ಪ್ರೆಸ್ ಸಂಸ್ಥೆಯಿಂದ ಈ ತೆರನ ಹೊತ್ತಿಗೆಗಳು ಅಚ್ಚಾದವು. ದೇಶ ವಿದೇಶಗಳ ಪ್ರಮುಖ ನೇತಾರರ ಜೀವನ ಚರಿತ್ರೆಗಳು ಮಕ್ಕಳಿಗಾಗಿ ಬರೆಯಲ್ಪಟ್ಟವು. ವಿಜ್ಞಾನದ ಮುನ್ನಡೆಯನ್ನು ಗುರುತಿಸಲು ನೆರವಾಗುವ ಪುಸ್ತಕಗಳೂ ಪ್ರಕಟ ವಾದವು. 'ಶಿಶುಭಾರತಿ' ಮಾಲಿಕೆಯಲ್ಲಿ ಶ್ರೀ ಸೋಹನಲಾಲ ದ್ವಿವೇದಿಯವರ ಕವನ ಸಂಕಲನಗಳು ಹೊರಬಿದ್ದವು. ೧೯೪೦ರಲ್ಲಿ ಜಬ್ಬಲಪುರದ ಶ್ರೀ ನರ್ಮದಾ ಪ್ರಸಾದ ಮಿಶ್ರರು 'ಮಿತ್ರಬಂಧು ಕಾರ್ಯಾಲಯ'ದಿಂದ ಹಲವಾರು ಬಾಲೋಪ ಯೋಗಿ ಪುಸ್ತಕಗಳನ್ನು ಪ್ರಚುರಪಡಿಸಿದರು. ದೆಹಲಿಯ 'ಜೀವನ ಸಾಹಿತ್ಯ' ಪತ್ರಿಕೆಯಲ್ಲಿ ಈ ಪುಸ್ತಕಗಳ ಬಗ್ಗೆ ಹೀಗೆ ಬರೆಯಲಾಯಿತು—

'ಅಕ್ಷರ ಮತ್ತು ಮಾತ್ರಾ ಜ್ಞಾನವುಳ್ಳ ಪುಟಾಣಿಗಳಿಗೆ ಈ ಪುಸ್ತಕಗಳು ಅಂದ ಚೆಂದವಾಗಿವೆ. ಮಕ್ಕಳ ಅಭಿರುಚಿಗೆ ತಕ್ಕ ರಚನೆಗಳಿಗೆ ಇಲ್ಲಿ ಸ್ಥಾನ ದೊರೆ ಕಿದೆ. ಮಕ್ಕಳ ಸ್ವಭಾವವನ್ನರಿತ ಲೇಖಕರ ಈ ಸಾಧನೆ ಮೆಚ್ಚುವಂತಿದೆ. ಮಕ್ಕ ಳಿಗೆ ಒಪ್ಪುವ ಚಿತ್ರಗಳೂ ಇಲ್ಲಿ ಇವೆ. ಪ್ರಾಣಿಗಳಿಗಿಟ್ಟಿರುವ ಟೇಪೂ, ರಿಛೂ, ಗಜ್ಜೂ, ಲುಕ್ಕಿ, ಭಾಲು ಮುಂತಾದ ಹೆಸರುಗಳೂ ಮಕ್ಕಳಿಗೆ ಹಿಡಿಸುವಂತಹವೇ. ಪ್ರತಿ ಹೊತ್ತಿಗೆಯಲ್ಲಿ ಬೇರೆ ಬೇರೆ ಕತೆಗಳಿದ್ದರೂ ಎಲ್ಲವೂ ಒಂದೇ ಮಾಲೆಯಲ್ಲಿರು ವುದರಿಂದ ಒಂದಾದಮೇಲೊಂದು ಕತೆ ಓದಬೇಕೆನಿಸುತ್ತದೆ. ಬಣ್ಣ ಬಣ್ಣದ ಮುದ್ರಣ, ಅಂದ ಚೆಂದವಾದ ಚಿತ್ರಗಳು, ಒಪ್ಪವಾದ ಆಕರ್ಷಕ ಹೊರಮೈಯುಳ್ಳ ಈ ಪುಸ್ತಕಗಳಿಂದ ಬಾಲಸಾಹಿತ್ಯವ ಬೆಳವಣಿಗೆಗೆ ಅನುಕೂಲವಾಗಿದೆ.'

ಇದೇ ಅವಧಿಯಲ್ಲಿ ವರ್ಧಾ ಕಾಮರ್ಸ್ ಕಾಲೇಜಿನ ಕೆಲವು ಉತ್ಸಾಹಿ ವಿದ್ಯಾ ರ್ಥಿಗಳು ಬಾಲಸಾಹಿತ್ಯದ ಏಳಿಗೆಗೆ ಪ್ರೋತ್ಸಾಹನೀಡಲು 'ಶಿಕ್ಷಾರ್ಥಿ ಸಾಹಿತ್ಯ ಪ್ರಕಾಶನ ಸಂಸ್ಥೆ'ಯನ್ನು ಸ್ಥಾಪಿಸಿದರು. ಮಕ್ಕಳೇ ಬರೆದ ಸಾಹಿತ್ಯವನ್ನು ಪ್ರಚುರ ಪಡೆಸುವುದು ಇದರ ಗುರಿಯಾಯಿತು.

ಬಾಲ ಸಾಹಿತ್ಯದ ಬೆಳವಣಿಗೆಯ ಬಗ್ಗೆ ಎಲ್ಲರಿಗೂ ಹೆಚ್ಚು ಮಾಹಿತಿ ನೀಡ ಲೋಸುಗ ಕಾನಪುರದ ಶ್ರೀ ಪರಿಪೂರ್ಣಾನಂದ ವರ್ಮಾರವರು ೧೧೧ ರೂ ಬಹುಮಾನ ವನ್ನು ಘೋಷಿಸಿ ಬಾಲೋಪಯೋಗಿ ೫೦೦ ಪುಸ್ತಕಗಳ ಪಟ್ಟಿಯನ್ನು ೧೫ ಜೂನ್ ೧೯೪೫ರ ಒಳಗೆ ಹಿಂದಿ ಸಾಹಿತ್ಯಸಮ್ಮೇಳನಕ್ಕೆ ಕಳಿಸಬೇಕೆಂದು ವಿಜ್ಞಾಪನೆಹೊರಡಿ ಸಿದರು. ಹಿಂದಿಯಲ್ಲಿ ಬಾಲಸಾಹಿತ್ಯ ಬೆಳೆದಿರುವ ರೀತಿ, ಅದರ ವಿಮರ್ಶೆ, ಇತರ ಭಾರತೀಯ ಭಾಷೆಗಳಲ್ಲಿನ ಬಾಲಸಾಹಿತ್ಯದೊಂದಿಗೆ ಹೋಲಿಕೆ ಮತ್ತು ಹಿಂದಿ ಬಾಲ

ಸಾಹಿತ್ಯ ರಚನೆಯ ಭವಿಷ್ಯ ಇದನ್ನು ಕುರಿತು ಉತ್ತಮ ಪ್ರಬಂಧ ಬರೆಯುವವರಿಗೆ ಕಾನಪುರದ ಮನೋಹರಲಾಲ ಜೈನರು ೧೦೦ ರೂ ಬಹುಮಾನ ನೀಡುವುದಾಗಿ ಸೂಚಿಸಿದರು. ಈ ರೀತಿ ೧೯೩೦ ರಿಂದ ೧೯೪೫ ರ ಅಂತರದಲ್ಲಿ ಬಾಲಸಾಹಿತ್ಯದ ಬೆಳವಣಿಗೆಗೆ ಎಲ್ಲ ವಿಧವಾದ ಉತ್ತೇಜನ ದೊರಕಿತು. ಅದರ ಸ್ವತಂತ್ರ ವಿಕಾಸವನ್ನು ಕಾಯ್ದುಕೊಳ್ಳಬೇಕೆಂಬುದು ಮನವರಿಕೆಯಾಯಿತು. 'ಖಿಲೌನಾ' ಮಾಸಪತ್ರಿಕೆ ಆರಂಭವಾಯಿತು. ೧೯೩೩ ರಲ್ಲಿ 'ಬಾಲವಿನೋದ' ಪತ್ರಿಕೆ ಶುರುವಾಯಿತು. ಕಾಲಾಕಾಂಕರ ನರೇಶ ಕುಂವರ ಸುರೇಶಸಿಂಹರು 'ಕುಮಾರ' ಪತ್ರಿಕೆ ಹೊರಡಿಸಿದರು. ಪ್ರಯಾಗದ ಕಲಾಪ್ರೆಸ್ ವತಿಯಿಂದ 'ಚಪರ್ ಚಮ್' ಪತ್ರಿಕೆ ಹೊರಟಿತು. ಈ ಎಲ್ಲ ಪತ್ರಿಕೆಗಳಲ್ಲಿ ಹಿರಿಯಕಿರಿಯ ಸಾಹಿತಿಗಳು ಮಕ್ಕಳ ಅಭಿರುಚಿಗೆ ಒಪ್ಪುವ ಕವನ ಕತೆಗಳನ್ನು ಬರೆಯಲಾರಂಭಿಸಿದರು. ನಾಡಿನ ಬಂಧವಿಮೋಚನೆಗಾಗಿ ಮಕ್ಕಳನ್ನು ಹುರಿದುಂಬಿಸಲಾಯಿತು—

ಯುಗ ಬದಲಿಸಿದೆ ಸಿದ್ಧನಾಗು
ಪರದೆ ಸರಿಸಿ ಬಾಳ ಬೆಳಗು
ನಾಡಸೇವೆ ಮಾಡಿ ತಾಯಿ ಬೇನೆ ಓಡಿಸು.
ದುಡಿಯಬೇಕು ನಾಡಿಗಾಗಿ
ಅಂಜಲಾಗದೆಂದಿಗೂ
ಸರಿಸಮಾನರಂತೆ ಆಡಿಮಾಡಿ ಜಗಕೆ ತೋರಿಸು.

'ಜಯ ಬೋಲೋ ಮಹಾತ್ಮಾಗಾಂಧಿಕಿ' ಇದು ಮಕ್ಕಳಿಗೆ ಮಂತ್ರ ಪಾಠವಾಯಿತು. ಶ್ರೀ ಸೋಹನಲಾಲ ದ್ವಿವೇದಿಯವರ ಕವನಗಳಲ್ಲಿ ಗಾಂಧಿತತ್ವ ಸಂದೇಶ. ಮೊಳಗಿತು ೧೯೪೩ರ ಫೆಬ್ರುವರಿಯಲ್ಲಿ ಗಾಂಧಿಯವರು ೨೧ ದಿನ ಉಪವಾಸ ವ್ರತ ಕೈಕೊಂಡು ದೇಶದಲ್ಲಿ ವ್ಯಾಪಿಸಿದ್ದ ಹಿಂಸಾತ್ಮಕ ಕೃತ್ಯಗಳನ್ನು ಪ್ರತಿಭಟಿಸಿದ್ದರು. ಮಕ್ಕಳಿಗೆ ಆಗ ಇದನ್ನು ಮನವರಿಕೆ ಮಾಡುವ ಕವನಗಳಲ್ಲಿ ಸತ್ಯ ಅಹಿಂಸೆಯ ಹಿರಿಮೆಯನ್ನು ಕೊಂಡಾಡಲಾಗಿತ್ತು—

ಇಪ್ಪತ್ತೊಂದು ದಿನದ ಉಪವಾಸ ವ್ರತವ ಕೈಕೊಂಡನಾ ಧೀರ
ಜಗದೊಳಗೆ ಮಹಾತ್ಮನ ಪ್ರಾಣ ಉಳಿಯಲೆಂಬ ಉದ್ಗಾರ
ಸತ್ಯ ಅಹಿಂಸೆ ಸಂದೇಶ ಜಗದಿ ಬಿತ್ತರಿಸಿದಾತ
ರಣಜ್ವಾಲೆಯಿಂ ಜಗವು ಬೆಂದಿರುವ ಈ ನೋಟ
ಬುದ್ಧ ಏಸುವಿನ ತಪ ಆಚರಿಸಿ ಜ್ಞಾನ ನೀಡಿದವನು
ಪರಶಿವನ ವಂದಿಪೆವು ಗಾಂಧಿಯ ಪ್ರಾಣ ಉಳಿಸಿದನವನು.

ಈ ಕಾಲದಲ್ಲಿ ಎರಡನೆಯ ಮಹಾಯುದ್ಧದಿಂದ ತಲೆದೋರಿದ ಭೀತಿ ಹಾಹಾಕಾರ ಜಗತ್ತಿನ ಮೂಲೆ ಮೂಲೆಗೂ ಹರಡಿತ್ತು. ಸೈನಿಕರು ಅಸುನೀಗುವುದಂತೂ ಸರಿ. ನಿರಪರಾಧಿ ನಾಗರಿಕರೂ, ಹೆಂಗಸರೂ, ಮಕ್ಕಳೂ ವೈರಿಯ ದಾಳಿಗೆ ತುತ್ತಾದರು. ಯುದ್ಧಲೋಲುಪ ರಾಷ್ಟ್ರಗಳಿಂದ ಹಸುಳೆಗಳಿಗೆ ಹೆಂಗಸರಿಗೆ ಆಗುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸಲು ಸಂಘಟಿತ ಕಾರ್ಯಕ್ರಮವನ್ನು ಕೈಕೊಳ್ಳಲಾಯಿತು. ಯುದ್ಧಕಾಲದಲ್ಲಿ ಹೊರದೇಶಗಳಲ್ಲಿ ಮಕ್ಕಳು ತೋರಿದ ಸ್ಥೈರ್ಯ ಸಾಹಸದಿಂದ ಕೂಡಿದ ಹಲವಾರು ನಿದರ್ಶನಗಳು ಭಾರತದ ಮಕ್ಕಳಿಗೂ ತಿಳಿದಂತಾಯಿತು. ಇಲ್ಲಿನ ಮಕ್ಕಳೂ ಅದೇ ರೀತಿ ಶೌರ್ಯಸಾಹಸವನ್ನು ತೋರಲು ಮುಂದಾದರು. ನಾಡಿನ ಚರಿತ್ರೆಯಿಂದ ಆಯ್ದ ಹಲವಾರು ಶೂರವೀರ ಮಹಾಪುರುಷರ ಆದರ್ಶವು ಅವರಿಗೂ ಅಚ್ಚುಮೆಚ್ಚಾದವು.

ಬಾಲ ಸಾಹಿತ್ಯದ ಬೆಳವಣಿಗೆಗಾಗಿ ಒಂದು ನಿಶ್ಚಿತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಇತರ ಭಾರತೀಯ ಭಾಷೆಗಳ ಬಾಲಸಾಹಿತ್ಯದೊಂದಿಗೆ ಹೋಲಿಸಿ ಹಿಂದಿ ಬಾಲಸಾಹಿತ್ಯದ ಕೊರತೆಗಳನ್ನು ನಿವಾರಿಸುವತ್ತ ದೃಷ್ಟಿಹಾಯಿಸಲಾಯಿತು. ೪ ವರ್ಷಗಳಿಂದ ೧೬ ವರ್ಷಗಳವರೆಗಿನ ಬಾಲಕ ಬಾಲಕಿಯರಿಗೆ ಒಪ್ಪುವಂತಹ ಹೊತ್ತಿಗೆಗಳನ್ನು ತರುವ ಅಗತ್ಯವನ್ನು ಒತ್ತಿ ಹೇಳಲಾಯಿತು. 'ಸ್ವತಂತ್ರ ಬಾಲಸಾಹಿತ್ಯ ಸಮ್ಮೇಳನ'ವನ್ನು ಏರ್ಪಡಿಸಿ ನಾಡಿನ ಮುಂದಿನ ಪೀಳಿಗೆಯವರಿಗೆ ತಕ್ಕಸಾಹಿತ್ಯವನ್ನು ರಚಿಸುವುದಕ್ಕಾಗಿ ಸಲಹೆ ಸೂಚನೆಗಳನ್ನೂ ಮಂಡಿಸಲಾಯಿತು. ಮಕ್ಕಳ ವಯಸ್ಸಿಗೆ ಅನುಗುಣವಾಗಿ ಪುಸ್ತಕಗಳ ಅಚ್ಚು, ಆಕೃತಿ, ಕತೆ, ಕವನ, ಪಾಟಿ, ಮತ್ತು ಪುಟ ಸಂಖ್ಯೆಗಳ ಬಗ್ಗೆ ಜಾಗರೂಕತೆ ವಹಿಸುವಂತೆ ಕರೆಕೊಡಲಾಯಿತು. ವಯಸ್ಸಿಗೆ ತಕ್ಕ ಭಾಷೆ ಹಾಗೂ ವಿಷಯದ ಮಟ್ಟವನ್ನು ಕಾಯ್ದುಕೊಳ್ಳುವಂತೆ ಸೂಚಿಸಲಾಯಿತು. ಅಭಿನಯಿಸಲು ಉಪಯುಕ್ತವಾದ ಕವನ, ಸಂಭಾಷಣೆ, ನಾಟಕ ಇವುಗಳನ್ನು ತಯಾರಿಸುವ ಅಗತ್ಯವನ್ನು ತಿಳಿಸಲಾಯಿತು. ಪ್ರಾಣಿಗಳ ಮತ್ತು ಅಪೌರುಷೇಯ ವಸ್ತು, ವ್ಯಕ್ತಿಗಳ ನಿರೂಪಣೆಯ ಔಚಿತ್ಯವನ್ನು ಚರ್ಚಿಸಲಾಯಿತು. ವಿಜ್ಞಾನದ ಮುನ್ನಡೆಯನ್ನು ಗಮನಿಸಿ ಮಕ್ಕಳಿಗೆ ರಚಿಸಬೇಕಾದ ಜ್ಞಾನ ಸಾಹಿತ್ಯದ ಸ್ವರೂಪವನ್ನು ವಿವರಿಸಲಾಯಿತು. ಮಕ್ಕಳಿಗೆ ಜ್ಞಾನಕೋಶವನ್ನು ರಚಿಸುವ ಅಗತ್ಯವನ್ನು ಒಪ್ಪಲಾಯಿತು. ದೇಶ ವಿದೇಶಗಳಲ್ಲಿ ಪ್ರಚುರವಾಗಿರುವ ಬಾಲಸಾಹಿತ್ಯವನ್ನು ಹಿಂದಿಯಲ್ಲಿ ಭಾಷಾಂತರ ಮಾಡುವ ಬಗ್ಗೆ ವಿಚಾರಮಾಡಲಾಯಿತು. ಮಕ್ಕಳ ಮಾಸಪತ್ರಿಕೆಗಳಲ್ಲಿ ಕಾಲಕಾಲಕ್ಕೆ ಆಗಬೇಕಾದ ಮಾರ್ಪಾಡುಗಳನ್ನು ತಿಳಿಸಲಾಯಿತು. ಈ ರೀತಿಯ ಚರ್ಚಾಕೂಟದಿಂದ ಮಕ್ಕಳ ಸಾಹಿತ್ಯ ಸೃಷ್ಟಿಗೆ ಒಂದು ನಿರ್ದಿಷ್ಟ ದಿಕ್ಸೂಚಿ ತೋರಿದಂತಾಯಿತು.

ಈ ಅವಧಿಯಲ್ಲಿ ಪಂಡಿತ ಲಲ್ಲೀಪ್ರಸಾದ ಪಾಂಡೆ, ಮಾಖನಲಾಲ ಚತುರ್ವೇದಿ, ಆರಸೀಪ್ರಸಾದಸಿಂಹ, ಸೋಹನಲಾಲ ದ್ವಿವೇದಿ, ಭಗವತಿ ಪ್ರಸಾದ ವಾಜಪೇಯಿ, ಸ್ವರ್ಣಸಹೋದರ, ಮೂಲಚಂದ ಶ್ರೀವಾತ್ರಿ, ರಾಮೇಶ್ವರ ಗುರುಕುಮಾರ ಹೃದಯ, ರಾಜೇಶ್ವರ ಗುರು, ಕೇಶವ ಪ್ರಸಾದ ಪಾಠಕ, ರಾಮಸಿಂಹಾಸನ ಸಹಾಯ ಮಧುರ, ರಮಾಪತಿ ಶುಕ್ಲ, ಡಾ. ಪೂರಣಚಂದ ಶ್ರೀವಾಸ್ತವ. ಜಹೂರ ಬಖ್ಶ, ಪಂಡಿತ ದೇವಿದಯಾಳ ಚತುರ್ವೇದಿ. ವಿದ್ಯಾಭಾಸ್ಕರ ಶುಕ್ಲ, ಬಾಬೂಲಾಲ ಭಾರ್ಗವ, ಸುಮಿತ್ರಾನಂದನ ಪಂತ, ಕುಂಜ ಬಿಹಾರಿಲಾಲ ಚೌಬೆ, ಲಜ್ಜಾಶಂಕರ ಝಾ ಮುಂತಾದವರು ಉತ್ತಮೋತ್ತಮ ಸಾಹಿತ್ಯವನ್ನು ರಚಿಸಿದ್ದಾರೆ.

ಮಕ್ಕಳಿಗೆ ಆನಂದೋಲ್ಲಾಸವನ್ನುಂಟು ಮಾಡುವ ಕೃತಿಗಳು ಲಲ್ಲೀಪ್ರಸಾದ ಪಾಂಡೆಯವರಿಂದ ಬೆಳಕುಕಂಡಿವೆ. 'ವಾನರ ಜೀ' ಕವನದ ಈ ಸಾಲುಗಳನ್ನು ಉದಾಹರಣೆಗಾಗಿ ನೋಡಬಹುದು—

ಕನ್ನಡಕವನೇರಿಸಿ ಗಾಂಧಿ ಟೋಪಿ ಹಾಕಿಕೊಂಡು
ಶಲ್ಯ ಸುತ್ತಿ ಕುತ್ತಿಗೆಗೆ ಮುಂದೆ ಚಾಚಿಕೊಡಲು
ಕುರ್ಚಿಮೇಲೆ ಕುಳಿತು ಲೇಖನ ಬರೆಯುತಿಹ ವಾನರ
ಕವನ ಸೊಬಗು ಕಲೆಯ ಬೆಡಗು ಮೋಜಿನದಾಗಿದೆ
ಪ್ರತಿ ತಿಂಗಳು ಪ್ರಾಸದ ನುಡಿ ವಿಚಾರಪೂರ್ಣ ಲೇಖನ
ಕವನ ಕತೆ ಒಗಟು ಗಾದೆ ತುಂಬಿದ ಪುಟಗಳು
ಬಣ್ಣ ಬಣ್ಣ ಚಿತ್ರಕಲೆ ನಗೆ ಬರಹದ ಚೆಲುವು
ಬಾಲಕರ ರಂಜನೆಗೆ ಸಿದ್ಧವಾಗಲಿದೆ ಪ್ರತಿಯು

ಹಿಂದಿ ಬಾಲಸಾಹಿತ್ಯಕ್ಕೆ ಇವರ ಕೊಡುಗೆ ಮಹತ್ತರವಾದುದು.

ಆರಸಿಪ್ರಸಾದ ಸಿಂಹರವರ 'ಚಂದಾ ಮಾಮಾ', 'ಚಿತ್ರಗಳಲ್ಲಿ ಶಿಶುಗೀತೆ' ಉತ್ತಮಕೃತಿಗಳಾಗಿವೆ. ಇವರ ನಿಸರ್ಗ ಕವನಗಳು ಬಾಲಮನೋಧರ್ಮಕ್ಕೆ ಹೊಂದುವಂತಿವೆ. ಸೋಹನಲಾಲ ದ್ವಿವೇದಿಯವರು 'ಕೊಳಲು' 'ಕಹಳೆ', 'ಮಕ್ಕಳ ಬಾಪೂ'; 'ನಗು ನಗಿಸು' ಮುಂತಾದ ಅಮೂಲ್ಯ ಕಥನ ಕವನಗಳ ಸಂಕಲನ ಬರೆದಿದ್ದಾರೆ. ಭಗವತಿ ಪ್ರಸಾದ ವಾಜಪೇಯಿಯವರ ಕತೆಗಳು ಶಿಕ್ಷಣೋಪಯೋಗಿಯಾಗಿದೆ. ಸಭಾಮೋಹನ ಅವಧಿಯಾ ಸ್ವರ್ಣಸಹೋದರ ಕಾವ್ಯ ನಾಮದಿಂದ ತಮ್ಮ ಅಪೂರ್ವಕಾಣಿಕೆ ನೀಡಿದ್ದಾರೆ. ಇವರ ಮಕ್ಕಳ ಗೀತೆಗಳು ಜನಪ್ರಿಯತೆಗಳಿಸಿವೆ. ಮೂಲಚಂದ ಶ್ರೀವಾತ್ರಿಯವರ ಗದ್ಯ ಪದ್ಯಗಳಲ್ಲಿ ರೈಲು, ನಾಯಿ, ಕೋಗಿಲೆ, ಮೋಟಾರು ಮುಂತಾದ ಮಕ್ಕಳಿಗೆ ಪ್ರಿಯವಾದ ವಸ್ತುಗಳ ಚಿತ್ರಗಳಿವೆ. ಕಾಮತಾಪ್ರಸಾದ ಗುರುಗಳ ಹಿರಿಯ ಮಗನಾದ ರಾಮೇಶ್ವರ ಗುರು

ಕುಮಾರ ಹೃದಯ ಇವರ ಕವನಗಳೂ ಸೊಗಸಾಗಿವೆ. ಸೋಹನಲಾಲ ದ್ವಿವೇದಿ, ಸಿರಂಕಾರ ದೇವ ಸೇವಕ, ಯೋಗೇಂದ್ರಕುಮಾರ ಲಿಲ್ಲಾ ಇವರಂತೆ ಕುಮಾರ ಹೃದಯ ಇವರೂ ರಸವತ್ತಾದ ಅಭಿನಯ ಗೀತೆಗಳನ್ನು ರಚಿಸಿದ್ದಾರೆ. ಕುಮಾರ ಹೃದಯ ಇವರ ತಮ್ಮಂದಿರಾದ ರಾಜೇಶ್ವರ ಗುರು ಅವರು ಸಹ ಹೃದ್ಯವಾದ ಗೀತೆಗಳನ್ನು ಬರೆದಿದ್ದಾರೆ. ಇವರ ಶಿಶುಗೀತೆಗಳ ಒಂದು ಉದಾಹರಣೆಯನ್ನು ಇಲ್ಲಿ ಕೊಡಲಾಗಿದೆ—

ಸೋದರತ್ತೆ ಬೆಕ್ಕು, ಸೋದರಮಾವ ಕಾಗೆ
ಫ್ರಾಕ್ ಲಂಗ ತೊಟ್ಟಳಾಕೆ ಪಾಜಾಮ ಏರಿಸಿದನವ
ಕಾ ಕಾ ಎಂದಿತು ಕಾಗೆ, ಮ್ಯಾಂವ್ ಎಂದಿತು ಬೆಕ್ಕು
ಕಾಗೆ ಹೋಯಿತು ಕಲಕತ್ತೆ, ಬೆಕ್ಕು ಸಾಗಿತು ದೆಹಲಿ
ಕಾಗೆ ತಿಂದಿತು ರಸಗುಲ್ಲಾ, ಬೆಕ್ಕು ತಿಂದಿತು ಹಲವಾ
ಸೋದರತ್ತೆ ಬೆಳ್ಳಗಿದ್ದರೆ ಸೋದರ ಮಾವ ಕರ್‍ರಗೆ.

ಪಂಡಿತ ಕೇಶವ ಪ್ರಸಾದ ಪಾಠಕರವರ ಕವನಗಳು ಮಕ್ಕಳಿಗೆ ವಿಚಾರ ಪ್ರಚೋದಕವಾಗಿವೆ. ರಾಮ ಸಿಂಹಾಸನ ಮಧುರ ಇವರ ಕವನಗಳು ಸಂಗೀತಾತ್ಮಕವಾಗಿವೆ. ಸಮೂಹಗಾಯನಕ್ಕೆ ಉಪಯುಕ್ತವಾಗಿವೆ. ಆಚಾರ್ಯ ರಾಮ ಲೋಚನ ಶರಣರು ಪಟನಾದಿಂದ ೧೯೨೬ ರಲ್ಲಿ 'ಬಾಲಕ' ಪತ್ರಿಕೆಯನ್ನು ಆರಂಭಿಸಿದರು. ಬಾಲಸಾಹಿತ್ಯಕ್ಕೆ ಇವರ ಅಪಾರ ಕೊಡುಗೆಯನ್ನು ಮನಗಂಡು ೧೯೪೨ ರಲ್ಲಿ ಇವರನ್ನು ಅಭಿನಂದಿಸಲಾಯಿತು. ಪಂಡಿತ ರಾಮದಹಿನ ಮಿಶ್ರರು ೧೯೧೭ ರಲ್ಲಿ ಪಟನಾದಲ್ಲಿನ 'ಗ್ರಂಥಮಾಲಾಕಾರ್ಯಾಲಯ'ದಿಂದ ಮಕ್ಕಳಿಗಾಗಿ ಹಲವಾರು ಹೊತ್ತಿಗೆಗಳನ್ನು ಪ್ರಕಟಿಸಿದರು. ೧೯೨೦ರಲ್ಲಿ ಇವರು 'ಕಿಶೋರ' ಮಾಸಪತ್ರಿಕೆಯನ್ನು ಶುರುಮಾಡಿದರು. 'ಮಹಾಭಾರತ ಸುನೀತಿಕತೆಗಳು' 'ಸಾಹಸ ಪ್ರತಿಮೆಗಳು' ಇವರ ಮಹತ್ವಪೂರ್ಣ ಪುಸ್ತಕಗಳಾಗಿವೆ. ರಮಾಪತಿ ಶುಕ್ಲರು ಮಕ್ಕಳಿಗಾಗಿ ಸುಲಲಿತ ಗೀತೆಗಳನ್ನು ಬರೆದಿದ್ದಾರೆ. ನಾಯಿ, ಬೆಕ್ಕು, ಇಲಿ, ಗಿಳಿ ಇವುಗಳನ್ನು ಕುರಿತ ಇವರ ಕವನಗಳು ಬಲು ಸೊಗಸಾಗಿವೆ. 'ನಾಯಿಮರಿ' ಕವನದ ಈ ಸಾಲುಗಳನ್ನು ನೋಡಬಹುದು—

ನಾಯಿಮರಿ ಎಷ್ಟು ಚಂದ
ಮೈ ಮೃದು ಸುಂದರ.
ಗಾದಿ ಮೇಲೆ ಇದ ಮಲಗಿಸಿ
ನೆಲದ ಮೇಲೆ ನಾ ಮಲಗುವೆ
ಚಳಿಯು ತಾಗದಂತೆ ಅದಕೆ
ನನ್ನ ಕೋಟು ತೊಡಿಸುವೆ.

ಪೂರಣಚಂದ ಶ್ರೀವಾಸ್ತವರ ಕತೆ ಹಾಗೂ ಕವನಗಳು ವಿಶೇಷ ಜನಪ್ರಿಯವಾಗಿವೆ. ಜಹೂರ ಬಖ್ಶ ಇವರ ಕತೆಗಳು ಮನರಂಜನೆ ಹಾಗೂ ನೀತಿ ಬೋಧೆಯನ್ನೊಳಗೊಂಡಿವೆ. ದೇವಿದಯಾಳ ಚತುರ್ವೇದಿಯವರು ಮನಮುಟ್ಟುವಂತಹ ಆಟ ಪಾಟಗಳ ಕತೆ ಕವನಗಳನ್ನು ಬರೆದಿದ್ದಾರೆ. ಪ್ರಸಿದ್ಧ ಕಾದಂಬರಿಕಾರರಾದ ಪ್ರೇಮಚಂದರೂ ಚೆಲುವಾದ ಕತೆಗಳನ್ನು ಬರೆದಿದ್ದಾರೆ. ವಿದ್ಯಾಭಾಸ್ಕರ ಶುಕ್ಲ ಇವರ ಕವನಗಳಲ್ಲಿ ಮಕ್ಕಳ ಕ್ರೀಡಾಭಿರುಚಿ, ನಗೆ; ಉಲ್ಲಾಸ ಇವು ತುಂಬಿವೆ. ಬಾಬೂಲಾಲ ಭಾರ್ಗವ ಮತ್ತು ಗೌರಿಶಂಕರಲಹರಿ ಇವರ ರಚನೆಗಳಲ್ಲಿ ಮಕ್ಕಳಿಗೆ ರಸೌತಣವಿದೆ. ಸುಮಿತ್ರಾನಂದನ ಪಂತ ಮತ್ತು ಕುಂಜ ಬಿಹಾರಿಲಾಲ ಚೌಬೆ ಇವರ ಕವನಗಳು ವಿಶೇಷ ಅರ್ಥಪೂರ್ಣವಾಗಿವೆ. ಲಜ್ಜಾಶಂಕರ ಝಾ ಇವರ ಕತೆಗಳು ಅತ್ಯಂತ ಪರಿಣಾಮಕಾರಿಯಾಗಿವೆ. ಈ ರೀತಿಯಾಗಿ ಈ ಅವಧಿಯಲ್ಲಿ ಮಕ್ಕಳ ಸಾಹಿತ್ಯದಲ್ಲಿ ಹೊಸ ಒಲವು ಮತ್ತು ವಸ್ತುವೈವಿಧ್ಯ ಕಾಣಬರುತ್ತದೆ.

೧೯೪೭ ರಿಂದ ೧೯೫೭ ರ ವರೆಗಿನ ಬಾಲಸಾಹಿತ್ಯದಲ್ಲಿ ಸಾಕಷ್ಟು ಮಾರ್ಪಾಡುಗಳಾದವು. ಈ ಯುಗದ ಬಾಳಿನಲ್ಲಿ ಅಂತರ್‍ರಾಷ್ಟ್ರೀಯ ಮೌಲ್ಯಗಳತ್ತ ವಿಚಾರ ನಂತರ ದೃಷ್ಟಿ ಹರಿಯಿತು. ಪಾಶ್ಚಾತ್ಯ ಶಿಶುಸಾಹಿತ್ಯದ ಸೊಂಪಾದ ಬೆಳವಣಿಗೆಯನ್ನು ಗುರುತಿಸಿದ ಸಾಹಿತಿಗಳು ದೇಶ ಭಾಷೆಗಳಲ್ಲಿಯೂ ಸಹ ಉತ್ಕೃಷ್ಟ ರಚನೆಗಳನ್ನು ತರಲು ಮುಂದಾದರು. ಕವನಗಳಲ್ಲಿ ನಿರಂಕಾರ ದೇವ ಸೇವಕ ಇವರ 'ರಿಮಝಿಮ', 'ಮುಸ್ಕಾನ ಗೀತೆಗಳು', ಮೋಹನಲಾಲ ಗುಪ್ತರ 'ಮಕ್ಕಳ ಸರ್ಕಾರ', ರಾಮವಚನಸಿಂಹರ 'ಅಂಗಲೂ ಮಂಗಲೂ' ಪ್ರಸಿದ್ಧಿ ಪಡೆದವು. ಪ್ರಯಾಗದ ಇಂಡಿಯನ್ ಪ್ರೆಸ್ ವತಿಯಿಂದ 'ಕಥಾಸರಿತ್ಸಾಗರ (ಮಕ್ಕಳ ಸಂಪುಟ), 'ಚಿನ್ನದ ಝರಿ', 'ಸೊಹ್ರಾಬ ರುಸ್ತುಮ', 'ಕಾರಂಜಿ', 'ಈಸಪನ ಕತೆಗಳು' ಪ್ರಕಟಿತವಾದವು. ಅಲಹಾಬಾದಿನ ಜ್ಞಾನಮಂದಿರ ವತಿಯಿಂದ ಮಕ್ಕಳಿಗಾಗಿ ಬೀರಬಲ್, ತೆನ್ನಾಲಿರಾಮ ಇವರ ಮನೋರಂಜಕ ಕತೆಗಳನ್ನೊಳಗೊಂಡ ಐದು ಪುಸ್ತಕಗಳು ಅಚ್ಚಾದವು. ಮಕ್ಕಳಿಗಾಗಿ ಹಲವು ಕಿರಿಯ ಕಾದಂಬರಿಗಳೂ ಪ್ರಕಟವಾದವು. ಕೇಂದ್ರ ಸರ್ಕಾರದವರು ೧೯೪೮ರಲ್ಲಿ 'ಬಾಲಭಾರತಿ' ಪತ್ರಿಕೆಯನ್ನು ಹೊರಡಿಸಿದರು. ಪಟ್ನಾದ ಅಜಂತಾ ಪ್ರೆಸ್‌ನವರು 'ಚುನ್ನೂಮುನ್ನೂ' ಪತ್ರಿಕೆಯನ್ನು ಆರಂಭಿಸಿದರು.

ಸ್ವಾತಂತ್ರ್ಯ ಗಳಿಸಿದ ನಂತರದ ಈ ಅವಧಿಯ ಬಾಲಸಾಹಿತ್ಯದಲ್ಲಿ ಮಹಾತ್ಮಾ ಗಾಂಧಿ, ಪಂಡಿತ ನೆಹರೂ, ಸರದಾರ ಪಟೆಲ, ರಾಜೇಂದ್ರ ಪ್ರಸಾದ ಹಾಗೂ ನಾಡಿನ ಹಿಂದಿನ ಮಹಾಪುರುಷರ ಆದರ್ಶಗಳನ್ನು ಚೊಕ್ಕ ಭಾಷೆಯಲ್ಲಿ ಬಣ್ಣಿಸಲಾಯಿತು. ಚಾಚಾನೆಹರು ಜನ್ಮದಿನವನ್ನು 'ಬಾಲದಿವಸ'ವಾಗಿ ಸಂಭ್ರಮದಿಂದ ಆಚರಿಸಲಾಯಿತು. ಜಬ್ಬಲಪುರದಲ್ಲಿ 'ಬಾಲಸಾಹಿತ್ಯ ಪ್ರಸಾರ ಸಮಿತಿ'ಯನ್ನು ಸ್ಥಾಪಿಸಿ

ಮಕ್ಕಳಿಂದ ಮಕ್ಕಳಿಗಾಗಿ ಸಾಹಿತ್ಯರಚನೆಗೆ ಉತ್ತೇಜನ ನೀಡುವ ಏರ್ಪಾಡಾಯಿತು. ಶಾಲೆಗಳಲ್ಲಿ ಕೈಬರಹದ ಪತ್ರಿಕೆಗಳನ್ನು ತರಲು ಪ್ರೋತ್ಸಾಹ ದೊರೆಯಿತು.

ಈ ಕಾಲದಲ್ಲಿ ನರ್ಮದಾ ಪ್ರಸಾದ ಖರೆ, ನಿರಂಕಾರದೇವ ಸೇವಕ, ರಾಮ ಕೃಷ್ಣಶರ್ಮಾ ಖದ್ದರ್‌ಜೀ, ವಿಶ್ವದೇವಶರ್ಮಾ, ಚಿರಂಜೀತ, ಇಕಬಾಲಬಹಾದುರ ದೇವಸರೆ ಮುಂತಾದವರು ಬಾಲಸಾಹಿತ್ಯಕ್ಕೆ ಉತ್ತಮ ಕಾಣಿಕೆ ನೀಡಿದ್ದಾರೆ. ನರ್ಮದಾಪ್ರಸಾದ ಖರೆ ಇವರ ಕೃತಿಗಳು ವಿಶೇಷ ಮನ್ನಣೆ ಪಡೆದಿವೆ. ಮಕ್ಕಳ ಮನಸ್ಸಿನ ಇಂಗಿತವನ್ನರಿತು ಅದನ್ನು ಕವನ ರೂಪದಲ್ಲಿ ತಿಳಿಯಾಗಿ ಹೇಳುವ ಇವರ ಕಲೆ ಅಸಾಧಾರಣವೆನಿಸಿದೆ. 'ಪಾತರಗಿತ್ತಿ' ಶೀರ್ಷಿಕೆಯ ಇವರ ಕವನದ ಈ ಸಾಲುಗಳನ್ನು ಇಲ್ಲಿ ಕೊಡಲಾಗಿದೆ—

ನಿನ್ನ ಬಣ್ಣದ ರೆಕ್ಕೆ ಎಲ್ಲರ ಮನ ಸೆಳೆದಿದೆ
ಮೊಗ್ಗು ನವಿರೇಳಿದೆ, ಹೂವು ನಲಿದಾಡಿದೆ
ನಿನ್ನ ಬಣ್ಣದ ರೆಕ್ಕೆ ಎಲ್ಲರ ಮನ ಸೆಳೆದಿದೆ.
ಅಚ್ಚುಮೆಚ್ಚಿನ ರಾಣಿ ಪಾತರಗಿತ್ತಿ ನೀನು
ಹತ್ತಿರ ಬರಲೊಲ್ಲೆ – ದೂರ ಸರಿಯುವೆ ನೀನು
ಹೂಗಳಿಗೆ ಪಿಸುಮಾತ ಏನು ಹೇಳುವಿ ನೀನು
ಚೆಲುವೆ ಪಾತರಗಿತ್ತಿ ಕಂಗೊಳಿಸುವಿ ನೀನು
ಕೈಗೆ ನಿಲುಕದಂತೆ ಹಾರುವಿಯದೇಕೆ ?
ಟೊಂಗೆಗಳ ಮೇಲೆ ಜಿಗಿದು ಸಾಗುವಿಯದೇಕೆ ?
ಎಲ್ಲ ಹೂಗಳ ರಸ ಉಂಡು ನಾಚುವುದೇಕೆ ?

ನಿರಂಕಾರ ದೇವಸೇವಕರು ಬಾಲಜಗತ್ತಿನ ಕೌತುಕವನ್ನು ತಮ್ಮ ಕವನಗಳಲ್ಲಿ ಅಂದವಾಗಿ ಬಣ್ಣಿಸಿದ್ದಾರೆ. ಶಿಶುಸಾಹಿತ್ಯದ ಸ್ವರೂಪದ ಬಗ್ಗೆ ವಿಮರ್ಶೆಯನ್ನು ಇವರೇ ಮೊದಲು ಬರೆಯಲಾರಂಭಿಸಿದರು. 'ಬಾಲಗೀತಸಾಹಿತ್ಯ'ವೆಂಬ ವಿಮರ್ಶಾತ್ಮಕ ಗ್ರಂಥದಲ್ಲಿ ಇವರು ಇಂಗ್ಲೀಷು, ಬಂಗಾಳಿ ಭಾಷೆಗಳ ಬಾಲಸಾಹಿತ್ಯದೊಂದಿಗೆ ಹಿಂದಿ ಬಾಲಸಾಹಿತ್ಯವನ್ನು ಹೋಲಿಸಿ ತೆಲುಗು, ಗುಜರಾತಿ ಭಾಷೆಗಳ ಬಾಲ ಸಾಹಿತ್ಯದ ಪರಿಚಯವನ್ನೂ ಮಾಡಿಕೊಟ್ಟಿದ್ದಾರೆ. ಮಕ್ಕಳೊಂದಿಗೆ ಮಕ್ಕಳಂತೆ ಬಾಳಿ ಅವರ ನೋವು ನಲಿವನ್ನು ಸಹಜವಾಗಿ ಚಿತ್ರಿಸುವ ಇವರ ಶಿಲ್ಪಸೌಂದರ್ಯ ಉತ್ತಮವಾಗಿದೆ. ರಾಮಕೃಷ್ಣ ಶರ್ಮಾ ಖದ್ದರ್‌ಜೀ ಇವರು ಮಕ್ಕಳಿಗಾಗಿ ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿ ಶಿಶು ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಇವರು ಯಾವಾಗಲೂ ಖಾದಿ ವಸ್ತ್ರ ಧರಿಸುತ್ತಿದ್ದುದರಿಂದ ಮಕ್ಕಳು ಇವರನ್ನು ಖದ್ದರ್‌ಜೀ ಎಂದೇ ಪ್ರೀತಿಯಿಂದ ಕರೆಯುತ್ತಾರೆ. ೧೯೫೬ರಲ್ಲಿ ಇವರು 'ನಮ್ಮ

ಮಕ್ಕಳು' ಮಾಸಪತ್ರಿಕೆಯನ್ನು ಆರಂಭಿಸಿದರು. ವಿಶ್ವದೇವಶರ್ಮಾ ಇವರೂ ಮಕ್ಕಳಿಗಾಗಿ ನಗೆಬರಹಗಳನ್ನು ಬರೆದಿದ್ದಾರೆ. ಚಿರಂಜೀತ ಇವರು ಮಕ್ಕಳ ಕಾರ್ಯಕ್ರಮವನ್ನು ಆಕಾಶವಾಣಿಯಿಂದ ಬಿತ್ತರಿಸುತ್ತಾರೆ. ಇವರ ಹಾಸ್ಯಗೀತೆಗಳು ಮಕ್ಕಳಿಗೆ ಹೆಚ್ಚು ಉಲ್ಲಾಸ ತಂದಿವೆ—

ಚಿನ್ನಿದಾಂಡು ಆಡೋಣ, ವಾಲಿಬಾಲು ಆಡೋಣ
ಸುತ್ತುವರಿದು ಹಿಡಿಯುವಂತಹ ಕಬಡ್ಡಿ ಆಡೋಣ
ಕೋಲುಕುದುರೆ ಆಡೋಣ, ಸರಸರ ಓಡೋಣ
ಕಾಲು ಗೆಜ್ಜೆ ಕಟ್ಟಿ ಥಕ ಥೈ ಥಕ ಥೈ ಕುಣಿಯೋಣ
ಮೈಕಟ್ಟು ಬೆಳೆಸುವ ಕುಸ್ತಿಸಾಮು ಮಾಡೋಣ
ಬನ್ನಿ ಆಟ ಆಡೋಣ.

ಪ್ರೇಮಚಂದರಿಂದ ಪ್ರೇರಿತರಾಗಿ ಮಕ್ಕಳಿಗೆ ಸೂಕ್ತವಾದ ಸಾಹಿತ್ಯ ಸಾಮಗ್ರಿ ತಯಾರಿಸಿದವರಲ್ಲಿ ಇಕಬಾಲ ಬಹಾದುರ ದೇವಸರೆ ಇವರ ಹೆಸರು ಅಮರವಾಗಿದೆ.

೧೯೫೭ ರಿಂದ ೧೯೬೭ ರ ವರೆಗಿನ ಶಿಶುಸಾಹಿತ್ಯ ರಚನೆಯನ್ನು ಗಮನಿಸಿದರೆ ಹಿಂದಿಯಲ್ಲಿ ಗುಣಗಾತ್ರದೃಷ್ಟಿಯಿಂದ ಈ ಕಾಲದಲ್ಲಿ ಬರೆಯಲಾದ ಸಾಹಿತ್ಯ ಹಿಂದೆಂದೂ ಕಾಣಸಿಗದಂತಹ ರೀತಿಯಾಗಿದೆ. ದೆಹಲಿಯಿಂದ ರಾಜಕಮಲ ಪ್ರಕಾಶನ, ರಾಜಪಾಲ ಎಂಡ್ ಸನ್ಸ್, ಆತ್ಮಾರಾಮ ಎಂಡ್ ಸನ್ಸ್, ನ್ಯಾಶನಲ್ ಪಬ್ಲಿಷಿಂಗ್ ಕಂಪನಿ, ಶಕುನ ಪ್ರಕಾಶನ, ಉಮೇಶ ಪ್ರಕಾಶನ, ಚಿಲ್ಡ್ರನ್ ಬುಕ್ ಟ್ರಸ್ಟ್; ಅಲಹಾಬಾದಿನಿಂದ ಮೋರಾ ಎಂಡ್ ಕಂಪನಿ, ಕಿತಾಬ ಮಹಲ; ವಾರಣಾಸಿಯಿಂದ ಹಿಂದಿ ಪ್ರಚಾರಕ ಪುಸ್ತಕಾಲಯ ಮುಂತಾದ ಸಂಸ್ಥೆಗಳು ಅಮೂಲ್ಯವಾದ ಬಾಲಸಾಹಿತ್ಯವನ್ನು ಬೆಳಕಿಗೆ ತಂದಿವೆ. ದೆಹಲಿಯ ಸಸ್ತಾ ಸಾಹಿತ್ಯ ಮಂಡಳದವರು 'ಸಾಮಾಜಿಕ ವಿಕಾಸಮಾಲಾ' ತಲೆಬರಹದಲ್ಲಿ ೧೫೦ಕ್ಕೂ ಮಿಕ್ಕು ಬಾಲೋಪಯೋಗಿ ಹೊತ್ತಿಗೆಗಳನ್ನು ಬೆಳಕಿಗೆ ತಂದಿದ್ದಾರೆ. ಕವನಗಳಲ್ಲಿ 'ಪ್ರತಿನಿಧಿ ಸಮೂಹ ಗೀತೆಗಳು', 'ಪ್ರತಿನಿಧಿ ಬಾಲಸಮೂಹ ಗೀತೆಗಳು' ಬಹಳ ಪ್ರಸಿದ್ಧಿ ಗಳಿಸಿವೆ. ಬೇರೆ ಬೇರೆ ಸನ್ನಿವೇಶಗಳಿಗೆ ಸಮೂಹ ಗಾಯನಕ್ಕೆ ಉಪಯುಕ್ತವಾದ ಗೀತೆಗಳನ್ನು ಮಕ್ಕಳು ಈ ಸಂಕಲನಗಳಿಂದ ಆರಿಸಿಕೊಳ್ಳಬಹುದಾಗಿದೆ. ಮಕ್ಕಳಿಗಾಗಿ ಸಚಿತ್ರ ಕತೆಗಳೂ ಸಾಕಷ್ಟು ಬರೆಯಲ್ಪಟ್ಟಿವೆ. ವಿಜ್ಞಾನದ ಮುನ್ನಡೆಯೊಂದಿಗೆ ಬಾಲಸಾಹಿತ್ಯದ ಬೆಳವಣಿಗೆಯೂ ಒಳ್ಳೆಯ ಚೌಕಟ್ಟಿನಲ್ಲಿ ಸಾಗಿದೆ. ಕೇಂದ್ರಸರ್ಕಾರದ ವತಿಯಿಂದ ವಿಷ್ಣುಪ್ರಭಾಕರ ಇವರ 'ಸರಳ ಪಂಚತಂತ್ರ' ಮಕ್ಕಳಿಗಾಗಿಯೇ ಅಚ್ಚಾಗಿದೆ. 'ಸರಳಹಿತೋಪದೇಶ' 'ಜಾತಕ ಕತೆಗಳು' ಸರ್ಕಾರಿ ಪ್ರಕಟನೆಯ ವಿಭಾಗದಿಂದ ಬೆಳಕುಕಂಡಿವೆ. ಕಿರುಕಾದಂಬರಿ ಮಕ್ಕಳಿಗಾಗಿ ಬರೆಯಲ್ಪಟ್ಟಿವೆ.

ನಾಟಕಗಳು ಮಾತ್ರ ಬಲು ಕಡಿಮೆ ಎನಿಸುತ್ತದೆ. ಹಲವಾರು ಹೊಸಮಾಸ ಪತ್ರಿಕೆಗಳಲ್ಲಿ 'ನಂದನ', 'ಪರಾಗ', 'ಮಿಲಿಂದ', 'ಬಾಲಜಗತ್ತು', 'ರಾಜಾ ಭೈಯಾ', 'ರಾಣಿ ಬಿಟಿಯಾ', 'ಶೇರ್ ಸಖಾ' ಇವು ಹೆಸರುವಾಸಿಯಾಗಿವೆ. ಮೊದಲು ಬಾರಿಗೆ ಹಿಂದಿಯಲ್ಲಿ 'ಬಚ್ಚೋಂಕಾ ಅಖಬಾರ್' ಹೆಸರಿನ ಒಂದು ವಾರ ಪತ್ರಿಕೆಯೂ ಆರಂಭವಾಗಿದೆ.

ಶಾಲೆಯಲ್ಲಿನ ಬೋಧನೆಯೇ ಮಕ್ಕಳ ಬುದ್ಧಿ ಬೆಳವಣಿಗೆಗೆ ಸಾಲದೆಂಬುದು ಈಚೆಗೆ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹೊರದೇಶಗಳಲ್ಲಿ ಮಕ್ಕಳ ಶಿಕ್ಷಣಕ್ಕೆ ಬಳಸಲಾಗುತ್ತಿರುವ ತಂತ್ರಗಳನ್ನೆಲ್ಲಾ ತಮ್ಮ ಅಗತ್ಯಕ್ಕೆ ತಕ್ಕಂತೆ ರೂಪಿಸಿಕೊಳ್ಳ ಬೇಕೆಂಬ ಒಲವು ಭಾರತಾದ್ಯಂತ ಕಾಣಬಂದಿದೆ. ಹಳೆಯ ಜಾಡಿನ ಕವನ ಕತೆ ಗಳ ಜಾಗದಲ್ಲಿ ವಿಜ್ಞಾನದ ಹೊಸದೃಷ್ಟಿಯನ್ನು ಅನುಸರಿಸಿ ಸಮಾಜದ ಆಗುಹೋಗು ಗಳನ್ನು ಮಕ್ಕಳಿಗೆ ತಿಳಿಯಹೇಳಬೇಕೆನ್ನುವ ಸಿದ್ಧಾಂತವನ್ನು ಮಾನ್ಯಮಾಡಲಾಗಿದೆ. ಮುಂಬರುವ ಜಗತ್ತಿನ ನಿರ್ಮಾಣಕ್ಕೆ ಬೇಕಾಗುವ ವಿಚಾರಶಕ್ತಿ, ಕಲ್ಪನಾಶಕ್ತಿ ಹಾಗೂ ಕ್ರಿಯಾಶಕ್ತಿಗೆ ಪೋಷಕವಾದ ಸಾಧನಗಳು ಮಕ್ಕಳಿಗೂ ಅನಿವಾರ್ಯವೆಂದು ನಂಬಲಾಗಿದೆ. ಮನರಂಜನೆಯೊಂದಿಗೆ ಮನೋವಿಕಾಸಕ್ಕೆ ನೆರವಾಗುವ ಮಾರ್ಗ ದರ್ಶನದ ಅಗತ್ಯವನ್ನು ಪೂರೈಸಲು ಯೋಜನೆ ಮಾಡಲಾಗುತ್ತಿದೆ.

'ಬಾಲಸಖಾ' ಸಂಪಾದಕರಾದ ಹಳೆಯ ತಲೆಮಾರಿನ ಹಿರಿಯ ಸಾಹಿತಿ ಶ್ರೀ ಲಲ್ಲೀ ಪ್ರಸಾದ ಪಾಂಡೆ ಇವರು ಈ ಬಗ್ಗೆ ಹೀಗೆ ಅಭಿಪ್ರಾಯ ವ್ಯಕ್ತಮಾಡಿ ದ್ದಾರೆ— 'ಈ ಪತ್ರಿಕೆಗಾಗಿ ಕವನ ಬರೆಯುವವರು ತಮ್ಮ ಕವನದ ಜಾಡನ್ನು ಬದಲಿಸಬೇಕು. ಇಂದು ಸೂರ್ಯೋದಯವಾಗಲಿ, ಹೂ ಅರಳುವುದಾಗಲಿ, ಕೋಗಿಲೆ ಹಾಡುವುದಾಗಲಿ ಸೋಜಿಗದ ಸಂಗತಿಯಾಗಿ ಉಳಿದಿಲ್ಲ. ಹಳೆಯಕಾಲದಿಂದಲೂ ಇದನ್ನೇ ಕವನದಲ್ಲಿ ಹೊಸೆದದ್ದು ಸಾಕು. ಜಗತ್ತಿನಲ್ಲಿ ಆಗುತ್ತಿರುವ ಹೊಸ ಹೊಸ ಬದಲಾವಣೆಗಳನ್ನು ಗುರುತಿಸಿ ಮುಂದಿನ ಪೀಳಿಗೆಯ ನಿರ್ಮಾಣಕ್ಕೆ ಅಗತ್ಯವಾದ ವಸ್ತುನಿಷ್ಠ ದೃಷ್ಟಿ ಇಂದಿನ ಕವಿಗಳಲ್ಲಿ ಮೂಡಬೇಕು.* ಇದು ಇಂದಿನ ಪ್ರಮುಖ ಬೇಡಿಕೆಯಾಗಿದೆ. ಕೇವಲ ನೀತಿಬೋಧೆ ಮತ್ತು ಶಿಕ್ಷಣ ಸಾಲದು. ಇಂದಿನ ಬಾಳಿನ ವಾಸ್ತವಾಂಶವನ್ನು ಅವರಿಂದ ಬಚ್ಚಿಡಲಾಗದು ಮಕ್ಕಳಿಗೆ ಇಂದು ಲೈಂಗಿಕ ಶಿಕ್ಷಣವೂ ಬಲು ಅಗತ್ಯವೆಂಬ ಕೂಗು ಪರದೇಶಗಳಲ್ಲಿ ಕೇಳಬರುತ್ತಿರುವುದು ಭಾರತೀಯರಿಗೂ ಆಶ್ಚರ್ಯವೆನಿಸುತ್ತಿಲ್ಲವೆನ್ನುವುದು ಎಲ್ಲರಿಗೂ ತಿಳಿದ ಸಂಗತಿ ಯಾಗಿದೆ.

---

* ಹಿಂದಿ ಬಾಲಸಾಹಿತ್ಯ-ಏಕ ಅಧ್ಯಯನ ಪು. ೨೦೭

ಈ ಕಾಲದಲ್ಲಿ ಶ್ರೀ ಶ್ರೀಪ್ರಸಾದ, ಅನಿಲಕುಮಾರ, ರಾಷ್ಟ್ರಬಂಧು, ದಿನಕರ, ಚಂದ್ರಪಾಲಸಿಂಹ ಯಾದವ, ರಾಮವಚನಸಿಂಹ ಆನಂದ, ವಿನೋದ ಚಂದ್ರಪಾಂಡೆ, ಮನಹರ ಚೌಹಾನ, ಜಯಪ್ರಕಾಶ ಭಾರತಿ, ಯೋಗೇಂದ್ರಕುಮಾರ ಲಲ್ಲಾ, ಶ್ರೀಕೃಷ್ಣ ಮೊದಲಾದವರು ಶ್ರೇಷ್ಠ ಬಾಲಸಾಹಿತ್ಯವನ್ನು ರಚಿಸಿದ್ದಾರೆ. ಶ್ರೀ ಶ್ರೀಪ್ರಸಾದರು ಸರಸ ಕವನಗಳನ್ನು ಬರೆದಿದ್ದಾರೆ. ಅನಿಲ ಕುಮಾರರು ಕವನ ಹಾಗೂ ನಾಟಕಗಳನ್ನು ರಚಿಸಿದ್ದಾರೆ. 'ರಾಷ್ಟ್ರಬಂಧು ಇವರ ಕವನ ಸಂಕಲನಗಳಲ್ಲಿ 'ಬಾಲ ಭೂಷಣ', 'ವೀಣೆಯ ಗೀತೆಗಳು' 'ಇವರು ಮಹಾಪುರುಷರಾದುದು ಹೇಗೆ' ಬಲು ಪ್ರಸಿದ್ಧವಾಗಿವೆ. ದಿನಕರ ಮಕ್ಕಳಿಗಾಗಿ ಕೆಲವು ಸುಂದರ ಪದ್ಯಗಳನ್ನು ಬರೆದಿದ್ದಾರೆ. 'ಚಂದಾಮಾಮಾ'ಕವನದಲ್ಲಿ ಹೊಸಸೃಷ್ಟಿಯ ಚಮತ್ಕಾರ ಕಾಣಬಹುದು.

ಒಮ್ಮೆ ಚಂದಿರ ಅಮ್ಮನಿಗೆ ಹೇಳಿದ
'ನನ್ನ ಅಳತೆ ಅಂಗಿ ಹೊಲಿಸಮ್ಮ'
ಸಂವತ್ಸರವೆಲ್ಲಾ ಬರಿಮೈ ತಿರುಗಬೇಕು
ಮಳೆ, ಚಳಿ, ಬಿಸಿಲು ಸಹಿಸಬೇಕು
ಕೇಳಿ ಮಗನ ಮಾತು ತಾಯಿ ನಕ್ಕು ನುಡಿದಳು–
'ನಿನ್ನ ಯಾತನೆಯು ಬಲ್ಲೆನಾ ಚೆಂದಾಗಿ ಕಂದ
ನೀ ಎಂದೂ ಒಂದೇ ಅಳತೆಯವನಿರ ಒಲ್ಲೆ
ಒಮ್ಮೆ ಪೂರ್ಣ, ಒಮ್ಮೆ ಅರ್ಧ, ಮತ್ತೊಮ್ಮೆ ಕಾಣಲೇ ಒಲ್ಲೆ'
'ಹಾಗಾದರೆ ಹದಿನೈದು ಬೇರೆ ಅಳತೆಯುಳ್ಳ
ಹದಿನೈದು ಅಂಗಿ ನನಗೆ ಹೊಲಿಸು ತಾಯಿ'

ಚಂದ್ರಪಾಲ ಸಿಂಹ ಯಾದವರ ಕವನಗಳು ಬಲು ರಸವತ್ತಾಗಿವೆ ರಾಮವಚನಸಿಂಹ ಆನಂದರು ಮಕ್ಕಳಿಗೆ ಅಕ್ಷರ ಜ್ಞಾನಮಾಡಿಸಬಲ್ಲ ಎರಡೆರಡು ಸಾಲಿನ ಸರಳ ಕವನಗಳನ್ನು ಅಂದವಾಗಿ ರಚಿಸಿದ್ದಾರೆ. 'ಮಾತಿನಲ್ಲಿ ವರ್ಣಮಾಲೆ' ಬಲು ಜನಪ್ರಿಯವಾಗಿದೆ. ವಿನೋದಚಂದ್ರ ಪಾಂಡೆಯವರ 'ವಿನೋದ ನಾಟಕಾ' 'ವೀರ ಸೌಭದ್ರ' ವಿಶೇಷ ಮನ್ನಣೆ ಪಡೆದ ಕೃತಿಗಳಾಗಿವೆ. ಮನಹರ ಚೌಹಾನ ಇವರು ಉತ್ತಮ ಕಾದಂಬರಿಕಾರರಾಗಿದ್ದಾರೆ. ಜಯ ಪ್ರಕಾಶ ಭಾರತಿಯವರು ವಿಜ್ಞಾನದ ವಿಷಯಗಳನ್ನು ಸರಳವಾದ ಶೈಲಿಯಲ್ಲಿ ಬರೆದಿದ್ದಾರೆ. ಬಾಲಸಾಹಿತ್ಯ ರಚನೆಗೆ ಅಖಿಲ ಭಾರತ ಮಟ್ಟದ ಬಹುಮಾನಗಳೂ ಇವರಿಗೆ ದೊರೆತಿವೆ. 'ಶಕುನ ಪ್ರಕಾಶನ' ಇವರೇ ಆರಂಭಿಸಿದರು. ಯೋಗೇಂದ್ರಕುಮಾರ ಲಲ್ಲಾ ಇವರು ಕವಿಗಳೇ ಅಲ್ಲದೇ ಉತ್ತಮ ಚಿತ್ರಕಾರರೂ ಆಗಿದ್ದಾರೆ. 'ಖೇಲ ಖೇಲ ಮೆ ವಿಜ್ಞಾನ' ಇವರ ಜನಪ್ರಿಯಕೃತಿಯಾಗಿದೆ.

ಹಿಂದಿ ಬಾಲಸಾಹಿತ್ಯಕ್ಕೆ ಮಹಿಳೆಯರೂ ಹೆಚ್ಚು ಸಂಖ್ಯೆಯಲ್ಲಿ ತಮ್ಮ ಕಾಣಿಕೆ ಗಳನ್ನು ನೀಡಿದ್ದಾರೆ. 'ಶಿಶು' ಪತ್ರಿಕೆಯ ಸಂಪಾದಕಿಯಾಗಿದ್ದ ಶ್ರೀಮತಿ ಗೋಪಾಲ ದೇವಿಯವರು ಉತ್ತಮ ಕತೆಗಾರ್ತಿಯೆಂದು ಹೆಸರುಗಳಿಸಿದ್ದಾರೆ. ಶ್ರೀಮತಿ ತಾರಾ ಪಾಂಡೆಯವರ ಸರಸಗೀತೆಗಳು ಪ್ರಸಿದ್ಧವಾಗಿವೆ. ಶ್ರೀಮತಿ ಸುಭದ್ರಾಕುಮಾರಿ ಚೌಹಾನ ಇವರು ಮಕ್ಕಳಿಗಾಗಿ ಹಲವಾರು ಸ್ಫೂರ್ತಿದಾಯಕ ಕವನಗಳನ್ನು ಬರೆದಿದ್ದಾರೆ. ಪಾಠಶಾಲೆಗೆ ಒತ್ತಾಯದಿಂದ ಮಕ್ಕಳನ್ನು ಕಳಿಸುವ ಪಾಲಕರ ಯತ್ನ ಎಂದಿಗೂ ಫಲಿಸದೆಂಬುದನ್ನು ವಿವರಿಸುವ ಇವರ 'ಅಜಯ ಪಾಠಶಾಲೆಗೆ ಹೋದನು' ಕವನ ಬಲು ಸೊಗಸಾಗಿದೆ. ಮಕ್ಕಳು ಗಾಳಿಪಟಕ್ಕಾಗಿ ಪರದಾಟಪಡುವ ಒಂದು ಸನ್ನಿವೇಶ ಈ ಸಾಲುಗಳಲ್ಲಿ ಚಿತ್ರಿತವಾಗಿದೆ.

ಅಂಗಡಿಗಳಲ್ಲಿ ತುಂಬಾ ಪಟಗಳು ಬಂದಿವೆ
ಒಂದೇ ಎರಡೇ ಮಿನುಗುವ ತಾರೆಗಳಂತೆ ತುಂಬಿವೆ
ಕೆಂಪು, ಹಸಿರು, ಹಳದಿ, ಬಿಳುಪು ಬೇರೆ ಬೇರೆ
ಕಾಸಿಗೊಂದರಂತೆ ಎಲ್ಲ ಸಿಕ್ಕುವಂತೆ
ಒಂದಾದರೂ ಪಟ ಕೊಂಡು ಕೊಡು ಅಮ್ಮ
ಕಾಸು ಕೊಡು—ತಡಬೇಡ—ಕೊಳ್ಳುವೆನಮ್ಮ
ಪಟ ಹಾರಿಸುವುದು ನಿನಗೆ ಏನು ಗೊತ್ತು
ಹಗಲಿರುಳೂ ಮನೆಯಲ್ಲಿ ಕುಳಿತಿರುವಿ ನೀನು
ಬಾ ಹೊರಗೆ—ಪಟಗಳ ಹಾರಾಟ ನೋಡು ನೀನು

ಇವರ 'ಝಾಂಸಿವಾಲಿ ರಾಣಿ' ಕವನ ಮಕ್ಕಳಿಗೂ ಮುದುಕರಿಗೂ ಸಮಾನವಾಗಿ ರುಚಿಸುವಂತಹದ್ದಾಗಿದೆ.

ಶಾಂತಿ ಅಗ್ರವಾಲ, ಶಕುಂತಳಾ ಮಿಶ್ರ, ಸುಶೀಲಾ ಕಕ್ಕಡ, ವಿದ್ಯಾವತಿ ಕೋಕಿಲ, ಶಾಂತಿ ಮೆಹರೋತ್ರ, ಸುಮಿತ್ರಾಕುಮಾರಿ ಸಿನ್ಹಾ, ಶಕುಂತಲಾ ಸಿರೋಠಿಯಾ ಮುಂತಾದ ಮಹಿಳೆಯರು ಮಕ್ಕಳ ಸಾಹಿತ್ಯವನ್ನು ಸಾಕಷ್ಟು ಸೃಷ್ಟಿ ಸಿದ್ದಾರೆ. ಶಾಂತಿ ಅಗ್ರವಾಲ ಇವರ 'ಬಾಲ ವೀಣೆ' 'ಬಾಲ ಸೌರಭ' ಉತ್ತಮ ಕೃತಿ ಗಳೆನಿಸಿವೆ. ಶಕುಂತಳಾ ಮಿಶ್ರರ ಕತೆಗಳು ಬಲು ಚನ್ನಾಗಿವೆ. ಸುಶೀಲಾ ಕಕ್ಕಡ ಇವರ ಕವನ ಕತೆಗಳು ಮಕ್ಕಳ ಮೆಚ್ಚುಗೆ ಪಡೆದಿವೆ. ವಿದ್ಯಾವತಿ ಕೋಕಿಲ ಇವರ ಜೋಗುಳಪದಗಳು ಸುಂದರವಾಗಿವೆ. ಶಾಂತಿ ಮೆಹರೋತ್ರಾ ಇವರ ಕವನ, ಕತೆ ಮತ್ತು ನಾಟಕಗಳು ಪ್ರಸಿದ್ಧಿಪಡೆದಿವೆ. ಸುಮಿತ್ರಾಕುಮಾರಿ ಸಿನ್ಹಾ ಇವರು ಲಕ್ನೋ ಆಕಾಶವಾಣಿಯಿಂದ ಮಕ್ಕಳಿಗಾಗಿ ಕಾರ್ಯಕ್ರಮಗಳನ್ನು ನಿರೂಪಿಸಿ

ಬಿತ್ತರಿಸುತ್ತಾರೆ. ಶಕುಂತಲಾ ಸಿರೋಠಿಯಾ ಇವರ ಗೀತೆ ಹಾಗೂ ಜೋಗುಳ ಪದಗಳು ಜನಪ್ರಿಯವಾಗಿವೆ.

ಕೇಂದ್ರ ಸರ್ಕಾರದವರೂ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿ ತೋರಿದ್ದಾರೆ. ಕೇಂದ್ರೀಯ ಸಮಾಜ ಕಲ್ಯಾಣ ಬೋರ್ಡಿನವರು ಈ ದಿಸೆಯಲ್ಲಿ ಅಭಿರುಚಿವಹಿಸಿದ್ದಾರೆ. 'ಸಮಾಜ ಕಲ್ಯಾಣ' ಮಾಸ ಪತ್ರಿಕೆಯಲ್ಲಿ ಮಕ್ಕಳ ಸಾಹಿತ್ಯಕ್ಕಾಗಿ ನಾಲ್ಕು ಪುಟಗಳು ಮೀಸಲಾಗಿವೆ. ಪರಿವಾರ ಕಲ್ಯಾಣ ಪರಿಧಿಯಲ್ಲಿ ಮಕ್ಕಳ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಚರ್ಚಿಸಿ ಮಕ್ಕಳಿಗಾಗಿ ಕವನ, ಕತೆ, ಚುಟುಕು ಮುಂತಾದವುಗಳನ್ನು ಸೇರಿಸಿರುತ್ತಾರೆ.

ಈ ರೀತಿಯಾಗಿ ನಮಗೆ ಹಿಂದಿ ಶಿಶುಸಾಹಿತ್ಯದ ಶತಮಾನದ ಪಕ್ಷಿನೋಟದಿಂದ ಕಾಣಬರುವ ಪ್ರಮುಖ ಸಂಗತಿಗಳೇನೆಂದರೆ ಆರಂಭದಲ್ಲಿ ಬಾಲಸಾಹಿತ್ಯ ಕೇವಲ ಕೌತುಕ, ಸೋಜಿಗ, ನೀತಿಬೋಧೆ, ಸದಾಚಾರ ಇವುಗಳಿಗೆ ಮಾತ್ರ ಸೀಮಿತವಾಗಿತ್ತು. ಅವಾಸ್ತವಿಕ ಅತಿ ಪ್ರಾಕೃತಿಕ ಕಾಗಕ್ಕ ಗುಬ್ಬಕ್ಕನಿಗೆ ಮೀಸಲಾಗಿದ್ದ ಕತೆಕವನ ವಿಕಾಸವು ಕಾಲ ಉರುಳಿದಂತೆಲ್ಲಾ ಆಯಾ ಯುಗದ ಬದಲಾವಣೆಗೆ ತಕ್ಕಂತೆ ಮಕ್ಕಳ ಮನೋವಿಕಾಸಕ್ಕೆ ಹೆಚ್ಚು ಆದ್ಯತೆ ನೀಡುವಂತಾಯಿತು. ವಾಸ್ತವಾಂಶವನ್ನು ಪ್ರಧಾನವಾಗಿಟ್ಟುಕೊಂಡು ಮಕ್ಕಳಿಗೆ ತಮ್ಮ ಪರಿಸರ ಹಾಗೂ ದೇಶದ ಮುನ್ನಡೆಯ ಬಗ್ಗೆ ವಿಚಾರಮಾಡಲು ನೆರವಾಗುವ ಸಾಹಿತ್ಯರಚನೆಯ ಅಗತ್ಯ ಕಾಣಬಂತು. ವಿಜ್ಞಾನದ ನಾಗಾಲೋಟವನ್ನು ಗಮನದಲ್ಲಿಟ್ಟುಕೊಂಡು ಸಾಹಿತಿಗಳು ಮಕ್ಕಳಿಗೆ ಅವರವರ ವಯಸ್ಸಿಗೆ ಅನುಗುಣವಾಗಿ ಕವನ, ಕತೆ, ನಾಟಕ ಜೀವನ ಚರಿತ್ರೆ, ಜ್ಞಾನ ವಿಜ್ಞಾನದ ಪರಿಚಯಮಾಡಿಕೊಡುವ ಲೇಖನ ಈ ಸಾಹಿತ್ಯ ಪ್ರಭೇದಗಳನ್ನು ಅಂದಚಂದವಾಗಿ ತರಲು ಆರಂಭಿಸಿದರು. ವಿದೇಶಿ ಬಾಲಸಾಹಿತ್ಯದ ರಚನಾ ತಂತ್ರವನ್ನು ರೂಢಿಸಿಕೊಂಡು ನಾಡುನುಡಿಯ ಮೌಲ್ಯವನ್ನು ಸಮೃದ್ಧಿಗೊಳಿಸುವ ಪ್ರಯತ್ನ ಸಾಗಿತು. ಬಾಲಸಾಹಿತ್ಯದ ಸ್ವತಂತ್ರ ಸ್ವರೂಪವನ್ನು ಮನಗಂಡು ಹಲವಾರು ಬಾಲೋಪಯೋಗಿ ಮಾಸಪತ್ರಿಕೆಗಳು ಪ್ರಕಟವಾದವು. ಸಂಘ ಸಂಸ್ಥೆಗಳು ಉತ್ತಮ ಬಾಲಸಾಹಿತ್ಯದ ಬೆಳವಣಿಗೆಗೆ ಉತ್ತೇಜನ ನೀಡಲಾರಂಭಿಸಿದವು. ಸರ್ಕಾರವೂ ಸಹ ಇದರ ಮಹತ್ವವನ್ನು ಅರಿತು ತನ್ನ ಪ್ರಸಾರ ಮಾಧ್ಯಮಗಳ ಮೂಲಕ ಮಕ್ಕಳ ರಂಜನೆ ಹಾಗೂ ಮನೋವಿಕಾಸಕ್ಕೆ ಗಮನ ನೀಡಲಾಯಿತು. ತಲೆಮಾರಿನ ಕಂದಾಚಾರಗಳನ್ನುಳ್ಳ ಹಳಸು ಕತೆಕವನಗಳ ಬದಲು ಇಂದಿನ ಚಿರನವೀನ ಸಮಸ್ಯೆಗಳನ್ನೊಳಗೊಂಡ ಗದ್ಯ ಪದ್ಯದ ಪ್ರಕಾರ ಭೇದಗಳು ಬೆಳಕು ಕಂಡವು. ಹಿಂದಿ ಬಾಲಸಾಹಿತ್ಯವು ನಡೆದು ಬಂದ ದಾರಿ ನೋಡಿದರೆ ಇದು ಇನ್ನೂ ಉಜ್ವಲ ಭವಿಷ್ಯದತ್ತ ಸಾಗುವ ಭರವಸೆ ಮನಸ್ಸಿನಲ್ಲಿ ಖಂಡಿತ ಮೂಡುವುದು.

"ಕರ್ನಾಟಕ ಭಾರತಿ"ಯ
ಮೊದಲ ಹತ್ತು ಸಂಪುಟಗಳ ಲೇಖನ ಸೂಚಿ

ಸಂಗ್ರಹಿಸಿದವರು : ಶ್ರೀಮತಿ ಹನುಮಾಕ್ಷಿ ನೀರಾವರಿ
ಶ್ರೀಮತಿ ಚಿತ್ರಾ ಜೋಶಿ

'ಅ'—'ಬ'

೧ ಅಕ್ಕಮಹಾದೇವಿಯ ಗಂಡ ಕೌಶಿಕನನ್ನು ಇತಿಹಾಸದಲ್ಲಿ ಗುರುತಿಸುವ ಒಂದು ಪ್ರಯತ್ನ (ಇತಿಹಾಸ)
ಚಿದಾನಂದಮೂರ್ತಿ (ಎಂ)
ಸಂಪುಟ : ೮, ಸಂಚಿಕೆ : ೨, ಪು. ೪೪–೫೮, ನವಂಬರ, ೧೯೭೫

೨ ಅಖಿಲ ಕರ್ನಾಟ ಚತುರ್ಥ ಜಾನಪದ ಸಮ್ಮೇಲನ (ಜಾನಪದ)
ಸಣ್ಣಕ್ಕಿ.(ನಿಂಗಣ್ಣ)
ಸಂಪುಟ : ೧೦, ಸಂಚಿಕೆ : ೨, ಪು. ೧೭೪–೧೭೯, ನವಂಬರ, ೧೯೭೭

೩ ಅಖಿಲ ಕರ್ನಾಟಕ ತೃತೀಯ ಜಾನಪದ ಸಮ್ಮೇಲನ (ಜಾನಪದ)
ಭೂಸರಡ್ಡಿ (ಎಸ್. ಎಸ್)
ಸಂಪುಟ : ೮. ಸಂಚಿಕೆ : ೩, ಪು. ೧೨೩–೧೨೯. ಜನವರಿ, ೧೯೭೬

೪ ಅಖಿಲ ಕರ್ನಾಟಕ ಜಾನಪದ ಸಮ್ಮೇಲನ (ಜಾನಪದ)
ಸಣ್ಣಕ್ಕಿ (ನಿಂಗಣ್ಣ)
ಸಂಪುಟ : ೭. ಸಂಚಿಕೆ : ೪, ಪು. ೧೫೬–೧೬೪, ಮೇ. ೧೯೭೫

೫ ಆಗಸ್ಟ ಕೋಂಟ (ಸಮಾಜ ವಿಜ್ಞಾನ)
ಜೋಶಿ (ಕೆ. ಜಿ.)
ಸಂಪುಟ : ೬ ಸಂಚಿಕೆ : ೧ ಪು. ೫೪–೬೧ ಆಗಸ್ಟ, ೧೯೭೩

೬ ಅಜಿತ ಸೇನ ಪರಿಚಯ (ಸಾಹಿತ್ಯ ಚರಿತ್ರೆ)
ಸಂ. ಹಿರೇಮಠ (ಬಿ. ಆರ್.)
ಸಂಪುಟ : ೮ ಸಂಚಿಕೆ : ೪ ಪು. ೪೮–೫೧ ಮೇ, ೧೯೭೬

೭ ಅಜ್ಜರ [= ಅಜ್ಜೆಜಿ³] ಎಂದರೇನು? (ಒರೆಗಲ್ಲು ಭಾಷಾವಿಜ್ಞಾನ)
ಚಿದಾನಂದಮೂರ್ತಿ (ಎಂ)
ಸಂಪುಟ : ೭ ಸಂಚಿಕೆ : ೨ ಪು. ೧೫೩–೧೫೮ ನವಂಬರ, ೧೯೭೪

೮ ಅರ್ಜುನವಾಡ ಶಾಸನದ ಕವಿಳಾಸಪುರ (ಶಾಸನ)
ಮುತಾಲಿಕ (ಆರ್. ಆರ್.)
ಸಂಪುಟ : ೨ ಸಂಚಿಕೆ : ೧ ಪು. ೧೨೦–೧೨೬ ನವಂಬರ, ೧೯೬೯

೯ ಅಜ್ಞಾತ (ಕಥೆ)
ಶರ್ಮಾ ತದ್ದಲಸೆ (ಎಂ. ವಿ.)
ಸಂಪುಟ : ೬ ಸಂಚಿಕೆ : ೧ ಪು. ೭೬–೮೦ ಆಗಸ್ಟ, ೧೯೭೩

೧೦ ಅಡಿವೆಯ್ಯನಪೂಜೆ (ಜಾನಪದ ಹಾಡು)
ಸಂ : ಸುಂಕಾಪುರ (ಎಂ. ಎಸ್)
ಸಂಪುಟ : ೧೦ ಸಂಚಿಕೆ : ೧ ಪು. ೫೫–೫೬ ಆಗಸ್ಟ, ೧೯೭೭

೧೧ ಅಣಬೆ (ಕವನ)
ಜಯಸುದರ್ಶನ
ಸಂಪುಟ : ೮ ಸಂಚಿಕೆ : ೧ ಪು. ೨೭–೭೭ ಆಗಸ್ಟ, ೧೯೭೫

೧೨ ಅಣ್ಣ–ತಂಗಿ ಸುವ್ವಿ ಹಾಡು (ಜಾನಪದ ಹಾಡು)
ರಾಜೂರ (ವೀರಣ್ಣ)
ಸಂಪುಟ : ೬. ಸಂಚಿಕೆ : ೩. ಪು. ೮೮–೯೦. ಜನವರಿ, ೧೯೭೪.

೧೩ ಅತ್ತಪರ : ಶಬ್ದಾರ್ಥ ಜಿಜ್ಞಾಸೆ
ನಾಗರಾಜಯ್ಯ (ಹಂಪ)
ಸಂಪುಟ : ೧೦. ಸಂಚಿಕೆ : ೨. ಪು. ೧೭೨–೧೭೩. ನವಂಬರ, ೧೯೭೭

೧೪ ಅರ್ಥ (ಕವನ)
ಕಮ್ಮಾರ (ಈಶ್ವರ)
ಸಂಪುಟ : ೭. ಸಂಚಿಕೆ : ೧. ಪು. ೧೪-೧೫. ಆಗಸ್ಟ, ೧೯೭೪

೧೫ ಅರ್ಥ
ರಮೇಶ್ (ಬಿ. ಎಂ)
ಸಂಪುಟ : ೯. ಸಂಚಿಕೆ : ೪. ಪು. ೧೮-೧೯. ಮೇ, ೧೯೭೭

೧೬ ಅರ್ಥಕಳೆದುಳಿದದ್ದು (ಕವನ)
ತಹಶೀಲದಾರ (ಪ್ರೇಮಾ)
ಸಂಪುಟ : ೨. ಸಂಚಿಕೆ : ೪. ಪು. ೩೯-೪೦. ಮೇ, ೧೯೭೫

೧೭ ಅರ್ಧನಾರೀಶ್ವರ ಅರೆವೆಣ್ಣು (ಪ್ರಬಂಧ)
ಪ್ರಭುಸ್ವಾಮಿಮಠ
ಸಂಪುಟ : ೪. ಸಂಚಿಕೆ : ೩. ಪು. ೨೪-೨೮. ಜನವರಿ, ೧೯೭೨

೧೮ ಅನಾಥರು (ಕವನ)
ತಹಶೀಲದಾರ (ಪ್ರೇಮಾ)
ಸಂಪುಟ : ೭ ಸಂಚಿಕೆ : ೧. ಪು. ೪೬. ಆಗಸ್ಟ, ೧೯೭೪

೧೯ ಅನುನಾಸಿಕ-ಯುಗಲ (ಭಾಷಾವಿಜ್ಞಾನ)
ವಿಷ್ಣು ಸುತ
ಸಂಪುಟ : ೬ ಸಂಚಿಕೆ : ೨. ನವಂಬರ, ೧೯೭೩

೨೦ ಅನುನಾಸಿಕ-ಯುಗಲ (ಭಾಷಾವಿಜ್ಞಾನ)
ಬಿರಾದಾರ (ಸಂಗಮೇಶ)
ಸಂಪುಟ : ೮. ಸಂಚಿಕೆ : ೧. ಪು ೪೬-೪೮. ಆಗಸ್ಟ, ೧೯೭೫

೨೧ ಅನುಭವ ಸಾಲದೆನ್ನುವ ಅಭಿವ್ಯಕ್ತಿ (ಕವನ)
ಸಿದ್ಧೇಶ್ವರ (ಎ)
ಸಂಪುಟ : ೮ ಸಂಚಿಕೆ : ೨. ಪು. ೧-೨ ನವಂಬರ. ೧೯೭೫

೨೨ ಅನ್ಯ ಭಾಷಾ ಬೋಧನೆ (ಭಾಷಾವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ : ೬. ಸಂಚಿಕೆ : ೬. ಪು ೨೧-೨೯. ಜನವರಿ, ೧೯೭೪

೨೩ ಅನ್ಯಭಾಷಾ ಬೋಧನೆ (ಭಾಷಾ ವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ : ೬. ಸಂಚಿಕೆ ೪. ಪು. ೧೩೧-೧೩೬. ಎಪ್ರಿಲ್, ೧೯೭೪

೨೪ ಅನ್ಯ ಭಾಷಾ ಬೋಧನೆ (ಭಾಷಾ ವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ : ೭ ಸಂಚಿಕೆ : ೧ ಪು. ೭೬–೮೬ ಆಗಸ್ಟ, ೧೯೭೪

೨೫ ಅನ್ಯ ಭಾಷಾ ಬೋಧನೆ (ಭಾಷಾವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ ; ೭ ಸಂಚಿಕೆ : ೨ ಪು. ೨೮–೩೦ ನವಂಬರ, ೧೯೭೪

೨೬ ಅನ್ಯ ಭಾಷಾ ಬೋಧನೆ (ಭಾಷಾವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ : ೭ ಸಂಚಿಕೆ : ೩ ಪು. ೧೨೬–೧೩೬ ಜನವರಿ, ೧೯೭೫

೨೭ ಅನ್ಯಭಾಷಾ ಬೋಧನೆ (ವ್ಯಾಕರಣ ಭಾಷಾಂತರ ಪದ್ಧತಿ (ಭಾಷಾವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ : ೬ ಸಂಚಿಕೆ : ೧ ಪು. ೧೦೪–೧೦೬ ಆಗಸ್ಟ, ೧೯೭೩

೨೮ ಅನ್ಯ ಭಾಷಾ ಬೋಧನೆ : ನೇರಪದ್ಧತಿ (ಭಾಷಾವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ : ೬ ಸಂಚಿಕೆ : ೨ ಪು. ೭೪–೭೮ ನವಂಬರ, ೧೯೭೩

೨೯ ಅನ್ವೇಷಣ (ವಿಮರ್ಶೆ)
ತೋರಣಗಟ್ಟಿ (ಲೀಲಾವತಿ)
ಸಂಪುಟ : ೯ ಸಂಚಿಕೆ : ೪ ಪು. ೧೨೯–೧೩೦ ಮೇ, ೧೯೭೭

೩೦ ಅಪೂರ್ವ ಬೌದ್ಧ ಕ್ಷೇತ್ರ (ಇತಿಹಾಸ)
ದೇಸಾಯಿ (ಪಾಂಡುರಂಗರಾವ್)
ಸಂಪುಟ : ೧ ಸಂಚಿಕೆ : ೧ ಪು. ೩–೯ ನವಂಬರ, ೧೯೬೮

೩೧ ಅಬ್ಬಲೂರು ಚರಿತೆ : ಒಂದು ಲಘುಪುರಾಣ (ಸಾಹಿತ್ಯ ಚರಿತೆ)
ಕಲಬುರ್ಗಿ (ಎಂ. ಎಂ)
ಸಂಪುಟ : ೪ ಸಂಚಿಕೆ : ೧ ಪು. ೧೩೧–೧೩೯ ಆಗಸ್ಟ, ೧೯೭೧

೩೨ ಅಭಿವೃದ್ಧಿ ಪರ ರಾಷ್ಟ್ರದಲ್ಲಿ ವಿಶ್ವವಿದ್ಯಾಲಯ (ಶಿಕ್ಷಣ ಶಾಸ್ತ್ರ)
ಅಡಕೆ (ಎಸ್. ಎಸ್)
ಸಂಪುಟ : ೩ ಸಂಚಿಕೆ : ೩ ಪು. ೧೩೭–೧೪೦ ಜನವರಿ, ೧೯೭೧

೩೩ ಅನುದ್ರಿತ ಜೈನ ಕನ್ನಡ ಗ್ರಂಥಗಳು (ಸಾಹಿತ್ಯ ಚರಿತ್ರೆ)
ಭುಜಬಲಿಶಾಸ್ತ್ರಿ (ಕೆ)
ಸಂಪುಟ : ೨ ಸಂಚಿಕೆ : ೧ ಪು ೧೭೦–೧೮೬ ನವಂಬರ, ೧೯೬೯

೩೪ ಅಯ್ಯಾವೊಳೆ ಐನೂರ್ವರು (ಶಾಸನ)
ಎಲಿಗಾರ (ಚೆನ್ನಕ್ಕ)
ಸಂಪುಟ : ೬ ಸಂಚಿಕೆ : ೩ ಪು. ೧೧೬–೧೨೮ ಜನವರಿ, ೧೯೭೪

೩೫ ಅರವಿಂದ ಆಶ್ರಮ (ಧರ್ಮತತ್ವ)
ಸಿಂಪಿ (ಲಿಂಗಣ್ಣ)
ಸಂಪುಟ : ೫ ಸಂಚಿಕೆ : ೩ ಪು. ೫೦–೫೬ ಜನವರಿ, ೧೯೭೩

೩೬ ಅರುವತ್ತುಮೂರು ಪುರಾತನರ ಚರಿತ್ರೆ (ಕಥೆ)
ಜಂಬುನಾಥನ್ (ಎಂ. ವಿ)
ಸಂಪುಟ : ೪ ಸಂಚಿಕೆ : ೩ ಪು. ೯೭–೧೦೦ ಜನವರಿ, ೧೯೭೨

೩೭ ಅರುವತ್ತುಮೂರು ಪುರಾತನರ ಚರಿತ್ರೆ (ಕಥೆ)
ಜಂಬುನಾಥನ್ (ಎಂ. ವಿ)
ಸಂಪುಟ : ೪ ಸಂಚಿಕೆ : ೪ ಪು. ೯೯–೧೦೩ ಮೇ, ೧೯೭೨

೩೮ ಅರುವತ್ತೊಕ್ಕಲು (ಶಾಸನ)
ಗುರವ (ಆರ್. ಎನ್)
ಸಂಪುಟ : ೮ ಸಂಚಿಕೆ : ೩ ಪು. ೭೭-೮೪ ಜನವರಿ, ೧೯೭೬

೩೯ ಅಱಿವುದು ಧರ್ಮಮಂ ಕಾವ್ಯಧರ್ಮಮುಮಂ (ವಿಮರ್ಶೆ)
ಕೃಷ್ಣ (ಪರಮೇಶ್ವರ ಭಟ್ಟ)
ಸಂಪುಟ : ೫ ಸಂಚಿಕೆ : ೪ ಪು. ೧೦೬–೧೧೪ ಮೇ, ೧೯೭೩

೪೦ (ಅರ್ಧ) ನೇಮಿಪುರಾಣದ ಶ್ರೀಕೃಷ್ಣ (ವಿಮರ್ಶೆ)
ಕುಲಕರ್ಣಿ (ಬಿ. ಎಸ್)
ಸಂಪುಟ : ೨ ಸಂಚಿಕೆ : ೨ ಪು. ೨–೧೨ ಮೇ, ೧೯೭೦

೫೦ ಆದಿಪುರಾಣ ಮತ್ತು ಪ್ರಭುಲಿಂಗಲೀಲೆ (ವಿಮರ್ಶೆ)
ಕಲಬುರ್ಗಿ (ಎಂ. ಎಂ.)
ಸಂಪುಟ : ೫ ಸಂಚಿಕೆ : ೧ ಪು. ೯೨–೯೬ ಆಗಸ್ಟ್, ೧೯೭೨

೫೧ ಆಯುಧ ಜೀವಿಗಳ ಸಂಘಗಳು (ಶಾಸನ)
ಗುರವ (ಆರ್. ಎನ್.)
ಸಂಪುಟ : ೧೦ ಸಂಚಿಕೆ : ೧ ಪು. ೨–೮ ಆಗಸ್ಟ್, ೧೯೭೭

೫೨ 'ಅರ್ + ಗೆ' ಎಂದರೇನು ? (ಭಾಷಾ ವಿಜ್ಞಾನ)
ವೆಂಕಟರಾಯಾಚಾರ್ಯ(ಕೆ)
ಸಂಪುಟ : ೨ ಸಂಚಿಕೆ : ೨ ಪು. ೫೦–೫೪ ಮೇ. ೧೯೭೦

೫೩ ಆವರ್ತನ (ಕವನ)
ಮಳಲಿ ವಸಂತಕುಮಾರ್
ಸಂಪುಟ : ೧೦ ಸಂಚಿಕೆ : ೧ ಪು. ೧ ಆಗಸ್ಟ್, ೧೯೭೭

೫೪ ಆಂಧ್ರಪ್ರದೇಶದ ಕನ್ನಡ (ಭಾಷಾ ವಿಜ್ಞಾನ)
ಕೃಷ್ಣರಾವ್ (ಕೆ. ಎ. .)
ಸಂಪುಟ : ೯ ಸಂಚಿಕೆ : ೧೨ ಪು. ೪೬೭–೪೭೭
ಆಗಸ್ಟ್-ನವಂಬರ, ೧೯೭೬

೫೫ ಇತಿಹಾಸದ ಹೊಸಪುಟ (ಕವನ)
ಮಸಳಿ (ಸಿದ್ದಣ್ಣ)
ಸಂಪುಟ : ೧ ಸಂಚಿಕೆ : ೧ ಪು. ೧೦೭-೧೦೯ ನವಂಬರ, ೧೯೬೮

೫೬ ಇತ್ತೀಚಿನ ಕೆಲವು ಮುಖ್ಯ ಪುರಾತತ್ತ್ವ ಶೋಧನೆಗಳು (ಇತಿಹಾಸ ಸಂಶೋಧನೆ)
ಸುಂದರ (ಅ)
ಸಂಪುಟ : ೮ ಸಂಚಿಕೆ : ೨ ಪು. ೧೦–೨೨ ನವಂಬರ, ೧೯೭೫

೫೭ ಇಬ್ಬರು ಪಾಶ್ಚಿಮಾತ್ಯ ದ್ರಾವಿಡ ಭಾಷಾ ವಿಜ್ಞಾನಿಗಳು (ಭಾಷಾವಿಜ್ಞಾನ)
ಮಹೇಶ್ವರಯ್ಯ (ಎಚ್. ಎಂ.)
ಸಂಪುಟ : ೭ ಸಂಚಿಕೆ : ೪ ಪು. ೯೯–೧೦೪ ಮೇ, ೧೯೭೫

೫೮ ಇವರು ನನ್ನವರು (ಕವನ)
ಮಧುಸೂದನ (ಕೆ. ಎಸ್.)
ಸಂಪುಟ : ೫ ಸಂಚಿಕೆ : ೪ ಪು. ೫೧ ಮೇ, ೧೯೭೩

೫೯ ಇಂದ್ರಿಯೆಂಬ ಅಪ್ಸರೆ (ಜಾನಪದ ಕಥೆ)
ಹೆಗಡೆ (ಎಲ್. ಆರ್.)
ಸಂಪುಟ : ೨ ಸಂಚಿಕೆ : ೧ ಪು. ೯೧–೧೦೪ ಅಗಸ್ಟ, ೧೯೭೦

೬೦ ಈ ವರ್ಷ (ಕವನ)
ದೊಡ್ಡರಂಗೇಗೌಡ
ಸಂಪುಟ : ೧೦ ಸಂಚಿಕೆ : ೩ ಪು. ೩೯ ಫೆಬ್ರುವರಿ, ೧೯೭೮

೬೧ ಉಗುರ ಮೂನೂರ್ವರು (ಶಾಸನ)
ಗುರವ (ಆರ್. ಎಸ್.)
ಸಂಪುಟ : ೯ ಸಂಚಿಕೆ : ೩ ಪು. ೩೫–೪೧ ಜನವರಿ, ೧೯೭೭

೬೨ ಉತ್ಕಟೇಚ್ಛೆ (ಕವನ)
ಶಿವಕುಮಾರ (ಎಸ್. ವಿ.)
ಸಂಪುಟ : ೬ ಸಂಚಿಕೆ : ೨ ಪು. ೧೦೫ ನವಂಬರ, ೧೯೭೩

೬೩ ಉತ್ತರ ಕನ್ನಡ ಜಿಲ್ಲೆಯ ಕನ್ನಡ (ಭಾಷಾ ವಿಜ್ಞಾನ)
ಶಾಲಿನಿ (ರಘುನಾಥ ಭಟ್)
ಸಂಪುಟ : ೯ ಸಂಚಿಕೆ : ೧, ೨ ಪು. ೨೦೧–೨೨೬
ಅಗಸ್ಟ-ನವಂಬರ, ೧೯೭೬

೬೪ ಉತ್ತರ ಕರ್ನಾಟಕದ ಜಾನಪದ ಗದ್ಯ ಸಾಹಿತ್ಯ (ಜಾನಪದ)
ಕಲಬುರ್ಗಿ (ಎಂ. ಎಂ.)
ಸಂಪುಟ : ೫ ಸಂಚಿಕೆ : ೩ ಪು. ೨೧–೪೯ ಜನವರಿ, ೧೯೭೩

೬೫ ಉದಯಾದಿತ್ಯಾಲಂಕಾರ ಕರ್ತೃವಿಚಾರ (ಸಾಹಿತ್ಯ ಚರಿತ್ರೆ)
ಬಿರಾದಾರ (ಸಂಗಮೇಶ)
ಸಂಪುಟ : ೫ ಸಂಚಿಕೆ : ೧ ಪು. ೧೨೧–೧೨೮ ಅಗಸ್ಟ, ೧೯೭೨

೬೬ ಉದಯಾದಿತ್ಯಾಲಂಕಾರ ಕರ್ತೃವಿಚಾರ (ಸಾಹಿತ್ಯ ಚರಿತ್ರೆ)
ಸೀತಾರಾಮಯ್ಯ (ಎಂ. ವಿ.)
ಸಂಪುಟ : ೭ ಸಂಚಿಕೆ : ೪ ಪು. ೩೦–೩೮ ಮೇ, ೧೯೭೫

೬೭ ಉಪಭಾಷಾಕ್ಷೇತ್ರ, ವ್ಯಾಸಂಗದ ಉದ್ದೇಶ ಮತ್ತು ವಿಧಾನ (ಭಾಷಾವಿಜ್ಞಾನ)
ಶಿವಾನಂದ (ವಿ)
ಸಂಪುಟ : ೯ ಸಂಚಿಕೆ : ೪ ಪು. ೯೮–೧೦೯ ಮೇ, ೧೯೭೭

೬೮ - ಉಪ್ಪರಿಗೆ (ಕವನ)
ಶ್ರೀಚೆನ್ನ
ಸಂಪುಟ : ೬ ಸಂಚಿಕೆ : ೪ ಪು. ೧ ಎಪ್ರಿಲ್, ೧೯೭೪

೬೯ ಉಳಿಯು (=ಹುಳಿಯುಮೇಶ್ವರ ಚಿಕ್ಕಯ್ಯನ ಶಾಸನ) (ಶಾಸನ)
ಕಲಬುರ್ಗಿ (ಎಂ. ಎಂ.)
ಸಂಪುಟ : ೧ ಸಂಚಿಕೆ : ೨ ಪು. ೧೪೨-೧೪೯ ಎಪ್ರಿಲ್, ೧೯೬೯

೭೦ ಎರಡು ಕವನಗಳು (ಕವನ)
ಉಡಚಣ (ಶೈಲಜಾ)
ಸಂಪುಟ : ೪ ಸಂಚಿಕೆ : ೧ ಪು: ೧–೩ ಅಗಸ್ಟ, ೧೯೭೧

೭೧ ಎರಡು ಕವನಗಳು (ಕವನ)
ಗುಂಜೆಟ್ಟಿ (ಬಿ. ವಿ.)
ಸಂಪುಟ : ೫ ಸಂಚಿಕೆ : ೧ ಪು. ೨೦–೨೧ ಅಗಸ್ಟ, ೧೯೭೨

೭೨ ಎರಡು ಕವನಗಳು (ಕವನ)
ಚನ್ನಹಳ್ಳಿ (ಶ. ಗು)
ಸಂಪುಟ : ೫ ಸಂಚಿಕೆ : ೨ ಪು. ೭೩ ನವಂಬರ, ೧೯೭೨

೭೩ ಎರಡು ಕವನಗಳು (ಕವನ)
ದಸ್ತಗೀರ (ಅಲ್ಲಿಭಾಯ್)
ಸಂಪುಟ : ೧೦ ಸಂಚಿಕೆ : ೨ ಪು ೪೮ ನವಂಬರ, ೧೯೭೭

೭೪ ಎರಡು ಕವನಗಳು (ಕವನ)
ಗುತ್ತಿಪಾಟೀಲ (ಲತಾ, ಎಂ.)
ಸಂಪುಟ ; ೧೦ ಸಂಚಿಕೆ : ೪ ಪು ೮೨ ಮೇ, ೧೯೭೮

೭೫ ಎರಡು ಕವಿತೆಗಳು (ಕವನ)
ಚಾಟಿ (ಜಯಶ್ರೀ)
ಸಂಪುಟ : ೧೦ ಸಂಚಿಕೆ : ೩ ಪು. ೯೦ ಫೆಬ್ರುವರಿ, ೧೯೭೮

೭೬ ಎರಡು ದಡ (ವಿಮರ್ಶೆ)
ಕಾಯ್ಕಿಣಿ (ಗೌರೀಶ)
ಸಂಪುಟ : ೩ ಸಂಚಿಕೆ : ೧ ಪು ೫೦–೬೨ ಅಗಸ್ಟ, ೧೯೭೦

೮೬ ಐತಿಹಾಸಿಕ ನಗರ ಹೊಂದಿಗೆರೆ (ಇತಿಹಾಸ।
ಕಡೆತೋಟದ (ಎನ್. ಕೆ.)
ಸಂಪುಟ : ೩ ಸಂಚಿಕೆ : ೧ ಪು. ೬೮ ೭೭ ಅಗಸ್ಟ, ೧೯೭೦

೮೭ ಒಕ್ಕಲಿಗರ ಅನುಭವಗಳು (ಜಾನಪದ)
ಕಲಬುರ್ಗಿ (ಎಂ. ಎಂ.)
ಸಂಪುಟ : ೬ ಸಂಚಿಕೆ : ೩ ಪು ೧೦೩–೧೦೭ ಜನವರಿ, ೧೯೭೪

೮೮ ಒಕ್ಕಲುತನದ ವೃತ್ತಿಪದಕೋಶ (ಜಾನಪದ)
ಶಿವಾನಂದ (ವಿ)
ಸಂಪುಟ : ೧೦ ಸಂಚಿಕೆ : ೪ ಪು. ೧೦೨–೧೨೬ ಮೇ, ೧೯೭೮

೮೯ ಒಬ್ಬ ಮುದುಕ; ನಮ್ಮಜ್ಜ ಮತ್ತು ಸರ್ವಜ್ಞ (ಕವನ)
ಹಿಂಗಮಿರೆ (ಬುದ್ದಣ್ಣ)
ಸಂಪುಟ : ೭ ಸಂಚಿಕೆ : ೪ ಪು. ೨೧–೨೩ ಮೇ, ೧೯೭೫

೯೦ ಒಬ್ಬೊಂಟಿಯಾಗಿ (ಕವನ)
ವಾಲೀಕಾರ (ಚೆನ್ನಣ್ಣ)
ಸಂಪುಟ : ೪ ಸಂಚಿಕೆ : ೩ ಪು. ೧ ಜನವರಿ, ೧೯೭೨

೯೧ ಒಂದಿಷ್ಟು ಸಮಾಧಾನ (ಕವನ)
ನಾಗಭೂಷಣ (ಡಿ. ಎಸ್.)
ಸಂಪುಟ : ೪ ಸಂಚಿಕೆ : ೪ ಪು. ೧೦೪ ಮೇ, ೧೯೭೨

೯೨ ಒಂದು ಅಪೂರ್ವ ಸಪ್ತಮಾತೃಕೆಯರ ವಿಗ್ರಹ (ಇತಿಹಾಸ ಸಂಶೋಧನೆ)
ಸುಂದರ (ಅ)
ಸಂಪುಟ : ೩ ಸಂಚಿಕೆ : ೩ ಪು. ೮೭–೯೬ ಜನವರಿ, ೧೯೭೧

೯೩ ಒಂದು ಹೊಸಕತೆ (ಕವನ)
ರುದ್ರಮೂರ್ತಿ. (ಸು)
ಸಂಪುಟ : ೭ ಸಂಚಿಕೆ : ೩ ಪು. ೧–೨ ಜನವರಿ, ೧೯೭೫

೯೪ ಒಂದ್ಹೋಗಿ ಒಂದಾತು (ಕಥೆ)
ಕರ್ಜಗಿ (ರವೀಂದ್ರ ಪ್ರ.)
ಸಂಪುಟ : ೫ ಸಂಚಿಕೆ : ೪ ಪು. ೯–೧೫ ಮೇ, ೧೯೭೩

೯೫ ಓವನಿಗೆ (ಶಾಸನ)
ಕಲಬುರ್ಗಿ (ಎಂ. ಎಂ.)
ಸಂಪುಟ : ೬, ಸಂಚಿಕೆ : ೧, ಅಗಸ್ಟ, ೧೯೭೩

೯೬ ಓವನಿಗೆ (ಶಾಸನ)
ಸೀತಾರಾಮಯ್ಯ (ಎಂ. ವ್ಹಿ)
ಸಂಪುಟ : ೬, ಸಂಚಿಕೆ : ೪, ಪು. ೨–೮, ಎಪ್ರಿಲ್, ೧೯೭೪

೯೭ [ಅಂ+ಗಜೇಶ್ವರ ಮಸಣಯ್ಯ (ಒರೆಗಲ್ಲು-ಶಾಸನ)
ಕಲಬುರ್ಗಿ (ಎಂ. ಎಂ.)
ಸಂಪುಟ : ೬ ಸಂಚಿಕೆ : ೨ ನವಂಬರ, ೧೯೭೩

೯೮ ಅಂಗಾರ (ಕವನ)
ಕುಲಕರ್ಣಿ (ಶ್ರೀನಿವಾಸ)
ಸಂಪುಟ : ೧ ಸಂಚಿಕೆ : ೨ ಪು ೧೪೧ ಎಪ್ರಿಲ್, ೧೯೬೯

೯೯ ಅಂತರ (ಕವನ)
ಮಹಿಮ (ಮಹೇಶ್ವರಯ್ಯ ಎಚ್. ಎಂ)
ಸಂಪುಟ : ೮ ಸಂಚಿಕೆ : ೩ ಪು. ೧೫ ಜನವರಿ, ೧೯೭೬

೧೦೦ ಅಂತರ ರಾಷ್ಟ್ರೀಯ ವ್ಯಾಪಾರದಲ್ಲಿ ಖನಿಜತೈಲ ರಫ್ತುಮಾಡುವ ದೇಶಗಳ ಪಾತ್ರ (ಅರ್ಥಶಾಸ್ತ್ರ)
ಪ್ರಭುಸ್ವಾಮಿ (ಎಸ್)
ಸಂಪುಟ : ೭, ಸಂಚಿಕೆ : ೩, ಪು. ೬೦–೬೫, ಜನವರಿ, ೧೯೭೫

೧೦೧ ಅಂಬುಲಿಗೆಯ ಚೆನ್ನಮಲ್ಲೇಶನ 'ಶಿ (=ಸಿ)ರಿಯಾಳಸೆಟ್ಟಿಯರ ವಾರ್ಧಿಕ'ದ ಒಂದು ಹಸ್ತಪ್ರತಿ (ಒರೆಗಲ್ಲು–ಸಾಹಿತ್ಯ ಸಂಶೋಧನೆ)
ಶಿವಣ್ಣ (ಎಸ್)

೧೦೨ ಅಂಬುಲಿಗೆ ಚೆನ್ನಮಲ್ಲೇಶ ಮತ್ತು ಶಿವಸಿದ್ಧರಾಮರ ಕಾಲವಿಚಾರ (ಒರೆಗಲ್ಲು–ಸಾಹಿತ್ಯಚರಿತೆ)
ಶಿವಣ್ಣ (ಎಸ್)
ಸಂಪುಟ : ೮, ಸಂಚಿಕೆ : ೩, ಪು. ೧೨೧-೧೨೨, ಜನವರಿ, ೧೯೭೬

೧೦೩ ಅಂಶಗಣದ ಇತಿಹಾಸ (ಛಂದಸ್ಸು)
ಕಲಬುರ್ಗಿ (ಎಂ. ಎಂ.)
ಸಂಪುಟ : ೮ ಸಂಚಿಕೆ : ೨ ಪು. ೬೫-೭೨ ನವಂಬರ, ೧೯೭೫

೧೦೪ ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ (ಜಾನಪದ ಹಾಡು)
ಸಂ : ಜ್ಯೋತಿ ಹೊಸೂರ
ಸಂಪುಟ : ೩ ಸಂಚಿಕೆ : ೨ ಪು. ೬೦-೬೭ ನವಂಬರ್, ೧೯೭೦

೧೦೫ ಕಣಂಬಡೆ ನಾಡು (ಶಾಸನ)
ಗುರವ (ಆರ್. ಎಸ್.)
ಸಂಪುಟ : ೩ ಸಂಚಿಕೆ : ೩ ಪು. ೨೯-೩೩ ಜನವರಿ, ೧೯೭೧

೧೦೬ ಕಣವಿಯವರ ಸುನೀತಗಳಲ್ಲಿ ವ್ಯಕ್ತಿಚಿತ್ರಗಳು (ವಿಮರ್ಶೆ)
ಹೆಗಡೆ (ಜಿ. ಎಂ.)
ಸಂಪುಟ : ೧೦ ಸಂಚಿಕೆ : ೩ ಪು. ೧೧೪-೧೨೬ ಫೆಬ್ರುವರಿ, ೧೯೭೮

೧೦೭ ಕದಂಬ ನೀತಿ : ಕರ್ತೃತ್ವವಿಚಾರ (ಒರೆಗಲ್ಲು-ಸಾಹಿತ್ಯಚರಿತ್ರೆ)
ಶಿವಣ್ಣ (ಎಸ್)
ಸಂಪುಟ : ೧೦ ಸಂಚಿಕೆ : ೩ ಪು. ೧೪೨-೧೪೪ ಫೆಬ್ರುವರಿ, ೧೯೭೮

೧೦೮ ಕನಸುಗಳು (ಕವನ)
ಭಾಗ್ಯಲಕ್ಷ್ಮಿ (ಎಸ್. ವಿ.)
ಸಂಪುಟ : ೯ ಸಂಚಿಕೆ : ೩ ಪು. ೭೩ ಜನವರಿ, ೧೯೭೭

೧೦೯ ಕನಸಿನ್ಯಾಗ ಸರ್ವಜ್ಞ (ಕವನ)
ಕಲಾಶೇಖರ (ಪೂಜಾರ ಎಸ್. ಎಫ್)
ಸಂಪುಟ : ೭ ಸಂಚಿಕೆ : ೪ ಪು. ೨೮-೨೯ ಮೇ, ೧೯೭೫

೧೧೦ ಕನ್ನಡ ಅಕ್ಷರಪದ್ಧತಿಯ ಮೇಲೆ ಸಂಸ್ಕೃತದ ಪ್ರಭಾವ (ಭಾಷಾವಿಜ್ಞಾನ)
ಕುಳ್ಳಿ (ಜೆ. ಎಸ್)
ಸಂಪುಟ : ೧ ಸಂಚಿಕೆ : ೧ ಪು. ೧೭೬-೧೮೨ ನವಂಬರ್, ೧೯೬೮

೧೧೧ ಕನ್ನಡ ಅಧ್ಯಯನಪೀಠದ ಆಶ್ರಯದಲ್ಲಿ ಅಪೂರ್ವ ಜಾನಪದ ಸಮ್ಮೇಲನ (ಜಾನಪದ)
ಹೇಮಗಿರಿಮಠ (ಸಿ. ಪಿ.)
ಸಂಪುಟ : ೫ ಸಂಚಿಕೆ : ೪ ಪು. ೧೪೫-೧೫೧ ಮೇ, ೧೯೭೩

೧೧೨ ಕನ್ನಡ ಉಪಪದಗಳು (ಭಾಷಾವಿಜ್ಞಾನ)
ವಿಷ್ಣು ಸುತ
ಸಂಪುಟ : ೫ ಸಂಚಿಕೆ : ೪ ಪು. ೪೩-೫೦ ಮೇ, ೧೯೭೩

೧೧೩ ಕನ್ನಡ ಗಾದೆಗಳು : ಮಾನವಶಾಸ್ತ್ರೀಯ ಅಧ್ಯಯನ (ಜಾನಪದ)
ಗುರುಮೂರ್ತಿ (ಕೆ. ಜಿ.)
ಸಂಪುಟ : ೧೦ ಸಂಚಿಕೆ : ೧ ಪು. ೯-೨೪ ಆಗಸ್ಟ್, ೧೯೭೭

೧೧೪ ಕನ್ನಡ ಗೀತಿಕೆಯ ಸ್ವರೂಪ (ಛಂದಸ್ಸು)
ಕೆದಿಲಾಯ (ಸೀತಾರಾಮ (ಕ. ಪು)
ಸಂಪುಟ : ೬ ಸಂಚಿಕೆ : ೪ ಪು. ೧೩೭-೧೫೦ ಏಪ್ರಿಲ್, ೧೯೭೪

೧೧೫ ಕನ್ನಡ ಜನಪದ ಸಾಹಿತ್ಯಾಧ್ಯಯನದ ಆದ್ಯರು (ಒರೆಗಲ್ಲು-ಜಾನಪದ)
ಕಲಬುರ್ಗಿ (ಎಂ. ಎಂ.)
ಸಂಪುಟ : ೫ ಸಂಚಿಕೆ : ೪ ಪು. ೧೯೬-೨೦೮ ಮೇ, ೧೯೭೩

೧೧೬ ಕನ್ನಡ ಜಾನಪದದ ಮುಖ್ಯ ವಿಭಾಗಗಳು (ಜಾನಪದ)
ಜ್ಯೋತಿ ಹೊಸೂರ
ಸಂಪುಟ : ೪ ಸಂಚಿಕೆ : ೧ ಪು ೧೭-೨೧ ಆಗಸ್ಟ, ೧೯೭೧

೧೧೭ ಕನ್ನಡದಲ್ಲಿ ನಾಮಗುಣವಾಚಕ (ಭಾಷಾ ವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ : ೮. ಸಂಚಿಕೆ : ೩ ಪು. ೧೬-೨೬ ಜನವರಿ, ೧೯೭೬

೧೧೮ ಕನ್ನಡದಲ್ಲಿ ಪ್ರತ್ಯಯಗಳು (ಭಾಷಾ ವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ : ೫ ಸಂಚಿಕೆ : ೧ ಪು. ೨೨-೬೬ ಆಗಸ್ಟ, ೧೯೭೨

೧೧೯ ಕನ್ನಡದಲ್ಲಿ ಯೋಗವಾಹಗಳು (ಭಾಷಾ ವಿಜ್ಞಾನ)
ಸುಂಕಾಪುರ (ಎಂ. ಎಸ್.)
ಸಂಪುಟ : ೧ ಸಂಚಿಕೆ : ೧ ಪು. ೭೩-೭೯ ನವಂಬರ್, ೧೯೬೮

೧೨೦ ಕನ್ನಡದಲ್ಲಿ ಸಮಾಸ (ಭಾಷಾ ವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ : ೪ ಸಂಚಿಕೆ : ೪ ಪು. ೧೧೪-೧೩೬ ಮೇ, ೧೯೭೨

೧೭೧ ಕನ್ನಡದಲ್ಲಿ ಸರ್ವನಾಮ ಪ್ರತ್ಯಯಗಳು (ಭಾಷಾ ವಿಜ್ಞಾನ)
ರಾಮಸ್ವಾಮಿ (ಚಿ)
ಸಂಪುಟ : ೮ ಸಂಚಿಕೆ : ೪ ಪು. ೮೮–೧೦೬ ಮೇ, ೧೯೭೬

೧೭೨ ಕನ್ನಡದಲ್ಲಿ ಸಂಬೋಧನೆ (ಭಾಷಾ ವಿಜ್ಞಾನ)
ಶ್ರೀಕೃಷ್ಣಭಟ್ಟ (ಪಿ)
ಸಂಪುಟ : ೧೦ ಸಂಚಿಕೆ : ೩ ಪು ೧೪–೧೯ ಫೆಬ್ರುವರಿ, ೧೯೭೮

೧೭೩ ಕನ್ನಡ ನಾಣ್ಣುಡಿಗಳಲ್ಲಿ ದ್ರಾವಿಡ ಕುಟುಂಬ ಪದ್ಧತಿ (ಜಾನಪದ)
ಬೆಂಗೇರಿ (ಹು. ಗು.)
ಸಂಪುಟ : ೧ ಸಂಚಿಕೆ : ೧ ಪು. ೮೭–೯೧ ನವಂಬರ್, ೧೯೬೮

೧೭೪ ಕನ್ನಡ ಧ್ವನಿಮಾಗಳು : ಅಂದು-ಇಂದು (ಭಾಷಾ ವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ : ೪ ಸಂಚಿಕೆ : ೨ ಪು. ೬೬–೮೦ ನವಂಬರ್, ೧೯೭೧

೧೭೫ ಕನ್ನಡ ಭಾಗವತದ ಕರ್ತೃವಿಚಾರ (ಸಾಹಿತ್ಯ–ಚರಿತ್ರೆ)
ಬೆಟಗೇರಿ (ಕೃಷ್ಣಶರ್ಮ)
ಸಂಪುಟ : ೫ ಸಂಚಿಕೆ ೩ ಪು. ೧೪೩–೧೫೬ ಜನವರಿ, ೧೯೭೩

೧೭೬ ಕನ್ನಡ ಭಾಷಾ ಪ್ರಭೇದಗಳ ಅಧ್ಯಯನ (ಭಾಷಾ ವಿಜ್ಞಾನ)
ಮಹಿಮ (ಮಹೇಶ್ವರಯ್ಯ ಎಚ್. ಎಂ)
ಸಂಪುಟ : ೯ ಸಂಚಿಕೆ : ೧, ೨ ಪು. ೫೯–೬೯
ಆಗಸ್ಟ–ನವಂಬರ್, ೧೯೭೬

೧೭೭ ಕನ್ನಡ ಭಾಷಾಪ್ರಭೇದಗಳ ನಿರ್ಮಾಣ ಕಾರಣಗಳು (ಭಾಷಾ ವಿಜ್ಞಾನ)
ಸವದತ್ತಿಮಠ (ಸಂಗಮೇಶ)
ಸಂಪುಟ : ೯ ಸಂಚಿಕೆ : ೧, ೨ ಪು. ೩೪–೫೮
ಆಗಸ್ಟ–ನವಂಬರ್, ೧೯೭೬

೧೭೮ ಕನ್ನಡ ಬಾಷೆಯ ಅಧ್ಯಯನ (ಭಾಷಾವಿಜ್ಞಾನ)
ರಾಮಸ್ವಾಮಿ (ಚಿ)
ಸಂಪುಟ : ೭ ಸಂಚಿಕೆ : ೧ ಪು. ೩೯–೪೫ ಆಗಸ್ಟ, ೧೯೭೪

೧೨೯ ಕನ್ನಡ ಭಾಷೆಯಲ್ಲಿ ಬಿಂದು (ಭಾಷಾವಿಜ್ಞಾನ)
ಕುಳ್ಳಿ (ಜೆ. ಎಸ್.)
ಸಂಪುಟ : ೨ ಸಂಚಿಕೆ : ೧ ಪು. ೬೬-೭೦ ನವಂಬರ್, ೧೯೬೯

೧೩೦ ಕನ್ನಡ ಲಾವಣಿ (ಜಾನಪದ)
ಜ್ಯೋತಿ ಹೊಸೂರ
ಸಂಪುಟ : ೫ ಸಂಚಿಕೆ : ೨ ಪು. ೧೦೭-೧೦೯ ನವಂಬರ್, ೧೯೭೨

೧೩೧ ಕನ್ನಡ ವರ್ಣಮಾಲೆಯಲ್ಲಿ ಬಿಂದು (ಭಾಷಾವಿಜ್ಞಾನ)
ಶ್ರೀಕೃಷ್ಣ ಭಟ್ಟ (ಪಿ)
ಸಂಪುಟ : ೯ ಸಂಚಿಕೆ : ೪ ಪು. ೮-೧೭ ಮೇ, ೧೯೭೭

೧೩೨ ಕನ್ನಡ ವಾಕ್ಯ (ಭಾಷಾವಿಜ್ಞಾನ)
ಮಾಡ್ತಾ (ವಿಲ್ಯಂ)
ಸಂಪುಟ : ೫ ಸಂಚಿಕೆ : ೪ ಪು. ೬೫-೭೬ ಮೇ, ೧೯೭೭

೧೩೩ ಕನ್ನ ವಾಮನ (ಸಾಹಿತ್ಯಚರಿತ್ರೆ)
ಧಾರವಾಡಕರ (ರಾ. ಯ)
ಸಂಪುಟ : ೧ ಸಂಚಿಕೆ : ೧ ಪು. ೨೦೪-೨೧೧ ನವಂಬರ್, ೧೯೬೮

೧೩೪ ಕನ್ನಡ ವ್ಯಾಕರಣ ವಿಚಾರ : ಒಂದು ವಿವೇಚನೆ (ಭಾಷಾವಿಜ್ಞಾನ)
ಹಳೆಮನೆ (ಲಿಂಗದೇವರು)
ಲೀಲಾವತಿ (ಎಂ. ಎನ್)
ಸಂಪುಟ : ೮ ಸಂಚಿಕೆ : ೨ ಪು. ೩-೯ ನವಂಬರ್, ೧೯೭೫

೧೩೫ ಕನ್ನಡ ಸಾಹಿತ್ಯಚರಿತ್ರೆಯ ವಿಷಯವಸ್ತು (ಸಾಹಿತ್ಯಚರಿತ್ರೆ)
ಮಲಶೆಟ್ಟಿ (ಬಸವರಾಜ)
ಸಂಪುಟ : ೧೦ ಸಂಚಿಕೆ : ೧ ಪು. ೧೨೩-೧೨೭ ಅಗಸ್ಟ, ೧೯೭೭

೧೩೬ ಕನ್ನಡ ಸಾಹಿತ್ಯದಲ್ಲಿ ನವ್ಯಪ್ರಜ್ಞೆ (ವಿಮರ್ಶೆ)
ದೇಶಪಾಂಡೆ (ಸುಬ್ಬರಾಯ)
ಸಂಪುಟ : ೪ ಸಂಚಿಕೆ : ೪ ಪು. ೪೭-೬೮ ಮೇ, ೧೯೭೨

೧೩೭ ಕಪ್ಪೆ ಅರಭಟ್ಟನ್ (ಒರೆಗಲ್ಲು-ಶಾಸನ)
ಕಲಬುರ್ಗಿ (ಎಂ. ಎಂ)
ಸಂಪುಟ : ೪ ಸಂಚಿಕೆ : ೩ ಪು. ೧೪೪-೧೬೬ ಜನವರಿ, ೧೯೭೨

೧೩೮ ಕಪ್ಪು ರಾವಣ (ಕವನ)
ಇಮ್ರಾಪೂರ (ಸೋಮಶೇಖರ)
ಸಂಪುಟ : ೫ ಸಂಚಿಕೆ : ೩ ಪು. ೧–೩ ಜನವರಿ, ೧೯೭೩

೧೩೯ ಕರಸ್ಥಲದ ವೀರಣ್ಣೊಡೆಯರ ಕಂದ (ಸಾಹಿತ್ಯ ಚರಿತ್ರೆ)
ಶಿವಣ್ಣ (ಎಸ್)
ಸಂಪುಟ : ೫ ಸಂಚಿಕೆ : ೪ ಪು. ೧೧೫–೧೧೯ ಮೇ, ೧೯೭೩

೧೪೦ ಕರಾವಳಿಯ ಕನ್ನಡದ ಬಳಕೆಯ ಶಬ್ದಗಳು (ಭಾಷಾವಿಜ್ಞಾನ)
ನಾಯಕ (ಎಸ್. ಬಿ)
ಸಂಪುಟ : ೧ ಸಂಚಿಕೆ : ೧ ಪು. ೨೧೨–೨೧೯ ನವಂಬರ, ೧೯೬೮

೧೪೧ ಕರುಣೆ (ಕವನ)
ವಿರೂಪಾಕ್ಷಗೌಡ (ಕೆ)
ಸಂಪುಟ : ೨ ಸಂಚಿಕೆ : ೧ ಪು. ೬೩ ನವಂಬರ. ೧೯೬೯

೧೪೨ ಕರುಣ ರಸ (ಕಾವ್ಯಮೀಮಾಂಸೆ)
ನಂದೀಮಠ (ಶಿ. ಚೆ)
ಸಂಪುಟ : ೨ ಸಂಚಿಕೆ : ೧ ಪು. ೩೮–೪೯ ನವಂಬರ್, ೧೯೬೯

೧೪೩ ಕರೀಂ ನಗರ ಶಾಸನದಲ್ಲಿ ಪಂಪಭಾರತದ ಪದ್ಯಗಳು (ಶಾಸನ)
ಪರಬ್ರಹ್ಮಶಾಸ್ತ್ರಿ (ಪಿ. ವಿ)
ಕಲಬುರ್ಗಿ (ಎಂ. ಎಂ)
ಸಂಪುಟ : ೭ ಸಂಚಿಕೆ : ೩ ಪು. ೧೧೭–೧೨೫ ಜನವರಿ, ೧೯೭೫

೧೪೪ ಕರೀಂ ನಗರ ಶಾಸನದಲ್ಲಿ ಪಂಪಭಾರತದ ಪದ್ಯಗಳು (ಶಾಸನ)
ಜಾಗೀರದಾರ್ (ಸೀತಾರಾಮ್)
ಸಂಪುಟ : ೮ ಸಂಚಿಕೆ : ೨ ಪು. ೧೩೧–೧೪೧ ನವಂಬರ್, ೧೯೭೫

೧೪೫ ಕರ್ಣಾಟಕ ಭಾಷಾಭೂಷಣದ ಕರ್ತೃ? (ಸಾಹಿತ್ಯ ಚರಿತೆ)
ಶ್ರೀಕೃಷ್ಣಭಟ್ಟ (ಪಿ)
ಸಂಪುಟ : ೮ ಸಂಚಿಕೆ ; ೪ ಪು. ೩–೨೩ ಮೇ. ೧೯೭೬

೧೪೬ ಕರ್ನಾಟಕದ ಅಗ್ರಹಾರಗಳು (ಶಾಸನ)
ಶಾಂತಕುಮಾರಿ (ಎಸ್. ಆರ್)
ಸಂಪುಟ : ೪ ಸಂಚಿಕೆ : ೨ ಪು. ೫೬–೬೧ ನವೆಂಬರ್. ೧೯೭೧

೧೪೭ ಕರ್ನಾಟಕದ ಅಗ್ರಹಾರಗಳು (ಶಾಸನ)
ಶಾಂತಕುಮಾರಿ (ಎಸ್. ಎಲ್.)
ಸಂಪುಟ : ೪, ಸಂಚಿಕೆ : ೩, ಪು. ೫೪–೬೦ ಜನವರಿ, ೧೯೭೨

೧೪೮ ಕರ್ನಾಟಕದ ಅಗ್ರಹಾರಗಳು (ಶಾಸನ)
ಶಾಂತಕುಮಾರಿ (ಎಸ್. ಎಲ್.)
ಸಂಪುಟ : ೪, ಸಂಚಿಕೆ : ೪, ಪು. ೧೦೫–೧೧೦ ಮೇ, ೧೯೭೨

೧೪೯ ಕರ್ನಾಟಕದ ಅಗ್ರಹಾರಗಳು (ಶಾಸನ)
ಶಾಂತಕುಮಾರಿ (ಎಸ್. ಎಲ್.)
ಸಂಪುಟ : ೫, ಸಂಚಿಕೆ : ೧, ಪು. ೧೧೫–೧೨೦, ಆಗಸ್ಟ, ೧೯೭೨

೧೫೦ ಕರ್ನಾಟಕದ ಕಲ್ಲುಗಳ ವಯಸ್ಸು (ಭೂಗರ್ಭಶಾಸ್ತ್ರ)
ದೇವರಾಜ (ಟಿ. ಸಿ.)
ಸಂಪುಟ : ೧, ಸಂಚಿಕೆ : ೨, ಪು. ೯೯–೧೦೭ ಎಪ್ರಿಲ್, ೧೯೬೯

೧೫೧ ಕರ್ನಾಟಕ ಭಾರತಿಗೆ (ಕವನ)
ಕರ್ಕಿ (ಡಿ. ಎಸ್)
ಸಂಪುಟ : ೧, ಸಂಚಿಕೆ : ೧, ಪು. ೧–೨ ನವಂಬರ್, ೧೯೬೮

೧೫೨ ಕರ್ನಾಟಕ ಶಬ್ದಾನುಶಾಸನ ಕರ್ತೃ (ಸಾಹಿತ್ಯಚರಿತ್ರೆ)
ರಾಮಭಟ್ (ಪಿ)
ಸಂಪುಟ : ೧೦, ಸಂಚಿಕೆ : ೪, ಪು. ೨-೧೭ ಮೇ, ೧೯೭೮

೧೫೩ ಕಲಬುರ್ಗಿ ಜಿಲ್ಲೆಯ ಕನ್ನಡ (ಭಾಷಾವಿಜ್ಞಾನ)
ಮಲ್ಲಿಕಾರ್ಜುನ (ಬಿ.)
ಸಂಪುಟ : ೯, ಸಂಚಿಕೆ : ೧, ೨, ಪು. ೮೬–೯೯ ಅಗಸ್ಟ. ನವಂಬರ್
೧೯೭೬

೧೫೪ ಕಲ್ಬುರ್ಗಿಯಲ್ಲಿ ಜರುಗಿದ ಅಖಿಲಕರ್ನಾಟಕ ಐದನೆಯ ಜಾನಪದ
ಸಮ್ಮೇಲನ (ಜಾನಪದ)
ಪೂಜಾರ (ಎಸ್. ಎಸ್.)
ಸಂಪುಟ : ೧೦, ಸಂಚಿಕೆ : ೪, ಪು. ೧೫೩–೧೬೧ ಮೇ, ೧೯೭೮

೧೫೫ ಕಲ್ಲುಮಠದ ಪ್ರಭುದೇವರ 'ಪ್ರಭುದೇವರ ಮಂತ್ರಗೋಪ್ಯ' ಟೀಕೆಯ ಒಂದು ಹಸ್ತಪ್ರತಿ (ಒರೆಗಲ್ಲು–ಸಂಶೋಧನೆ)
ಶಿವಣ್ಣ (ಎಸ್.)
ಸಂಪುಟ : ೧೦, ಸಂಚಿಕೆ : ೧, ಪು. ೧೫೯, ಅಗಸ್ಟ, ೧೯೭೭

೧೫೬ ಕವಿ ಅವರವರು ಕಂಡಂತೆ (ಕವನ]
ಕಲ್ಪನಾ (ಎಸ್.)
ಸಂಪುಟ : ೪, ಸಂಚಿಕೆ : ೨, ಪು. ೬೭–೬೮, ನವಂಬರ್, ೧೯೭೧

೧೫೭ ಕವಿಕಲ್ಪನೆಯಲ್ಲಿ ಚಂದ್ರ (ವಿಮರ್ಶೆ)
ಮಹಾಂತಯ್ಯ (ಎಂ. ಎಸ್.)
ಸಂಪುಟ : ೭, ಸಂಚಿಕೆ : ೨, ಪು. ೬೨–೭೫ ನವಂಬರ್, ೧೯೭೪

೧೫೮ ಕವಿ ಚಿಕ್ಕಮಲ್ಲಣ್ಣನ ಅಳ್ನಾವರ ಸಿಷಧಿಶಾಸನ (ಶಾಸನ)
ಗುರವ (ಆರ್. ಎನ್.)
ಸಂಪುಟ : ೮, ಸಂಚಿಕೆ : ೨, ಪು ೧೦೮–೧೧೪ ನವಂಬರ್, ೧೯೭೫

೧೫೯ ಕವಿ ಚಂದ್ರಸಾಗರವರ್ಣಿ ಹಾಗೂ ಅವನ ಕೃತಿಗಳು (ಸಾಹಿತ್ಯ ಚರಿತ್ರೆ)
ಮಹೀಷವಾಡಿ (ಬಿ. ಬಿ.)
ಸಂಪುಟ : ೯, ಸಂಚಿಕೆ : ೩, ಪು. ೮೬–೯೨ ಜನವರಿ, ೧೯೭೭

೧೬೦ ಕವಿ ರುದ್ರಭಟ್ಟನ ರಸಕಲಿಕೆ (ಸಾಹಿತ್ಯ ಚರಿತ್ರೆ)
ಬೆಟಗೇರಿ (ಕೃಷ್ಣಶರ್ಮ)
ಸಂಪುಟ : ೭, ಸಂಚಿಕೆ : ೪, ಪು. ೫೭–೬೩ ಮೇ, ೧೯೭೫

೧೬೧ ಕವಿ ಲಕ್ಷ್ಮೀಶನ ಪಂಚಾಂಗ ಪ್ರಜ್ಞೆ (ವಿಮರ್ಶೆ)
ಸರ್ ಮೊಕದಂ (ಬಿ. ಆರ್.)
ಸಂಪುಟ : ೪, ಸಂಚಿಕೆ : ೨, ಪು ೬೨–೬೬ ನವಂಬರ್, ೧೯೭೧

೧೬೨ ಕವಿ ಶಾಂತಿಕೀರ್ತಿಮುನಿ (ಸಾಹಿತ್ಯ ಚರಿತ್ರೆ)
ಮಹೀಶವಾಡಿ (ಬಿ. ಬಿ.)
ಸಂಪುಟ : ೮, ಸಂಚಿಕೆ : ೨, ಪು. ೭೬–೮೦ ನವಂಬರ್, ೧೯೭೫

೧೬೩ ಕವಿ : ಸರ್ವಜ್ಞ (ವಿಮರ್ಶೆ)
ಶಿವರುದ್ರಪ್ಪ (ಜಿ. ಎಸ್.)
ಸಂಪುಟ : ೭, ಸಂಚಿಕೆ : ೪, ಪು. ೧–೧೦ ಮೇ, ೧೯೭೫

೧೭೨ ಕಾರ್ಮಿಕ ಸಮಸ್ಯೆಗಳ ಬಗೆಗೆ ಗಾಂಧೀಜಿಯವರ ವಿಚಾರಗಳು
ಯಾದವಾಡ (ಎಸ್. ಜಿ.) (ಸಮಾಜ ವಿಜ್ಞಾನ)
ಸಂಪುಟ : ೪, ಸಂಚಿಕೆ ೩, ಪು. ೪೨–೫೫. ನವಂಬರ್, ೧೯೭೧

೧೭೩ ಕಾವ್ಯಾದರ್ಶ ಮತ್ತು ರತ್ನಶ್ರೀ ಜ್ಞಾನಕೃತ ಟೀಕೆಯ ವೈಶಿಷ್ಟ್ಯ
ಕೃಷ್ಣಮೂರ್ತಿ (ಕೆ) (ಕಾವ್ಯ ಮೀಮಾಂಸೆ)
ಸಂಪುಟ : ೭, ಸಂಚಿಕೆ : ೧, ಪು. ೨–೧೩. ಅಗಸ್ಟ್, ೧೯೭೪

೧೭೪ ಕಿಸೆ (ಕವನ)
ಕೃಷ್ಣರಾವ್ (ಜಿ)
ಸಂಪುಟ : ೬, ಸಂಚಿಕೆ : ೩. ಪು. ೨೫–೨೬. ಜನವರಿ. ೧೯೭೪

೧೭೫ ಕ್ರಿಯಾರಚನೆ : ಒಂದು ಟಿಪ್ಪಣಿ (ಒರೆಗಲ್ಲು–ಕಾವ್ಯಮೀಮಾಂಸೆ)
ಸಿ. ಪಿ. ಕೆ. (ಕೃಷ್ಣಕುಮಾರ ಸಿ. ಪಿ.)
ಸಂಪುಟ : ೭, ಸಂಚಿಕೆ : ೪, ಪು. ೧೫೨–೧೫೩, ಮೇ. ೧೦೭೫

೧೭೬ ಕ್ರಿಸ್ತಶಕ ಪ್ರಾರಂಭದ ಶಿವದೇವಾಲಯ (ಇತಿಹಾಸ ಸಂಶೋಧನೆ)
ಸುಂದರ (ಅ)
ಸಂಪುಟ : ೮, ಸಂಚಿಕೆ : ೩, ಪು. ೯೫–೯೬, ಜನವರಿ, ೧೯೭೬

೧೭೭ ಕೀಚಕ–ಸೈರೇಂಧ್ರಿವಾದ (ಜಾನಪದ–ಕಾವ್ಯ)
ಸಂ : ಉಮಾಪತಿ (ಎಸ್)
ಸಂಪುಟ : ೧೦, ಸಂಚಿಕೆ : ೧, ಪು. ೬೧–೬೬, ಅಗಸ್ಟ್, ೧೯೭೭

೧೭೮ 'ಕುಪ್ಪಕುಜಿ' ಎಂದರೇನು ? (ಒರೆಗಲ್ಲು–ಜಾನಪದ)
ಚಿದಾನಂದಮೂರ್ತಿ (ಎಂ)
ಸಂಪುಟ : ೯, ಸಂಚಿಕೆ : ೩, ಪು. ೧೫೨–೧೫೪, ಜನವರಿ, ೧೯೭೭

೧೭೯ ಕುಮಾರವ್ಯಾಸ ಚಿತ್ರಿಸಿದ ದ್ಯೂತ ಪ್ರಸಂಗ (ವಿಮರ್ಶೆ)
ಕಿತ್ತೂರ (ಕೃಷ್ಣಮೂರ್ತಿ)
ಸಂಪುಟ : ೪, ಸಂಚಿಕೆ : ೧, ಪು. ೩೯–೬೦, ಅಗಸ್ಟ್, ೧೯೭೧

೧೮೦ ಕುರುಗೋಡಿನ ಉಜ್ವಲರಾಯನ ಗುಡಿ (ಒರೆಗಲ್ಲು – ಇತಿಹಾಸ)
ರಾಜಶೇಖರ (ಎಸ್)
ಸಂಪುಟ : ೭, ಸಂಚಿಕೆ : ೩, ಪು. ೧೫೯. ಜನವರಿ, ೧೯೭೫

೧೯೦ ಕೆಳದಿ ಅರಸರ ಕಾಲನಿರ್ಣಯ (ಇತಿಹಾಸ)
ಕೆಳದಿ (ಗುಂಡಾಜೋಯಿಸ್)
ಸಂಪುಟ : ೮. ಸಂಚಿಕೆ : ೨. ಪು. ೮೧-೧೦೦, ನವಂಬರ್, ೧೯೭೫

೧೯೧ ಕೆಳದಿ ಇತಿಹಾಸದಲ್ಲಿ ಶರಜಾ ಮನೆತನ (ಇತಿಹಾಸ)
ಕೆಳದಿ (ಗುಂಡಾಜೋಯಿಸ್)
ಸಂಪುಟ : ೬, ಸಂಚಿಕೆ : ೪, ಪು. ೧೯-೨೫, ಎಪ್ರಿಲ್, ೧೯೭೪

೧೯೨ ಕೆಳದಿ ನೃಪವಿಜಯ (ಸಾಹಿತ್ಯ ಚರಿತ್ರೆ)
ಕೆಳದಿ (ಗುಂಡಾಜೋಯಿಸ್)
ಸಂಪುಟ : ೫, ಸಂಚಿಕೆ : ೩. ಪು. ೫೭-೬೪. ಜನವರಿ, ೧೯೭೩

೧೯೩ ಕೆಳದಿಯ ನೃಪವಿಜಯದಲ್ಲಿ ಕಾಲಾನುಕ್ರಮಣಿಕೆ (ಇತಿಹಾಸ)
ಕೆಳದಿ (ಗುಂಡಾಜೋಯಿಸ್)
ಸಂಪುಟ : ೭, ಸಂಚಿಕೆ : ೨, ಪು. ೮೩-೧೦೮, ನವಂಬರ್, ೧೯೭೪

೧೯೪ ಕೆಳದಿ ಸೋಮಶೇಖರನಾಯಕನ ಕಾಲದ ಶಾಸನ ಪ್ರತಿ (ಬರೆಗಲ್ಲು ಶಾಸನ)
ಕೆಳದಿ (ಗುಂಡಾಜೋಯಿಸ್)
ಸಂಪುಟ : ೮, ಸಂಚಿಕೆ : ೧, ಪು. ೧೨೯-೧೩೦, ಆಗಸ್ಟ್. ೧೯೭೫

೧೯೫ ಕೇರಳ ಪ್ರಾಂತದ ಕನ್ನಡ (ಭಾಷಾ ವಿಜ್ಞಾನ)
ಶ್ರೀಕೃಷ್ಣಭಟ್ಟ (ಪಿ)
ಸಂಪುಟ : ೯, ಸಂಚಿಕೆ : ೧, ೨, ಪು. ೪೪೫-೪೪೬,
ಅಗಸ್ಟ್-ನವಂಬರ್, ೧೯೭೬

೧೯೬ ಕೇಸಿ, ಕೇರಿ (ಬರೆಗಲ್ಲು-ಭಾಷಾವಿಜ್ಞಾನ)
ಕಲಬುರ್ಗಿ (ಎಂ. ಎಂ.)
ಸಂಪುಟ : ೧೦, ಸಂಚಿಕೆ : ೨, ಪು. ೧೬೫-೧೬೭. ನವಂಬರ್, ೧೯೭೭

೧೯೭ ಕೇಳ ಸಿನ ಮಗನಾಟವ (ಜಾನಪದ ಹಾಡು)
ಸಂ : ಸುಂಕಾಪುರ (ಎಂ. ಎಸ್.)
ಸಂಪುಟ : ೯, ಸಂಚಿಕೆ ೪, ಪು. ೯೬-೯೭, ಮೇ, ೧೯೭೭

೧೯೮ ಕ್ಷೇತ್ರಗೋಕರ್ಣ ಮತ್ತು ಇಡಗುಂಜಿಯ ಶಿಲಾಗಣೇಶ ಮೂರ್ತಿಗಳು
ಹಾಗೂ ಶಿಲಾಗಣೇಶ ಶಿಲ್ಪದ ಪ್ರಾಚೀನತೆ (ಇತಿಹಾಸ)
ಸುಂದರ (ಅ)
ಸಂಪುಟ: ೭, ಸಂಚಿಕೆ: ೩, ಪು. ೮೦-೯೧, ಜನವರಿ, ೧೯೭೫

೧೯೯ ಕೊಟ್ಟಿತ್ತೊಣ್ಣೆ (ಇತಿಹಾಸ)
ರಾಜಶೇಖರ (ಎಸ್.)
ಸಂಪುಟ: ೫, ಸಂಚಿಕೆ: ೧, ಪು. ೪೫-೫೨, ಆಗಸ್ಟ್, ೧೯೭೨

೨೦೦ ಕೊಡಗು ಜಿಲ್ಲೆಯ ಕನ್ನಡ (ಭಾಷಾ ವಿಜ್ಞಾನ)
ಕುಶಾಲಪ್ಪಗೌಡ (ಕೆ.)
ಸಂಪುಟ: ೯, ಸಂಚಿಕೆ: ೧.೨, ಪು. ೩೮೧-೪೧೧,
ಆಗಸ್ಟ್ ನವೆಂಬರ್, ೧೯೭೬

೨೦೧ ಕೊಳ್ಗಲ್ಲು (ಇತಿಹಾಸ)
ರಾಜಶೇಖರ (ಎಸ್.)
ಸಂಪುಟ: ೧೦, ಸಂಚಿಕೆ: ೩, ಪು. ೯೧-೯೭, ಫೆಬ್ರುವರಿ, ೧೯೭೮

೨೦೨ ಕೊಳ್ಳದ ನೆರಳು (ನಾಟಕ)
ನಾಯ್ಕರ (ಬಸವರಾಜ)
ಸಂಪುಟ: ೮, ಸಂಚಿಕೆ: ೧, ಪು. ೭-೨೬. ಆಗಸ್ಟ್, ೧೯೭೫

೨೦೩ ಕೋಲಂಬೊ ಯೋಜನೆ (ಅರ್ಥಶಾಸ್ತ್ರ)
ಪ್ರಭುಸ್ವಾಮಿ (ಎನ್.)
ಸಂಪುಟ: ೪, ಸಂಚಿಕೆ: ೩, ಪು. ೨೯-೩೬. ಜನವರಿ, ೧೯೭೨

೨೦೪ ಕೋಲಾರ ಜಿಲ್ಲೆಯ ಕನ್ನಡ (ಭಾಷಾ ವಿಜ್ಞಾನ)
ನಾರಾಯಣ (ಕೆ.)
ಸಂಪುಟ: ೯, ಸಂಚಿಕೆ: ೧.೨, ಪು. ೩೧೪-೩೨೭,
ಆಗಸ್ಟ್-ನವೆಂಬರ್, ೧೯೭೫

೨೦೫ ಕೋಲುಪದ (ಜಾನಪದ ಹಾಡು)
ಸಂ: ವಾಲಿ (ಎಂ. ಎನ್.)
ಸಂಪುಟ: ೭, ಸಂಚಿಕೆ: ೨. ಪು. ೧೧೬-೧೧೯. ನವೆಂಬರ್, ೧೯೭೪

೨೦೬ ಕೋಳೂರ ಕೊಡಗೂಸು (ಜಾನಪದ ಹಾಡು)
ಸಂ: ಸುಂಕಾಪುರ (ಎಂ. ಎಸ್.)
ಸಂಪುಟ : ೬, ಸಂಚಿಕೆ : ೪, ಪು. ೪೯–೫೦, ಎಪ್ರಿಲ್, ೧೯೭೪

೨೦೭ ಕಂಚರಸನ ತುರಮುರಿಯ ಶಾಸನ (ಶಾಸನ)
ಭೋಯಿ (ಎಂ. ಬಿ.)
ಸಂಪುಟ : ೧೦, ಸಂಚಿಕೆ : ೪, ಪು. ೬೭–೭೨ ಮೇ, ೧೯೭೮

೨೦೮ ಕಾಂಟನ ಸೌಂದರ್ಯವಿವೇಚನೆ (ಕಾವ್ಯ ಮೀಮಾಂಸೆ)
ಕೊಟ್ರಶೆಟ್ಟಿ (ಎಂ. ಬಿ.)
ಸಂಪುಟ : ೭. ಸಂಚಿಕೆ : ೧. ಪು. ೧೦೪–೧೧೩ ಆಗಸ್ಟ, ೧೯೭೪

೨೦೯ ಕೊಂಡಗುಳಿ ಕೇಶಿರಾಜನ ನವರತ್ನಮಾಲೆ (ಸಾಹಿತ್ಯ ಚರಿತ್ರೆ)
ಸಂ. ರಾಜೂರ (ವೀರಣ್ಣ)
ಸಂಪುಟ : ೯, ಸಂಚಿಕೆ : ೪, ಪು. ೧೧೦–೧೧೪, ಮೇ, ೧೯೭೭

೨೧೦ ಖಾಜಾ ಬಂದೇನವಾಜ (ಸಾಹಿತ್ಯ ಚರಿತ್ರೆ)
ಕುಷ್ಟಗಿ (ವಸಂತ)
ಸಂಪುಟ: ೧೦, ಸಂಚಿಕೆ: ೧, ಪು. ೨೬–೩೪, ಆಗಸ್ಟ, ೧೯೭೭

೨೧೧ ಗದಾಯುದ್ಧದ ಒಂದು ಪದ್ಯವನ್ನು ಕುರಿತು (ವಿಮರ್ಶೆ)
ಹಿರೇಮಠ (ಬಿ. ಕೆ.)
ಸಂಪುಟ : ೬, ಸಂಚಿಕೆ : ೪, ಪು. ೫೧–೫೭, ಎಪ್ರಿಲ್, ೧೯೭೪

೨೧೨ ಗರಣಿ ಬಸವಲಿಂಗನ 'ಸಿದ್ಧೇಶ್ವರನ ಪವಾಡ'ದ ತಾರಾವಳಿಯ ಒಂದು
ಶಿವಣ್ಣ (ಎಸ್.) ಹಸ್ತಪ್ರತಿ (ಒರೆಗಲ್ಲು–ಸಾಹಿತ್ಯ ಚರಿತ್ರೆ)
ಸಂಪುಟ : ೯, ಸಂಚಿಕೆ : ೩ ಪು. ೧೫೪, ಜನವರಿ, ೧೯೭೭

೨೧೩ ಗಳಗನಾಥಕೃತ ಕನ್ನಡಿಗರ ಕಾದಂಬರಿಗಳು (ವಿಮರ್ಶೆ)
ಕಿತ್ತೂರ (ಕೃಷ್ಣಮೂರ್ತಿ)
ಸಂಪುಟ: ೧. ಸಂಚಿಕೆ: ೨. ಪು. ೧೧೪–೧೩೧ ಎಪ್ರಿಲ್. ೧೯೬೯

೨೧೪ ಗಳಗನಾಥರ ಕೃತಿಗಳು (ವಿಮರ್ಶೆ)
ಬೆಟಗೇರಿ (ಕೃಷ್ಣಶರ್ಮ)
ಸಂಪುಟ: ೧, ಸಂಚಿಕೆ : ೨, ಪು. ೧೦೮–೧೧೩ ಎಪ್ರಿಲ್, ೧೯೬೯

೨೧೫ ಗಾಥಾ ಸಪ್ತಶತಿ (ಸಾಹಿತ್ಯಚರಿತ್ರೆ)
ಅನು : ಖಡಬಡಿ (ಬಿ. ಕೆ.)
ಸಂಪುಟ : ೧೦, ಸಂಚಿಕೆ : ೪, ಪು. ೨೩–೩೨, ಮೇ, ೧೯೭೮

೨೧೬ ಗಿರಿಜವ್ವನ ಸೋಬಾನ (ಜಾನಪದ ಹಾಡು)
ಸಂ. ಈಶ್ವರಪ್ಪ (ಎಂ. ಜಿ.)
ಸಂಪುಟ : ೮, ಸಂಚಿಕೆ : ೩, ಪು. ೯೧–೯೪ ಜನವರಿ, ೧೯೭೬

೨೧೭ ಗುತ್ತ ವಿಕ್ರಮಾದಿತ್ಯನ ಕನವಳ್ಳಿ ಶಾಸನ (ಶಾಸನ)
ಗುರವ (ಆರ್. ಎನ್.)
ಸಂಪುಟ : ೫, ಸಂಚಿಕೆ : ೩, ಪು. ೭೭–೯೧ ಜನವರಿ, ೧೯೭೩

೨೧೮ ಗುರುಗೋಹೇಶ್ವರ ಪಾದಪಯೋಜಪೂಜಕಶತಕ (ಸಾಹಿತ್ಯ ಚರಿತ್ರೆ)
ಸಂ. ಶಿವಲಿಂಗಯ್ಯ (ಗು. ಅ.)
ಸಂಪುಟ : ೪, ಸಂಚಿಕೆ : ೩, ಪು. ೭೧–೮೬ ಜನವರಿ, ೧೯೭೨

೨೧೯ ಗೃಹಭಂಗ : ಪ್ರಾದೇಶಿಕ ಕಾಂದಬರಿ (ವಿಮರ್ಶೆ)
ಕಣವಿ (ಮಹಾದೇವ)
ಸಂಪುಟ : ೮, ಸಂಚಿಕೆ : ೧, ಪು. ೪೯–೫೫ ಅಗಸ್ಟ, ೧೯೭೫

೨೨೦ ಗೋಕುಲ ನಿರ್ಗಮನ (ವಿಮರ್ಶೆ)
ವೇಣುಗೋಪಾಲರಾವ್ (ಎ. ಎಸ್.)
ಸಂಪುಟ : ೬, ಸಂಚಿಕೆ : ೧, ಪು. ೨–೯ ಅಗಸ್ಟ, ೧೯೭೩

೨೨೧ ಗೋಪವ್ವನ ಹಾಡು (ಜಾನಪದ ಹಾಡು)
ಸಂ: ಇಂಚಲ (ಎಂ. ಎಸ್.)
ಸಂಪುಟ : ೩, ಸಂಚಿಕೆ : ೧, ಪು. ೧೦೮–೧೧೧ ಅಗಸ್ಟ, ೧೯೭೦

೨೨೨ ಗೋಮಂತಕದ ಕನ್ನಡ (ಭಾಷಾ ವಿಜ್ಞಾನ)
ಕೃಷ್ಣರಾಯ (ಶಾ. ಮಂ.)
ಸಂಪುಟ : ೯, ಸಂಚಿಕೆ : ೧, ೨, ಪು. ೪೮೩–೪೮೮
ಅಗಸ್ಟ–ನವಂಬರ, ೧೯೭೬

೨೨೩ ಗೋರಿಗಳು (ಕವನ)
ಕಣವಿ (ಮಹಾದೇವ)
ಸಂಪುಟ : ೯, ಸಂಚಿಕೆ : ೪ ಪು. ೬–೭ ಮೇ, ೧೯೭೭

೨೨೪ ಗೋವಿನ ಹಾಡು (ಜಾನಪದ ಹಾಡು)
ಸಂ : ಮುಕ್ಕುಂದಿಮಠ (ಎಸ್. ಜಿ.)
ಸಂಪುಟ : ೩, ಸಂಚಿಕೆ : ೧, ಪು. ೧೦೫–೧೦೭ ಆಗಸ್ಟ್, ೧೯೭೦

೨೨೫ ಗೌರವ ಡಾಕ್ಟರೇಟ ಪದವಿ ಸ್ವೀಕರಿಸಿದ ಮಹನೀಯರ ಪರವಾಗಿ
ಪ್ರೊ. ದೇಜಗೌ ಸಲ್ಲಿಸಿದ ಕೃತಜ್ಞತೆ (ಸಂಕೀರ್ಣ)
ಸಂಪುಟ : ೮, ಸಂಚಿಕೆ : ೨, ಪು. ೧೬೩–೧೬೫ ನವಂಬರ, ೧೯೭೫

೨೨೬ ಗಂಗಾವತಿ ತಾಲೂಕಿನ ಪ್ರಾಚ್ಯವಸ್ತುಗಳು (ಇತಿಹಾಸ–ಸಂಶೋಧನೆ)
ಸುಂದರ (ಅ)
ಸಂಪುಟ : ೬, ಸಂಚಿಕೆ : ೧, ಪು. ೬೪–೭೫, ಆಗಸ್ಟ್, ೧೯೭೩

೨೨೭ ಗಂಗಿ–ಗೌರಿ (ಜಾನಪದ–ಹಾಡು)
ಸಂ : ಹೆಂಡಿ (ಸುಶೀಲಾದೇವಿ)
ಸಂಪುಟ : ೯, ಸಂಚಿಕೆ : ೩, ಪು. ೨೨–೨೮, ಜನವರಿ, ೧೯೭೭

೨೨೮ ಗಂಡ ಯಾರು ? ಅಣ್ಣ ಯಾರು ? (ಜಾನಪದ ಹಾಡು)
ಸಂ : ಸತ್ಯಂಪೇಟೆ (ಲಿಂಗಣ್ಣ)
ಸಂಪುಟ : ೪, ಸಂಚಿಕೆ : ೨, ಪು. ೩೭–೪೨ ಜನವರಿ, ೧೯೭೨

೨೨೯ ಗಂಡ–ಹೆಂಡರಿಗೆ ಮುಗದಾವ ಆಕ್ರಾಟಿ (ಜಾನಪದ ಹಾಡು)
ಸಂ : ಬಾಲರಾಜು (ಎಚ್)
ಹಿರೇಮಠ (ಎಸ್. ಎಸ್.)
ಸಂಪುಟ : ೮, ಸಂಚಿಕೆ : ೨, ಪು. ೭೩–೭೫ ನವಂಬರ, ೧೯೭೫

೨೩೦ ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ (ವಿಮರ್ಶೆ)
ಕಾಪಸೆ (ಗುರುಲಿಂಗ)
ಸಂಪುಟ : ೩, ಸಂಚಿಕೆ . ೪, ಪು. ೮೫–೯೧ ಏಪ್ರಿಲ್, ೧೯೭೧

೨೩೧ ಗಾಂಧೀಜಿ (ಕವನ)
ಯಕ್ಕುಂಡಿ (ಮಧುಕರ)
ಸಂಪುಟ : ೧, ಸಂಚಿಕೆ : ೨, ಪು. ೧, ಏಪ್ರಿಲ್, ೧೯೬೯

೨೩೨ ಗಾಂಧೀಜಿ ಅವರ ದೃಷ್ಟಿಯಲ್ಲಿ ಹಿಂದೂಧರ್ಮ (ಸಮಾಜ ವಿಜ್ಞಾನ)
ಕುಲಕರ್ಣಿ (ವೀ. ಜಿ.)
ಸಂಪುಟ : ೧, ಸಂಚಿಕೆ : ೨, ಪು. ೨–೧೩ ಏಪ್ರಿಲ್, ೧೯೬೯

೨೩೩ ಗುಂಡಬ್ರಹ್ಮಯ್ಯಗಳ ವಿಗ್ರಹ (ಇತಿಹಾಸ)
ಕಲಬುರ್ಗಿ (ಎಂ. ಎಂ.)
ಸಂಪುಟ : ೬, ಸಂಚಿಕೆ : ೪, ಪು. ೧೫೬–೧೫೭ ಏಪ್ರಿಲ್, ೧೯೭೪

೨೩೪ ಗ್ರಹಗಳು (ಕವನ)
ಪಂಡಿತಾರಾಧ್ಯ (ಹೊ. ಮ.)
ಸಂಪುಟ : ೮, ಸಂಚಿಕೆ : ೩, ಪು. ೭೦ ಜನವರಿ, ೧೯೭೬

೨೩೫ ಗ್ರಾಮಾಂತರ ಹಣಕಾಸು ಸಹಕಾರಿ ಬ್ಯಾಂಕುಗಳು (ಅರ್ಥಶಾಸ್ತ್ರ)
ಹಿರೇಮಠ (ಎಸ್. ಎಸ್.)
ಸಂಪುಟ : ೫, ಸಂಚಿಕೆ : ೪, ೮೧–೧೦೦ ಮೇ, ೧೯೭೩

೨೩೬ ಗ್ವಾಲಣ್ಣನ ವೀರಗಾಥಾ (ಜಾನಪದ ಹಾಡು)
ಸಂ : ಸುರಪುರ (ಬಿ. ಆರ್)
ಸಂ : ೬, ಸಂಚಿಕೆ : ೨, ಪು. ೭೯–೮೪ ನವಂಬರ್, ೧೯೭೩

೨೩೭ ಗ್ರೇ ಕವಿಯ ಶೋಕಗೀತೆ (ವಿಮರ್ಶೆ)
ಕೃಷ್ಣಭಟ್ಟ (ಎಸ್.)
ಸಂಪುಟ : ೫, ಸಂಚಿಕೆ ೩, ಪು. ೧೦೯–೧೧೪ ಜನವರಿ, ೧೯೭೩

೨೩೮ ಗ್ರಂಥಸ್ಥ ಕನ್ನಡದ ಸಂಧಿನಿಯಮಗಳು (ಭಾಷಾಶಾಸ್ತ್ರ)
ಮಾಡ್ತಾ (ವಿಲ್ಯಂ)
ಸಂಪುಟ : ೩, ಸಂಚಿಕೆ : ೪, ಪು. ೧೨೩–೧೨೮, ಏಪ್ರಿಲ್, ೧೯೭೧

೨೩೯ ಘನ (ಕವನ)
ಕೈಕಿಣಿ (ಜಯಂತ)
ಸಂಪುಟ : ೪, ಸಂಚಿಕೆ ೧, ಪು. ೭೭ ಆಗಸ್ಟ್, ೧೯೭೧

'ಚ' ವರ್ಗ

೨೪೦ ಚೆನ್ನಬಸವಣ್ಣನವರ ಹೆಚ್ಚಿನ ವಚನಗಳು (ಸಾಹಿತ್ಯ ಚರಿತ್ರೆ)
ಸಂ : ಬಿರಾದಾರ (ಎಂ. ಜಿ.)
ಸಂಪುಟ : ೭, ಸಂಚಿಕೆ : ೪, ಪು. ೧೦೫–೧೦೯ ಮೇ, ೧೯೭೫

೨೪೧ ಚಾಳುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲದೇವನ
ಗುರವ (ಆರ್. ಎಸ್.) ಕೋಕಟನೂರ ಶಾಸನ (ಶಾಸನ)
ಸಂಪುಟ : ೩, ಸಂಚಿಕೆ : ೨, ಪು. ೪೫–೫೯ ನವಂಬರ, ೧೯೭೦

೨೪೨ ಚಿಕ್ಕಮಗಳೂರು ಜಿಲ್ಲೆಯ ಕನ್ನಡ (ಭಾಷಾ ವಿಜ್ಞಾನ)
ಗುರುಬಸವೇಗೌಡ (ಕೆ. ಎಸ್.)
ಸಂಪುಟ : ೯, ಸಂಚಿಕೆ : ೧, ೨, ಪು. ೨೮೮–೨೯೪
ಆಗಸ್ಟ-ನವಂಬರ, ೧೯೭೬

೨೪೩ ಚಿಕ್ಕಲಿಗರ ಸೋಗು (ಜಾನಪದ-ಹಾಡು)
ಸಂ : ಇಟ್ಟಣ್ಣವರ (ಶ್ರೀ ರಾಮ)
ಸಂಪುಟ : ೯, ಸಂಚಿಕೆ : ೩, ಪು. ೧೧೨-೧೨೨ ಜನವರಿ, ೧೯೭೭

೨೪೪ ಚಿತ್ರದುರ್ಗ ಜಿಲ್ಲೆಯ ಕನ್ನಡ (ಭಾಷಾ ವಿಜ್ಞಾನ)
ವೀರಭದ್ರಪ್ಪ (ಬಿ. ವಿ.)
ಸಂಪುಟ : ೯, ಸಂಚಿಕೆ : ೧, ೨ ಪು. ೨೫೫–೨೬೦
ಆಗಸ್ಟ–ನವಂಬರ, ೧೯೭೬

೨೪೫ ಚಿತ್ರದುರ್ಗದಲ್ಲಿಯ ಗುಂಡಬ್ರಹ್ಮಯ್ಯಗಳ ವಿಗ್ರಹ (ಒರೆಗಲ್ಲು–ಶಾಸನ)
ಕಲಬುರ್ಗಿ (ಎಂ. ಎಂ.)
ಸಂಪುಟ : ೭, ಸಂಚಿಕೆ : ೨, ಪು. ೧೫೮–೧೫೯ ನವಂಬರ್, ೧೯೭೪

೨೪೬ ಚೀರಪ್ಪ ಚೆನ್ನಪ್ಪನ ಪರೀಕ್ಷೆ (ಜಾನಪದ ಹಾಡು)
ಸಂ : ಸಣ್ಣಕ್ಕಿ (ನಿಂಗಣ್ಣ)
ಸಂಪುಟ : ೪, ಸಂಚಿಕೆ : ೪, ಪು. ೧೧೨–೧೧೩ ಮೇ, ೧೯೭೨

೨೪೭ ಚೋರ್ ಮತ್ತು ಮಯೂರ್‌ಗಳ ಹಿಂದೆ (ಭಾಷಾ ವಿಜ್ಞಾನ)
ಅನು : ತಿಮ್ಮಪ್ಪ (ಬಿ. ಕೆ.)
ಸಂಪುಟ : ೬, ಸಂಚಿಕೆ : ೧, ಪು. ೧೦–೨೨ ಆಗಸ್ಟ, ೧೯೭೩

೨೪೮ ಔಟ ಮತ್ತು ಭೈರರಸ ಒಡೆಯರ ರಾಜಕೀಯ ಸಂಬಂಧ (ಇತಿಹಾಸ)
ವಸಂತಮಾಧವ (ಕೆ. ಜಿ.)
ಸಂಪುಟ : ೫ ಸಂಚಿಕೆ : ೪ ಪು. ೫೨–೬೦ ಮೇ, ೧೯೭೩

೨೪೯ ಚೇಂಜ ಆಫ್ ನೇಮ (ಕವನ)
ಬಿ. ವ್ಹಿ. ಜಿ. (ಗುಂಜೆಟ್ಟಿ ಬಿ. ವ್ಹಿ.)
ಸಂಪುಟ : ೬, ಸಂಚಿಕೆ : ೨, ಪು. ೪೦–೪೨ ನವಂಬರ, ೧೯೭೩

೨೫೦ ಜಗದ ಮರ್ಮಜ್ಞ (ಕವನ)
ಕರ್ಕಿ (ಡಿ. ಎಸ್.)
ಸಂಪುಟ : ೭, ಸಂಚಿಕೆ : ೪, ಪು. ೧೧–೧೨ ಮೇ, ೧೯೭೫

೨೫೧ ಜನಪದ ಆಟ–ಪಾಟ (ಜಾನಪದ)
ಸುಂಕಾಪುರ (ಎಂ. ಎಸ್.)
ಸಂಪುಟ : ೭, ಸಂಚಿಕೆ : ೨, ಪು. ೪೯–೬೧ ನವಂಬರ, ೧೯೭೪

೨೫೨ ಜನಪದ ಕವಿಚರಿತೆ (ಜಾನಪದ)
ಲಠ್ಠೆ (ಎಂ. ಎಸ್)
ಸಂಪುಟ : ೮. ಸಂಚಿಕೆ : ೪, ಪು. ೬೪–೬೬ ಮೇ, ೧೯೭೬

೨೫೩ ಜನಪದ ಕವಿಚರಿತೆ (ಜಾನಪದ)
ಲಠ್ಠೆ (ಎಂ. ಎಸ್.)
ಸಂಪುಟ : ೯, ಸಂಚಿಕೆ : ೩, ಪು. ೪೨–೪೮ ಜನವರಿ, ೧೯೭೭

೨೫೪ ಜನಪದ ಕವಿಚರಿತೆ (ಜಾನಪದ)
ಲಠ್ಠೆ (ಎಂ. ಎಸ್)
ಸಂಪುಟ : ೯. ಸಂಚಿಕೆ : ೪, ಪು. ೧೧೫–೧೨೮ ಮೇ. ೧೯೭೭

೨೫೫ ಜನಪದ ಕವಿಚರಿತೆ (ಜಾನಪದ)
ಲಠ್ಠೆ (ಎಂ. ಎಸ್.)
ಸಂಪುಟ : ೧೦, ಸಂಚಿಕೆ ; ೧, ಪು. ೯೩–೧೧೧ ಅಗಸ್ಟ, ೧೯೭೭

೨೫೬ ಜನಪದ ಕವಿಚರಿತೆ (ಜಾನಪದ)
ಲತ್ತೆ (ಎಂ. ಎಸ್.)
ಸಂಪುಟ : ೧೦, ಸಂಚಿಕೆ : ೨, ಪು. ೧೪೧–೧೬೦ ನವೆಂಬರ, ೧೯೭೭

೨೫೭ ಜನಪದ ಕವಿಚರಿತೆ (ಜಾನಪದ)
ಲತ್ತೆ (ಎಂ. ಎಸ್)
ಸಂಪುಟ : ೧೦, ಸಂಚಿಕೆ : ೪, ಪು. ೪೪–೫೬ ಮೇ, ೧೯೭೮

೨೫೮ ಜನಪದ ಕಾವ್ಯದಲ್ಲಿ ಪ್ರತಿಮಾ ವಿಧಾನ (ಜಾನಪದ)
ಕಣವಿ (ಚೆನ್ನವೀರ)
ಸಂಪುಟ : ೧, ಸಂಚಿಕೆ : ೧. ಪು. ೧೦–೩೭ ನವೆಂಬರ, ೧೯೬೮

೨೫೯ ಜನಪದ ಗೀತೆಗಳಲ್ಲಿ ಗೋವಿನ ಕಥೆ (ಜಾನಪದ)
ಶಾಲಿನಿ (ರಘುನಾಥ ಭಟ್)
ಸಂಪುಟ : ೧೦, ಸಂಚಿಕೆ : ೨. ಪು. ೮೦–೧೦೧ ನವೆಂಬರ, ೧೯೭೭

೨೬೦ ಜನಪದ ಸಾಹಿತ್ಯದಲ್ಲಿ ಎತ್ತಿನ ಚಿತ್ರಣ (ಜಾನಪದ)
ತೆಳಗಡಿ (ಬಿ. ಎಂ.)
ಬಿಜಾಪುರ (ಕೆ. ಎಚ್.)
ಸಂಪುಟ : ೭, ಸಂಚಿಕೆ : ೩, ಪು. ೩೫–೪೩ ಜನವರಿ, ೧೯೭೫

೨೬೧ ಜನ್ನನ ಯಶೋಧರ ಚರಿತೆ (ವಿಮರ್ಶೆ)
ಗಿರಡ್ಡಿ (ಗೋವಿಂದರಾಜ)
ಸಂಪುಟ : ೧, ಸಂಚಿಕೆ : ೨, ಪು. ೭೫–೯೮ ಎಪ್ರಿಲ್, ೧೯೬೯

೨೬೨ ಜಯಕೀರ್ತಿ ಮತ್ತು ನಾಗವರ್ಮರು (ಸಾಹಿತ್ಯ ಚರಿತ್ರೆ)
ಕುಲಕರ್ಣಿ (ಪ್ರ. ಗೋ.)
ಸಂಪುಟ : ೪, ಸಂಚಿಕೆ : ೧, ಪು. ೪–೧೬ ಆಗಸ್ಟ್, ೧೯೭೧

೨೬೩ ಜಾಡು (ಕವನ)
ಇನಾಮ್ದಾರ (ಸೋಮಶೇಖರ)
ಸಂಪುಟ : ೨, ಸಂಚಿಕೆ : ೨, ಪು. ೧೧೨–೧೧೩ ಮೇ, ೧೯೭೦

೨೬೪ ಜಾಣಪದ ಸಾಹಿತ್ಯ (ಜಾನಪದ)
ಕಲಬುರ್ಗಿ (ಎಂ. ಎಂ.)
ಸಂಪುಟ : ೧೦, ಸಂಚಿಕೆ : ೧, ಪು. ೧೧೨–೧೨೨ ಆಗಸ್ಟ, ೧೯೭೭

೨೬೫ 'ಜೀವ'ರಹಸ್ಯದ ಶೋಧ (ಪ್ರಾಣಿಶಾಸ್ತ್ರ)
ರಾವ್ (ಎಂ. ಎಸ್. ಎಸ್.)
ಸಂಪುಟ : ೧, ಸಂಚಿಕೆ : ೧, ಪು. ೧೫೭–೧೬೮ ನವಂಬರ, ೧೯೬೮

೨೬೬ ಜಂಗಮು ರಗಳೆ (ಸಾಹಿತ್ಯ ಚರಿತ್ರೆ)
ಸಂ : ಶಿವಣ್ಣ (ಎಸ್.)
ಸಂಪುಟ : ೨, ಸಂಚಿಕೆ : ೧, ಪು. ೧೮೮–೧೯೩ ನವಂಬರ, ೧೯೬೯

೨೬೭ ಜಂಭದ ಕೋಳಿ (ಕವನ)
ಪಾಟೀಲ (ಶ್ರೀಪಾದ)
ಸಂಪುಟ : ೩, ಸಂಚಿಕೆ : ೪, ಪು. ೧೨೨ ಎಪ್ರಿಲ್, ೧೯೭೧

೨೬೮ ಡಾಕ್ಟರ ಡಿ. ಎಲ್. ಎನ್. (ಸಾಹಿತ್ಯ ಚರಿತ್ರೆ)
ಕುಲಕರ್ಣಿ (ಬಿ. ಎಸ್.)
ಸಂಪುಟ : ೪, ಸಂಚಿಕೆ : ೨, ಪು. ೧೦೫–೧೦೮ ನವಂಬರ, ೧೯೭೧

'ತ' ವರ್ಗ

೨೬೯ ತಕರಾರಿನವರು – ಒಂದು ಸಮೀಕ್ಷೆ (ವಿಮರ್ಶೆ)
ಹಿಂಗಮಿರೆ (ಬುದ್ದಣ್ಣ)
ಸಂಪುಟ : ೫, ಸಂಚಿಕೆ : ೧, ಪು. ೧೩೬–೧೪೧ ಆಗಸ್ಟ, ೧೯೭೨

೨೭೦ ತಕರಾರು (ಕವನ)
ಇಟಗಿ (ರಾಘವೇಂದ್ರ)
ಸಂಪುಟ : ೪, ಸಂಚಿಕೆ : ೩, ಪು. ೧೧೩–೧೧೮ ಜನವರಿ, ೧೯೭೨

೨೭೧ ತತ್ಸಮ (ಸಮಸಂಸ್ಕೃತ) ತದ್ಭವ ಪದಗಳ ಅರ್ಥ (ಭಾಷಾವಿಜ್ಞಾನ)
ಕೃಷ್ಣಶರ್ಮ (ಯು.)
ಸಂಪುಟ : ೫, ಸಂಚಿಕೆ : ೪, ಪು. ೧೦೪–೧೦೫ ಮೇ, ೧೯೭೩

೨೭೨ ತದ್ಭವ್ಯ ಕಾವ್ಯ (ಭಾಷಾ ವಿಜ್ಞಾನ)
ಕೃಷ್ಣಶರ್ಮ (ಮ)
ಸಂಪುಟ : ೬, ಸಂಚಿಕೆ : ೨, ಪು. ೪೩-೪೭ ನವಂಬರ, ೧೯೭೩

೨೭೩ ತನ್ನರಿವು (ತನಗೆ)
ಬಿದರಕುಂದಿ (ಎಸ್. ಜಿ.)
ಸಂಪುಟ : ೩, ಸಂಚಿಕೆ : ೨, ಪು. ೮೪-೮೫ ನವಂಬರ, ೧೯೭೦

೨೭೪ ತಮಿಳುನಾಡಿನ ಕನ್ನಡ (ಭಾಷಾ ವಿಜ್ಞಾನ)
ರಾಮಸ್ವಾಮಿ (ಜಿ.)
ಸಂಪುಟ : ೯, ಸಂಚಿಕೆ : ೧, ೨, ಪು. ೪೧೫-೪೪೪
ಅಗಸ್ಟ-ನವಂಬರ, ೧೯೬೬

೨೭೫ ತಮ್ಮ ಕೊನೆಯಲ್ಲಿರುವ ಹೆಸರುಗಳು (ಭಾಷಾ ವಿಜ್ಞಾನ)
ಚಿದಾನಂದಮೂರ್ತಿ (ಎಂ)
ಸಂಪುಟ : ೨, ಸಂಚಿಕೆ : ೨, ಪು. ೩೩-೩೬ ಮೇ, ೧೯೭೦

೨೭೬ ತಾಳಗುಂದ : ಒಂದು ಪ್ರಾದೇಶಿಕ ಅಧ್ಯಯನ (ಇತಿಹಾಸ)
ರಘುನಾಥ ಭಟ್ (ಎಚ್. ಆರ್.)
ಸಂಪುಟ : ೧೦, ಸಂಚಿಕೆ : ೩, ಪು. ೨-೧೩ ಫೆಬ್ರುವರಿ, ೧೯೭೮

೨೭೭ ತಿಗಳಾರಿ ಲಿಪಿ (ಭಾಷಾ ವಿಜ್ಞಾನ)
ಹೆಗಡೆ (ಜಿ. ಎಂ.)
ಸಂಪುಟ : ೭, ಸಂಚಿಕೆ : ೪, ಪು. ೧೨೭-೧೩೪ ಮೇ, ೧೯೭೫

೨೭೮ ತಿಬ್ಬಳಿ (ಕವನ)
ಮಾಡಾವು (ಹರಿನಾರಾಯಣ)
ಸಂಪುಟ : ೧೦, ಸಂಚಿಕೆ : ೧, ಪು. ೨೫ ಆಗಸ್ಟ, ೧೯೭೭

೨೭೯ ತೀರ್ಥ (ನಾಟಕ)
ಹಿಂಗಮಿರೆ (ಬುದ್ಧಣ್ಣ)
ಸಂಪುಟ : ೬, ಸಂಚಿಕೆ : ೩, ಪು. ೯-೨೦ ಜನವರಿ, ೧೯೬೪

೨೮೦ ತುಮಕೂರು ಜಿಲ್ಲೆಯ ಕನ್ನಡ (ಭಾಷಾ ವಿಜ್ಞಾನ)
ಹಳೆಮನೆ (ಲಿಂಗದೇವರು)
ಸಂಪುಟ : ೯, ಸಂಚಿಕೆ : ೧,೨, ಪು. ೩೦೩–೩೧೩
ಅಗಸ್ಟ-ನವಂಬರ, ೧೯೭೬

೨೮೧ ತುಳುದೇಶದ ಬಸದಿಗಳ ವಿವರಣೆ (ಸಾಹಿತ್ಯ ಚರಿತ್ರೆ)
ಶೆಟ್ಟಿ (ಎಸ್. ಡಿ.)
ಸಂಪುಟ : ೯, ಸಂಚಿಕೆ : ೩, ಪು. ೭೪–೮೩ ಜನವರಿ, ೧೯೭೭

೨೮೨ ತುಳುಲಿಪಿ (ಭಾಷಾ ವಿಜ್ಞಾನ)
ತೆಕ್ಕುಂಜ (ಗೋಪಾಲಕೃಷ್ಣ ಭಟ್ಟ)
ಸಂಪುಟ : ೭, ಸಂಚಿಕೆ : ೩, ಪು. ೩–೭ ಜನವರಿ, ೧೯೭೫

೨೮೩ ತೊರವೆ, ತೊರವೆಯ ನರಹರಿ : ಎಷ್ಟು ಪ್ರಾಚೀನ ? (ಸಾಹಿತ್ಯ ಚರಿತ್ರೆ)
ಸೀತಾರಾಮಾಚಾರ್ಯ (ಎಚ್)
ಸಂಪುಟ : ೭, ಸಂಚಿಕೆ : ೩, ಪು. ೧೯–೨೭ ಜನವರಿ, ೧೯೭೫

೨೮೪ ತ್ರಿಪದಿಯೋ, ಕಂದವೆ, ಮತ್ತೊಂದೆ ? (ಛಂದಸ್ಸು)
ಮೋವುಂಡಿ (ಮಲ್ಲಾರಿ)
ಸಂಪುಟ : ೧, ಸಂಚಿಕೆ ; ೨, ಪು. ೧೯೪–೨೦೦ ಎಪ್ರಿಲ್, ೧೯೬೯

೨೮೫ ತ್ರಿವಿಧಿತ್ರಯ (ಸಾಹಿತ್ಯ ಚರಿತ್ರೆ)
ಸಂ : ಬಿರಾದಾರ (ಎಂ. ಜಿ.)
ಸಂಪುಟ : ೬, ಸಂಚಿಕೆ : ೧, ಪು. ೮೨–೧೦೩ ಆಗಸ್ಟ, ೧೯೭೩

೨೮೬ ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ (ಭಾಷಾ ವಿಜ್ಞಾನ)
ಆಲೆವೂರು (ಶ್ರೀರಮಣ ಆಚಾರ್ಯ)
ಸಂಪುಟ : ೯, ಸಂಚಿಕೆ : ೧, ೨, ಪು. ೨೨೬–೨೫೪
ಅಗಸ್ಟ-ನವಂಬರ, ೧೯೭೬

೨೮೭ ದಾಖಲೆ (ಕವನ)
ದೊಡ್ಡರಂಗೇಗೌಡ
ಸಂಪುಟ : ೭, ಸಂಚಿಕೆ : ೨, ಪು. ೨೭ ನವಂಬರ, ೧೯೭೪

